THE BOOK WAS DRENCHED

UNIVERSAL LIBRARY
OU_202256
UNIVERSAL LIBRARY

**OSMANIA UNIVERSITY LIBRARY**

Call No. K294 R83B Accession No. K816

Author రాధాకృష్ణన్ S.

Title భారత దర్శనము. 1929

This book should be returned on or before the date last marked below

ಶ್ರೀಯುತ ಡಾಕ್ಟರ್ ಎಸ್. ರಾಧಾಕೃಷ್ಣನ್‌ರವರ

# ಭಾರತಧರ್ಮ

## ೨ನೇ ಭಾಗ

ಅನುವಾದವು

ಅನುವಾದಕ.—ಎಸ್ ಶೇಷಾದ್ರಿ ಶರ್ಮಾ.

ಕಲ್ಕತ್ತಾ ವಿಶ್ವವಿದ್ಯಾಲಯದ ವೇದಾಂತ ಸಾರ್ವಭೌಮರಾದ

ಶ್ರೀಯುತ ಡಾಕ್ಟರ್ ಎಸ್ ರಾಧಾಕೃಷ್ಣನ್ ಎಂ.ಎ, ಡಿ.ಲಿಟ್. ರವರ

# ಭಾರತಧರ್ಮ

೧೯೨೬ರಲ್ಲಿ, ಆಕ್ಸ್‌ಫರ್ಡ್ ನಗರದ ಮ್ಯಾಂಚೆಸ್ಟರ್ ಕಲಾಶಾಲೆಯಲ್ಲಿ
ಅವರು ನಡೆಸಿದ "ಅಪ್ಟನ್ ಸಂಭಾಷಣೆಗಳ" ಕನ್ನಡ ಅನುವಾದವು

## "ಧರ್ಮ ಪ್ರಕಾಶ ಅಥವಾ ಮಾನವ ಸರ್ವಸ್ವ"

ಎಂಬ

ಉಪೋದ್ಘಾತ ಮತ್ತು ಭಾಷ್ಯ ಸಹಿತ

ಲೇಖಕ ಮತ್ತು ಪ್ರಕಾಶಕ.—**ಎನ್. ಶೇಷಾದ್ರಿ ಶರ್ಮಾ** ಬಿ.ಎ.,
(ಚಂದ್ರವಿಲಾಸ, ವಿಶ್ವೇಶ್ವರಪುರಂ, ಬೆಂಗಳೂರು)

[ಈ ಗ್ರಂಥದ ಸರ್ವಸ್ವಾತಂತ್ರ್ಯವನ್ನು ಕಾದಿದೆ.]

ಸುಬೋಧ ಮುದ್ರಣಾಲಯ.
ಬೆಂಗಳೂರು ನಗರ.

ಬೆಲೆ ರೂ ೨-೮-೦ ]     ೧೯೨೯     [ ಹಾಸಲು ಪ್ರತ್ಯೇಕ.

ನನ್ನ

ಪ್ರಿಯ ಪತ್ನಿಗೆ.

S. R.

ಭಾರತಧರ್ಮವೆಂಬ ಈ ಅನುವಾದವನ್ನು

ನನ್ನ ಪೂಜ್ಯ ತಂದೆತಾಯಿಗಳಿಗೆ

ಅರ್ಪಿಸಿರುವೆನು.

N. S. S.

## ೨ನೇ ಭಾಗ

# ಶ್ರೀಯುತ ಎಸ್. ರಾಧಾಕೃಷ್ಣನ್ ರವರ

# ಭಾರತಧರ್ಮದ

## ಅನುವಾದವು

## — ವಿ ಷ ಯ ಸೂ ಚಿ ಕೆ —


| ಉಪನ್ಯಾಸ | | ಪುಟ |
|---|---|---|
| ೧ | ಆತ್ಮಾನುಭವವೂ ಅದರ ಸ್ವಭಾವವೂ | ೧-೩೬ |
| ೨ | ಮತವಿವಾದಗಳೂ ಮತ್ತು ಹಿಂದೂಜನರ ಮತಸಹನೆಯೂ | ೩೭-೭೮ |
| ೩ | ಹಿಂದೂಧರ್ಮ—೧ (ಮಾಯಾ, ಕರ್ಮ, ಪುರುಷಾರ್ಥ, ಮತ್ತು ಆಶ್ರಮ ಧರ್ಮಗಳು) | ೭೯-೧೩೬ |
| ೪ | ಹಿಂದೂಧರ್ಮ—೨ (ಜಾತಿ ಮತ್ತು ಸಂಘ ಧರ್ಮಗಳು) | ೧೩೭-೨೦೨ |

# ಪೀಠಿಕೆ

ಸಭೆಯಲ್ಲಿ ಹೇಳಿದಂತೆಯೇ ವಾಕ್ಯಶಃ ಈಗಿಲ್ಲಿ ಪ್ರಕಟಿಸಿರುವ ಈ ಚಿಕ್ಕ ಉಪನ್ಯಾಸಗಳು ಭಾರತಧರ್ಮದ ಮುಖ್ಯತತ್ವಗಳೇನೆಂದು ಹೇಳಲು ಪ್ರಯತ್ನಿಸುತ್ತವೆ. ಇಲ್ಲಿ ಕೆಲವು ಕಡೆಗಳಲ್ಲಿ ಹೇಳಬೇಕಾಗಿದ್ದ ವಿಷಯಗಳನ್ನು ನಾನು ಹೇಳಿಲ್ಲವೆಂದೂ, ಇದರಿಂದ ನಮ್ಮ ಧರ್ಮವನ್ನು ಪೂರ್ಣವಾಗಿ ವಿಶದೀಕರಿಸಿಲ್ಲವೆಂದೂ, ಮತ್ತೆ ಕೆಲವೆಡೆಗಳಲ್ಲಿ ಸಾಕ್ಷ್ಯಪೂರ್ವಕವಾಗಿ ಹೇಳಬೇಕಾಗಿದ್ದ ಅಭಿಪ್ರಾಯಗಳನ್ನು ಸುಮ್ಮನೇ ಹೇಳಿಬಿಟ್ಟಿರುವೆನೆಂದೂ, ನ್ಯಾಯಪೂರ್ವಕವಾಗಿ ಹೇಳಬೇಕಾಗಿದ್ದ ಕೆಲವೆಡೆಗಳಲ್ಲಿ ಹಾಗೆ ಮಾಡಿಲ್ಲವೆಂತಲೂ ನನಗೆ ಚೆನ್ನಾಗಿ ಗೊತ್ತುಂಟು. ಆದರೆ ಈ ರೀತಿಯಲ್ಲಿ ಹೇಳಬೇಕಾಗಿದ್ದ ಭಾರತ ಮತಧರ್ಮ (Philosophy of Religion) ವನ್ನೆಲ್ಲಾ ಈ ವರ್ಷದ ಆಗಸ್ಟ್ ತಿಂಗಳಲ್ಲಿ ಚಿಕಾಗೋ ವಿದ್ಯಾಪೀಠ (University of Chicago) ದಲ್ಲಿ ನಡೆಸಿದ ನನ್ನ "ಹ್ಯಾಸ್ಕೆಲ್ ಉಪನ್ಯಾಸಗಳ"ಲ್ಲಿ ಶಕ್ತಿಯಾದಷ್ಟುಮಟ್ಟಿಗೆ ಸಮಗ್ರವಾಗಿ ಹೇಳಿದ್ದೇನೆ. ಮತ್ತು ಆ ಉಪನ್ಯಾಸಗಳು ಪ್ರಕಟವಾದಮೇಲೆ ಈ ಗ್ರಂಥದಲ್ಲಿ ಹೇಳದೆ ಬಿಟ್ಟಿರುವ ಕೆಲವು ದೊಡ್ಡ ಪ್ರಸಂಗಗಳು ಚೆನ್ನಾಗಿ ತಿಳಿಯುತ್ತವೆ ಎಂದು ನಂಬುತ್ತೇನೆ. ಅಲ್ಲಿಯವರೆವಿಗೂ ಈ ಸಣ್ಣ ಗ್ರಂಥವು (brief exposition) ಸಾಮಾನ್ಯ ವಾಚಕರಿಗೆ ಹಿಂದೂಮತದ ಮುಖ್ಯ ಗುಟ್ಟೇ (Spirit of Hinduism)ನೆಂದು ತಿಳಿಸಿತೆಂದರೆ ನಾನು ಬಹಳ ಕೃತಾರ್ಥನಾಗುತ್ತೇನೆ.

ಈ ಗ್ರಂಥದ ಹಸ್ತಲಿಖಿತವನ್ನು ಓದಿ ಸಹಾಯಮಾಡಿದ ನನ್ನ ಮಿತ್ರರಾದ ಶ್ರೀಯುತ ಪ್ರೊಫೆಸರ್ ಜೆ. ಎಸ್. ಮೆಕೆನ್ಜಿಯವರಿಗೆ ನಾನು ಬಹಳ ಋಣಿಯಾಗಿದ್ದೇನೆ.

ನ್ಯೂಯಾರ್ಕ್ ನಗರ,
ಸೆಪ್ಟೆಂಬರ್ ೭, ೧೯೨೬.

S. R.

॥ ಹರಿಃ ಓಂ, ಶ್ರೀ ಗುರುಭ್ಯೋನಮಃ ॥

## ಉಪನ್ಯಾಸ ೧.

# ಆತ್ಮಾನುಭವವೂ ಅದರ ಸ್ವಭಾವವೂ.

## ಪ್ರಸ್ತಾವನೆ

### ೧. ವಂದನಾ ಮತ್ತು ವಿಷಯಪ್ರವೇಶ

ನಾನು ಈ ದಿವಸ ಮೊಟ್ಟಮೊದಲು ಹೇಳಬೇಕೆನ್ನುವುದೇನಂದರೆ ಭಾರತ ಧರ್ಮ (ಅಥವಾ ಹಿಂದೂಮತ, Hinduism) ದ ಮುಖ್ಯ ತತ್ವಗಳನ್ನು ಕುರಿತು ಉಪನ್ಯಾಸಮಾಡೆಂದು ಕೇಳಿದ ನಿಮ್ಮ ಈ ಆಕ್ಸ್‌ಫರ್ಡ್ ನಗರದ ಮ್ಯಾಂಚೆಸ್ಟರ್ ಕಲಾಶಾಲೆಯ ಅಧಿಕಾರಿಗಳಿಗೂ ಮತ್ತದರಲ್ಲಿಯೂ ಮುಖ್ಯವಾಗಿ ಶಾಲಾಧ್ಯಕ್ಷರಾದ ಜ್ಯಾಕ್ ಸಾಹೇಬರಿಗೂ ಅಷ್ಟು ವಿಶ್ವಾಸದಿಂದ ಕೇಳಿದುದಕ್ಕಾಗಿ ನನ್ನ ಮನಃ ಪೂರ್ವಕವಾಗಿ ವಂದಿಸುತ್ತೇನೆ. ಅಧ್ಯಕ್ಷಮಹನೀಯರು ನನ್ನ ಕೆಲಸದ ವಿಷಯವಾಗಿ ಅಷ್ಟೊಂದು ಚೆನ್ನಾಗಿ ಮಾತಾಡಿರುವುದನ್ನು ನೋಡಿದರೆ ಅವರು ಎಷ್ಟು ಉದಾರಬುದ್ಧಿಯುಳ್ಳವರೆಂದು ತಿಳಿಯುತ್ತದೆಯೇ ಹೊರತು ನನ್ನ ಕೆಲಸದಲ್ಲಿಯೇ ಅಷ್ಟು ಯೋಗ್ಯತೆ ಇದೆ ಎಂದಲ್ಲ.

ಒಳ್ಳೆಯದು. ಈಗ ನಾನು ಹೇಳಬೇಕೆಂದಿರುವ ನಾಲ್ಕು ಉಪನ್ಯಾಸಗಳಲ್ಲಿ ಹಿಂದೂಮತ ಅಥವಾ ಭಾರತಧರ್ಮದ ಉತ್ಪತ್ತಿ ಬೆಳೆವಣಿಗೆಗಳನ್ನಾಗಲೀ ಅದರ ತತ್ವಾರ್ಥಗಳನ್ನಾಗಲೀ ಸಮಗ್ರವಾಗಿ ವರ್ಣಿಸಲು ಸಾಧ್ಯವಿಲ್ಲ. ಆದುದರಿಂದ ನಾನೀಗ ಹೇಳಬೇಕೆಂದಿರುವುದು ನಮ್ಮ ಹಿಂದೂಮತದ ಮುಖ್ಯ ಉದ್ದೀಪಕ ತತ್ವಗಳು ಯಾವುವು ಮತ್ತು ಈ ಕಾಲದ ಕ್ಲಿಷ್ಟವಿಚಾರಗಳನ್ನು ಪರಿಹರಿಸಲು ನಮ್ಮ ಧರ್ಮವು ಯಾವ

ಮಾರ್ಗವನ್ನನುಸರಿಸುತ್ತಿದೆ ಎಂಬ ವಿಷಯಗಳಾಗಿದ್ದರೂ, ಇದನ್ನು ಕೂಡ ಬಹುಸ್ಥೂಲವಾಗಿ ಸೂತ್ರಪ್ರಾಯವಲ್ಲಿಯೇ ಹೇಳಬೇಕಾಗಿದೆ.

## ೧. ಹಿಂದೂ ಮತನೆಂದರೇನು?

### (ಚರಿತ್ರೆ ಮತ್ತು ವಿಮರ್ಶೆ)

### ೭. ಹಿಂದೂಮತವೆಂದರೇನು ?

ಪ್ರಾರಂಭದಲ್ಲಿಯೇ ಹಿಂದೂಮತವೆಂದರೇನು ಎಂಬ ಲಕ್ಷಣ ಪ್ರಶ್ನೆಗೆ ನಾವು ಸದುತ್ತರವನ್ನು ಕೊಡಬೇಕಾಗಿದೆ. ಏಕೆಂದರೆ ಎಷ್ಟೋ ಜನಕ್ಕೆ ಇದೊಂದು ಅರ್ಥವಿಲ್ಲದ ಪದವೆಂದು ತೋರುತ್ತದೆ. ಈ ಮತವು ನೂರಾರು ನಂಬಿಕೆಗಳನ್ನೊಳಗೊಂಡಿರುವ ಕಲಾಭವನವೇ ? ಅಥವಾ ಸಾವಿರಾರು ಆಚಾರಗಳ ಗೋಷ್ಠಿಯೇ? ಇಲ್ಲವೆ ಕೇವಲ ಒಂದು ಭೂಪಟವೇ ? ಅಥವಾ ಭೂವಿವರಣೆಯಲ್ಲಿ ಮಾತ್ರ ಸಿಕ್ಕುವ ಶಬ್ದವಿಶೇಷವೇ ? ಇದು ಬಿಟ್ಟು ಅರ್ಥವತ್ತಾದ ಸಾರವಿದೆಯೆಂದರೆ ಇದೂ ಕೂಡ ಕಾಲ ದೇಶಕ್ಕನುಗುಣವಾಗಿ ಬದಲಾಯಿಸಿದೆ ವೇದ ಕಾಲದಲ್ಲೊಂದರ್ಥವಿದ್ದರೆ, ಬ್ರಾಹ್ಮಣಗ್ರಂಥಗಳ ಕಾಲಕ್ಕೇ ಬೇರೆಯೊಂದರ್ಥವಿದ್ದು, ಬೌದ್ಧರ ಕಾಲದಲ್ಲೇ ಇನ್ನೂ ಬೇರೊಂದು ಅರ್ಥವನ್ನು ಪಡೆದಿದೆ. ಶೈವರಿಗೆಂದು ಒಂದು ಅರ್ಥವಿದ್ದರೆ, ವೈಷ್ಣವರಿಗೇ ಮತ್ತೊಂದರ್ಥ, ಮತ್ತು ಶಾಕ್ತೇಯರಿಗೇ ಇನ್ನೂ ಬೇರೆಯೊಂದರ್ಥವಾಗುತ್ತದೆ. ಇಷ್ಟೇ ಅಲ್ಲದೆ ತನ್ನಲ್ಲಿ ಕಲೆತ ಆಯಾ ಜನರ ಆಚಾರವ್ಯವಹಾರಗಳನ್ನೂ ಅವರವರ ಸಿದ್ಧಾಂತಗಳನ್ನೂ ಆಗಿಂದಾಗ್ಗೆ ತನ್ನಲ್ಲಿ ಸ್ವೀಕರಿಸಿರುವ ಸೌಲಭ್ಯದಿಂದೊಡಗೂಡಿದ್ದರೂ, ವಿವಿಧಾಕಾರಗಳುಳ್ಳ ವಸ್ತುಗಳನ್ನು ಒಟ್ಟುಗೂಡಿಸುವ ಸಾಮಾನ್ಯಧರ್ಮವೊಂದನ್ನು ಕಂಡುಹಿಡಿಯಬೇಕಾದರೆ ಎಷ್ಟು ಕಷ್ಟವಾಗುತ್ತದೆಯೋ, ಈ ಸೌಲಭ್ಯವನ್ನು ತಿಳಿದುಕೊಳ್ಳಬೇಕೆಂದರೂ ಕೂಡ ಅಷ್ಟೇ ಕಷ್ಟವಾಗುತ್ತದೆ. ಆದರೆ ಇಂಥಾ ನಮ್ಮ ಜನಾಂಗಕ್ಕೆ ವಿವಿಧಾಕಾರಗಳನ್ನುಳ್ಳ ಈ ವಿಷಯಗಳನ್ನೆಲ್ಲ ಒಟ್ಟುಗೂಡಿಸುವ ತನ್ನ ಚರಿತ್ರೆಯ ಆಯಾ ಭಿನ್ನಭಿನ್ನ ಕಾಲಗಳನ್ನು ಅವಯುವರೀತಿ

ಯಿಂದ ತನ್ನಲ್ಲಿ ಚೆನ್ನಾಗಿ ಜೊತೆಗೂಡಿಸುವ ಶಕ್ತಿಯೊಂದಿಲ್ಲದಿದ್ದರೆ, ನಮ್ಮ ಹಿಂದೂಜನರು ಅಷ್ಟು ದೊಡ್ಡದೊಡ್ಡ ಕಾರ್ಯಗಳನ್ನು ಹೇಗೆ ಮಾಡಿದರೆಂದು ಹೇಳಲು ಸುಲಭಸಾಧ್ಯವಲ್ಲ.

ಪ್ರಕೃತಿಯಲ್ಲಿ ಜ್ಞಾನಸಹಾಯವಿಲ್ಲದೆ ಕಾರ್ಯ ಮಾಡುತ್ತಿರುವ ಶಕ್ತಿಗಳನ್ನು ಬಿಟ್ಟರೆ, ಈ ಲೋಕದಲ್ಲಿ ಗ್ರೀಕ್ ಜನರನ್ನು ಬಿಟ್ಟು ಹೊಸದಾಗಿ ಹೊರಟಿರುವ ವಸ್ತುವು ಒಂದಾದರೂ ಎಲ್ಲಿಯೂ ಇಲ್ಲವೆಂಬ ಮಾತು ನಿಮ್ಮಲ್ಲಿ ಸರ್ವಸಾಮಾನ್ಯವಾಗಿಹೋಗಿದೆ. ಆದರೂ ಕೂಡ ಇದು ಸಂಪೂರ್ಣವಾಗಿ ನಿಜವಾಗಿರುವ ಮಾತಲ್ಲ; ಏಕೆಂದರೆ ಲೋಕದಲ್ಲಿ ಅರ್ಧ ಪಾಟ್ಟಿಗಾದರೂ ನಮ್ಮ ಹಿಂದೂಮತದ ಆಧಾರದಿಂದ ನಡೆಯುತ್ತಿದೆ. ಚೈನಾ, ಜಪಾನ್, ಟಿಬೆಟ್, ಸೈಯಾಮ್, ಬರ್ಮಾ ಮತ್ತು ಸಿಲೋನ್ ದೇಶಗಳು ಭರತಖಂಡವನ್ನೇ ತಮ್ಮ ಧಾರ್ಮಿಕಮನೆ (Spiritual home) ಯೆಂದು ತಿಳಿಯುತ್ತವೆ. ಹೀಗೆಯೇ ಇಲ್ಲಿಯ ನಾಗರಿಕತೆಯೂ ಕೂಡ ಅಲ್ಪಜೀವಿತವಾದುದಲ್ಲ. ಮತ್ತೊ ಇದರ ಚಾರಿತ್ರಶಾಸನಾದಿ ಸಾಕ್ಷ್ಯಗಳು ನಾಲ್ಕುಸಾವಿರ ವರ್ಷಗಳಿಗಿಂತ ಇನ್ನೂ ಹೆಚ್ಚಿನ ಕಾಲದ ವರೆವಿಗೂ ಸಿಕ್ಕುತ್ತವೆ. ಆಗಲೂ ಕೂಡ ಇದರ ನಾಗರೀಕತೆಯು ಆಗಾಗ್ಗೆ ಕುಗ್ಗುತ್ತ, ಒಂದೊಂದುಸಲ ನಿಶ್ಚಲವಾಗಿದ್ದಂತೆ ಕಾಣುತ್ತಿದ್ದರೂ ಇದುವರೆವಿಗೂ ಕೂಡ ಹೆಚ್ಚು ತಡೆಯಿಲ್ಲದೆ ಒಂದೇ ಸಮನಾಗಿ ನಡೆದು ಬಂದಿರುವ ಶ್ರೇಷ್ಠಸ್ಥಿತಿಯನ್ನು ಪಡೆದಿತ್ತು. ಈ ನಾಗರೀಕತೆಯು ನಾಲ್ಕೈದುಸಾವಿರ ವರ್ಷಗಳ ಆಧ್ಯಾತ್ಮಿಕಜ್ಞಾನಾನುಭವಗಳ ಉಬ್ಬರ ವಿಳಿತಗಳಿಗೆಲ್ಲಾ ಧೈರ್ಯವಾಗಿ ಎದೆಗೊಟ್ಟು ನಿಂತಿದೆ. ಚರಿತ್ರೆಯ ಪ್ರಾರಂಭಕಾಲದಿಂದಲೂ ವಿವಿಧಜಾತಿ ಮತ್ತು ಸ್ವಸಂಸ್ಕೃತಿಯುಳ್ಳ ಜನಗಳು ಈ ನಮ್ಮ ದೇಶಕ್ಕೆ ಪದೇಪದೇ ಬಂದು ಧುಮುಕುತ್ತಿದ್ದರೂ, ಹಿಂದೂಧರ್ಮವೇನೋ ತನ್ನ ಸಾರ್ವಭೌಮತೆಯನ್ನು ಇನ್ನೂ ಗಟ್ಟಿಯಾಗಿ ಉಳಿಸಿಕೊಂಡಿರುವುದಲ್ಲದೆ, ರಾಜ್ಯಶಕ್ತಿಯಿಂದೊಡಗೂಡಿ ಲೋಕವನ್ನೇ ತಮ್ಮ ದಾರಿಗೆಳೆಯಬೇಕೆಂದಿರುವ ಮತಗಳಿಗೆ ಭರತ ಖಂಡದಲ್ಲಿ ಹೆಚ್ಚು ಜನರನ್ನು ತಮ್ಮ ಜಾತಿಗೆಳೆದುಕೊಳ್ಳಲು ಇನ್ನೂ ಸಾಧ್ಯವಾಗಿಲ್ಲ. ಇದರಿಂದೇನು ತಿಳಿಯುತ್ತದೆ ಎಂದರೆ ನಮಗಿಂತಲೂ

ಹೆಚ್ಚು ಸಾಮರ್ಥ್ಯವುಳ್ಳ ಜನಪ್ರವಾಹಗಳಿಗೆ ದೊರೆಯದ ಅಪೂರ್ವ ಶಕ್ತಿಯೊಂದು ನಮ್ಮ ಹಿಂದೂ ಮತದಲ್ಲಿ ಇನ್ನೂ ಕುಂದಿಲ್ಲದೆ ಪ್ರಜ್ವಲಿಸುತ್ತಿದೆ. ಆದುದರಿಂದ ಮರದಲ್ಲಿ ರಸಪುಷ್ಟಿಯಿದೆಯೋ ಇಲ್ಲವೋ ಎಂದು ನೋಡಬೇಕಾದಾಗ ಆ ಮರವನ್ನೇ ಕುಯ್ದು ನೋಡಬೇಕಾಗಿಲ್ಲವೋ, ಹಾಗೆಯೇ ಈ ಜೀವಕಳೆಯನ್ನು ಗುರ್ತಿಸಲು ಹಿಂದೂಮತವನ್ನು ವಿಧವಿಧವಾಗಿ ಸೀಳಿನೋಡಬೇಕಾಗಿಲ್ಲ. ಮತ್ತು ಬೇರೆ ರೀತಿಯಿಂದ ತಿಳಿಯಬಹುದು.

## ೩. ಹಿಂದೂದೇಶವೂ ಇಲ್ಲಿಯ ಪೂರ್ವನಿವಾಸಿಗಳೂ

ಹಿಂದೂನಾಗರಿಕತೆಯೆಂದು ಕರೆಯುವುದಕ್ಕೆ ಮುಖ್ಯಕಾರಣವೇನೆಂದರೆ ಇದನ್ನು ಮೊದಲು ಸ್ಥಾಪಿಸಿದವರಾಗಲಿ, ಅಥವಾ ಇದರ ಪ್ರಥಮಾನುಯಾಯಿಗಳಾಗಲಿ, ಪಂಜಾಬು ಮತ್ತು ವಾಯುವ್ಯಪ್ರಾಂತ್ಯಗಳನ್ನೊಳಗೊಂಡ ಸಿಂಧೂ ಅಂದರೆ ಇಂಗ್ಲೀಷಿನಲ್ಲಿ ಇಂಡಸ್ ಎಂಬ ನದಿಯಿಂದ ಪರಿಪೋಷಿಸಲ್ಪಡುವ ಪ್ರದೇಶವನ್ನು ಸೇರಿ ನೆಲೆಗೊಂಡದ್ದೇ ಮುಖ್ಯಕಾರಣವಾಗಿದೆ ಈ ಸಿಂಧೂನದಿಯ ಪೂರ್ವಕ್ಕಿರುವ ನಮ್ಮ ಜನಗಳನ್ನು ಪರ್ಷಿಯಾದೇಶದಿಂದಲೂ ಮತ್ತು ಈಚೆಗೆ ಬಂದ ಇನ್ನೂ ಬೇರೆಬೇರೆ ಪಶ್ಚಿಮ ದೇಶಗಳಿಂದಲೂ ನಮ್ಮ ದೇಶದಮೇಲೆ ಜೈತ್ರಯಾತ್ರೆಮಾಡಿ ಬಂದ ಪರದೇಶೀಯರು ಹಿಂದುಗಳೆಂದು ಕರೆಯುತ್ತಿದ್ದರು. ಅನಂತರ ಪಂಜಾಬಿನಿಂದ ಮುಂದೆಬಂದ ಈ ನಾಗರೀಕತೆಯು ಗಂಗಾನದಿಯ ಸಮೀಪಪ್ರದೇಶಗಳಿಗೆ ಹರಿದುಬಂದು ಅಲ್ಲಿದ್ದ ಪುರಾತನ ಜನರ ವಿವಿಧ ಮತಗಳನ್ನು ಕಂಡಿತು. ಮುಂದೆ ದಕ್ಷಿಣಾವರ್ತದಲ್ಲಿ ದಾಟಿಬರುತ್ತ ದ್ರಾವಿಡ ಸಂಸ್ಕೃತಿಯೊಡನೆ ಕಲೆತು ಅದರ ಸಂಬಂಧದಿಂದ ಸ್ವಲ್ಪ ಬದಲಾವಣೆಯನ್ನು ಹೊಂದಿದರೂ ಕೊನೆಗೆ ಈ ಹೊಸ ಸಂಸ್ಕೃತಿಯನ್ನು ಆರ್ಯಮತವೇ ಗೆದ್ದಿತು. ಹೀಗೆ ಈ ನಾಗರೀಕತೆಯು ಇಂಡಿಯಾದೇಶದಲ್ಲಿ

---

* ಋಗ್ವೇದ, 8, 24, 27.

ಎಲ್ಲಾ ಕಡೆಯಲ್ಲಿಯೂ ಹರಡುತ್ತಿರುವಲ್ಲಿ ಹಲವು ಬದಲಾವಣೆಗಳನ್ನು ಹೊಂದಿದರೂ, ಸಿಂಧೂನದಿಯ ದಡದಲ್ಲಿ ಅಭಿವೃದ್ಧಿ ಹೊಂದಿದ ನಾಗರೀಕತೆಯೊಡನೆ ತನ್ನ ಪೂರ್ವಸಂಬಂಧವನ್ನು ಎಂದಿಗೂ ಬಿಡದೆ ನಡೆಸಿಕೊಂಡು ಬಂದಿತು. ಈ ವಿಧದಲ್ಲಿ ಹಿಂದುವೆಂಬ ಶಬ್ದಕ್ಕೆ ಪ್ರಥಮದಲ್ಲಿ ಪ್ರಾಂತಿಕಾರ್ಥವಿದ್ದಿತೇ ಹೊರತು ಧಾರ್ಮಿಕ ಅಥವಾ ಮತರೀತ್ಯಾ ಅರ್ಥವಿರಲಿಲ್ಲ. ಮುಖ್ಯವಾಗಿ ಇದೇ ಎಂದು ಚೆನ್ನಾಗಿ ಗೊತ್ತುಮಾಡಿದ್ದ ಪ್ರಾಂತ್ಯದಲ್ಲಿ ವಾಸಮಾಡುವ ಜನರೆಂದೇ ಅರ್ಥಹೊಂದಿತ್ತು. ಪುರಾತನ ಜನರು, ಕಾಡುಜನರು ಮತ್ತು ಸ್ವಲ್ಪಮಟ್ಟಿಗೆ ನಾಗರೀಕತೆಯನ್ನು ಹೊಂದಿದ್ದ ಜನರು, ಹೆಚ್ಚು ಸಂಸ್ಕೃತಿಯನ್ನು ಪಡೆದಿದ್ದ ದ್ರಾವಿಡರು ಮತ್ತು ವೇದಧರ್ಮಿಗಳಾದ ಆರ್ಯರು ಇವರೆಲ್ಲರೂ ಏಕಮಾತೃವಾದ ಭಾರತದೇವಿಯ ಪುತ್ರರಾದುದರಿಂದ ಒಟ್ಟಿಗೆ ಹಿಂದುಗಳಾದರು.* ಆದುದರಿಂದಲೇ ನಮ್ಮ ಪುರಾತನ ಜ್ಞಾನಿಗಳು ಇಂಥಾ ಭರತಭೂಮಿಯಲ್ಲಿರುವ ಜನರು ವಿವಿಧ ಪಂಗಡಗಳಿಗೆ ಸೇರಿರುವರು, ವಿವಿಧದೇವತೆಗಳನ್ನು ಪೂಜಿಸುವರು ಮತ್ತು ವಿವಿಧಾಚಾರಗಳನ್ನು ಅನುಸರಿಸುವರೆಂಬ ವಿಶೇಷ ಸ್ಥಿತಿಯೊಂದನ್ನು ಮರೆಯದೆ ಚೆನ್ನಾಗಿ ಮನನ ಮಾಡಿಕೊಂಡಿದ್ದರು.†

## ೪. ಈಚೆಗೆ ಬಂದ ವಿದೇಶಿಗಳು ಮತ್ತು ಇಲ್ಲಿಯ ನಿಜವಾದ ಐಕ್ಯವು.

ಇಷ್ಟೇ ಸಾಲದೆಂದು ಇಲ್ಲಿಯ ಚರಿತ್ರೆಯ ಪ್ರಾರಂಭಕಾಲದಿಂದಲೂ ಪರದೇಶೀಯರು ಈದೇಶಕ್ಕೆ ತಂಡೋಪತಂಡವಾಗಿ ನುಗ್ಗಿಬರುತ್ತಲೂ ಅವರಲ್ಲಿ ಕೆಲವರು ಇಲ್ಲಿಯೇ ತಮ್ಮ ವಾಸಸ್ಥಾನವನ್ನು ಮಾಡಿಕೊಂಡು ಈ ದೇಶದ ಕಷ್ಟಗಳನ್ನು ಇನ್ನೂ ಸ್ವಲ್ಪ ಹೆಚ್ಚಿಸಿದ್ದಾರೆ. ಹೀಗಿರಲು

---

* “ತಂವರ್ಷಂ ಭಾರತಂನಾಮ ಭಾರತೀಯತ್ರ ಸಂತತಿಃ” ಎಂಬ ವಾಕ್ಯದೊಡನೆ ಹೋಲಿಸಿ ನೋಡಿರಿ.

† “ಭಾರತೇಷು ಸ್ತ್ರಿಯಃಪುಂಸೋನಾನಾವರ್ಣಾಃ ಪ್ರಕೀರ್ತಿತಾಃ। ನಾನಾದೇವಾರ್ಚನೆಯುಕ್ತಾ ನಾನಾಕರ್ಮಾಣಿಕುರ್ವತೇ॥” (ಕೂರ್ಮಪುರಾಣ.)

ತನ್ನಲ್ಲಿ ಐಕ್ಯಮಾಡಿಕೊಳ್ಳಲು ಈಷದಪಿ ಅನುಕೂಲಿಸದಂಥ, ಮತ್ತು ವಿಸ್ತೀರ್ಣದಲ್ಲಿ ಪೂರ್ವಪಶ್ಚಿಮಕ್ಕೆ ಸುಮಾರು ೧೫೦೦ ಮೈಲಿಗಳೂ, ದಕ್ಷಿಣೋತ್ತರಕ್ಕೆ ೩೦೦೦ ಮೈಲಿಗಳೂ ಉಳ್ಳ, ಈ ವಿಶಾಲವಾದ ಭೂಖಂಡದಲ್ಲೆಲ್ಲಾ ಹರಡಿರುವ ಭಿನ್ನಭಿನ್ನವಸ್ತುಗಳಿಂದ ಕೂಡಿರುವ ಹಿಂದೂ ಸಂಗವನ್ನು ಇಲ್ಲಿಯ ಜನರು ಹೇಗೆತಾನೇ ಕಟ್ಟಿರುವರು? ಕೆಲವು ಶತಮಾನಗಳಲ್ಲಿಯೇ ಈ ದೇಶದ ಹೆಚ್ಚು ಭಾಗದಲ್ಲಿ ಭಾರತೀಯರಲ್ಲಿ ನಾಗರೀಕತೆಯ ಏಕೀಕರಣ ಶಕ್ತಿಯು ಹರಡಿತೆಂದೂ ಮತ್ತು ನಾಗರೀಕತೆಯ ಭಿನ್ನಭಿನ್ನ ಅಂತಸ್ತುಗಳಲ್ಲಿದ್ದ ಬೇರೆಬೇರೆ ಜನಗಳ ಮೂಲಶಾಖೆ (racial stocks) ಗಳು ಒಂದು ಸಾಮಾನ್ಯ ವಾತಾವರಣದಲ್ಲಿ ಮಗ್ನವಾದುವೆಂದು ಹೇಳಲಾಗದೆ ಇರುವುದಕ್ಕಾಗುವುದಿಲ್ಲ. ಹಿಂದೂ ಜನಾಂಗದ ವಿವಿಧ ಜಾತಿಗಳಲ್ಲಿರುವ ಪ್ರಭೇದಗಳಾದರೂ ಕೇವಲ ಹೆಚ್ಚುಕಡಿಮೆ ಬಾಹ್ಯವಿಷಯಗಳೇ ಹೊರತು ಸಕಲ ಭಾರತೀಯರೂ ಕೂಡ ಈ ದೇಶದವರೆಂದಮೇಲೆ ಇವರೆಲ್ಲರೂ ಒಂದೇ ಸಾಮಾನ್ಯ ಚರಿತ್ರೆಯಿಂದಲೂ, ಒಂದೇ ಸಾಮಾನ್ಯ ಸಾಹಿತ್ಯದಿಂದಲೂ, ಒಂದೇ ಸಾಮಾನ್ಯನಾಗರೀಕತೆಯಿಂದಲೂ ಕೂಡಿದವರಾಗಿ ಲೋಕಸಂಸ್ಕೃತಿಯಲ್ಲಿ ತಮ್ಮದೇ ಎಂದು ಗೊತ್ತಾದ ವಿಶೇಷಸ್ಥಾನವೊಂದನ್ನು ಪಡೆದಿದ್ದಾರೆ. ಈ ವಿಷಯದಲ್ಲಿ ಪ್ರಸಿದ್ಧಚರಿತ್ರಕಾರರಾದ ವಿನ್ಸೆಂಟ್ ಸ್ಮಿತ್ ಸಾಹೇಬರು ಹೀಗೆ ಸೂಚಿಸುತ್ತಾರೆ. "ಇಂಡಿಯಾದೇಶವಾದರೋ ನಿಸ್ಸಂಶಯವಾಗಿ ಭೂಪರಿಸ್ಥಿತಿಯಿಂದಾಗುವ ಪೃಥಕ್ತ್ವ (isolation) ಕ್ಕಿಂತಲೂ, ಇಲ್ಲವೇ ರಾಜಕೀಯ ಅಧಿಕಾರವಿಶೇಷದಿಂದಾಗುವುದಕ್ಕಿಂತಲೂ ಹೆಚ್ಚಾದ ಸೂಕ್ಷ್ಮರೀತಿಯಲ್ಲಿ ಸರ್ವವ್ಯಾಪಿಯಾಗಿರುವ ಅತಿ ಮುಖ್ಯವಾದ ಐಕ್ಯವಾಗಿದೆ. ಈ ಐಕ್ಯತೆಯಾದರೋ ಅಸಂಖ್ಯಾತವಾದ ಜಾತಿ, ವರ್ಣ, ಭಾಷಾ, ವಸ್ತ್ರಾದಿ ನಡೆನುಡಿಗಳಿಂದುಂಟಾಗುವ ಭಿನ್ನತೆಯನ್ನು ಮೀರಿದೆ.* ಇಂಥಾ ವಿವಿಧ ಭಿನ್ನವಸ್ತುಗಳನ್ನು ಏಕೀಕರಿಸಿ ಅವುಗಳು ಪರಸ್ಪರವಾಗಿ ಶಾಂತಿಯಿಂದಲೂ ಕ್ರಮದಿಂದಲೂ ಒಟ್ಟಿಗೆ ಬಾಳುವಂತೆ ಪ್ರಯತ್ನಿಸುವ

---

* Oxford History of India (ಹಿಂದೂ ದೇಶದ ಚರಿತ್ರೆ)

ಕಾರ್ಯದಲ್ಲಿ ಭಾರತಧರ್ಮವಾದರೋ ತನ್ನ ಸಹಾಯಕ್ಕೂ ಬೋಧನೆಗೂ ಬೇಕಾದ ಚಾರಿತ್ರಿಕ ಜ್ಞಾನವನ್ನು ಸ್ವಲ್ಪವಾದರೂ ಪಡೆಯದೆ ತನ್ನ ಕಟ್ಟಳೆಗಳನ್ನೆಲ್ಲಾ ತಾನು ಒಬ್ಬಂಟಿಯಾಗಿಯೇ ರಚಿಸಿಕೊಳ್ಳಬೇಕಾಯಿತು. ಇದರಂತೆಯೇ ಈಗ ಲೋಕವೆಲ್ಲವೂ ಜನಾಂಗ (racial), ಸಂಸ್ಕೃತಿ ಮತ್ತು ಮತಗಳ ಪರಸ್ಪರ ತಪ್ಪು ತಿಳಿವಳಿಕೆಯಿಂದ ತುಂಬಿಹೋಗಿದೆ. ಆದುದರಿಂದ ನಾವೆಲ್ಲರೂ ಇಂಥಾ ಆತ್ಮಘಾತಕವಾದ ವೈಷಮ್ಯಗಳಿಂದ ನಮ್ಮನ್ನು ಸಂರಕ್ಷಿಸಿಕೊಳ್ಳುವ ಉಪಾಯಕ್ಕಾಗಿ ಭಯಸಂದೇಹಗಳಿಂದ ಕೂಡಿ ತಾರಕಮಾರ್ಗವೊಂದನ್ನು ಹುಡುಕುತ್ತಿದ್ದೇವೆ. ಈ ಸಂದರ್ಭದಲ್ಲಿ ಬಹುಶಃ ಮತಕ್ಲೇಶಗಳನ್ನು ನಿಲ್ಲಿಸಲು ನಮ್ಮ ಭಾರತಧರ್ಮವು ಹೆಚ್ಚು ಪ್ರಯೋಜನಕಾರಿಯಾಗದೆ ಇರಲಾರದು.

## ೨ ಭಾರತಧರ್ಮ ಮತ್ತು ಸಂಘಟನೆಗಳು

### ೧. ಮತವಿಷಯದಲ್ಲಿ ಸತ್ಯದೃಷ್ಟಿ ಏನು?

ಮತವಿಷಯದಲ್ಲಿ ಭಾರತೀಯರ ಅಭಿಪ್ರಾಯವೇನೆಂದು ವಿಚಾರಿಸತಕ್ಕದ್ದಾಗಿದೆ. ಇಷ್ಟೇ ಎಂದು ಬುದ್ಧಿಯಿಂದ ಗೊತ್ತುಮಾಡಿದ ನಂಬಿಕೆಗಳು ಮತಗಳನ್ನು ಪರಸ್ಪರವಾಗಿ ಇಂತಿಂತಹವೆಂದು ಸೂಚಿಸುತ್ತಿರುವಾಗ ಹಿಂದೂಧರ್ಮವಾದರೋ ಇಂಥಾ ಎಲ್ಲೆಗಳಾವುವನ್ನೂ ಇಟ್ಟುಕೊಂಡಿಲ್ಲ. ಮತ್ತೆ ನಮ್ಮ ನಿಜಪ್ರಥೆಗೆ ಕೇವಲ ಬುದ್ಧಿಯೂ, ನಿಜಾನುಭವಕ್ಕೆ ಕೇವಲ ಸಿದ್ಧಾಂತವೂ, ಆಂತರಿಕ ಸಂಸಿದ್ಧಿಗೆ ಬಾಹ್ಯಾವರಣನೆಗಳೂ ಅಧೀನವಾಗಿವೆ. ಮತವೆಂದರೆ ಕೇವಲ ಭಾವನೆಗಳ ನಂಬಿಕೆಯೂ ಅಲ್ಲ, ಕೇವಲ ಆಚಾರಗಳ ಅನುಷ್ಠಾನವೂ ಅಲ್ಲ. ಮತ್ತೆ ಒಂದು ವಿಧವಾದ ಜೀವಿಕೆ ಅಥವಾ ಅನುಭವವೇ ಎಂದು ಅರ್ಥ. ಹೇಗೆಂದರೆ ನಿತ್ಯವಸ್ತುವಿನ ಸ್ವಭಾವವೇನೆಂದು ನೋಡುವುದು ಇಲ್ಲವೇ ಆ ನಿತ್ಯವಸ್ತುವೇನೆಂದು ನಮ್ಮಲ್ಲಿ ಚೆನ್ನಾಗಿ ಗ್ರಹಿಸಿಕೊಳ್ಳುವುದು. ಆದರೆ ಈ ರೀತಿಯಾದ ಅನುಭವ ಹೊಂದುವುದು. ಈ ಅನುಭವವಾದರೋ ಕೇವಲ ರಾಗಾದಿ ಆವೇಗಗಳ ಉಬ್ಬರವಿತ್ತವೂ ಅಲ್ಲ, ಕೇವಲ ಒಬ್ಬ ಮನುಷ್ಯನ ಕಲ್ಪನೆಯೂ ಅಲ್ಲ, ಮತ್ತೋ ಆ ಮುಖ್ಯ ನಿತ್ಯವಸ್ತುವಿಗೆ ಮನುಷ್ಯನ

ಪೂರ್ಣಸ್ವಭಾವವು ಅಂದರೆ ಅವನಲ್ಲಿ ಚೆನ್ನಾಗಿ ಐಕೀಕರಿಸಿ ಅಭಿವೃದ್ಧಿಪಡಿಸ ಆತ್ಮನು ( Integrated self ) ತೋರ್ಪಡಿಸುವ ಪ್ರಕಾಶ ಅಥವಾ ಪ್ರದರ್ಶನವು (response). ಹೀಗೆ ಮತವಾದರೂ ಆತ್ಮನ ಒಂದು ವಿಶೇಷಭಾವವು (attitude), ಮತ್ತು ಈ ಭಾವವಾದರೋ ಆತ್ಮನ ಸ್ವತಃಪ್ರಕಾರವಲ್ಲದೆ, ಅದು ಆಗಾಗ್ಗೆ ಇವು ಇತರ ವಸ್ತುಗಳಿಂದು ತಪ್ಪು ತಿಳಿದುಕೊಳ್ಳುವಂಥ ಜ್ಞಾನಕ್ಕೆ ಸೇರಿದ ಅಭಿಪ್ರಾಯಗಳಾಗಲೀ ಸೌಂದರ್ಯ ಶಾಸ್ತ್ರಕ್ಕೆ ಸೇರಿದ ರೂಪಗಳಾಗಲೀ, ಇಲ್ಲವೇ ಧರ್ಮಶಾಸ್ತ್ರಕ್ಕೆ ಸೇರಿದ ತುಲನಾತ್ಮಕ ಬುದ್ಧಿಯಾಗಲಿ (Valuation) ಅಲ್ಲ.

೬. ನಮ್ಮ ಮತಾನುಭವವು.

ಹೀಗೆಂದಮೇಲೆ ಮತಾನುಭವವೂ ಸ್ವತಃಪ್ರಾಮಾಣ್ಯವನ್ನು ಉಳ್ಳ ಸ್ವಭಾವವುಳ್ಳದ್ದು. ಅಂದರೆ ಅದು ಸ್ವತಃ ಸಿದ್ಧವಾದುದು. ತನಗೆ ಬೇಕಾದ ಆಧಾರಗಳೆಲ್ಲವನ್ನೂ ತನ್ನಲ್ಲಿಯೇ ಉಳ್ಳದ್ದು. ಆದರೂ ಮತವಿಷಯದಲ್ಲಿ ಸುಜ್ಞಾನಿಯಾದವನು ತನ್ನ ಅಂತರಾತ್ಮನಲ್ಲಿ ತಿಳಿದ ನಂಬಿಕೆಗಳು ಹೇಗೆ ಸರಿಯೆಂದು ತನ್ನ ಕಾಲದ ಜನರು ಒಪ್ಪಿಕೊಂಡು ತಿಳಿದುಕೊಳ್ಳುವಂತೆ ಸಮಾಧಾನ ಪಡಿಸುವುದು ಅವಶ್ಯಕವಾಗಿದೆ. ಏಕೆಂದರೆ ಈ ವಿಷಯದಲ್ಲಿ ಜ್ಞಾನದಿಂದ ಮನ್ನಣೆಯು ದೊರೆಯದಿದ್ದರೆ ಅಂಥಾ ಜ್ಞಾನಿಯ ಭಾವವು ಕೇವಲ ನಂಬಿಕೆಯೇ ಹೊರತು ಬೇರೆಯಲ್ಲ. ಅಂದರೆ ಈ ಅರ್ಥದಲ್ಲಿ ಮತವು ನಂಬಿಕೆ ಅಥವಾ ಶಬ್ದಪ್ರಾಮಾಣ್ಯವೆಂಬ ಆಧಾರದಮೇಲೆ ನಿಂತಿದೆ. ಆದರೆ ನಿಜವಾಗಿಯೂ ಮತವನ್ನಿಸಿಕೊಳ್ಳಲು ಮಾಡಬೇಕಾದ ಕಷ್ಟ ಪ್ರಯತ್ನಗಳನ್ನು ಮಾಡದೆ ಅದರ ಸುಖಸಾಮಗ್ರಿಗಳನ್ನು ಮಾತ್ರ ಅನುಭವಿಸಬೇಕೆಂದು ಇಚ್ಛಿಸುತ್ತ, ಕೇವಲ ಶಬ್ದಪ್ರಾಮಾಣ್ಯದಮೇಲೆ ನಿಂತಿರುವ ನಿಸ್ಸಾರವಾದ ನಂಬಿಕೆಯು (mechanical belief) ನಿಜಾನುಭವದಲ್ಲಿ ಚೆನ್ನಾಗಿ ಬೇರೂರಿ ಬೆಳೆದಿರುವ ಮತದ ನಂಬಿಕೆಯಲ್ಲ. ಆದುದರಿಂದಲೇ ನಿಜವಾದ ನಂಬಿಕೆ ಏನೆಂದು ಕೇಳಲು ನಿಮ್ಮ ವೆಸ್ಲಿ ಎಂಬ ಮಹನೀಯರು ಹೀಗೆ

ಹೇಳುತ್ತಾರೆ, "ಎಷ್ಟೇ ನಿಜವಾಗಿದ್ದರೂ, ಒಂದಲ್ಲ ಅನೇಕ ಅಭಿಪ್ರಾಯಗಳನ್ನು ಎಷ್ಟು ಒಟ್ಟುಗೂಡಿಸಿದರೂ ಅವುಗಳಿಂದ ನಿಜವಾದ ನಂಬಿಕೆಯು ಎಂದಿಗೂ ದೊರೆಯದು. ಪರಂತು ಅದಾದರೋ ಭೌತಿಕವಸ್ತುಗಳು ಹೇಗೆ ಬಾಹ್ಯೇಂದ್ರಿಯಗಳಿಂದ ಗ್ರಹಿಸಲ್ಪಡುವುವೋ ಹಾಗೆಯೇ ಆಧ್ಯಾತ್ಮವಸ್ತುಗಳನ್ನು ಗ್ರಹಿಸುವ ಶಕ್ತಿಯು ಅಥವಾ ಆತ್ಮನ ಸಮ್ಯಗ್ದರ್ಶನವೇ ಎಂದು ಅರ್ಥ." ಕೇವಲ ಸಿದ್ಧಾಂತಗಳಲ್ಲಿ ಅಂಥ ಶ್ರದ್ಧೆಯಿಂದಿರುವ ನಂಬಿಕೆಯಾದರೂ ತಾರಕಕರವಾದ ಶ್ರೇಷ್ಠನಂಬಿಕೆಯಲ್ಲ. ಆದರೂ ಹೀಗೆ ತಪ್ಪು ಅರ್ಥವು ಬರಲು ಅಂದರೆ ಕೇವಲ ಶಬ್ದ ಪ್ರಮಾಣವನ್ನು ಅಂಧ ಶ್ರದ್ಧೆಯಿಂದ ಅನುಸರಿಸಬೇಕೆನ್ನುವ ಮಾರ್ಗವೇ ಶ್ರೇಷ್ಠನಂಬಿಕೆಯು ಎಂದು ಅರ್ಥ ಬರಲು ಮುಖ್ಯಕಾರಣವೇನೆಂದರೆ ಯೂರೋಪ್ ಖಂಡದಲ್ಲಿ ಕ್ರೈಸ್ತ ಜನಗಳ ಮತಶಾಸ್ತ್ರವು ಅನುಸರಿಸಿದ ಮಾರ್ಗದ ದುಷ್ಫಲವೇ ಹೀಗೆ ಪರಿಣಾಮವಾಗಿದೆ. ಇದು ಬಿಟ್ಟು ನಂಬಿಕೆಯನ್ನು ಅದರ ಸರಿಯಾದ ಅರ್ಥದಲ್ಲಿ ಅಂದರೆ ವಿಶ್ವಾಸಪಾತ್ರತೆ (trust) ಅಥವಾ ಆಧ್ಯಾತ್ಮಿಕರೀತಿಯಲ್ಲಿ ಪಡೆದ ಪೂರ್ಣನಂಬಿಕೆ ಎಂದು ತೆಗೆದುಕೊಂಡರೆ ಮತವಾದರೂ ಶ್ರೇಷ್ಠನಂಬಿಕೆ ಅಥವಾ ಪ್ರತಿಭೆಯೇ ಸರಿ. ಶ್ರದ್ಧೆ ಅಥವಾ ನಂಬಿಕೆಯೆಂದು ನಾವು ಏಕೆ ಕರೆಯುತ್ತೇವೆಯೆಂದರೆ ಇತರ ವಿಧವಾದ ಪ್ರತ್ಯಕ್ಷಗಳಂತೆ, ಆಧ್ಯಾತ್ಮಿಕಪ್ರತ್ಯಕ್ಷವೂ ಕೂಡ ದೋಷಗಳಿಗೊಗಾಗುತ್ತದೆಯಾದುದರಿಂದ ನ್ಯಾಯಶಾಸ್ತ್ರಸಮ್ಮತವಾದ ಭಾವನೆಗಳಿಂದ ಪರೀಕ್ಷಿಸಲ್ಪಡಬೇಕಾಗುತ್ತದೆ. ಆದರೆ, ಎಲ್ಲಾ ಪ್ರತ್ಯಕ್ಷಗಳಂತೆ ಧಾರ್ಮಿಕ ಪ್ರತಿಭೆಯೂ ಕೂಡ ಭಾವನೆಗಳೆಲ್ಲಾ ಯಾತರಿಂದ ಹುಟ್ಟಿ ಕೊನೆಗೆ ಯಾವುದಕ್ಕೆ ಹಿಂತಿರುಗುತ್ತವೆಯೋ ಅಂಥಾ ಪ್ರತ್ಯಕ್ಷವೇ ಸರಿ. ಮತಾನುಭವವು ಸತ್ಯವಸ್ತುವನ್ನು ಪ್ರಕಾಶಗೊಳಿಸುತ್ತದೆಯೆಂದು ಹೇಳುವುದಕ್ಕೂ ಮತದಿಂದುಂಟಾದ ನಂಬಿಕೆಯನ್ನು ನ್ಯಾಯಸಮ್ಮತವಾದ ನಂಬಿಕೆಯನ್ನಾಗಿ ಮಾಡಿಕೊಳ್ಳುವುದಕ್ಕೂ ಈ ಅನುಭವದ ಅರ್ಥವೇನೆಂದು ಜ್ಞಾನರೀತಿಯಲ್ಲಿ ನಾವು ಹೇಳಬೇಕಾಗಿದೆ. ಮತ್ತು ಭಾರತೀಯರ ಜ್ಞಾನಶಕ್ತಿಯು ಇಂಥಾ ಹೇತುಶಾಸ್ತ್ರವನ್ನು (Reason) ಕಂಡಂಜುವುದಿಲ್ಲ. ಏಕೆಂದರೆ ಮಾನುಷಮನಸ್ಸಿನ ವಿವಿಧ ಶಕ್ತಿಗಳಾದ ಪ್ರತಿಭಾಜ್ಞಾನಗಳಿಗೆ

ಹೆಚ್ಚು ವೈಷಮ್ಯವುಂಟಾಗಲಾರದು. ಆಧ್ಯಾತ್ಮಿಕಜೀವನವನ್ನು ಪ್ರೋತ್ಸಾಹಿಸಿ ಅಭಿವೃದ್ಧಿಪಡಿಸುವ ನಂಬಿಕೆಗಳು ಯಾವ ನಿತ್ಯಲೋಕದೊಡನೆ ನಮ್ಮನ್ನು ಜೊತೆಗೂಡಿಸಬೇಕೆನ್ನುವುವೋ ಅಂಥಾ ನಿತ್ಯಲೋಕದ ಪ್ರಕೃತಿ ಧರ್ಮಗಳೊಡನೆ ಇವು ಸಮರಸಭಾವದಿಂದಿರಬೇಕು. ಭಾರತೀಯರ ಮುಖ್ಯ ಗ್ರಂಥಗಳಾದ ವೇದಗಳು ಪೂರ್ಣಸಿದ್ಧಿಯನ್ನು ಪಡೆದಂಥಾ ಮಹಾತ್ಮರುಗಳ ಪ್ರತಿಭಾಭಾಂಡಾರಗಳಾಗಿವೆ.* ಅಂದರೆ ಅವುಗಳು ಯಥಾರ್ಥವಾದ ಜೀವನ ಸ್ಥಿತಿಗತಿಗಳನ್ನು ನೋಡಿ ಬರೆದ ವಿಷಯಗಳೇ ಹೊರತು ಕೇವಲ ಪಾಂಥಿಕ ಸಿದ್ಧಾಂತ (dogmatic dicta) ಗಳೇನೂ ಅಲ್ಲ. ಏಕೆಂದರೆ ಈ ವೇದಗಳು ನಿಶ್ಚಯವಸ್ತುವಿನ ತಿಳಿವಳಿಕೆಗೆ ಬೇಕಾದ ಎಲ್ಲಾ ಶಕ್ತಿಗಳಿಂದ ಕೂಡಿದ ಮಹಾಪುರುಷರ ಆಧ್ಯಾತ್ಮಿಕಾನುಭವಗಳಿಂದ ಕೂಡಿ ಶೋಭಿಸುತ್ತಿವೆ. ಹೀಗಿವುಗಳು ಮತವಿಷಯದಲ್ಲಿ ಸುಜ್ಞಾನಿಗಳಾದ ಜನರ ಅನುಭವಗಳಿಂದ ಕೂಡಿರುವುದೇ ಇವುಗಳಿಗೆ ಇಷ್ಟೊಂದು ಮಹತ್ವವು ಬರಲು ಕಾರಣವಾಗಿದೆ. ಹೀಗಲ್ಲದೆ ಈ ವೇದಗಳು ಆಧ್ಯಾತ್ಮಿಕಾನುಭವಕ್ಕೆ ಬೇಕಾದ ಸೂಕ್ಷ್ಮದೃಷ್ಟಿಯಿಂದ ಕೂಡಿಲ್ಲದಿದ್ದರೆ, ಇವುಗಳನ್ನು ನಾವೆಂದಿಗೂ ಅಷ್ಟು ದೊಡ್ಡ ಪ್ರಮಾಣಗ್ರಂಥಗಳೆಂದು ನಂಬುತ್ತಲೇ ಇರಲಿಲ್ಲ. ಮತ್ತು ಈ ವೇದಗಳಲ್ಲಿ ಹೇಳಿರುವ ತತ್ತ್ವಗಳಾದರೂ ಕೂಡ ಜನರು ಇವುಗಳನ್ನು ತಿಳಿದುಕೊಳ್ಳಲು ಬೇಕಾದ ಯೋಗ್ಯತೆಯನ್ನು ಪಡೆದಕೂಡಲೇ ಅಂಥಾ ಮಹಾತ್ಮರ ಅನುಭವಕ್ಕೆ ಸುಲಭಸಾಧ್ಯಗಳಾಗಿರುತ್ತವೆ. ಇದರಿಂದ ಮತಾನುಭವದಲ್ಲಿ ಯಾವ ವಿಷಯಗಳು ನಿಜವಾದುವು, ಯಾವಯಾವುವು ಸುಳ್ಳಾದುವುಗಳೆಂದು ಕೇವಲ ತರ್ಕಶಾಸ್ತ್ರವೊಂದರಿಂದಲ್ಲದೆ ಜೀವನಮಾರ್ಗದಿಂದಲೂ ಕೂಡ ನಾವು ವಿವೇಚಿಸಿ ಕಂಡುಹಿಡಿಯಬಹುದು. ಹೀಗೆ ಮತವಿಷಯದ ಆಯಾ ಭಾವನೆಗಳನ್ನು ಪರೀಕ್ಷಿಸಿ, ಅವುಗಳನ್ನು ನಮ್ಮ ಜೀವಿಕೆಯ ಇತರ ವಿಷಯಗಳೊಡನೆ ಹೋಲಿಸಿನೋಡಿಕೊಂಡರೆ ಇವುಗಳಲ್ಲಿ

---

* ತೈತ್ತರೀಯ ಆರಣ್ಯಕ, 1, 2.

ಯಾವ ಯಾವುವು ಒಳ್ಳೆಯವು--ಕೆಟ್ಟವು ಎಂದು ನಾವೇ ತಿಳಿದುಕೊಳ್ಳಬಹುದು.

### ೭. ವೇದಗಳು

ಈ ವೇದಗಳು ಪೂರ್ವಕಾಲದ ಧಾರ್ಮಿಕಶ್ರೇಷ್ಠರು ನಿತ್ಯವಸ್ತುವನ್ನು ಯಾರುಯಾರು ಯಾವಯಾವ ವಿಧದಲ್ಲಿ ತಮ್ಮ ನಿಜಾನುಭವಕ್ಕೆ ತಂದುಕೊಂಡು ಅರಿತುಕೊಂಡರೋ ಆಯಾ ಮಾರ್ಗಗಳನ್ನೆಲ್ಲಾ ಒಟ್ಟುಗೂಡಿಸಿ ಮತವಿಷಯಕವಾದ ಚರಿತ್ರಜ್ಞಾನಗಳ ಸಾಮಾನ್ಯಧರ್ಮಗಳನ್ನು ವಿವರಿಸುತ್ತವೆ. ಇಂಥಾ ಅನುಭವಗಳೆಲ್ಲಾ ವಿವಿಧ ಬಣ್ಣಗಳಿಂದ ಕೂಡಿರುವುದರಿಂದ ಇವುಗಳನ್ನು ಹೇಳುವ ಗ್ರಂಥಗಳೂ ಕೂಡ ವಿಶ್ವತೋಮುಖವಾಗಿವೆ. ಅಂದರೆ ನ್ಯಾಯಸುಧಾಕರ್ತರಾದ ಜಯತೀರ್ಥಸ್ವಾಮಿಗಳು ಹೇಳುವಂತೆ ಅನೇಕಾರ್ಥದಿಂದ ಕೂಡಿವೆ.

### ೮. *ಸ್ವತ್ತು ನಮ್ಮ ಸಂಪ್ರದಾಯಗಳು

ಇವರಿಂದ ಪ್ರತಿಯೊಂದು ಮತವೂ ಪೂರ್ವದಿಂದ ಬಂದಿರುವ ಆಧ್ಯಾತ್ಮಿಕವಸ್ತುಗಳನ್ನು, ಅಂದರೆ ಉತ್ತಮ ಶಿಷ್ಟಾಚಾರಸಂಪ್ರದಾಯಗಳನ್ನು ಪೂಜ್ಯತೆಯಿಂದ ಕಾಣಬೇಕಾದುದು ಬಹು ಮುಖ್ಯವಾಗಿದೆ. ತಮ್ಮ ಪೂರ್ವಪದ್ಧತಿಗಳನ್ನು ಪೂಜ್ಯಭಾವದಿಂದ ನೋಡುವ ಎಲ್ಲಾ ಸಂಘಗಳೂ ಶಾಶ್ವತಶಕ್ತಿಗಳಿಂದ ಕೂಡಿ ಬೇಕಾದ ಅಮೌಲ್ಯಪ್ರಭಾವವನ್ನು ಹೊಂದುವುವು. ಹೀಗೆ ನಮ್ಮ ವೇದಮಾರ್ಗವು ಪೂಜ್ಯವಾಗಿರುವದರಿಂದ (ಆರ್ಯ)ಸಂಸ್ಕೃತಿಯನ್ನು ತಂದು ನಾಗರೀಕತೆಯ ಪ್ರವಾಹವು ತಡೆಯಿಲ್ಲದೆ ಹರಿಯುವಂತೆ ಸಹಾಯಮಾಡಿರುತ್ತದೆ ಇಂಥಾ ಪೂಜ್ಯವಾದ ಮತಗ್ರಂಥಗಳು ಆಧ್ಯಾತ್ಮಿಕದೃಷ್ಟಿಯನ್ನು ಹೊಂದಲಾರದ ಜನರಿಗೂ ಕೂಡ ಪಾರಮಾರ್ಥಿಕ ಜೀವನವು ಎಷ್ಟುಮಟ್ಟಿಗೆ ನಿಜವಾದದ್ದೆಂದು ತಿಳಿಸುತ್ತವೆ. ಜನಗಳಾದರೋ ಜೀವನವಮಾರ್ಗದಲ್ಲಿ ನಡೆಯುತ್ತಾ ತಮ್ಮ ನಿತ್ಯದ ಕಷ್ಟನಷ್ಟ ಮತ್ತು ದುಃಖಪಾಪಗಳಲ್ಲಿ ಮಗ್ನರಾಗಿ ಸಮಾಹಿತ

* Heritage ಸ್ವತ್ತು.

ತರ್ಕವನ್ನಾಗಲಿ, ದೀರ್ಘಧ್ಯಾನವನ್ನಾಗಲೀ, ತಿಳಿದುಕೊಳ್ಳಲಾರದೆ ತಾವು ಸರಿಯೆಂದು ಒಪ್ಪಬಹುದಾದ ಜೀವನಧರ್ಮವಾಗಲೀ, ಸೂತ್ರವಾಗಲೀ ತಮತಮಗೆ ಬೇಕೆಂದು ಅಪೇಕ್ಷಿಸುತ್ತಾರೆ. ಏಕೆಂದರೆ ಇದರ ಸಹಾಯ ದಿಂದ ಅವರು ತಮ್ಮ ತಮ್ಮ ಜೀವನದಲ್ಲಿ ಹೊಸದೊಂದು ಮಾರ್ಗವನ್ನು ಅವಲಂಬಿಸಬಹುದಾಗಿದೆ. ಹೀಗೆ ನಮ್ಮ ಸುತ್ತಮುತ್ತಲಿರುವ ಜನಗಳು ಆಚರಿಸುವ ಪೂರ್ವಪದ್ಧತಿಗಳು ನಮ್ಮ ಆಂತರಿಕಶಕ್ತಿಗಳನ್ನು ಬದಲಾಯಿಸಿ, ನಮ್ಮ ಸ್ವಭಾವದಲ್ಲಿ ದಯಾರಸವನ್ನು ಪುಷ್ಟೀಕರಿಸಿ, ನಮ್ಮ ಜೀವನವನ್ನು ಉತ್ತಮಸ್ಥಿತಿಗೆ ಕರೆದೊಯ್ಯುತ್ತವೆ. ಇದರಿಂದ ಪ್ರತಿಯೊಂದು ತಲಾಂತರದ ಜನಗಳೂ ಆಯಾ ನಾಗರೀಕತೆಗೆ ವಿಶೇಷಗುಣವನ್ನೂ, ಶಕ್ತಿಪ್ರಭಾವ*ವನ್ನೂ ಕೊಡುವ ಬೇರೆಬೇರೆ ರೂಪಗಳಲ್ಲಿ ಪರಿಣಾಮವನ್ನು ಹೊಂದುತ್ತಾರೆ.† ಆದರೂ ತಾವೇ ಸ್ವತಃ ತತ್ತ್ವವೇನೆಂದು ನೋಡಬೇಕೆಂದಿರುವ ಜನಗಳೂ ಕೂಡ ಮೊದಮೊದಲು ಯೋಗ್ಯಗುರುವಿನ ಸಹಾಯವನ್ನು ಪಡೆಯಲೇಬೇಕು.

೯. ವೇದಪ್ರಾಮಾಣ್ಯವೆಂದರೇನು ?

ವೇದದ ವಿಚಾರದಲ್ಲಿ ಭಾರತೀಯರು ಶ್ರದ್ಧಾಯುಕ್ತನಾದ ನಂಬಿಕೆಯಿಂದಲೂ, ವಿಮರ್ಶಾಪೂರ್ವಕ ಜ್ಞಾನದಿಂದಲೂ ಕೂಡಿದ್ದಾರೆ. ಏಕೆಂದರೆ ನಮ್ಮ ಪೂರ್ವಜರಿಗೆ ಸಹಾಯಕವಾಗಿದ್ದ ನಂಬಿಕೆಗಳೂ, ಆಚಾರಗಳೂ ನಮಗೂ ಕೂಡ ಪ್ರಯೋಜನಕಾರಿಗಳಾಗಿ ಇರಬಹುದಾದುದರಿಂದ ಅವುಗಳಲ್ಲಿ ಶ್ರದ್ಧೆಯು ಇರಲೇಬೇಕು. ಆದರೆ ಪೂರ್ವಕಾಲದಲ್ಲಿದ್ದ ಜನರ ಸಾಕ್ಷ್ಯವು‡ ಎಷ್ಟು ಅಪರೂಪವಾಗಿದ್ದರೂ ಕೂಡ ಆಯಾ ಕಾಲದ ಜನರಿಗಿರುವ ನಿಜವಾದ ಸಾಕ್ಷ್ಯವೇನೆಂದು ವಿಚಾರಿಸಿ ಪರೀಕ್ಷಿಸುವ ಅಧಿಕಾರ§ವನ್ನು ಅವರಿಂದ ಯಾರೂ ಕಿತ್ತುಕೊಳ್ಳುವುದಕ್ಕಾಗುವುದಿಲ್ಲ. ಪೂರ್ವಕಾಲದ ಮಹಾತ್ಮರುಗಳು ತಮಗೆ ಗೋಚರವಾದ ಪರಮಾತ್ಮನ ವಾಣಿ

* Interest
† Moulded
‡ Testimony
§ Right to enquire

ಯನ್ನು ನಮಗಾಗಿ ಎಷ್ಟು ಚನ್ನಾಗಿ ತಿಳಿಸಿಕೊಟ್ಟಿದ್ದರೂ ಕೂಡ ಇವುಗಳ ವಿಷಯದಲ್ಲಿ ನಮಗಿರುವ ಶ್ರದ್ಧಾಗೌರವಗಳು, ಪರಮಾತ್ಮನು ತನ್ನ ಪ್ರೀತಿಜ್ಞಾನಗಳ ಪ್ರಕಾಶವನ್ನು ಎಂದಿಗೂ ಮುಗಿಸುವದಿಲ್ಲವೆಂಬ ತತ್ವದ ತಿಳಿವಳಿಕೆಯಿಂದ ಕೂಡಿರಬೇಕು. ಮತ್ತು ಮತಾನುಭವಕ್ಕೆ ನಾವು ಕೊಡುವ ಅರ್ಥವು ವಿಜ್ಞಾನಶಾಸ್ತ್ರದಿಂದ ಹೊಸಹೊಸದಾಗಿ ಕಂಡು ಬರುವ ಧರ್ಮಗಳೊಡನೆ ಸುಲಭವಾಗಿ ಕರೆಯುವಂತಿರಬೇಕು. ಹೀಗೆ ಜ್ಞಾನವು ಹೆಚ್ಚಿದಹಾಗೆಲ್ಲಾ ನಮ್ಮ ಮತಶಾಸ್ತ್ರ (theology) ವೂ ಕೂಡ ಹೆಚ್ಚೇ ಹೆಚ್ಚುತ್ತದೆ ಆದುದರಿಂದ ಪೂರ್ವ-ಪದ್ಧತಿಗಳಲ್ಲಿ ನಾವು ಎಲ್ಲವನ್ನೂ ನಂಬುವುದಕ್ಕಾಗುವುದಿಲ್ಲ ಮತ್ತಿವುಗಳಲ್ಲಿ ನ್ಯಾಯಸಮ್ಮತವಾದ ಭಾಗ ಗಳನ್ನೇ ಇಂದ್ರಿಯಸಾಕ್ಷ್ಯಗಳಿಗೆ ಅತೀತವಾದುವುಗಳೆಂದು ನಾವು ನಂಬ ಬಹುದು.

೧೦. ನಮ್ಮ ಮತಧರ್ಮವೇನು?

ಭಾರತೀಯರ ಮತ ವಿಷಯವಾದ ದರ್ಶನವು (Philosophy of Religion) ಪ್ರತ್ಯಕ್ಷ್ಯಪರೀಕ್ಷೆಯ (Experimental) ಆಧಾರ ದಿಂದ ಉದ್ಭವಿಸಿ ಪುನಃ ಅದಕ್ಕೆ ಹಿಂತಿರುಗುತ್ತದೆ. ಆದರೆ ಈ ಆಧಾರ ವಾವದೋ ಮನುಷ್ಯ ಪ್ರಕೃತಿಯಷ್ಟು ವಿಶಾಲವಾಗಿದೆ. ಇತರ ಮತಶಾ ಸ್ತ್ರಗಳು ಒಂದೊಂದು ಅನುಭವವಿಶೇಷ (Experimental datum) ದಿಂದ ಉದ್ಭವಿಸುತ್ತವೆ. ಹೇಗೆಂದರೆ, ಕ್ರೈಸ್ತಮತಶಾಸ್ತ್ರವು ಏಸುವಿನ ವಿಷಯವಾಗಿ ದೊರೆಯುವ ಸ್ವತಃಪ್ರಮಾಣವುಳ್ಳ ನಮ್ಮ ನಿರಾತಂಕ ವಾದ ನಂಬಿಕೆ (Immediate certitude) ಯಮೇಲೆ ನಿಂತಿದೆ. ಏಕೆಂದರೆ ಈ ಏಸುವಿಗೆ ನಮ್ಮ ಮೇಲಿರುವ ಅಧಿಕಾರವು ಸ್ವತಃಪ್ರಮಾ ಣವುಳ್ಳದ್ದು, ಮತ್ತು ನಮ್ಮನ್ನು* ಕಾಪಾಡಲು ಬೇಕಾದ ಶಕ್ತಿಪ್ರೀತಿ ಗಳು ಇವನಲ್ಲಿರುವುವೆಂದು ನಂಬದಿರುವುದಕ್ಕೆ ಯಾವ ಅವಕಾಶವೂ ಇಲ್ಲ. ಹೀಗೆ ಕ್ರೈಸ್ತಮತಶಾಸ್ತ್ರವು ಆಧ್ಯಾತ್ಮಿಕಾನುಭವದಲ್ಲಿ ಯಾವುದೋ

*ತಾತ್ಪರ್ಯವತೀಶ್ರುತಿಃ ಪ್ರತ್ಯಕ್ಷಾದ್ಬಲವತೀ, ನಶ್ರುತಿಮಾತ್ರಂ. (ಭಾಮತೀ)

† Our soul

ಒಂದು ವಿಶೇಷಮಾರ್ಗವನ್ನು ಒಪ್ಪುವ ಅಥವಾ ಅನುಭವಿಸುವ ಜನರಿಗೆ ಮಾತ್ರ ಸರಿಯಾಗಿ ಕಾಣುತ್ತದೆ. ಮತ್ತಿವರು ಇತರರ ಅನುಭವಗಳು ಮಾಯಾಕೃತಗಳೆಂದೂ, ಇತರರ ಮತಗ್ರಂಥಗಳು ಸಂಪೂರ್ಣವಾಗಿಲ್ಲ ವೆಂದೂ ದೂರಮಾಡುವಷ್ಟು ಪ್ರಲೋಭಕಕ್ಕೊಳಗಾಗುತ್ತಾರೆ. ಆದರೆ ಹಿಂದೂಮತವು ಯಥಾರ್ಥ† ವಿಷಯಗಳನ್ನು ಸರಿಯೆಂದು ಒಪ್ಪಿ ಅನುಸರಿಸುವುದರಿಂದ ಇಷ್ಟು ಕಷ್ಟಕ್ಕೆ ಗುರಿಯಾಗುವುದಿಲ್ಲ. ಹಿಂದೂಜ್ಞಾನಿಗಳಾದರೋ ಇತರ ಜನಗಳ ಧರ್ಮಮಾರ್ಗಗಳನ್ನು ಒಪ್ಪಿಕೊಳ್ಳುವುದಲ್ಲದೆ, ಇವುಗಳೂ ಕೂಡ ತಮ್ಮ ವಿಮರ್ಶೆಗೆ ಯೋಗ್ಯವಾದವುಗಳೆಂದು ಗೌರವಿಸುತ್ತಾರೆ. ಹೀಗೆ‡ ಪ್ರತಿಯೊಂದು ದೇಶ, ವರ್ಣ, ನಾಗರಿಕ ಸ್ಥಿತಿಗಳಲ್ಲಿರುವ ಲೋಕದ ಎಲ್ಲಾ ಜನರನ್ನು ಪರಮಾತ್ಮ ಸಂಭೂತರೆಂದರೆ, ಅವನ ಸೃಷ್ಟಿಕ್ರಮದ ವಿಶಾಲವ್ಯಾಪ್ತಿಯಲ್ಲಿ ಎಲ್ಲರೂ ಅವನ ಜ್ಞಾನದಿಂದ ಉಪದೇಶ ಹೊಂದುತ್ತಲೂ, ಅವನ ಪ್ರೀತಿಯಿಂದ ರಕ್ಷಣೆಯನ್ನು ಪಡೆಯುತ್ತಲೂ ತಮ್ಮ ತಮ್ಮ ಶಕ್ತಿಪರಿಮಾಣಗಳಿಗೆ ತಕ್ಕಂತೆ ಪರಮಾತ್ಮಜ್ಞಾನವನ್ನು ಪಡೆಯುತ್ತಿರುವರೆಂದೂ ಹೇಳಬೇಕಾಗುತ್ತಿದೆ. ಹೀಗಿರುವುದರಿಂದ ಬೇರೆಬೇರೆ ಜನಗಳು ಬ್ರಹ್ಮಸಾಕ್ಷಾತ್ಕಾರಕ್ಕಾಗಿ ಬೇರೆಬೇರೆ ಮಾರ್ಗಗಳಿಂದ ಪ್ರಯತ್ನಿಸಿ ಕೃತಾರ್ಥರಾದರೆಂಬುದನ್ನು ಕಂಡು ಭಾರತೀಯರು ಆ ಮಾರ್ಗಗಳನ್ನೆಲ್ಲಾ ಸರಿಯೆಂದು ತಮ್ಮ ಉದಾರಭಾವದಿಂದ ಮನ್ನಿಸಿದ್ದಲ್ಲದೆ ಅವುಗಳಿಗೆ ಚರಿತ್ರೆಯಲ್ಲಿ ದೊರೆತ ಆಯಾ ಸ್ಥಾನ ವಿಶೇಷಗಳು ಹೇಗೆಹೇಗೆ ಸರಿಯೆಂಬುದನ್ನು ಕೂಡ ತೋರಿಸಿಕೊಟ್ಟರು.

---

† Facts

‡ ಇಲ್ಲಿಂದ ಈ ಪ್ಯಾರಾವಿನ ಕೊನೆಯವರೆವಿಗೂ ಇರುವ ಭಾಗವನ್ನು ಹೋದವರ್ಷದ ವಿಶ್ವಕರ್ಣಾಟಕದ ರಾಷ್ಟ್ರೀಯ ಸಂಚಿಕೆ (೨೬-೧೨-೨೭, ಪುಟ ೮) ಯಲ್ಲಿ ಪ್ರಕಟಿಸಿತ್ತು. ಆದರೆ ಆಗ ಆ ಪತ್ರಿಕೆಯ ಸಂಪಾದಕರು ತಮಗೆ ಬೇಕಾದಂತೆ ಕೆಲಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದುದರಿಂದ ಈಗ ಈ ಭಾಗವನ್ನು ಅನುವಾದಕರ ಮೂಲ ಪ್ರತಿಯಲ್ಲಿದ್ದಂತೆಯೇ ಇಲ್ಲಿ ಕೊಟ್ಟಿದೆ.

ಆರ್ಯಾಜನರ ಬೇರೆಬೇರೆ ಮತಗ್ರಂಥಗಳು ಅವರವರ ಚಿತ್ತರಂಜನೆಗೂ (appeal to emotions), ಕಾರ್ಯ ಪ್ರೋತ್ಸಾಹಕ್ಕೂ ಕೇವಲ ಅವಶ್ಯಕವಾದ ಆಧಾರಗ್ರಂಥಗಳಾಗಿರುವುದರಿಂದ ಇವುಗಳನ್ನೇ ಅವರ ಶ್ರೇಯೋಭಿವೃದ್ಧಿಗಾಗಿ ಉಪಯೋಗಿಸಿದರು. ಈ ರೀತಿಯಲ್ಲಿ ಹಿಂದೂ ಮತವು ಕೇವಲ ವೇದೋಕ್ತ ಧರ್ಮವಾಗದೆ ಇತಿಹಾಸ ಪುರಾಣಧರ್ಮವನ್ನೂ * ತನ್ನಲ್ಲಿ ಒಳಗೊಂಡಿದೆ. ನಮ್ಮ ದೇಶದಲ್ಲಿರುವ ಆರ್ಯಾಜನರ ಬೇರೆಬೇರೆಮತಗ್ರಂಥಗಳನ್ನು, ನಿತ್ಯವಸ್ತುವಿನ ವಿಚಾರವಾದ ಆರ್ಯಾಜನರ ಪ್ರತಿಭಾ ವಿಶೇಷಗಳ ಗೂಢಾರ್ಥವನ್ನೂ ಸ್ವೀಕರಿಸಿದುದರಿಂದ, ಅಂದರೆ ಸರ್ವಾಗಮ ಪ್ರಾಮಾಣ್ಯದಿಂದ ಭಾರತ ಧರ್ಮವು ವಿವಿಧ ತರವಾಗಿ ಕೆತ್ತಿದ ಪಟ್ಟಿಗಳಿಂದಲೂ, ವಿವಿಧ ಬಣ್ಣಗಳಿಂದಲೂ ಅಲಂಕೃತವಾಗಿ ಶೋಭಿಸುತ್ತಿರುವ ಶ್ರೇಷ್ಠ ಶಿಲ್ಪರಚನೆಯಂತಿದೆ. ಏಕೆಂದರೆ ಕ್ಲುಪ್ತವಿಲ್ಲದ ಕಾಲಸೂತ್ರದಿಂದಲೂ (wild chronology), ಅಮಾನುಷ ಕಥೆಗಳಿಂದಲೂ ಕೂಡಿರುವ ಪುರಾಣಗಳು ಮುಖ್ಯವಾಗಿ ಕಾಲ್ಪನಿಕ ಕಾವ್ಯವರ್ಗಕ್ಕೆ ಸೇರಿದ್ದರೂ ನಮ್ಮಲ್ಲಿ ಕೆಲವರು ಅವುಗಳನ್ನು ಪ್ರೀತಿಸುತ್ತಿದ್ದುದರಿಂದ ಈ ಪುರಾಣಗಳನ್ನೂ ಪ್ರಮಾಣ ಗ್ರಂಥಗಳನ್ನಾಗಿ ಇಟ್ಟುಕೊಂಡಿರುವೆವು. ಹೀಗೆಯೇ ಮುಖ್ಯವಾಗಿ ಯೋಗಸಾಧನೆ ಮತ್ತು ಯೋಗಾಭ್ಯಾಸಗಳನ್ನು ಹೇಳುತ್ತ, ಋಗ್ವೇದ ಕಾಲದಿಂದಲೂ ನಮ್ಮಲ್ಲಿ ಕೆಲವು ಪಂಗಡಗಳ ಆಚಾರ ವ್ಯವಹಾರಗಳನ್ನು ಬದಲಾಯಿಸಿರುವ ತಂತ್ರಶಾಸ್ತ್ರವನ್ನೂ ನಮ್ಮ ಪ್ರಮಾಣ ಗ್ರಂಥಗಳಲ್ಲಿ ಒಂದನ್ನಾಗಿ ಸೇರಿಸಿಕೊಂಡಿರುವೆವಲ್ಲದೆ, ನಮ್ಮ ಪೂಜಾಕ್ರಮದಲ್ಲಿ ಕೆಲವು ಭಾಗಗಳನ್ನೂ ಕೂಡ ಈ ತಂತ್ರಪ್ರಯೋಗದಿಂದ ಸೇರಿಸಿಕೊಂಡು ಬಿಟ್ಟಿರುವೆವು. ಇಂತು ಪರಮಾತ್ಮನ ಸಾನ್ನಿಧ್ಯವನ್ನು ಸೇರಲು ಸಹಾಯಕವಾದ ಸರ್ವ ಸಂಪ್ರದಾಯಗಳೂ ನಮ್ಮ ಆಚಾರಕ್ಕೆ ಯೋಗ್ಯವಾದುವುಗಳೆಂದು ರೂಢಿಯಲ್ಲಿ ಬಂದುಬಿಟ್ಟವೆ. "ವೇದ, ಸಾಂಖ್ಯ, ಯೋಗ, ಪಾಶುಪತ, ವೈಷ್ಣವಮತಗಳು ಒಂದಲ್ಲ ಮತೊಂದು ಸ್ಥಳದಲ್ಲಿ ಮನ್ನಣೆಯನ್ನು

---

* ಶ್ರುತಿ ಸ್ಮೃತಿ ಪುರಾಣೋಕ್ತ ಧರ್ಮ—

ಹೊಂದಿವೆ. ಜನರು ತಮ್ಮ ತಮ್ಮ ಅಭಿರುಚಿಗೆ ತಕ್ಕಂತೆ ಇದುಸರಿ, ಅದು ಸರಿ ಎಂದು ಹೇಳಿದರೂ, "ಹೇಪರಮಾತ್ಮನೇ, ತಮ್ಮ ತಮ್ಮ ದಾರಿಗಳು ಎಷ್ಟುಡೊಂಕಾಗಿದ್ದರೂ ಕೂಡ ನದಿಗಳೆಲ್ಲಾ ಕೊನೆಗೆ ಹೇಗೆ ಸಮುದ್ರ ವನ್ನೇ ಸೇರುವುವೋ ಹಾಗೆಯೇ ಈ ಜನರೆಲ್ಲರೂ ಕೂಡ ನಿನ್ನ ಪಾದಾರ ವಿಂದವನ್ನೇ ಸೇರುತ್ತಾರೆ"ಂದು* ಮಹಿಮ್ನ ಸ್ತೋತ್ರವು ಉದ್ಘೋಷಿಸು ತ್ತಿಲ್ಲವೆ? ಆದುದರಿಂದ ಹಿಂದೂಮತವೆಂದರೆ ಕೇವಲ ಯಾವುದೋ ಒಂದು ಸಿದ್ಧಾಂತ ಮತ (doctrinal creed) ವಲ್ಲ, ಮತ್ತೋ ಆಧ್ಯಾ ತ್ಮಿಕ ಜ್ಞಾನ ಸಿದ್ಧಿಗಳಿಂದ ಕೂಡಿದ ವಿಶಾಲವೂ ಮತ್ತು ಬಹುಶಾಖಾ ಕೃತವೂ ಆದ, ಆದರೂ ಸೂಕ್ಷ್ಮರೀತಿಯಲ್ಲಿ ಐಕ್ಯತೆಯನ್ನು ಪಡೆದಿರುವ ವಸ್ತುವಿಶೇಷವಾಗಿದೆ. ಹೀಗೆಯೇ ಈಶ್ವರ ಸಾನ್ನಿಧ್ಯವನ್ನು ಪಡೆಯ್ಯ ಬೇಕೆಂದು ಪ್ರಯತ್ನಿಸುತ್ತಿರುವ ಈ ಜನರ ಸಂಪ್ರದಾಯವು ಯುಗಾಂ ತರಗಳಿಂದ ತಡೆಯಿಲ್ಲದೆ ಯಾವಾಗಲೂ ಹೆಚ್ಚುಹೆಚ್ಚು ಅಭಿವೃದ್ಧಿ ಯನ್ನು ಪಡೆಯುತ್ತಿದೆ.

## ೩ ಹಿಂದೂಮತದ ಬೆಳೆವಣಿಗೆ

### ೧೧ ಹಿಂದೂಮತದ ಬೆಳೆವಣಿಗೆ

ಸಂಪ್ರದಾಯ, ತರ್ಕ, ಕರ್ಮಗಳಾದ ಶ್ರವಣ, ಮನನ, ನಿಧಿ ಧ್ಯಾಸನಗಳ ಮೂಲಕ ಮುಂದುವರಿಯುವ ಮತಾಭಿವೃದ್ಧಿಯ ತತ್ವ ಮಾರ್ಗವು [dialectic] ಬದಲಾವಣೆಗಳಿಗೆ ಅವಕಾಶವನ್ನು ಸಾಧಿಸಿ ಕೊಡುವುದರಿಂದ ಭಾರತ ಧರ್ಮವು ಶಕ್ತಿಯುತವಾಗಿ ಬಾಳಲು ಸಹಾಯ ಮಾಡುತ್ತದೆ. ಮತ ದರ್ಶನಗಳು [Religion and philoso-

---

* ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ। ಪ್ರಭಿನ್ನೇ ಪ್ರಸ್ಥಾನೇ ಪರಮಿದಂ ಅತಃ ಪಥ್ಯ ಮಿತಿಚ। ರುಚೀನಾಂ ವೈಚಿತ್ರ್ಯಾತ್ ಋಜುಕುಟಿಲ ನಾನಾಪಥಜುಷಾಂ ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವೇವ॥ (ಮಹಿಮ್ನಸ್ತವ)

phy], ಕರ್ಮಜ್ಞಾನಗಳು [life and thought], ಇಲ್ಲವೇ ನಿಮ್ಮ ಪ್ರಸಿದ್ಧ ತತ್ತ್ವಜ್ಞರಾದ ಕ್ರೋಚೆ1 ಯವರು ಹೇಳುವಂತೆ ಜೀವನ ಭಾವನ ಮಾರ್ಗಗಳು (The Practical and the Theoretical) ಆತ್ಮಾರಾಮನ ನಿತ್ಯತಾಂಡವತಾಳಗಳಾಗಿವೆ. ಹೀಗಿರುವಲ್ಲಿ ನಾವು ಕರ್ಮದಿಂದ ಜ್ಞಾನಕ್ಕೆ ಹತ್ತುತ್ತಲೂ, ಜ್ಞಾನದಿಂದ ಕರ್ಮಕ್ಕೆ ಹಿಂತಿರುಗುತ್ತಲೂ ಅಭಿವೃದ್ಧಿಯುಕ್ತವಾದ ಪರಿಪುಷ್ಟಿಯನ್ನು ಪಡೆಯುತ್ತಿರುವಲ್ಲಿ, ಇದೇ ನಿತ್ಯವಸ್ತುವಿನ ಹೆಚ್ಚು ಹೆಚ್ಚು ಉನ್ನತ ಶಿಖರಗಳನ್ನು ನೇರುತ್ತೇವೆ. ಹೀಗೆಯೇ ಸಂಪ್ರದಾಯವೂ ಕೂಡ ನಿತ್ಯವೂ ಹೊಸ ಹೊಸದಾಗಿ ರಚನೆಯನ್ನು ಹೊಂದುತ್ತ, ತನ್ನ ಅನುಯಾಯಿಗಳ ಸ್ವಯಂಕೃತ (Free) ಕಾರ್ಯದಿಂದ ನವಜೀವನವನ್ನು ಹೊಂದುತ್ತದೆ. ಅಂದರೆ ನಿತ್ಯ ರಚನಾಬದ್ಧವಾದ ವಸ್ತುವು ನಿತ್ಯಾಭಿವೃದ್ಧಿಯುಕ್ತವಾಗಿರುವುದು. ಮತ್ತು ಹೀಗೆ ಸಂಪ್ರದಾಯ ಬದ್ಧರಾದ ಜನರಲ್ಲಿ ಆವರವರ ನಡೆನುಡಿಗಳು ಅಭಿವೃದ್ಧಿಹೊಂದಿ ಮುಂದೆ ಮುಂದೆ ಬರದಿದ್ದರೆ ಇಂಥಾ ಅನುಯಾಯಿಗಳನ್ನು ನೋಡಿದರೆ, ಆಧ್ಯಾತ್ಮಿಕ ದೃಷ್ಟಿಯಿಂದಿವರು ಕೇವಲ ಮೃತಪ್ರಾಯರೇ ಸರಿ. ಇದರಿಂದಲೇ ಭಾರತ ಚರಿತ್ರೆಯನ್ನು ಎಲ್ಲಿಂದ ನೋಡಿದರೂ, ಇಲ್ಲಿನ ಜ್ಞಾನವನ್ನೇ ತೆಗೆಯಿರಿ, ಕರ್ಮವನ್ನೇ ತೆಗೆಯಿರಿ, ಯಾವುದನ್ನು ತೆಗೆದರೂ ಸರಿಯೇ ಇಲ್ಲಿನ ನಾಯಕರು ಸತತವೂ ಹೊಸ ಹೊಸ ಆಚಾರ ವ್ಯವಹಾರಗಳನ್ನು ಪರೀಕ್ಷಿಸುತ್ತಲೂ ಮತ್ತು ಹೊಸ ಹೊಸದಾಗಿ ಬರುವ ಆಯಾ ಕಾಲ ದೇಶಸ್ಥಿತಿಗತಿಗಳಿಗೆ ತಕ್ಕಂತೆ ತಮ್ಮ ಆದರ್ಶಗಳನ್ನ ಸರಿಯಾಗಿ ಕ್ರಮಪಡಿಸುತ್ತಲೂ ಮುಂದರಿದಿದಾರೆ. ಈ ಅಭಿವೃದ್ಧಿಕಾರ್ಯದಲ್ಲಿ ಆರ್ಯರು ಈ ದೇಶದ ಪೂರ್ವ ನಿವಾಸಿಗಳೊಡನೆ ಕಲೆತಾಗ ಇವರ ಪ್ರಥಮ ಪರಿಚಯವನ್ನೂ ತಮ್ಮೆಲ್ಲರ ಶ್ರೇಯೋಭಿವೃದ್ಧಿಗೆ ಬೇಕಾದ ಕಾರ್ಯೋತ್ಸಾಹ (first impulse to progress) ವನ್ನೂ ಪಡೆದರು. ಹೀಗೆಯೇ ಈ ಆರ್ಯರು ಗಂಗಾನದಿಯ ಬಯಲಿಗೆ ಬಂದಾಗ ತಮ್ಮ ಸಾಂಪ್ರದಾಯಕ ಧರ್ಮಕ್ಕೆ ವಿರೋಧಮಾರ್ಗಗಳಾದ ಬೌದ್ಧ ಜೈನ ಮತಗಳು ಇವ

---

1—ಗ್ರಂಥದ ಕೊನೆಯಲ್ಲಿ ಕೊಟ್ಟಿರುವ ಮೊದಲನೇ ಟಿಪ್ಪಣಿಯನ್ನು ನೋಡಿ.—*N. S. S.*

ರಲ್ಲಿಯೇ ತಲೆಯೆತ್ತಿ ಕೊಂಡವು. ಮತ್ತಿವರು ಶ್ರೇಷ್ಠ ನಾಗರೀಕತೆಯನ್ನು ಪಡೆದಿದ್ದ ದ್ರಾವಿಡ ಜನರೊಡನೆ ಬೆರೆತಾಗ ಇವರ ವೇದ ಧರ್ಮವು ಸೇಶ್ವರಮತ(Theistic Religion)ರೂಪವನ್ನು ಹೊಂದಿತು.

ರಾಮಾನಂದ, ಚೈತನ್ಯ, ಕಬೀರ್, ನಾನಕ್, ಪ್ರಭೃತಿಗಳು ಮುಂದಕ್ಕೆ ತಂದ ಸುಧಾರಕ ಮಾರ್ಗಗಳು ಮಹಮ್ಮದೀಯ ಮತದ ಪ್ರಾದುರ್ಭಾವವನ್ನು ತೋರಿಸುತ್ತವೆ. ಹೀಗೆಯೇ ಬ್ರಹ್ಮಸಮಾಜ ಆರ್ಯ ಸಮಾಜಗಳು, ನಮಗೆ ಪಾಶ್ಚಿಮಾತ್ಯ ಜನರೊಡನೆ ಉಂಟಾದ ಸಂಪರ್ಕದ ಫಲವಾಗಿದ್ದರೂ ಕೂಡ, ಹಿಂದೂ ಮತವೆಂದರೆ ಕೇವಲ ಅಭಿಪ್ರಾಯಗಳ ಪ್ರವಾಹವೂ, ವಿವಾದ ಭೂಮಿಯೂ ಎಂದು ದೂರ ಮಾಡುವ ಹಾಗಿಲ್ಲ. ಏಕೆಂದರೆ ಈ ಭಾರತ ಧರ್ಮದ ಪ್ರತಿಯೊಂದು ರೂಪವೂ, ಅದರ ಅಭಿವೃದ್ಧಿಯ ಪ್ರತಿಯೊಂದು ಸ್ಥಿತಿಯೂ ಇವೆಲ್ಲಕ್ಕೂ ಸಾಮಾನ್ಯವಾದ ವೇದಾಂತ ಶಾಸ್ತ್ರದೊಡನೆ ಸೇರಿಕೊಂಡಿವೆ. ಹಿಂದೂ ಜನರ ಮತ ವಿಷಯಕಜ್ಞಾನವು ಅನೇಕ ಸಂಕ್ರಾಮ (Revolutions) ಗಳನ್ನು ದಾಟಿಕೊಂಡು ಬಂದಿದ್ದು, ಎಷ್ಟೋ ಜಯಗಳನ್ನು ಹೊಂದಿದ್ದರೂ, ಸುಮಾರು ೪-೫ ಸಹಸ್ರ ವರ್ಷಗಳಿಂದಲೂ ಇದರ ಮುಖ್ಯ ತತ್ವಗಳು (Ideas) ಒಂದೇ ರೀತಿಯಾಗಿ ನಡೆದು ಕೊಂಡು ಬಂದಿವೆ. ಮತ್ತು ಈ ಮೂಲಪ್ರಾಯವಾದ ಭಾವನೆಗಳು ವೇದಾಂತ ಪ್ರಮಾಣದಲ್ಲಿ ಸಂಗ್ರಹವಾಗಿವೆ.

### ೧೨. ಪ್ರಸ್ಥಾನತ್ರಯಗಳೂ ಮತ್ತು ಭಿನ್ನ ಧರ್ಮಗಳೂ

ನಮ್ಮ ವೇದಾಂತಶಾಸ್ತ್ರಕ್ಕೆ ಪ್ರಸ್ಥಾನತ್ರಯಗಳಾದ ಉಪನಿಷತ್ ಬ್ರಹ್ಮಸೂತ್ರ ಭಗವದ್ಗೀತಗಳು, ಭಕ್ತಿಜ್ಞಾನಕರ್ಮಗಳಾದ ಮಾರ್ಗತ್ರಯಗಳಿಗೆ ಸ್ವಲ್ಪ ಹೆಚ್ಚುಕಡಿಮೆ ಹೋಲುತ್ತವೆ. ಉಪನಿಷತ್ತುಗಳು ಜ್ಞಾನಿಗಳ ಅನುಭವದಿಂದ ಕೂಡಿವೆ. ಜ್ಞಾನಕರ್ಮಗಳು* ಈ ಗ್ರಂಥಗಳಲ್ಲಿ ಅಡಕವಾಗಿದ್ದರೂ ಇವೆರಡೇ ಇವುಗಳ ಮುಖ್ಯವಿಷಯಗಳಲ್ಲ.†

---

* Logic and discipline.

† Characteristic, ಲಕ್ಷಣ.

ಬ್ರಹ್ಮಸೂತ್ರವು ಉಪನಿಷತ್ತುಗಳ ಮುಖ್ಯಸಿದ್ಧಾಂತಗಳನ್ನು ನ್ಯಾಯರೀತಿಯಲ್ಲಿ ವಿವರಿಸಲು ಪ್ರಯತ್ನಿಸುತ್ತದೆ. ಭಗವದ್ಗೀತೆಯು ಮುಖ್ಯವಾಗಿ ಯೋಗಶಾಸ್ತ್ರವಾಗಿದ್ದುಕೊಂಡು ನಿಜವಾದ ಧಾರ್ಮಿಕಜೀವನವನ್ನು ಹೇಗೆ ಸಿದ್ಧಿಸಬಹುದೆಂಬ ಮುಖ್ಯಮಾರ್ಗಗಳನ್ನು ತಿಳಿಸುತ್ತದೆ. ಒಟ್ಟಾಗಿ ಈ ಮೂರು ಗ್ರಂಥಗಳೂ ಸೇರಿ ಹಿಂದೂ ಧರ್ಮದ ವಿಶಿಷ್ಟ ಪ್ರಾಮಾಣ್ಯಗ್ರಂಥ (absolute standard) ಗಳಾಗಿವೆ. ಮತ್ತು ಕಾಡಿನಲ್ಲಿ ಸಿಂಹವು ತಲೆಯೆತ್ತಿತೆಂದರೆ ನರಿಗಳೆಲ್ಲವೂ ತಮ್ಮ ಬಾಯಿಮುಚ್ಚಿಕೊಳ್ಳುವಂತೆ, ವೇದಾಂತವು ಹೊರಹೊರಟಿತೆಂದರೆ ಇತರ ಮತಗ್ರಂಥಗಳೆಲ್ಲವೂ ಮೂಕಭಾವದಲ್ಲಿ ಲೀನವಾಗುತ್ತವೆ.* ಈ ವೇದಾಂತಗ್ರಂಥಗಳಿಗೆ ಹಿಂದೂಧರ್ಮದ ಆಯಾಯ ಪಂಥಗಳು ತಮ್ಮತಮ್ಮ ಮತವಿಷಯಕವಾದಜ್ಞಾನಕ್ಕೆ† ತಕ್ಕಂತೆ ಅರ್ಥಮಾಡುತ್ತವೆ. ಆದರೆ ವೇದಾಂತವು ಯಾವುದೊಂದು ಮತವೂ ಆಗಿಲ್ಲದೆ ಸರ್ವಸಾಮಾನ್ಯವೂ ಹೆಚ್ಚು ಅರ್ಥಗಾಂಭೀರ್ಯವೂ ಉಳ್ಳ ನಿಜಮತವೇ ಆಗಿದೆ. ಹೀಗಿರುವುದರಿಂದ ಹಿಂದೂಮತದ ಆಯಾ ಜಾತಿಗಳೆಲ್ಲವೂ ಸಾಮಾನ್ಯವಾಗಿರುವ ಪ್ರಾಮಾಣ್ಯ (Common standard) ದೊಂದಿಗೆ ಜೋಡಿಸಲ್ಪಟ್ಟು ಆಯಾ ಸಂದರ್ಭಗಳಿಗೆ ತಕ್ಕಂಥ ನಿಜವಾದ ಧರ್ಮಶಾಸ್ತ್ರವೊಂದರ ವಿಕೃತರೂಪಗಳೆಂದು ಭಾವಿಸಲ್ಪಡುತ್ತವೆ. ಇದರಿಂದಲೇ ಮಹಾಭಾರತದಲ್ಲಿ ಹೇಳಿರುವಂತೆ ವಿವಿಧವೇದಗಳು ಜನರ ತಪ್ಪುತಿಳಿವಳಿಕೆಯಿಂದ ರಚಿಸಲ್ಪಟ್ಟಿದ್ದರೂ ನಿಜವಾದ ವೇದವೆಂಬುದು ಒಂದೇ ಒಂದಾಗಿರುತ್ತದೆ.‡ ಸರ್ವವಿವಿಧ ಮಾರ್ಗಿಗಳೂ ಈ ಸಾಮಾನ್ಯ ಪ್ರಮಾಣ್ಯವನ್ನು ಒಪ್ಪಿಕೊಳ್ಳುವುದರಿಂದ ಆ ಭಿನ್ನಭಿನ್ನ ಮಾರ್ಗಗಳೆಲ್ಲವೂ ಇದರಿಂದ ಪಾರಿಶುದ್ಧ್ಯತೆಯನ್ನು

---

* ಯಾವದ್ಗರ್ಜಂತಿ ಶಾಸ್ತ್ರಾಣಿ ಜಂಬೂಕಾವಿಪನೇ ಯಥಾ ।
ನಗರ್ಜತಿ ಮಹಾಶಕ್ತಿರ್ಯಾವದ್ವೇದಾಂತಕೇಸರೀ ॥

† Religious views.

‡ ಏಕಏವದ್ವಿಜಾ ವೇದೋ ವೇದಾರ್ಥಶ್ಚೈಕ ಏವತು ।
ಏಕವೇದಸ್ಯ ಚಾಜ್ಞಾನಾತ್ ವೇದಾಸ್ತೇಬಹವಃ ಕೃತಾಃ ॥

ಹೊಂದುತ್ತವೆ. ಮತ್ತು ಹೊಸ ಪಂಥವೆಂದು ಯಾವುದಿದ್ದರೂ ಈ ವೇದಪ್ರಾಮಾಣ್ಯಕ್ಕೆ ಸರಿಹೋಗದಿದ್ದರೆ ಅದರ ಆಯಾ ತಪ್ಪುಭಾವಗಳೆಲ್ಲವೂ ಹೊರಹಾಕಲ್ಪಟ್ಟು ಸ್ವಲ್ಪಕಾಲದಲ್ಲಿಯೇ ಅಳಿದುಹೋಗುತ್ತವೆ. ಯಾವ ಮತವೇ ಆಗಲಿ, ಯಾವ ಆಚಾರವೇ ಆಗಲಿ ಕೆಲಸಕ್ಕೆ ಬಾರದ್ದೆಂದಾಗಲಿ, ಪುರಾಣಕಾಲದ್ದೇ ಹೊರತು ಈಗಿನ ಕಾಲಕ್ಕೆ ತಕ್ಕುದಲ್ಲವೆಂದಾಗಲಿ ದೂರೀಕೃತವಾಗದೆ, ಅವು ಪ್ರತಿಯೊಂದೂ ಪುಷ್ಟೀಕರಿಸಿ ಮುಂದಕ್ಕೆ ಬಂದವೆಂದರೆ, ಇವುಗಳಮೇಲೆ ಯಾವುದೊಂದು ಜಾತಿಯಿಂದಲೂ ಕಟ್ಟುಬೀಳದಿರುವ ವೇದಾಂತವು ತೋರಿಸುತ್ತಿರುವ ಪ್ರಭಾವವೇ ಇದಕ್ಕೆ ಕಾರಣವಾಗಿದೆ.

## ೪. ಶ್ರೇಷ್ಠ ಮತಾನುಭವವೂ ಮತ್ತು ಪರಮಾತ್ಮಸ್ವರೂಪವೂ

### ೧೩ ಮತಾನುಭವದ ತಿರುಳೇನು?

ಹೀಗೆ ಮತವು ಅನುಭವ ವಸ್ತುವೇ ಎಂದಮೇಲೆ ಇಂಥಾ ಅನುಭವಕ್ಕೆ ವಿಷಯವು ಯಾವುದೆಂದು ಕೇಳಬೇಕಾಗುತ್ತದೆ. ಆದರೆ ಈ ಪ್ರಶ್ನೆಗೆ ಸದುತ್ತರವನ್ನು ಕೊಡುವ ಯಾವ ಎರಡು ಮತಗಳೂ ಒಟ್ಟಾಗಿ ಕೂಡುವಂತೆ ಕಾಣುವುದಿಲ್ಲ. ಹಿಂದೂತತ್ವಜ್ಞಾನಿಗಳು ಬಹು ಪುರಾತನಕಾಲದಲ್ಲಿಯೇ ಯೋಗಿಗಳು ಪರಮಾತ್ಮನ ವಿಷಯದಲ್ಲಿ ಸೂಚಿಸಿರುವ ಚಿತ್ರವಿಶೇಷಗಳು ವಿವಿಧವಾಗಿರುವುವೆಂದು ಚೆನ್ನಾಗಿ ತಿಳಿದುಕೊಂಡಿದ್ದರು. ಆಧುನಿಕಕಾಲದಲ್ಲಿಯೂ ಕೂಡ ಈ ಯೋಗದೃಷ್ಟಿ (mystical vision) ಯಿಂದ ವಿವಿಧವರ್ಣನೆಗಳು ಉಂಟಾಗುತ್ತವೆಯೆಂದು ಸಾಮಾನ್ಯಮತಶಾಸ್ತ್ರದಿಂದ (Comparative Religion) ನಾವು ತಿಳಿದುಕೊಂಡಿದ್ದೇವೆ. ಕೆಲವು ಕ್ರೈಸ್ತಯೋಗಿಗಳು ತಮ್ಮ ಯೋಗಾಭ್ಯಾಸದಿಂದ ಉಂಟಾಗುವ ಪರಮಾನುಭವಗಳಲ್ಲಿ ತಾವು ತಮ್ಮ ಮತದ ತ್ರಿಮೂರ್ತಿಗಳಾದ ಪಿತೃ, ಪುತ್ರ, ಪಾವಿತ್ರಾತ್ಮ (Holy Ghost) ರನ್ನು ನೋಡುತ್ತೇವೆಂದು ಹೇಳುತ್ತಾರೆ ಆದರೆ ಈ ತ್ರಿಮೂರ್ತಿಗಳ ಭಾವ

ವನ್ನು ಮಹಮ್ಮದೀಯಯೋಗಿಗಳು ಸ್ವಲ್ಪವೂ ಕೂಡ ಒಪ್ಪುವುದಿಲ್ಲ ಆದರೂ ಇಷ್ಟು ವಿಧದ ಭಾವನೆಗಳನ್ನು ನೋಡಿ ಹಿಂದೂಜ್ಞಾನಿಗಳು ನಾವು ನಮ್ಮ ಮತಾನುಭವದಲ್ಲಿ ಸ್ವಂತ ಮನಃಕಲ್ಪನೆಗಳಿಗೆ (subjective suggestions) ಬಾಹ್ಯವಸ್ತುವಿನ ಸತ್ತಾಗುಣ (objective existence) ವನ್ನು ಆರೋಪಿಸುವೆವೆಂಬ ಸಿದ್ಧಾಂತಕ್ಕೆ ಕಣ್ಣುಮುಚ್ಚಿಕೊಂಡು ನುಗ್ಗಲಿಲ್ಲ. ಆದುದರಿಂದಲೇ ಉಪನಿಷತ್ತುಗಳು ಹೀಗೆ ಉದ್ಘೋಷಿಸುತ್ತವೆ. ಸರ್ವಲೋಕಕರ್ತೃವೂ, ಪರಾತ್ಪರವಸ್ತುವೂ (ಮಹಾತ್ಮ-ಮಹಾಮಹಿಮ) ಆದ ಪರಮಾತ್ಮನು ಸರ್ವಜೀವಕೋಟಿಗಳ ಹೃದಯೇಶ್ವರನಾಗಿದ್ದರೂ ಮನೋಜ್ಞಾನಸಂಕಲ್ಪಶಕ್ತಿಗಳಿಂದಲೇ ಕಲ್ಪಿಸಲ್ಪಡುತ್ತಿದ್ದಾನೆ. ಇದನ್ನು ತಿಳಿದವರೆಲ್ಲರೂ ಅಮೃತಸುಖವನ್ನು ಹೊಂದಿ ಆನಂದಿಸುತ್ತಾರೆ.* ಏಕೆಂದರೆ ಮತಾನುಭವವು ನಿತ್ಯವಸ್ತುವು ತನ್ನಷ್ಟಕ್ಕೆ ತಾನಿರುವುದರ (Real in itself) ಕೇವಲ ನಿರ್ವರ್ಣವಾದ ಉಪಾಖ್ಯಾನ (presentment) ವಾಗಿಲ್ಲದೆ, ದೃಷ್ಟಿಸುತ್ತಿರುವ ಮನಸ್ಸಿನ ಪೂರ್ವಸಂಸ್ಕಾರಗಳಿಂದಲೂ ಅಭಿಪ್ರಾಯದಿಂದಲೂ ಆಗಲೇ ಸ್ವಲ್ಪ ಬದಲಾವಣೆಯನ್ನು ಹೊಂದಿರುವ ನಿತ್ಯವಸ್ತುವಿನ ವರ್ಣನೆಯಾಗಿದೆ. ಮನುಷ್ಯನ ಮನಸ್ಸು ಭಾಗಾರ್ಧಭಾಗಗಳನ್ನಿಟ್ಟುಕೊಂಡು (in fractions) ಎಂದಿಗೂ ಕೆಲಸಮಾಡುವುದಿಲ್ಲ. ಅದನ್ನು ಸಂಕಲ್ಪ, ಜ್ಞಾನ, ರಾಗ (emotion) ಗಳೆಂಬ ಸುನಿಶ್ಚಿತವಾದ ಭಾಗಗಳಾಗಿ ಪ್ರತ್ಯೇಕಿಸುವುದಕ್ಕಾಗುವುದಿಲ್ಲ. ಹೀಗೆಯೇ ಮನುಷ್ಯನ ಬುದ್ಧಿಯೂ ಕೂಡ ಎಲ್ಲರಲ್ಲಿಯೂ ಒಂದೇ ವಿಧವಾಗಿ ಇರುವುದೆಂದು ಹೇಳುವಷ್ಟುಮಟ್ಟಿಗೆ ಸಂಪೂರ್ಣವಾಗಿ ಏಕಗುಣವುಳ್ಳ ಪರಿಶುದ್ಧವಾದ ವಸ್ತುವೆಂದು ಹೇಳುವಹಾಗಿಲ್ಲ. ಇದರಿಂದಲೇ ಆಯಾ ತತ್ತ್ವದರ್ಶನಗಳು ಆಯಾ ಜನರ ಅಭಿರುಚಿಗಳನ್ನು (Temperament, ಸಂಸ್ಕಾರ, ಸ್ವಭಾವ, ವಾಸನಾ) ಪ್ರಕಟಿಸುತ್ತವೆ

---

* ಏಷದೇವೋ ವಿಶ್ವಕರ್ಮಾ ಮಹಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ । ಹೃದಾ ಮನೀಷಾ ಮನಸಾಭಿಕ್ಲೃಪ್ತೋ ಯಏನಂ ವಿದುರಮೃತಾಸ್ತೇ ಭವಂತಿ ॥ ಶ್ವೇತ. ಉಪ, iv, 17.

ಎಂದು ಸೂಚಿಸಿರುವುದರಿಂದ ಮತವಿಷಯಕವಾದ ದರ್ಶನಶಾಸ್ತ್ರಕ್ಕೆ* ಪ್ರ್ಯಾಗ್ಮ್ಯಾಟಿಸ್ಟ್ (Pragmatist) ಎಂಬ ಕರ್ಮಪ್ರಾಧಾನ್ಯರು ಬಹು ಸಹಾಯ ಮಾಡಿದ್ದಾರೆ. ಪರಮಾತ್ಮನು ಜನರಿಗೆ ಅವರವರಲ್ಲಿ ವಿಶೇಷ ವಾಗಿರುವ ರಾಗಾದಿಸ್ವಭಾವಗಳ ಮೂಲಕ ತನ್ನ ದರ್ಶನವನ್ನು ದಯ ಪಾಲಿಸುತ್ತಾನೆ. ಅಂದರೆ ಪ್ರತಿಯೊಬ್ಬ ಧಾರ್ಮಿಕಶ್ರೇಷ್ಠನೂ† ತನ್ನ ಆತ್ಮೀಯ (personal) ವೂ, ಸಾಂಘಿಕ (racial) ವೂ ಮತ್ತು ಚಾರಿತ್ರ ಕವೂ ಆದ ಶಕ್ತಿಗಳಿಗನುಗುಣವಾಗಿ ಪರಮಾತ್ಮನ ಸ್ವರೂಪವನ್ನು ವರ್ಣಿ ಸುತ್ತಾನೆ. ಆದುದರಿಂದೇನು ಸಿದ್ಧಾಂತವಾಗುವುದೆಂದರೆ ಮತಾನು ಭವವು ಆಯಾ ಜನರ ಮಾನಸಿಕ ಸಂಸ್ಕಾರವಿಶೇಷಗಳಿಂದ ಕೂಡಿದೆ ಯೆಂದು ತಿಳಿದಿದ್ದೇ ಆದರೆ ಪರಮಾತ್ಮನ ವಿಷಯದಲ್ಲಿ ಇಷ್ಟುಮಟ್ಟಿಗೆ ವರ್ಣನಾಭೇದಗಳು ಏಕೆ ಉಂಟಾದವೆಂಬುದು ಈಗ ಚೆನ್ನಾಗಿ ಗೊತ್ತಾ ಗುತ್ತದೆ.

## ೧೪. ಪರಮಾತ್ಮವರ್ಣನೆಯು ಮತ್ತು ನಮ್ಮ ಶಕ್ತಿಸಂಕೋಚಗಳು.

ಒಂದೊಂದುಸಲ ಪರಮಾತ್ಮನ ವಿಷಯದಲ್ಲಿ ನಡೆಸಿರುವ ಇಂಥಾ ವರ್ಣನಾವಿಶೇಷಗಳು ಪರಸ್ಪರ ವಿರೋಧವಾಗಿರುವುವೆಂದು ಆಕ್ಷೇಪಣೆ ಬಂದಿದೆ. ಆದುದರಿಂದ ಈ ವಿಷಯದಲ್ಲಿ ನಮ್ಮ ಅಭಿಪ್ರಾಯಗಳು ಬಹುಮ ಟ್ಟಿಗೆ ನಿಜವಲ್ಲವೆಂದು ಮಾತ್ರ ಚೆನ್ನಾಗಿ ಗೊತ್ತಾಗುತ್ತದೆಯೇ ಹೊರತು ಪರಮಾತ್ಮನ ವಿಷಯದಲ್ಲಿರುವ ನಮ್ಮ ಅಭಿಪ್ರಾಯಗಳು ಸೂಚಿಸುವ ಪರಮಾತ್ಮ ತತ್ವವು ಇಲ್ಲವೆಂದು ಹೇಳಿದಹಾಗಾಗಲಿಲ್ಲ. ಧಾರ್ಮಿಕ ಶ್ರೇ ಷ್ಠತೆಯೂ ಪವಿತ್ರಪ್ರೇಮವೂ ಪರಮಾತ್ಮನಲ್ಲಿರುವುವೆಂಬ ಉತ್ತಮವ ರ್ಣನೆಗಳು‡ ಅವನು ಅನಾಗರಿಕ ಜನರಿಗೆ ಸೇರಿದ ನಿರಂಕುಶಪ್ರಭುವೂ, ಆಕಾಶವಾಸಿಯಾದ ಸಾರ್ವಭೌಮನೂ§ ಎಂದು ತಿಳಿಯುವ ಅವ್ಯುತ್ಪನ್ನ

* Philosophy of religion
† Religious genius
‡ Refined definitions
§ A sort of Sultan in the sky

ಜನರ ಲಕ್ಷಣ ವರ್ಣನೆಗಳನ್ನು ತಪ್ಪೆಂದು ಸೂಚಿಸುತ್ತಿದ್ದರೂ ಅವುಗಳೆಲ್ಲಾ ಒಂದೇ ತತ್ತ್ವವನ್ನು ವಿವರಿಸುತ್ತವೆ. ಇಂದ್ರಿಯಪ್ರತ್ಯಕ್ಷದಲ್ಲಿಯೂ ಶಾಸ್ತ್ರವಿಚಾರದಲ್ಲಿಯೂ ಬಾಹ್ಯವಸ್ತುವು ಇರುವುದೆಂದು ನಾವು ಹೇಳುವ ಮಾತನ್ನು ನಮ್ಮ ನಮ್ಮ ಸ್ವಂತ ಅಭಿರುಚಿಗಳು ‡ ಕೆಡಿಸದಿದ್ದರೆ, ಮತಾನುಭವದಲ್ಲಿ ಅವುಗಳು ಹೀಗೆ ಕೆಡಿಸುತ್ತವೆಯೆಂದು ಭಾವಿಸಲು ಅವಕಾಶವಿಲ್ಲ.

## ೧೫. ಪರಮಾತ್ಮನೆಂಬೊಬ್ಬ ಪರಮಪುರುಷನಿರುವನೇ?

ಸರ್ವವ್ಯಾಪಿಯಾದ ಪರಾತ್ಪರ ವಸ್ತುವಿನ ವಿಚಾರದಲ್ಲಿ ಅದರ ಸ್ವಭಾವಕ್ಕಿಂತಲೂ ನಮ್ಮ ವರ್ಣನೆಗಳು ಸಂಕುಚಿತವಾಗಿದ್ದರೂ ಭಾರತೀಯರು ಈ ವಸ್ತುವಿನ ನಿಜತ್ವದಲ್ಲಿ ಸಂದೇಹಪಡಲಿಲ್ಲ. ವಿವಿಧ ಸಿದ್ಧಾಂತಗಳನ್ನುಳ್ಳ ವಿದ್ವಾಂಸರು (doctrinaires) ಏನು ಹೇಳಿದರೂ ಇಂಥಾ ಜನರ ದೃಷ್ಟಿಯಿಂದ ಅನೇಕ ವಿಷಯಗಳು ದೂರಮಾಡಲ್ಪಟ್ಟಿವೆಯೆಂದು ಹೇಳಲು ಭಗವದ್ಭಕ್ತರು ಆತುರರಾಗಿರುವರು. ಏಕೆಂದರೆ ಇಂಥಾ ಜನರ ದೃಷ್ಟಿಗೆ ಬೀಳದಂತೆ ದೂರವಾಗಿರಲು ಪರಮಾತ್ಮನು ಬಹಳವಾಗಿ ಇಚ್ಛಿಸುತ್ತಾನೆ. ಇದರಿಂದ ಪರಮಾತ್ಮನ ನಿಜಸ್ವಭಾವವನ್ನು ಕುರಿತು ವ್ಯರ್ಥವಾಗಿ ಚರ್ಚಿಸದೆ ನಾವು ಶಾಂತರಾಗಿರಬೇಕೆಂದು ಹೇಳುವ ಶಾಸ್ತ್ರವನ್ನು ಸರಿಯಾಗಿ ನೋಡಿದಲ್ಲಿ ಇದು ಮತ ವಿಷಯದಲ್ಲಿ ಉತ್ತಮ ನಾಸ್ತಿಕವಾದವೇ * ಎಂದರೂ ಎನ್ನಬಹುದು. ಪರಮಾತ್ಮನ ಸ್ವರೂಪದ ವಿಷಯದಲ್ಲಿ ಮಾತಿಗಿಂತ ಮೌನವೇ ಉತ್ತಮವಾದ ವ್ಯಾಖ್ಯಾನವಾಗಿದೆ. ಪೂರ್ವಕಾಲದಲ್ಲಿದ್ದ ಗ್ರೀಸ್ ಮತ್ತು ರೋಮ್ ದೇಶಗಳಲ್ಲಿ ಗೊತ್ತಿಲ್ಲದ ದೇವರುಗಳಿಗೆಂದು ರಚಿಸಿರುವ ಬಲಿಪೀಠಗಳನ್ನು ನೋಡಿದರೆ ಪರಮಾತ್ಮನ ಸ್ವರೂಪವನ್ನು ಕುರಿತು ಜನರು ಎಷ್ಟು ಅಜ್ಞರಾಗಿದ್ದರೆಂದು ವ್ಯಕ್ತವಾಗುತ್ತದೆ. ಮತ್ತು ನಮ್ಮ ದೃಷ್ಟಿಗೆ ಅತೀತವಾದ ವಸ್ತುಗಳನ್ನು ಗ್ರಹಿಸುವುದರಲ್ಲಿ ಪುರುಷ ಪ್ರಯತ್ನವು ಎಷ್ಟು ಮಟ್ಟಿಗೆ

‡ Personal Equation

* a sound religious agnosticism (ಅಜ್ಞಾನವಾದ).

ವಿಫಲವಾಗುತ್ತಿದ್ದಿತೆಂದು ಗೊತ್ತಾಗುತ್ತದೆ. ಇದರಿಂದಲೇ ಪರಮಾತ್ಮ ಸ್ವರೂಪವು ಏನೆಂದು ಕೇಳಿದಾಗ ಉಪನಿಷದ್ ಜ್ಞಾನಿಗಳು ಸುಮ್ಮನೇ ಕೂತಿದ್ದರಲ್ಲದೆ ದಯವಿಟ್ಟು ಉತ್ತರಕೊಡಿರೆಂದು ಪ್ರಾರ್ಥಿಸಿಕೊಂಡ ಮೇಲೆಯೂ "ಶಾಂತೋಽಯಮಾತ್ಮಾ" ಅಂದರೆ ಪರಮಾತ್ಮ ತತ್ತ್ವವು ಶಾಂತಸ್ವರೂಪವುಳ್ಳದ್ದೆಂದು ಮಾತ್ರವೇ ಬೋಧಿಸಿದರು. ಏಕೆಂದರೆ ಪರಮಾತ್ಮ ತತ್ತ್ವದ ಗೂಢಾರ್ಥವು ವಾಗ್ರೂಪಗಳ ಸೀಮೆಯನ್ನು ಮೀರಿದೆ. ಆದುದರಿಂದಲೇ ಪರಮಾತ್ಮನೊಡನೆ ನಿಕಟ ಸಂಬಂಧದಲ್ಲಿದ್ದಾಗ ತಮ್ಮ ಚೇತನಾವಸ್ಥೆಯು ಹೇಗಿದ್ದಿತೆಂದು ವರ್ಣಿಸಲು ಪ್ರಯತ್ನಿಸಿದಾಗ ಎಷ್ಟೋ ಜನ ಭಕ್ತರು "ಈಶ್ವರೀತಮಸ್ಸು," "ನಿರ್ವ್ಯಾಖ್ಯವಾದ ವಸ್ತು" * ಇವೇ ಮೊದಲಾದ ವಿವರಣ ವಾಕ್ಯಗಳನ್ನು ನಮ್ಮಂಥ ಮಂದಬುದ್ಧಿಗಳ ಮಾರ್ಗದರ್ಶಕ್ಕಾಗಿಯೇ ಅಲ್ಲಲ್ಲಿ ಉಪಯೋಗಿಸಿದ್ದಾರೆ.

## ೧೬. ನಿರ್ಗುಣಬ್ರಹ್ಮನೆಂದರೇನು ?

ಹಿಂದೂ ತತ್ತ್ವಜ್ಞಾನಿಗಳು ನಿಷೇಧಾರ್ಥಕ ಭಾಷೆಯನ್ನುಪಯೋಗಿಸುತ್ತ ಪರಮಾತ್ಮನು ನಮಗೆ ತಿಳಿದಿರುವ ವಸ್ತುಗಳಿಗಿಂತಲೂ ಅತೀತನೂ ಬೇರೆಯಾದವನೂ ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಕೇನೋಪನಿಷತ್ತಿನಲ್ಲಿ ಹೇಳುವಂತೆ "ಆ ವಸ್ತುವನ್ನು ನೋಡಲು ಯಾವ ಕಣ್ಣಿನಿಂದಲೂ ಸಾಧ್ಯವಿಲ್ಲ, ಹೇಳಲು ಯಾವ ಮಾತಿನಿಂದಲೂ ಸಾಧ್ಯವಿಲ್ಲ, ತಿಳಿಯಲು ಯಾವ ಮನಸ್ಸಿನಿಂದಲೂ ಸಾಧ್ಯವಿಲ್ಲ. ಅದೇನೆಂದು ನಾವು ತಿಳಿದಿಲ್ಲ. ಅದೇನೆಂದು ವಿವರಿಸಲು ನಮಗೆ ಗೊತ್ತೇ ಇಲ್ಲ." (ಕೇನ. ೩). ಯಾಜ್ಞವಲ್ಕ್ಯರು ಹೇಳಿದ 'ನೇತಿನೇತಿ' ಎಂಬ ಮಹಾವಾಕ್ಯವು ನಿಮ್ಮ ದೇಶದ ಬರ್ನಾರ್ಡರು ಹೇಳಿದ 'ನೇಸಿಯೋ' ಎಂಬ ಜ್ಞಾನಾತೀತವಸ್ತುವನ್ನೂ, ರಾಯಿಸ್ ಬ್ರಾಕರು ಹೇಳಿದ 'ಎಲ್ಲಾ ಪ್ರಿಯರೂ ಆನಂದದಲ್ಲಿ ಮುಳುಗುವ ಶಬ್ದರೂಪಾದಿ ಇಂದ್ರಿ

---

* ನಮ್ಮ "ನೇತಿ ನೇತಿ" ಎಂಬ ಉಪನಿಷದ್ವಾಕ್ಯವನ್ನು ಜ್ಞಾಪಿಸಿಕೊಳ್ಳಿ. N. S. S.

ಯಾತೀತವಾದ ಶಾಂತಿಸಾಗರವನ್ನೂ" * ಏರಿಯೋಪಗೈಟರಾದ ಡಯೋನಿಸಿಯಸ್ಸರು, ಏಕ್‌ಹಾರ್ಟ್ ಮತ್ತು ಬೋಹಿಮ್‌ರವರ ನಿಷೇಧಾರ್ಥಕ ವರ್ಣನೆಗಳನ್ನೂ ನಮ್ಮ ಸ್ಮೃತಿಪಥಕ್ಕೆ ತರುತ್ತದೆ.

## ೩. ಜೀವಾತ್ಮ ಪರಮಾತ್ಮ ಸಂಬಂಧಗಳು

### ೧೭. ಸಗುಣಬ್ರಹ್ಮ ಪ್ರಶಂಸೆಯು

ಆದರೆ ಇಂಥಾ ಕೇವಲ ನಿಶ್ಶಬ್ದತೆಯನ್ನಾಗಲೀ, ನಿರ್ಗುಣರೂಪವಾದ ವರ್ಣನೆಗಳನ್ನಾಗಲೀ ಕೊನೆಯ ಮಾತೆಂದು ಒಪ್ಪಲು ಯಾರಿಗೂ ಸುಲಭ ಸಾಧ್ಯವಲ್ಲ. ಏಕೆಂದರೆ, ಒಂದು ರೀತಿಯಲ್ಲಿ ನೋಡಿದರೆ, ಮನುಷ್ಯರು ಮಾತುಬಲ್ಲ ಪ್ರಾಣಿಗಳೇ ಸರಿ. ಮತಧರ್ಮದಲ್ಲಿರುವ ರಹಸ್ಯವನ್ನು ತಮ್ಮ ಅನುಭವದಿಂದ ನಿರ್ಣಯಿಸಿ ತಿಳಿದುಕೊಳ್ಳಲು ಎಲ್ಲರೂ ಆತುರಪಡುತ್ತಾರೆ. ಮತ್ತು ನಮಗೆ ಸ್ವಲ್ಪವೂ ನೇರದ, ಸ್ವಲ್ಪವೂ ಮೇರೆಯಿಲ್ಲದ ವಸ್ತುಗಳು ನಮಗೆ ಬಹು ಮಟ್ಟಿಗೆ ಸಂಪೂರ್ಣವಾಗಿ ಅನಿಶ್ಚಿತವಾದ ವಸ್ತುಗಳೆಂದೇ ಅರ್ಥವಾಗುತ್ತವೆ. ಏಕೆಂದರೆ ಮನುಷ್ಯರ ಮನಸ್ಸೇ ಸಾಧಾರಣವಾಗಿ ನಿಶ್ಚಿತವಾದ ಮತ್ತು ಮೇರೆಯುಳ್ಳ ವಸ್ತುಗಳನ್ನೇ ಕಾಂಕ್ಷಿಸುತ್ತದೆಯಲ್ಲದೆ, ಪರಬ್ರಹ್ಮನನ್ನೂ ನಿರ್ಣಿತ ವಸ್ತುಗಳಲ್ಲಿ ಒಂದನ್ನಾಗಿ ಮಾಡಿಕೊಳ್ಳುವುದಕ್ಕಾಗಿ ತನ್ನ ಸರ್ವಶಕ್ತಿಯನ್ನೂ ಉಪಯೋಗಿಸುತ್ತದೆ. ಇದರಿಂದಲೇ ಕಲ್ಪನಾಶಕ್ತಿಯ ಸಹಾಯವಿಲ್ಲದೆ ನಾವು ಪರಬ್ರಹ್ಮನನ್ನು ಅರಿಯುವುದಕ್ಕಾಗುವುದಿಲ್ಲ. ಇದರಿಂದಲೇ ಸರ್ವಮತಜ್ಞಾನಿಗಳೂ ಕೂಡ ತಮ್ಮ ಜ್ಞಾನಗೋಚರವಾದ ವಸ್ತುವನ್ನು ವಿವರಿಸಲು † ಕಲ್ಪನಾಶಕ್ತಿಯನ್ನು ಉಪಯೋಗಿಸಲೇ ಬೇಕಾಗಿದೆ 'ದೃಷ್ಟಾಂತ (parable) ಗಳಿಲ್ಲದೆ ತಮ್ಮ ಶ್ರೋತೃಗಳೊಡನೆ ಅವರೆಂದಿಗೂ ಮಾತನಾಡುತ್ತಿರಲಿಲ್ಲ" ವೆಂದು ಏಸು ಕ್ರಿಸ್ತರ ವಿಷಯದಲ್ಲಿ ಹೇಳಿದೆ. ನಾವು ಉಪಯೋಗಿಸುವ ತತ್ತ್ವ ಪದಾರ್ಥ (category) ಗಳಲ್ಲಿ ಪೂರ್ಣ ಆತ್ಮಜ್ಞಾನಿ (self-conscious personality)

---

* dim silence. † express (ವ್ಯಕ್ತೀಕರಿಸು).

ಯೆಂಬುದೇ ಶ್ರೇಷ್ಠವಾದುದು. ನಾವುಗಳೆಲ್ಲರೂ ಪುರುಷರೆಂದಮೇಲೆ ಪರಮಾತ್ಮನು ಪುರುಷೋತ್ತಮನೇ ಅಲ್ಲವೇ ? ಹೀಗೆ ಆತ್ಮಜ್ಞಾನಿಯೆಂಬ ಭಾವನೆ (concept) ಯನ್ನು ವಿಮರ್ಶಿಸಿ ನೋಡಿದರೆ ಅದರಲ್ಲಿ ರಾಗ (emotion, ಇಚ್ಛೆ) ಜ್ಞಾನ ಸಂಕಲ್ಪಗಳು ಸೂಕ್ಷ್ಮರೂಪದಲ್ಲಿ ಸೇರಿವೆ ಯೆಂದು ಗೊತ್ತಾಗುವುದಲ್ಲದೆ ಪರಮಾತ್ಮನೂ ಕೂಡ ಪೂರ್ಣಜ್ಞಾನಿ ಯೂ ಅನಂತಪ್ರೀತಿವತ್ಸಲನೂ,* ಸರ್ವಶಕ್ತಿಯುತನೂ† ಆದ ಬ್ರಹ್ಮ ವಿಷ್ಣುಮಹೇಶ್ವರರಿಂದೊಡಗೂಡಿ ಏಕವಸ್ತುವಾಗಿ ಪ್ರಕಾಶಿಸುತ್ತಿರುವನೆಂ ದು ವ್ಯಕ್ತವಾಗುತ್ತದೆ ಈ ತ್ರಿಮೂರ್ತಿಗಳು ಸಾಮಾನ್ಯನರ ಮತ ಶಾಸ್ತ್ರದಲ್ಲಿ ಹೇಳುವಂತೆ ಲೋಕಚಕ್ರಕ್ಕೆ ಸೇರಿದ್ದರೂ ತಮ್ಮ ತಮ್ಮ ಪ್ರತ್ಯೇಕವಾದ ಸ್ವತಂತ್ರವಾದ ಮುಖ್ಯಸ್ಥಾನಗಳನ್ನುಳ್ಳ ಚಿದಾತ್ಮತ್ರ ಯಗಳಲ್ಲ, ಮತ್ತೋ ಸಂಯುಕ್ತರೀತಿಯಿಂದಿರುವ ವ್ಯಕ್ತಿ ವಿಶೇಷವೊಂ ದರ (complex personality) ರೂಪತ್ರಯಗಳೆಂದೇ ಅರ್ಥ ಇದರಿಂ ದಲೇ ಈ ದೇಶದಲ್ಲಿ ರೂಢಿಯಲ್ಲಿದ್ದ ಪರಮಾತ್ಮನ ವಿವಿಧವರ್ಣನೆಗಳು ಈ ತ್ರಿಮೂರ್ತಿಗಳಲ್ಲಿ ಒಬ್ಬರಲ್ಲಿಲ್ಲದಿದ್ದರೆ ಮತ್ತೊಬ್ಬರಲ್ಲಿ ಅನ್ವಯಿಸ ಲ್ಪಟ್ಟವ.

## ೧೮. ಜೀವಾತ್ಮ ಪರಮಾತ್ಮ ಸಂಬಂಧವು

ಮನುಷ್ಯನ ಆತ್ಮವು ಸಂಯುಕ್ತಸ್ವಭಾವದಿಂದ ಇರುವಂತೆಯೇ ಅವನನ್ನು ಆವರಿಸಿರುವ ಈ ಪ್ರಪಂಚವೆಲ್ಲವೂ ಸಂಯುಕ್ತವಾಗಿದೆ. ಇಂಥಾ ಅನಂತ ಶಕ್ತಿಯುಳ್ಳ ಪುರುಷ ಪ್ರಧಾನವಾದ ಆತ್ಮನು ಅನಂತ ಶಕ್ತಿಯುತವಾದ ಪ್ರಕೃತಿಯೊಡನೆ ಕೂಡಿದಾಗ ಉಂಟಾಗುವ ಪರಿ ಣಾಮ (reactions) ಗಳನ್ನು ಇಷ್ಟೇ ಎಂದು ಒಂದೆರಡು ಸೂತ್ರಗಳಿಂದ ನಿರ್ಧರಿಸಲು ಸಾಧ್ಯವಿಲ್ಲ. ಅಂತತೆಯುಳ್ಳ ‡ ವಸ್ತುವಿನ ವ್ಯಾದು ಭಾರ್ವದಿಂದ ನಾವು ಕಷ್ಟಕ್ಕೀಡಾದಾಗ ಅನಂತವಸ್ತುವಿನಲ್ಲಿ ಶರಣು

---

* The great lover. † The perfect will (ಸಂಕಲ್ಪ).
‡ Finite, ಸಾಂತ.

ಹೋಗುತ್ತೇವೆ. ಈ ಸಾಂತವಾದ ವಸ್ತುವು ಅನೇಕ ಸಂದರ್ಭಗಳಲ್ಲಿ ನಮ್ಮೊಡನೆ ನಿಕಟ ಸಂಬಂಧದಿಂದ ಸನಿಹಾಪಿಸಿರುವುದರಿಂದ ಪರಮಾತ್ಮನ ವಿಷಯದಲ್ಲಿ ನಾವು ಕೊಟ್ಟಿರುವ ವಿವಿಧ ವರ್ಣನೆಗಳು ಈ ವಿಪರೀತ ಪರಿಣಾಮವುಳ್ಳ ಒತ್ತಾಟ(protean pressure)ದ ಫಲವಾಗಿವೆ. ನಿಮ್ಮ ಕೇಂಬ್ರಿಡ್ಜ್ ಶಾಖೆಯ ಪ್ಲೇಟೋ ಶಿಷ್ಯರಾದ ಜಾನ್ ಸ್ಮಿತ್ತರು ಹೇಳುವಂತೆ, ಜನರು ತಮ್ಮ ತಮ್ಮ ಶ್ರದ್ಧಾಭಕ್ತ್ಯಾದಿ ಸದ್ಗುಣಗಳಿಂದ ಎಷ್ಟೆಷ್ಟು ಮಟ್ಟಿಗೆ ಮುಂದರಿಯುವರೋ ಪರಮಾತ್ಮನೂ ಕೂಡ ಅವರವರಿಗೆ ಅಷ್ಟಷ್ಟು ಮಟ್ಟಿಗೆ ಚೆನ್ನಾಗಿಯೇ ಗೋಚರವಾಗುವನು.† ಉಪನಿಷದ್ ಜ್ಞಾನಿಗಳು ಈ ಲೋಕದ ಅನಿತ್ಯತೆಯಿಂದಲೂ ಇದರ ಕ್ಷಣಿಕ ಪರಿಣಾಮ ಗುಣದಿಂದಲೂ ಬಹು ಸಂತಪ್ತರಾಗಿ ಅನಂತವಾದ ನಿತ್ಯವಸ್ತುವನ್ನು ಅಂದರೆ ನೀರಿಯಾಮುಬ್ಬಿನಂತೆ ಚದರಿಹೋಗದಿರುವ ಸದ್ವಸ್ತುವನ್ನು ಪಡೆಯಲು ಪ್ರಯತ್ನಪಟ್ಟರು. ಹೀಗಿರುವ ಲೋಕದ ಕಷ್ಟ ದುಃಖಗಳು ಬುದ್ಧನ ಮನ ಕರಗುವಂತೆ ಮಾಡಿ ಸಾಂತವಸ್ತುಗಳ ಅನಿತ್ಯತೆಯ ವಿಷಯದಲ್ಲಿ ಇವನ ನಂಬಿಕೆಯು ಇನ್ನೂ ಹೆಚ್ಚು ದೃಢವಾಗುವಂತೆ ಮಾಡಿದವಲ್ಲದೆ ತನ್ನ ಕ್ಲೇಶಗಳೆಲ್ಲವನ್ನೂ ದಾಟಿ ಪಾರಾಗುವಂತೆ ಪ್ರೋತ್ಸಾಹಗೊಟ್ಟುದುದರಿಂದ ಆ ಮಹಾಮುನಿಯೂ ಕೂಡ ಸನಾತನಧರ್ಮವಾದ ಸತ್ಕರ್ಮ ಸದಾಚಾರಗಳಲ್ಲಿ ತನ್ನ ಸರ್ವಾಭೀಷ್ಟ ಮೋಕ್ಷವನ್ನು ಸಂಪಾದಿಸಿಕೊಂಡನು. ಧರ್ಮವಿಷಯದಲ್ಲಿ ಜನರಿಗೆ ಇಷ್ಟು ಮಟ್ಟಿಗಿರುವ ಅಶ್ರದ್ಧೆಯು ಹೀಬ್ರ್ಯೂ ಜನರಿಗೆ ಹೆಚ್ಚು ಮನ ಮುಟ್ಟಿದುದರಿಂದ ಇವರು ಸರ್ವಶಕ್ತನೂ, ಧರ್ಮಜ್ಞನೂ, ಮತ್ತು ಶಿಷ್ಟಪಾಲಕನೂ, ದುಷ್ಟ ಶಿಕ್ಷಕನೂ ಆದ ಪರಮಾತ್ಮನ ಪಾದಾರವಿಂದದಲ್ಲಿ ತಮ್ಮ ಮೋಕ್ಷವನ್ನು ಸಂಪಾದಿಸಿಕೊಂಡರು. ಅಂತಃಕರಣವು ಮಾಡಬೇಕೆ

---

† cp. ಮನುಜರ್ ತಂತಮ್ಮ ನಿತ್ಯಚರ್ಯೆಯೋಳ್ ಎಂತಿರ್ಪರೋ ಅಂಥವರ ದರ್ಶನಕ್ಕೆಡೆಗೊಟ್ಟು ದೇವನುಂ ಅವರಂತೆ ತಾನಿರ್ಪನಲ್ತೆ ಚೋದಾರತ್ನ ॥ and ಜನರಂತೆ ದೇವಂ। or ತನ್ನಂತೆ ಶಿವನುಂ ॥ (Trans)

ನ್ನುವ ಕರ್ತವ್ಯಕ್ಕೆ ಇರುವ ಗಾಂಭೀರ್ಯದಿಂದಲೂ ನಿರುಪಾಧಿಕರೀತಿಯಲ್ಲಿ ಆಕರ್ಷಿಸುವಶಕ್ತಿಯಿಂದಲೂ(unconditional binding force) ಹೀಬ್ರ್ಯೂ ಜ್ಞಾನಿಗಳೂ ಮತ್ತು ಭಕ್ತಮಹಮ್ಮದನೂ ಬಹುವಾಗಿ ಮನಗೊಂಡರು. ಮತ್ತಿವರು ಸರ್ವಾಧಿಕಾರಕ್ಕೂ ರಾಜನೇ ಮೂಲಕಾರಣನಾಗಿರುವನೆಂಬ ವಿಷಯವನ್ನು ಚೆನ್ನಾಗಿ ತಿಳಿದಿದ್ದುದರಿಂದ ಪರಾತ್ಪರವಸ್ತುವನ್ನು ಇವರಂತೆಯೇ ಪರಮೇಶ್ವರನನ್ನಾಗಿಯೂ ದೇವಾಧಿದೇವನಾದ ರಾಜನನ್ನಾಗಿಯೂ ತಿಳಿದುಕೊಂಡರು. ಕ್ರೈಸ್ತವಾದಿಗಳು* ಧರ್ಮಕರ್ತವ್ಯಕ್ಕಿರುವ † ಅನುಲ್ಲಂಘನೀಯವಾದ ಗಾಂಭೀರ್ಯಕ್ಕೆ ಹೆಚ್ಚು ಕಿವಿಗೊಡದೆ ಪರಮಾತ್ಮನಲ್ಲಿ ಹೆಚ್ಚು ಶೋಭಿಸುತ್ತಿರುವ ದಯಾಪ್ರೀತಿಗಳಲ್ಲಿ ಪೂರ್ಣವಿಶ್ವಾಸವಿಟ್ಟಿರುವರು. ಇದರಿಂದಲೇ ಪರಮಾತ್ಮನು ಸ್ವರ್ಗವಾಸಿಯಾದ ನಮ್ಮ ತಂದೆಯಾಗಿದ್ದುಕೊಂಡು ಅವನ ಧರ್ಮಗಳನ್ನು ಮೀರಿ ನಡೆಯುವಂಥ ಮಕ್ಕಳು ನಾವಾಗಿದ್ದರೂ ಕೂಡ, ನಾವು ಅನುತಪ್ತಹೃದಯರಾಗಿ ಅವನ ಧರ್ಮಗಳನ್ನು ಅನುಸರಿಸಬೇಕೆಂದು ಸಂಕಲ್ಪಿಸಿ ನಿವೃತ್ತಿ ಮಾರ್ಗಿಗಳಾದ ಕೂಡಲೇ ಪ್ರೀತ್ಯಾದರಗಳಿಂದ ಕೂಡಿ ಆ ಮಹಾದೇವನು ನಮ್ಮನ್ನು ತನ್ನ ಸಮೀಪಕ್ಕೆ ಬರುವಂತೆ ಕರೆಯುತ್ತ ಆತುರದಿಂದೆದುರು ನೋಡುತ್ತಿರುವನು. ಪಿತೃಗಳು ಧರ್ಮಪ್ರಾಧಾನ್ಯರಾಗಿರುವಲ್ಲಿ ಮಾತೃಗಳು ದಯಾಪೂರಿತರಾಗಿರುವುದರಿಂದ ಕ್ರೈಸ್ತಸಾಂಪ್ರದಾಯಕರೂ ಮತ್ತು ನಮ್ಮ ಶಾಕ್ತರೂ ಕೂಡ ಮಕ್ಕಳ ಮೇಲಿರುವ ವಾತ್ಸಲ್ಯದಿಂದ ಮಾತೆಯು ತನ್ನ ದಯಾರಸವನ್ನು ವರ್ಷಿಸುತ್ತಿರುವಂತೆಯೂ, ಇಲ್ಲವೆ ಕರುಗಳ ಮೈಮೇಲಿರುವ ಕೊಳೆಯನ್ನು ನೆಕ್ಕಿಬಿಡುವ ಹಸುಗಳಂತೆಯೂ ಬಹು ಪ್ರೀತಿಯಿಂದಲೂ ಉತ್ಸಾಹಬುದ್ಧಿಯಿಂದಲೂ ಪರಮಾತ್ಮನನ್ನು ಇಂಥಾ ದಯಾಪೂರ್ಣಳಾದ ದೇವತೆಯೆಂದು ಭಾವಿಸುತ್ತಾರೆ. ಹೀಗೆಯೆ ಪರಮಾತ್ಮನನ್ನು ಕುರಿತು ಅನಾಗರಿಕ ಜನರು ಬಹು ಪುರಾತನ ಕಾಲದಲ್ಲಿ ಇಟ್ಟುಕೊಂಡಿದ್ದ ಪ್ರಕೃತಿಪೂಜೆಯಿಂದ ಪ್ರಾರಂಭಿಸಿ ನಿಮ್ಮ ಭಕ್ತ ಫ್ರಾನಿಸ್ಸನು ಹೇಳಿದ ಪಿತೃಪ್ರೀತಿಯೂ ಮತ್ತು ನಮ್ಮ ಶ್ರೀರಾಮಕೃಷ್ಣರು ಹೇಳಿದ ಮಾತೃವಾತ್ಸಲ್ಯವೂ ಈ ಎಲ್ಲಾ ವರ್ಣನೆಗಳೂ

---

* Christian Protestants. † Ethical imperative

ಜೀವಾತ್ಮಪರಮಾತ್ಮರಿಗಿರುವ ನಿಕಟ ಸಂಬಂಧದ ಒಂದೊಂದು ವಿಶೇಷ ವನ್ನು ಪ್ರದರ್ಶಿಸುತ್ತವೆ. ಇದರಿಂದ ಪರಮಾತ್ಮನನ್ನು ಪ್ರಾರ್ಥಿಸಿ ಅವ ನನ್ನು ಸೇರಲು ಮಾಡಿಕೊಂಡಿರುವ ಎಲ್ಲಾ ಮಾರ್ಗಗಳೂ ಎಲ್ಲಾ ವರ್ಣ ನಗಳೂ ಜನರ ಮನಸ್ಸಿನಲ್ಲುಂಟಾಗುವ ಆಯಾ ಸ್ಥಿತಿ (mood) ಗಳನ್ನ ನುಸರಿಸಿಯೇ ಹುಟ್ಟಿವೆ. ಮತ್ತಿವುಗಳು ಪ್ರತಿಯೊಂದೂ ಸ್ವಲ್ಪ ಸ್ವಲ್ಪ ಮಟ್ಟಿಗೆ ನಿಜವಾಗಿದ್ದರೂ ಯಾವುದೂ ಪೂರ್ಣತತ್ತ್ವವನ್ನು ನಮಗೆ ದೊರಕಿಸುವಂತಿಲ್ಲ. ಏಕೆಂದರೆ, ಪರಮಾತ್ಮನು ಆಜ್ಞಾಕರವಾದ ಧರ್ಮ ಕ್ಕಿಂತಲೂ, ಶಾಸನಕರ್ತೃವಾದ ಧರ್ಮಾಧಿಕಾರಿ*ಗಿಂತಲೂ, ತನ್ನಿಷ್ಟ ದಂತೆ ನಡೆಯಬೇಕೆಂದು ಬಲಾತ್ಕಾರಪಡಿಸುವ ಪ್ರೀತಿಗಿಂತಲೂ, ನಮ್ಮ ಜನ್ಮದಾತೃವಾದ ಪಿತೃವಿಗಿಂತಲೂ, ನಮ್ಮ ಆಶಾಸುಖಗಳಲ್ಲಿ ಪಾಲ್ಗೊಳ್ಳ ಭಾಗಿಯಾದ ಮಾತೃವಿಗಿಂತಲೂ ಇನ್ನೂ ಶ್ರೇಷ್ಠಗುಣವುಳ್ಳವನೇ ಆಗಿರು ವನು. ಇದರಿಂದಲೇ ನಮ್ಮ ಶ್ರುತಿಯಲ್ಲಿ ಹೇಳಿರುವಂತೆ "ನಿತ್ಯವಾದ ಏಕವಸ್ತುವನ್ನು ಜ್ಞಾನಿಗಳು ಬೇರೆಬೇರೆಯಾಗಿ ಕರೆಯುತ್ತಾರೆ†," "ಮಹಾಜ್ಞಾನಿಗಳು ನನ್ನ ನಾಮಗಳನ್ನು ಅನೇಕವಾಗಿ ವರ್ಣಿಸಿದ್ದಾ ರೆಂ‡"ದು ಭಾರತವು ಸಾರುತ್ತಿಲ್ಲವೆ? ಆದರೂ ಕೂಡ ಪರಮಾತ್ಮನಿಗೆ ಇಷ್ಟೊಂದುಮಟ್ಟಿಗೆ ಅನೇಕವರ್ಣನೆಗಳು ಇವೆಯೆಂದು ಹೇಳಿದುದರಿಂದ ಬಹುದೇವತಾವಾದ(polytheism)ಕ್ಕೆ ಸಿಕ್ಕಿಬಿದ್ದಂತಾಗಲಿಲ್ಲ. ಪೂರ್ವ ದಲ್ಲಿ ಯಾಜ್ಞವಲ್ಕ್ಯರನ್ನು ದೇವತೆಗಳ ಸಂಖ್ಯೆ ಎಷ್ಟೆಂದು ಕೇಳಿದಾಗ ಅವರು ಜನರಲ್ಲಿ ರೂಢವಾಗಿದ್ದ ಸಂಖ್ಯೆಯಿಂದ ಅಂದರೆ ೩೩ ಕೋಟಿ (ಸಾವಿರ, ೩೩೦೬) ದೇವತೆಗಳಿಂದ ಪ್ರಾರಂಭಿಸಿ ಕೊನೆಗೆ ಆ ಎಲ್ಲರನ್ನೂ ಒಬ್ಬನೇ ಆದ ಪರಬ್ರಹ್ಮನಲ್ಲಿ ಅನ್ವಯಿಸಿದರು. ಹೀಗೆಯೇ "ಸಕಲ

---

* The judge that condemns

† name, ವರ್ಣಿಸು ; ಋಗ್ವೇದ, I 164, 46

‡ ಬಹೂನಿ ಮಮ ನಾಮಾನಿ ಕೀರ್ತಿತಾನಿ ಮಹರ್ಷಿಭಿಃ ।
(ಮಹಾಭಾರತ, ಶಾಂತಿಪರ್ವ)

ಪ್ರಮಾತೀತವೂ, ಅನಂತ್ಯವೂ ಶಾಶ್ವತೀಯವೂ ಆದ ನಿತ್ಯವಸ್ತುವನ್ನು ಒಂದೇ ಒಂದೆಂದು ತಿಳಿಯಬೇಕು.''*

## ೧೯. ಜೀವಾತ್ಮ ಪ್ರಶಂಸೆಯು

ಈ ವಿವಿಧವರ್ಣನೆಗಳು ಪರಮಾತ್ಮನು ತನ್ನ ನಿಜಸ್ವರೂಪದಲ್ಲಿ ಹೇಗಿರುವನೆಂದು ಹೇಳದೆ ಅವನು ನಮಗೆ ಹೇಗೆ ಗೋಚರಿಸುತ್ತಾನೆ ಎಂಬುದನ್ನು ಮಾತ್ರ ಹೇಳುತ್ತವೆ. ಮನುಷ್ಯಾಕೃತಿಯಲ್ಲಿ ಮಾಡಿರುವ ಈ ಪರಮಾತ್ಮಭಾವಗಳು † ನಮ್ಮ ಆವಶ್ಯಕತೆಗಳನ್ನು ಅನುಸರಿಸಿವೆ. ನಾವು ಪರಮಾತ್ಮನು ಫಲಪುಷ್ಪ ಚಂದ್ರತಾರಾದಿಗಳಲ್ಲಿಯೂ, ಸಣ್ಣಸಣ್ಣ ಮೃಗಪಕ್ಷಿಗಳಲ್ಲಿಯೂ, ಚಿಕ್ಕಚಿಕ್ಕ ಮಕ್ಕಳಲ್ಲಿಯೂ, ದುಃಖಪರಿತಪ್ತರಾದ ಜನರ ಮನದಲ್ಲಿಯೂ ಇದ್ದುಕೊಂಡು ಅವರನ್ನು ಕಾಪಾಡುವ ಪುರುಷೋತ್ತಮನೆಂದು ತಿಳಿಯುತ್ತೇವೆ. ಆದರೆ ಪರಮಾತ್ಮನು ಕೇವಲ ನಮಗಾಗಿಯೇ ಇರದೆ ತನ್ನ ಆತ್ಮತೃಪ್ತಿಗಾಗಿಯೂ ಕಾರ್ಯಮಾಡುತ್ತಿರುವನು. ‡ ಮತ್ತು ಪರಮಾತ್ಮನನ್ನು ಕೇವಲ ಮಾನುಷ ಪುರುಷಾರ್ಥಕ್ಕಾಗಿರುವ ಸಲಕರಣೆಯೊಂದೆಂದು ಭಾವಿಸುವುದರಿಂದ ನಮ್ಮ ಶ್ರೇಷ್ಠತೆಯನ್ನೇ ಕೊಚ್ಚಿಕೊಂಡಂತಾಗುವುದು. ಆದರೆ ಪರಮಾತ್ಮನು ನಮಗೊಂದು ಬೆಲೆಯನ್ನು ಅಂದರೆ ಯೋಗ್ಯತೆಯನ್ನು ಕೊಡುವುದಕ್ಕಿಂತ ಹೆಚ್ಚಾಗಿ ನಾವೇ ಆತನಿಗೆ ಇಂಥಾ ಬೆಲೆಯೊಂದನ್ನು ಕಟ್ಟುತ್ತೇವೆ. ಇದರಿಂದ ನಮ್ಮ ಸಾಧು ತುಕಾರಾಮರು ಹೀಗೆ ಹೇಳುತ್ತಾರೆ. 'ನಾವು ಪಾಪಮಗ್ನರಾಗುವುದು ನಿನಗೊಂದು ಪುಣ್ಯವೇ ಸರಿ. ನಾವಲ್ಲವೇ ನಿನಗೆ ನಾಮರೂಪಗಳನ್ನು ಕೊಟ್ಟಿರುವುದು ? ನಾವಿಲ್ಲದಿದ್ದರೆ ಏಕಾಂಗಿಯಾಗಿ ನಿರಾಕಾರನಾಗಿದ್ದಾಗ ನಿನ್ನ ಯೋಗಕ್ಷೇಮವನ್ನು ವಿಚಾರಿ

---

* ಏಕವೈವಾನುದ್ರಷ್ಟವ್ಯಂ ಏತದಪ್ರಮೇಯಂ ಧ್ರುವಂ ॥
(ಬೃಹದಾರಣ್ಯಕ ಉಪ, iv, 4, 20.)

† Anthropomorphic conception.

‡ Exists for himself. § Give value.

ಸುವವರು ಯಾರಿದ್ದರು ? ಕತ್ತಲೆಯಿಲ್ಲದೆ ಬೆಳಕೇನು ಪ್ರಕಾಶಿಸೀತು ? ಕಟ್ಟಣೆಯಿಲ್ಲದೆ ರತ್ನವೆಂತು ಹೊಳೆದೀತು ? ಜಾಡ್ಯವಲ್ಲವೇ ಧನ್ವಂತರಿಯ ಪ್ರಾಶಸ್ತ್ಯವನ್ನು ಮುಂದಕ್ಕೆ ತಂದುದು ? ಹಾಗಿಲ್ಲದಿದ್ದರೆ ಆರೋಗ್ಯಶಾಲಿಯಾದ ಮನುಷ್ಯನಿಗೆ ಅವನಿಂದ ಏನೂ ಪ್ರಯೋಜನವಿರುತ್ತಿರಲಿಲ್ಲ. ಇದರಂತೆ ವಿಷದಿಂದಲ್ಲವೇ ಅಮೃತಕ್ಕೆ ಒಂದು ಬೆಲೆ ಇರುವುದು ? ಮತ್ತು ಚಿನ್ನಬೆಳ್ಳಿಗಳಿಗೂ ಕೂಡ ತಾರತಮ್ಯ ಇರುವುದು ಇಂಥಾ ಪರಸ್ಪರಭಾವದಿಂದಲ್ಲವೇ? ಆದುದರಿಂದ, ಹೇ ದೇವ, "ನಾವಿಲ್ಲದಿದ್ದರೆ ನಿನ್ನಲ್ಲಿ ದೇವತ್ವವನ್ನು ಕಾಣುತ್ತಿದ್ದವರಾರೆ"ಂಬ ಈ ತುಕಾರಾಮನ ವಚನವೊಂದನ್ನು ಜ್ಞಾಪಕದಲ್ಲಿಡು." (ತುಕಾರಾಮ, III,87). ಹೀಗೆಂದ ಮೇಲೆ ಇತರರಿಗಾಗಿರುವ (ಪರಾರ್ಥೈಕಪರವಾದ) ಸತ್ತಾಸ್ವಭಾವವು * ಸ್ವಾತ್ಮೈಕ್ಯಾಗಿರುವ ಸತ್ತಾಸ್ವಭಾವವೆಂದು † ಎಂದಿಗೂ ಆಗುವುದಿಲ್ಲ‡

## ೭೦. ಪರಬ್ರಹ್ಮನೂ ಅವನ ಗುಣಪ್ರಶಂಸೆಯೂ

ಸತ್ತಾಸ್ವಭಾವದ ಮುಖ್ಯ ಆಧಾರವೇನೆಂದು ಮತದೃಷ್ಟಿಯಿಂದ ನೋಡಬೇಕೆಂದು ಪ್ರಯತ್ನಮಾಡಿರುವ ಪ್ರತಿಯೊಬ್ಬರೂ ಈಶ್ವರ ಅಥವಾ ಪರಮಾತ್ಮನೆಂಬೊಬ್ಬ ಪರಮಪುರುಷನನ್ನು ಯಾವಾಗಲೂ ಒಪ್ಪಿಕೊಂಡಿರುವರು. ವಿಚಾರಪೂರ್ವಕವಾದ ನ್ಯಾಯಶಾಸ್ತ್ರವೂ§ ಮತ್ತು ಯೋಗಯುಕ್ತವಾದ ಧ್ಯಾನವೂ †† ಪರಮಾತ್ಮನನ್ನೂ, ಧರ್ಮಯುಕ್ತವಾದ ಸೇಶ್ವರವಾದವು ‡‡ ಈಶ್ವರನನ್ನೂ ಸತ್ತಾವಸ್ತುವಿನ ಮುಖ್ಯ ಆಧಾರ ಅಥವಾ ತಿರುಳೆಂದು ಭಾವಿಸುತ್ತವೆ. ಉಪನಿಷತ್ಕಾಲದಿಂದ ಈಗಿನವರೆವಿಗೂ ಹಿಂದೂ ಜನರ ಭಾವವು ಇದೇ ರೀತಿಯಲ್ಲಿ ನಡೆದು ಬಂದಿದೆ. ಕ್ರಿಸ್ತಮತದಲ್ಲಿಯೂ ಇದೇ ದ್ವಂದ್ವಾರ್ಥವು ಕಂಡುಬರುತ್ತದೆ. ಕ್ರಿಸ್ತಯೋಗಿಗಳು ತಮ್ಮ ಪರಮಾನುಭವಗಳಲ್ಲಿ ಈಶ್ವರನ ಸಗುಣ ಭಾವವನ್ನು ಮೀರಿದ್ದಾರೆ. ಮತದಿಂದುಂಟಾಗಿರುವ ಕೆಲವು

* existence for others † existence for oneself
‡ constitutes § Rationalistic logic
†† mystic contemplation ‡‡ Ethical theism

ಶ್ರೇಷ್ಠವೂ ಬಹು ಅಮೂಲ್ಯವೂ ಆದ ವಿಷಯಗಳಿಗೆ ಸಗುಣಬ್ರಹ್ಮನು ಅವಶ್ಯಕವಸ್ತುವೆಂದು ಹಿಂದೂ ಧರ್ಮವು ಹೇಳುತ್ತದೆ. ಇದರಂತೆಯೇ ಪರಮಾತ್ಮನಲ್ಲಿ ಸಗುಣಸ್ವಭಾವವುಂಟೆಂದು ಹೇಳಲು ಬೌದ್ಧಿಕದೃಷ್ಟಿಯಿಂದಲೂ ಒಂದು ಅವಶ್ಯಕತೆಯುಂಟು. ಆದರೂ ಹೀಗೆ ಹಿಂದೂ ಜ್ಞಾನಿಗಳು ಪರಮಾತ್ಮನ ಸಗುಣಸ್ಥಿತಿಯನ್ನು ಎಷ್ಟು ಚೆನ್ನಾಗಿ ವರ್ಣಿಸಿದ್ದರೂ ಆ ನಿತ್ಯವಸ್ತುವಿನ ಗುಣಾತೀತ ಸ್ವಭಾವವನ್ನು ಎಲ್ಲಿಯೂ ಮರೆತಿಲ್ಲ. ಏಕೆಂದರೆ ಪರಮಾತ್ಮನು ಸಗುಣನೆಂದು ಹೇಳುವ ಜನರು ಇದೇ ಪರಮಾತ್ಮನ ಎಷ್ಟೋ ಗುಣಗಳು ನಮ್ಮ ಜ್ಞಾನಾತೀತವಾಗಿರುವುವೆಂದು ಒಪ್ಪುವರು. ಈ ಜಗತ್ತಿನ ಮುಖ್ಯಕಾರಣವೂ ಆಧಾರವೂ ಮತ್ತು ಧ್ಯೇಯವೂ ಆದ ನಿತ್ಯವಸ್ತುವು ಆತ್ಮಜ್ಞಾನಿಯಾದ ಸಗುಣ ಬ್ರಹ್ಮ * ನಿಗಿಂತಲೂ ಎಂದಿಗೂ ಕಡಿಮೆಯಾದ ವಸ್ತುವಲ್ಲ. ಈ ನಿತ್ಯವಸ್ತುವು ಬಾಹ್ಯವಿಷಯಗಳಲ್ಲಿ ಕೇವಲ ಒಂದು ವಿಷಯವೂ, ಇಲ್ಲವೇ ಆಂತರಿಕ ವಿಷಯಗಳಲ್ಲಿ ಕೇವಲ ಒಂದು ವಸ್ತುವೂ ಅಲ್ಲ, ಮತ್ತು ಸರ್ವ ಬಾಹ್ಯಾಭ್ಯಂತರ ವಸ್ತುಗಳಲ್ಲಿಯೂ ಸೂಕ್ಷ್ಮಾಧಾರವೂ, † ಸರ್ವ ಕರ್ತೃವೂ ‡ ಆದ ಧರ್ಮತತ್ತ್ವವಾಗಿದೆ. ನಿತ್ಯವಸ್ತುವಿನ ಸಗುಣ ನಿರ್ಗುಣ ವರ್ಣನೆಗಳು ಒಂದೇ ಒಂದಾಗಿರುವ ನಿತ್ಯವಸ್ತುವನ್ನು ಕೇವಲ ಸ್ವಾತ್ಮರೂಪ § ದಿಂದಲೂ ಸಂಬಂಧ ರೂಪದಿಂದಲೂ ವರ್ಣಿಸುವ ಕ್ರಮ ಭೇದಗಳು ಮಾತ್ರವಾಗಿವೆ. ಅಂದರೆ ನಿತ್ಯವಸ್ತುವು ಸ್ವಾತ್ಮರೂಪದಲ್ಲಿ ಹೇಗಿರುವುದೆಂದು ಹೇಳಿ ಧ್ಯಾನಿಸುತ್ತಿರುವಾಗ ನಾವು ನಿರ್ಗುಣ ಬ್ರಹ್ಮನನ್ನು ಸೇರುತ್ತೇವೆ, ಮತ್ತು ಈ ನಿತ್ಯವಸ್ತುವಿಗೆ ನಮ್ಮೊಡನೆ ಇರುವ ಸಂಬಂಧವನ್ನೇ ಕುರಿತು ಹೆಚ್ಚು ಹೇಳುವುದಾದರೆ ಆಗ ಸಗುಣಾತ್ಮಕನಾದ ಪರಮಾತ್ಮನನ್ನು ಸೇರುತ್ತೇವೆ. ††

---

* self conscious personality † immanent ground

‡ operative principle § absolute

†† ವದನ್ತಿ ತತ್ತತ್ತ್ವವಿದಸ್ತತ್ತ್ವಂ ಯದ್ಜ್ಞಾನಮದ್ವಯಂ ।
ಬ್ರಹ್ಮೇತಿ ಪರಮಾತ್ಮೇತಿ ಭಗವಾನಿತಿ ಶಬ್ದ್ಯತೇ ॥

# ೬ ಪರಮಾತ್ಮಸಿದ್ಧಿಯೂ ಮತ್ತು ಧರ್ಮಪ್ರಯೋಜನವೂ

## ೨೧. ಬುದ್ಧಿವಿಕಾಸ ಮತ್ತು ಪರಮಾತ್ಮಸಿದ್ಧಿ

ಹಿಂದೂಜ್ಞಾನಿಗಳು ನಮಗೆ ಪರಮಾತ್ಮನ ವಿಷಯದಲ್ಲಿರುವ ಜ್ಞಾನವು ಅಭಿವೃದ್ಧಿಯುಕ್ತವಾಗಿರುವುದೆಂದು ನಂಬುತ್ತಾರೆ. ಈ ವಿಷಯದಲ್ಲಿ ಒಂದು ಮಾತನ್ನು ಚೆನ್ನಾಗಿ ಜ್ಞಾಪಕದಲ್ಲಿಡಬೇಕು. ನಿತ್ಯವಸ್ತುವೆಂದು ಯಾವುದನ್ನು ವರ್ಣಿಸುವುದಕ್ಕಾಗಿ ನಮ್ಮ ಅಭಿಪ್ರಾಯಗಳು ಪ್ರಯತ್ನಿಸುತ್ತಿರುವುವೋ ಅಂಥಾ ನಿತ್ಯ ವಸ್ತುವಿನ ಹೃದಯಸ್ಥಾವವನ್ನು ಸೇರುವವರೆವಿಗೂ ಇರುವ ಇತರ ಭಾವನೆಗಳೆಲ್ಲವನ್ನೂ ದಾಟುತ್ತಾ ನಾವು ಈ ಪರಮಾತ್ಮವರ್ಣನೆಗಳನ್ನು ಎಡಬಿಡದೆ ಬದಲಾಯಿಸುತ್ತಿರಬೇಕು ಹಿಂದೂಧರ್ಮವು ಸರ್ವಮಾನವವರ್ಗಕ್ಕೂ ಯಾವುದೊಂದು ಅಭಿಪ್ರಾಯವೇ ಪ್ರಮಾಣವೆಂದು ಹೇಳುತ್ತ ಪರಮಾತ್ಮನ ವಿಷಯದಲ್ಲಿರುವ ಅಭಿಪ್ರಾಯಗಳನ್ನು ಇವಿವುಗಳು ಸುಳ್ಳು ನಿಜವೆಂದು ವಿವೇಚಿಸುವುದಿಲ್ಲ. ಮನುಷ್ಯವರ್ಗವು ತನಗಿರುವ ಪರಮಾತ್ಮಲಕ್ಷ್ಯವನ್ನು ಬೇರೆಬೇರೆ ಅಂತಸ್ತುಗಳಲ್ಲಿಯೂ ಬೇಬೇರೆ ದಿಕ್ಕುಗಳಿಂದಲೂ ಹುಡುಕುತ್ತಿದೆಯೆಂಬ ಸರ್ವಜನ ವಿದಿತವಾದ ವಿಷಯವನ್ನು ಒಪ್ಪುವುದಲ್ಲದೆ ಈ ಅನ್ವೇಷಣದ ಪ್ರತಿಯೊಂದು ಸ್ಥಳವನ್ನೂ ವಿಚಾರವನ್ನೂ ಪ್ರೀತಿಯಿಂದ ನೋಡುತ್ತಿರುತ್ತೆ. ಗಿಡಬಳ್ಳಿಗಳು ಹಸುರು ಎಲೆಗಳನ್ನು ಬಿಟ್ಟು ಚಿಗುರುವಂತೆ ಮಾಡಿದ ಶಕ್ತಿಗಳು ಕೆಂಪು ಹೂವುಗಳನ್ನೂ ಬೆಳೆಯುವಂತೆ ಮಾಡುವಹಾಗೆ ಒಬ್ಬನೇ ಈಶ್ವರನು ಒಂದು ಕಾಲದಲ್ಲಿ ಶಕ್ತಿಯಾಗಿಯೂ ಇನ್ನೊಂದು ಕಾಲದಲ್ಲಿ ಪುರುಷನಾಗಿಯೂ ಮತ್ತೊಂದರಲ್ಲಿ ಸರ್ವವ್ಯಾಪಿಯಾದ ಪರಮಾತ್ಮನಂತೆಯೂ ಪ್ರಕಾಶಿಸುತ್ತಾನೆ. ಇದನ್ನು ನೋಡಿ ಕೆಂಪು ಹೂವುಗಳೇ ನಿಜವು ಮತ್ತು ಹಸುರೆಲೆಗಳೆಲ್ಲವೂ ಸುಳ್ಳೆಂದು ನಾವು ಹೇಳುವುದಿಲ್ಲ. ಹಿಂದೂ ಧರ್ಮವು ಸರ್ವ ಮತಸಂಬಂಧವಾದ ಭಾವಗಳನ್ನೂ ವಿಷಯ (facts) ಗಳೆಂದು

ಒಪ್ಪುವುದಲ್ಲದೆ, ಅವುಗಳಿಗಿರುವ ಗೂಢಾರ್ಥದ ತಾರತಮ್ಯ * ವನ್ನು ಅನುಸರಿಸಿ ಯೋಗ್ಯರೀತಿಯಿಂದ ಅವುಗಳೆಲ್ಲವನ್ನೂ ಒಂದು ಉತ್ತಮ ಕ್ರಮಕ್ಕೆ ತಂದು ಒಟ್ಟಿಗಿಟ್ಟು ಚೆನ್ನಾಗಿ ಜೋಡಿಸುತ್ತದೆ.† ಸಾಧಾರಣ ಜನರ ಕ್ರಮರಹಿತವಾದ ಬಹು ದೇವತಾರಾಧನ (polytheism) ವೂ, ಉಚ್ಚವರ್ಗದವರು ಸ್ವಲ್ಪವೂ ಕೈಬಿಡದ ಏಕದೇವತಾರಾಧನೆ‡ಯೂ ಕೂಡ ಭಾರತೀಯರಿಗೆ ಬೇರೆಬೇರೆ ಅಂತಸ್ತುಗಳಲ್ಲಿರುವ ಜನರ ಉಪಾಸನೆಗೆ ಬೇಕಾದ ಒಂದೇ ಒಂದು ಶಕ್ತಿಯ ವಿವಿಧ ವರ್ಣನೆಗಳಾಗಿ ಕಂಡುಬರುವುವು. ಹಿಂದೂ ಮತವು ನಾವು ಧರ್ಮಮಾರ್ಗದಲ್ಲಿ (upwards) ನಡೆಯುತ್ತ ಪರಮಾತ್ಮನ ವಿಷಯದಲ್ಲಿ, ನಮಗಿರುವ ಜ್ಞಾನವನ್ನು ದಿನೇದಿನೇ ಹೆಚ್ಚಿಸುತ್ತಿರಬೇಕೆಂದು ಆಗ್ರಹದಿಂದ ಹೇಳುತ್ತದೆ. 'ಪರಮಾತ್ಮನ ನಿರ್ಗುಣೋಪಾಸಕರು ನನ್ನ ಭಕ್ತರಲ್ಲಿ ಶ್ರೇಷ್ಠರು. ಇವರನ್ನು ಬಿಟ್ಟರೆ ಸೇಶ್ವರ ಉಪಾಸಕರೇ ಮುಖ್ಯರು. ರಾಮಕೃಷ್ಣ ಬುದ್ಧರಂಥಾ ಅವತಾರಪುರುಷರ ಆರಾಧಕರು ಮೂರನೆಯ ವರ್ಗದವರು. ಪಿತೃದೇವತಾಋಷಿಗಳ ಉಪಾಸಕರು ನಾಲ್ಕನೆಯ ವರ್ಗದವರು, ಮತ್ತು ಕೊನೆಯವರ್ಗದವರೆಂದರೆ ಸಾಧಾರಣ ಇಲ್ಲವೆ ಅಲ್ಪಶಕ್ತಿಯಿಂದ ಕೂಡಿದ ಭೂತಾದಿಗಳನ್ನು ಪೂಜಿಸುವವರೇ ಸರಿ.'§ ಹೀಗೆಯೇ 'ಕೆಲವು ಜನರ ದೇವತೆಗಳು ತೀರ್ಥಸ್ನಾನಗಳಲ್ಲಿ ಇರುವರು ಇವರಿಗಿಂತಲೂ ಉತ್ತಮ ಜನರ ದೇವತೆಗಳು ಸ್ವರ್ಗದಲ್ಲಿರುವರು. ಮತದಲ್ಲಿ ಬಾಲಕಸ್ಥಿತಿಯಲ್ಲಿರುವವರಿಗೆ ಈ ದೇವತೆಗಳು ಕಲ್ಲುಮನೆಗಳಿಂದ ಮಾಡಿರುವ ವಿಗ್ರಹಗಳಲ್ಲಿ

---

* more or less † arranges

‡ uncompromising Monotheism, ಏಕದೇವತಾವಾದ.

§ ಉಪಾಸನಾ ಬ್ರಹ್ಮಣಃ ಪ್ರಾಕ್, ದ್ವಿತೀಯಾ ಸಗುಣಸ್ಯಚ ।
ತೃತೀಯಾ ಸ್ಮರ್ಯತೇ ಲೀಲಾವಿಗ್ರಹೋಪಾಸನಾ ಬುಧೈಃ ॥
ಉಪಾಸ್ತೇ ಪಿತೃದೇವರ್ಷಿಗಣಾನಾಂ ಅಸ್ತ್ಯುಪಾಸನಾ ।
ಅಂತಿಮಾ ಕ್ಷುದ್ರದೇವಾನಾಂ ಪ್ರೇತಾದೀನಾಂ ವಿಧೀಯತೇ ॥

ರುವರು. ಆದರೆ ಜ್ಞಾನಿಯು ಈ ತನ್ನ ದೇವರನ್ನು ತನ್ನ ಅಂತರಾತ್ಮನಲ್ಲಿಯೇ ಕಾಣುವನು.'* 'ಕರ್ಮಾಸಕ್ತರಾದ ಜನರು ಈಶ್ವರನನ್ನು ಅಗ್ನಿಯಲ್ಲಿ ಕಂಡು ತಿಳಿದುಕೊಳ್ಳುವರು; ರಾಗಯುಕ್ತರಾದ ಜನರು ತಮ್ಮ ದೇವರನ್ನು ತಮ್ಮ ತಮ್ಮ ಹೃದಯದಲ್ಲಿಯೇ ಕಂಡುಕೊಳ್ಳುವರು; ಮತ್ತು ಅಲ್ಪಬುದ್ಧಿಯುಳ್ಳವರು ತಮ್ಮ ದೇವರನ್ನು ವಿಗ್ರಹಗಳಲ್ಲಿ ಕಂಡುಕೊಳ್ಳುವರು; ಆದರೆ ಮಹಾತ್ಮರಾದರೋ (the strong in spirit) ಪರಮಾತ್ಮನನ್ನು ಎಲ್ಲೆಲ್ಲಿಯೂ ಕಂಡುಕಂಡು ಆನಂದಿಸುತ್ತಿರುವರು."† 'ಶಿವಂ ಆತ್ಮನಿ ಪಶ್ಯನ್ತಿ ಪ್ರತಿಮಾಸು ನ ಯೋಗಿನಃ' ಅಂದರೆ ಯೋಗಿವರ್ಯರಾದ ಶ್ರೇಷ್ಠಜ್ಞಾನಿಗಳು ಪುರುಷೋತ್ತಮನನ್ನು ತಮ್ಮ ತಮ್ಮ ಆತ್ಮನಲ್ಲಿ ಕಾಣುವರೇ ಹೊರತು ಕೇವಲ ವಿಗ್ರಹಗಳಲ್ಲೆಂದಿಗೂ ಕಾಣುವುದಿಲ್ಲ.

## ೨೨. ಪ್ರಪಂಚವೂ ಮತ್ತು ಪೂರ್ಣಜ್ಞಾನಿಗಳಾದ ಮಹಾತ್ಮರೂ

ಇಷ್ಟಾದರೂ ಬಹು ಶೋಚನೀಯ ರೀತಿಯಲ್ಲಿ ಅನೇಕ ಭಾರತೀಯರು ಈ ಅಂತಸ್ತು ವಿಚಾರ (graduated scale) ವನ್ನು ಮುಖ್ಯವಾಗಿಟ್ಟುಕೊಳ್ಳದೆ ಪರಮಾತ್ಮನ ವಿಷಯದಲ್ಲಿರುವ ಲೋಕಗರ್ಹಿತವಾದ ಅಸಮ್ಮತಾಭಿಪ್ರಾಯಗಳನ್ನೇ ಇನ್ನೂ ನಂಬುತ್ತಿದಾರೆ. ವಿದ್ವಾಂಸರು ಸಾಮಾನ್ಯ ಜನರಲ್ಲಿರುವ ಭಾವನೆಗಳನ್ನು ಅಚಿಂತ್ಯ ವಸ್ತುವಿನ ಸಾಧಾರಣವೂ ಅಸಮಗ್ರವೂ ಆದ ವರ್ಣನೆಗಳೆಂದು ಮನ್ನಿಸುತ್ತಾರೆ. ಆದರೆ ಸಾಮಾನ್ಯ ಜನರಾದರೋ ಇವುಗಳನ್ನು ನ್ಯಾಯವಾದವುಗಳೆಂದೂ ಶಾಸ್ತ್ರೋಕ್ತವಾದವುಗಳೆಂದೂ ನಂಬುತ್ತಾರೆ. ಬುದ್ಧಿಯುಳ್ಳ ಭಾರತೀ

---

* ಅಪ್ಸುದೇವಾ ಮನುಷ್ಯಾಣಾಂ ದಿವಿ ದೇವಮನೀಷಿಣಾಂ ।
ಬಾಲಾನಾಂ ಕಾಷ್ಠಲೋಷ್ಠೇಷು ಬುದ್ಧಸ್ಯಾತ್ಮನಿ ದೇವತಾ ॥

† ಅಗ್ನೌ ಕ್ರಿಯಾವತೋ ದೇವೋ, ಹೃದಿದೇವೋಮನೀಷಿಣಾಂ।
ಪ್ರತಿಮಾಸ್ವಲ್ಪಬುದ್ಧೀನಾಂ ಜ್ಞಾನಿನಾಂ ಸರ್ವತಃ ಶಿವಃ ॥

ಯರು ದೇವತಾವಿಷಯಗಳಲ್ಲಿರುವ ತಪ್ಪು ತಿಳುವಳಿಕೆಯಿಂದ ಪರಮಾತ್ಮನ ಶಾಂತಿಯಲ್ಲಿ ಲೀನವಾಗಲು ಪ್ರಯತ್ನಿಸುತ್ತಾರೆ, ಆದರೆ ಸಾಮಾನ್ಯ ಜನರು ಇನ್ನು ಆಕಾಶದ ಕಡೆಯೇ ತಲೆಯನ್ನೆತ್ತಿ ನೋಡುತ್ತಾ ನಿಂತಿದಾರೆ. ಹೀಗೆ ಮತಸಹನೆಯಿಂದಿರಬೇಕೆಂಬ ಆಶೆಯಿಂದ ಬಹುವಾಗಿ ಮೂಢ ಆಚಾರಗಳನ್ನೂ ನಡೆವಳಿಕೆಗಳನ್ನೂ ಕಾಪಾಡಿಕೊಂಡು ಬಂದಿದ್ದೇವೆ. ಮತವಿಷಯದಲ್ಲಿ ಶ್ರೇಷ್ಠಜ್ಞಾನವನ್ನು ಪ್ರತ್ಯಕ್ಷದಿಂದ ಸ್ವಾನುಭವ ಪಡೆದಿರುವ ಜನರೂ ಕೂಡ ತಮ್ಮ ಅಭಿಪ್ರಾಯಗಳಿಗೆ ವ್ಯತಿರಿಕ್ತವಾದ ಆಚಾರಗಳನ್ನು ನಡೆಸುತ್ತಿರುವುದಲ್ಲದೆ, ಹೆಚ್ಚು ಸಂಸ್ಕಾರವಿಲ್ಲದ ಜನರನ್ನು ಕಂಡರೆ ವಿದ್ವಾಂಸರು ಅನುರಾಗಹೀನರಾಗಬಾರದೆಂಬ ಶ್ಲಾಘ್ಯಭಾವದಿಂದ ತಪ್ಪು ದಾರಿಯಲ್ಲಿ ಹೇಯರೀತಿಯಿಂದ ಮೆರೆಯುತ್ತಿರುವರು. ಇದರಿಂದಲೇ ಈಗಿನ ಕಾಲದಲ್ಲಿ ಸಾಮಾನ್ಯ ಜನರ ಅಭಿಪ್ರಾಯಗಳನ್ನು ಮೇಲಕ್ಕೆತ್ತಿ ಭಾರತೀಯರನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿಯುವಂತೆ ಯಾರೂ ಕೂಡ ಮುಂದೆ ಬಂದು ನಿಂತು ನಿಜವಾದ ಶ್ರದ್ಧೆಯಿಂದಲೂ ಸಮಾಲೋಚನೆಯಿಂದಲೂ ಸಮಾಜ ವ್ಯವಸ್ಥೆಯನ್ನು ಮಾಡಲು ಹೆಚ್ಚು ಪ್ರಯತ್ನ ಪಟ್ಟಿಲ್ಲ. ಆದುದರಿಂದ ನಮ್ಮ ಮುಖ್ಯಸ್ಥರು ಪರಮಾತ್ಮನ ವಿಷಯದಲ್ಲಿ ಶ್ರೇಷ್ಠ ಭಾವಗಳನ್ನು ಎತ್ತಿಹಿಡಿದು ಈಗಲೂ ಅಲ್ಲಲ್ಲಿ ಕಂಡುಬರುವ ನಿಜವಾದ ಆಸ್ತಿಕರೂ ಮತ್ತು ಉಪಾಸಕರೊಡನೆ ಕಲೆತು ಜನರಲ್ಲಿ ಭಾವಶುದ್ಧಿಯುಂಟಾಗುವಂತೆ ಧೈರ್ಯದಿಂದಲೂ, ತಪ್ಪದೆಯೂ, ಅನವರತವೂ ಕೆಲಸ ಮಾಡುತ್ತಿರಬೇಕು. ದೇಶದಲ್ಲೆಲ್ಲಾ ಹರಡಿರುವ ಮಠ ದೇವಸ್ಥಾನ ಛತ್ರಗಳಲ್ಲಿ ಕೇವಲ ಪ್ರಾರ್ಥನೆ ಪೂಜೆಗಳನ್ನು ಮಾತ್ರ ಮಾಡುತ್ತಿರದೆ, ಇವುಗಳನ್ನು ಭಾರತೀಯರ ಶ್ರೇಯೋಭಿವೃದ್ಧಿಗಾಗಿ ಪಾಠ ಪ್ರವಚನ ಶಾಲೆಗಳನ್ನಾಗಿ ಉಪಯೋಗಿಸಿ ಆಚಂದ್ರಾರ್ಕವಾದ ಮಹತ್ಕೀರ್ತಿ ಪುಣ್ಯಗಳನ್ನು ಪಡೆಯುವುದು ಬಹು ಮುಖ್ಯವೆಂದು ಕಾಣುತ್ತದೆ.

ಇತಿ ಪ್ರಥಮೋಪನ್ಯಾಸಃ

## ಉ ಪ ನ್ಯಾ ಸ ೨.

# ಮತವಿವಾದಗಳೂ ಮತ್ತು ಹಿಂದೂಜನರ ಮತಸಹನೆಯೂ

## ಯೋಗಾನುಭವವೂ ಮತ್ತು ಮತಸಹನೆಯೂ

### ೧. ಯೋಗಾನುಭವವು

ಯೋಗಾಭ್ಯಾಸಿಗಳು (students of mysticism) ಯೋಗಾನುಭವಕ್ಕಿರುವ ಸರ್ವವ್ಯಾಪಕತೆ (universality) ಯನ್ನು ಬಹುವಾಗಿ ಪ್ರೀತಿಸುತ್ತ ಇದರ ವರ್ಣನಾಪ್ರಭೇದಗಳು ಅಷ್ಟೊಂದು ಸಾಮಾನ್ಯ (unimportant) ವಾಗಿ ಕಾಣದಿದ್ದರೂ ಈ ಮುಖ್ಯಗುಣವನ್ನೇನೋ ಬಹಳವಾಗಿ ಪ್ರೀತಿಸುತ್ತಾರೆ. ಆದುದರಿಂದಲೇ ಹಿಂದೂ ಕ್ರೈಸ್ತ ಮುಸಲ್ಮಾನ ಯೋಗಿಗಳು ಯಾರೇ ಆಗಿರಲಿ ಇವರೆಲ್ಲರಲ್ಲಿಯೂ ಒಂದೇ ಭ್ರಾತೃವರ್ಗಕ್ಕೆ ಸೇರಿದವರಲ್ಲಿ ಚೆನ್ನಾಗಿ ಕಾಣುವ ಒಂದೇ ಮನೆತನದ ಸಾಮಾನ್ಯ ಗುಣಗಳು ವಿಶದವಾಗಿ ಕಾಣುತ್ತವೆ. ಈ ವಿಷಯದಲ್ಲಿ ನಿಮ್ಮ ಶ್ರೀಮತಿ ಯೆವೆಲಿನ್ ಅಂಡರ್‌ಹಿಲ್ಲರು ಹೀಗೆ ಬರೆಯುತ್ತಾರೆ :— 'ಪೂರ್ವಪಶ್ಚಿಮ ದೇಶಗಳ ಮತಶಾಸ್ತ್ರಕ್ಕೆ ಸೇರಿದ ಯೋಗಶಾಸ್ತ್ರಗಳು (Mystical theology) ಬಹು ಭೇದಗಳಿಂದ ಕೂಡಿದ್ದರೂ ನಮ್ಮ ಪರಮಧ್ಯೇಯವನ್ನು ಜೀವಾತ್ಮನಿಗೆ ಪ್ರದರ್ಶಿಸುವ ಧ್ಯೇಯಗಳು ಬಹು ಭಿನ್ನವಾಗಿದ್ದರೂ ಭಕ್ತರ ಅನುಭವದಲ್ಲಿ ಈ ವಿವಾದಗಳೆಲ್ಲವೂ ದಾಟಲ್ಪಟ್ಟಿವೆ. ಪರಮಾತ್ಮನಲ್ಲಿರುವ ನಿಜವಾದ ಭಕ್ತಿಯು ಅಥವಾ ಮೋಕ್ಷಾಸಕ್ತಿಯು ಸಿದ್ಧಿಸಿದಮೇಲೆ ಭಿನ್ನತೆಗಳಿಗೆ ಯಾವ ಅವಕಾಶವೂ ಇಲ್ಲ. ಏಕೆಂದರೆ ಜೀವಾತ್ಮವು ಭಿನ್ನಪ್ರಪಂಚವನ್ನು ದಾಟಿ ನಿತ್ಯವಸ್ತುವಿನಲ್ಲಿ ಮಗ್ನವಾಗಿದೆ.' (ಮಹರ್ಷಿ ದೇವೇಂದ್ರನಾಥ ಠಾಕೂರರ ಆತ್ಮ ಚರಿತ್ರೆಯ ಉಪೋದ್ಘಾತ, ಪು. 40.) ಇದರಿಂದ ನಿಜವಾದ ಮತಾನುಭವಕ್ಕಿರುವ ಸಹಜ ಗುಣಗಳಿಂದ ನೋಡಿದರೆ ನಿಮ್ಮ ಕ್ರೈಸ್ತ ಮತದ ಭಕ್ತಾಗ್ರೇಸರರಾದ ಜಾನ್ ಮತ್ತು ಪಾಲರು ನಿಮ್ಮ ಪ್ರಸಿದ್ಧವೇದಾಂತಿಗಳೂ ಯೋಗಿ

ವರ್ಯರೂ ಆದ ಪ್ಲೋಟೈನಸ್ ಮತ್ತು ನಮ್ಮ ಪ್ರಸಿದ್ಧ ವೇದಾಂತಿಗಳಾದ ಶಂಕರರಿಗಿಂತಲೂ ಯಾವ ಹೆಚ್ಚಿನ ಗುಣವನ್ನೂ ಹೊಂದಿಲ್ಲ. ಆದುದರಿಂದಲೇ ಯವೆಲಿನ್ ಅಂಡರ್‌ಹಿಲ್ಲರು ಹೇಳುವಂತೆ, ಬ್ರಾಹ್ಮಣ, ಸೂಫಿ, ಕ್ರೈಸ್ತ ಯೋಗಿಶ್ರೇಷ್ಠರಲ್ಲಿ ಹೆಚ್ಚು ಭೇದಗಳು ಯಾವುವಾದರೂ ಇರುವುವೆಂದು ಯಾರೂ ಧೈರ್ಯವಾಗಿ ಹೇಳುವುದಕ್ಕಾಗುವುದಿಲ್ಲ.* ಇದೇ ಅಭಿಪ್ರಾಯವನ್ನು ಯೋಗಶಾಸ್ತ್ರದ ಪ್ರಚಂಡ ಖಂಡನಕಾರರಾದ ನಿಮ್ಮ ಹರ್ಮನ್ ಎಂಬ ಜರ್ಮನಿಯ ಮತಶಾಸ್ತ್ರಜ್ಞರು ತಮ್ಮ ಸ್ವಂತ ಮಾರ್ಗದಿಂದಲೇ ದೃಢಪಡಿಸುತ್ತಾರೆ. ಕ್ರೈಸ್ತ ಯೋಗಿಗಳನ್ನು ಕುರಿತು ಇವರು ಹೀಗೆ ಹೇಳುತ್ತಾರೆ. "ಇವರುಗಳಲ್ಲಿ ಮತ ವಿಷಯವಾದ ರಾಗಾದಿ ಗುಣಗಳು ಹೆಚ್ಚಾಗಿ ತಲೆದೋರಿದಾಗ ಇವರುಗಳು ಕ್ರೈಸ್ತ†ನನ್ನು ಬಿಟ್ಟು ಕ್ರೈಸ್ತೇತರರಾದ ಎಲ್ಲಾ ಕಾಲದ ಯೋಗಿಗಳೊಡನೆ ಏಕರೀತಿಯಲ್ಲಿ ಕಲೆತು ಸಂತೋಷದಿಂದ ಸಂಚರಿಸುತ್ತಾರೆ.‡ ಮತ್ತು "ಕ್ರೈಸ್ತಮತದಲ್ಲಿ ಭಕ್ತಶ್ರೇಷ್ಠರಾದ ನಿಮ್ಮ ಆಗಸ್ಟೈನರು ಕ್ರೈಸ್ತಮತದ ತ್ರಿಮೂರ್ತಿಗಳಮೇಲೆ ಹದಿನೈದು ಅಧ್ಯಾಯಗಳುಳ್ಳ ಗ್ರಂಥವೊಂದನ್ನು ಬರೆದರು. ಆದರೆ ಆಸ್ಟಿಯಾ (Ostia) ಪಟ್ಟಣದಲ್ಲಿದ್ದ ತಮ್ಮ ಮನೆಯ ಕಿಟಕಿಯ ಹತ್ತಿರ ತಮ್ಮ ತಾಯಿಯೊಡನೆ ನಿಂತು ತಮಗೆ ಪರಮಾತ್ಮನ ಸಾನ್ನಿಧ್ಯದಲ್ಲಿರುವುದರಿಂದುಂಟಾದ ಅನುಭವವಿಶೇಷವನ್ನು ವರ್ಣಿಸಬೇಕೆಂದು ಪ್ರಯತ್ನಪಟ್ಟಾಗ ಇವರು ಆ ತ್ರಿಮೂರ್ತಿಗಳನ್ನು ಕುರಿತು ಸ್ವಲ್ಪವೂ ಮಾತಾಡದೆ, ಯಾವ ಪರಮಾತ್ಮನ ಚರಣಾರವಿಂದದಲ್ಲಿ ಜೀವಾತ್ಮನು ತನ್ನ ಬಂಧನಗಳಿಂದ ನಿರಂತರ ಮುಕ್ತನಾಗಿ ಶಾಶ್ವತಸುಖಿಯಾಗಿರುವನೋ, ಎಲ್ಲಾ ವಾಕ್ಸೂಚನೆಗಳಿಗೂ ಅತೀತನಾಗಿ ಪ್ರಕಾಶಿಸುತ್ತ ಸರ್ವಲೋಕಕ್ಕೂ ಪೂಜ್ಯನಾಗಿರುವನೋ ಆ ಏಕದೇವನನ್ನೇ ಕುರಿತು ಉಪದೇಶಿಸಿದರು." §

* ಯೋಗಶಾಸ್ತ್ರಸಾರ (Essentials of Mysticism).

† ಕೇವಲ ಕ್ರೈಸ್ತಮತದ ಕಟ್ಟುಬಂದುಗಳು (Trans.)

‡ ಕ್ರೈಸ್ತಜನರ ಪರಮಾತ್ಮಸಂಸರ್ಗ (The Communion of the Christian with God).

§ ಅದೇ ಗ್ರಂಥ, ಪುಟ 29.

## ೨ ಜೀವನ ವಿಷಯದಲ್ಲಿ ಶ್ರೇಷ್ಠದೃಷ್ಟಿಯೇ ಇದರ ಲಕ್ಷಣವು

ನಿಜವಾದ ತತ್ತ್ವದರ್ಶನವುಳ್ಳ ಜ್ಞಾನಿಯು ತತ್ತ್ವಾನ್ವೇಷಣವನ್ನು ಗುಡಿ, ಗೋಪುರ, (Tabernacle, ಮಂಟಪ), ಮಸೀದಿ, ದೇವಾಲಯ (church) ಗಳಲ್ಲಿ ಯಾವುದರಲ್ಲಿಯೇ ಆಗಲಿ ಸ್ವಪ್ನಾವಸ್ಥೆಯಿಂದ ಸಿದ್ಧಿಸಿಕೊಂಡಿದ್ದ (dreamed his way) ನೆಂದರೆಯಾವ ಕೊರತೆಯೂ ಇಲ್ಲ. ಏಕೆಂದರೆ ಪರಮಾತ್ಮನ ಕೋಟಿಸೂರ್ಯಪ್ರಭೆಯನ್ನು ನೋಡಿರುವ ಜನರು ಬಾಹ್ಯರೂಪಗಳಿಗೆ ಉತ್ಪ್ರೇಕ್ಷೆಯಿಂದ ಬಂದಿರುವ ಹೆಚ್ಚು ಪ್ರಾಮುಖ್ಯತೆಯನ್ನು ಸ್ವಲ್ಪವೂ ಒಪ್ಪುವುದಿಲ್ಲ. ಮತ್ತಿವರು ಪಂಡಿತರ ಸಿದ್ಧಾಂತಗಳು ಲೋಕವನ್ನೆಲ್ಲಾ ಭಿನ್ನಭಿನ್ನ ಮಾಡುವಂತೆಯೇ, ಸರ್ವ ಉಪಾಸಕರನ್ನೂ ಒಟ್ಟುಗೂಡಿಸುವ ಭಾಷೆಯೊಂದರಲ್ಲಿ ಮಾತಾಡುತ್ತಾರೆ. ನಿಜವಾದ ಜ್ಞಾನಿಗಳು ಸರ್ವಲೋಕವನ್ನೂ ಸಾಮಾನ್ಯದೃಷ್ಟಿಯಿಂದ ನೋಡುವ ಶಕ್ತಿಯಿಂದಲೂ, ಸಕಲೈಶ್ವರ್ಯಯುಕ್ತವಾದ ಮತ್ತು ಭಿನ್ನತಾವಿಶಿಷ್ಟವಾದ ಮನುಷ್ಯಸ್ವಭಾವದಲ್ಲಿ ಮುಖ್ಯವಾಗಿರುವ ಆಶಾ (impulses) ರಾಗಗಳನ್ನು ತಿಳಿಯುವ ಸೂಕ್ಷ್ಮದೃಷ್ಟಿಯೊಂದರಿಂದಲೂ ಕೂಡಿದಾರೆ. ಇದರಿಂದಲೇ ಪರಮಾತ್ಮನಲ್ಲಿ ದೃಢವಾಗಿ ನೆಟ್ಟ ಮನಸ್ಸುಳ್ಳವರು ಯಾವ ಜೀವನಕ್ಕೆ ಸಂಬಂಧಪಟ್ಟ ವರ್ಣನೆಯನ್ನೂ ಸಂಪೂರ್ಣ ತಪ್ಪೆಂದು ಧಿಕ್ಕರಿಸಲಾರರು. ಏಕೆಂದರೆ ಇವರು ಪರಮಾತ್ಮಸ್ವರೂಪದ ಅನಂತತೆಯನ್ನೂ, ಅದರ ರೂಪಗಳಿಗೆ ಸಾಧ್ಯವಾಗಿರುವ ಅನಂತಸಂಖ್ಯೆಯನ್ನೂ ಚೆನ್ನಾಗಿ ತಿಳಿದಿದ್ದಾರೆ.

## ೩. ಆದರೆ ಇದು ಬುದ್ಧಿಗತೀತವಾಗಿದೆ; ಮತ್ತು ಇದಕ್ಕಾಗಿಯೇ ನಮ್ಮ ವರ್ಣನೆಗಳು ಭಿನ್ನವಾಗಿವೆ

ಮತವಿಷಯದಲ್ಲಿರುವ ಗೂಢತತ್ತ್ವಗಳ ಕೇವಲ ಬುದ್ಧಿಯುಕ್ತವಾದ ವರ್ಣನೆಗಳು ಯಾವಾಗಲೂ ಅಸಮಗ್ರವಾದವೂ ಮತ್ತು ಸೂಚನಾಗುಣವುಳ್ಳವುಗಳೇ ಸರಿ. ಪ್ಲೇಟೊಮಹಾಶಯರು ಹೇಳುವಂತೆ ಪರಮಾತ್ಮನ ವಿಷಯದಲ್ಲಿರುವ ನಮ್ಮ ವರ್ಣನೆಗಳೆಲ್ಲವೂ ಕೇವಲ ನಂಬ

ಬಹುದಾದ ಕಥೆಗಳೇ ಅಲ್ಲದೆ ಎಲ್ಲವೂ ಏಕರೀತಿಯಲ್ಲಿ ಪುರಾಣವಿಷಯ (legendary) ಗಳೇ ಸರಿ. ಏಕೆಂದರೆ ಇವುಗಳಲ್ಲಿ ಒಂದಾದರೂ ಸಮಗ್ರವಾದುದಾಗಲೀ ಹೆಚ್ಚುಪ್ರಾಮಾಣ್ಯವುಳ್ಳುದುದಾಗಲೀ ಇಲ್ಲ. ಮತ್ತೆ ನಾವುಗಳಾದರೊ ಸಮುದ್ರದ ದಡದಲ್ಲಿ ನಿಂತು ಆ ಸಮುದ್ರದ ನೀರಿನಿಂದ ನಮ್ಮನಮ್ಮ ಕಪ್ಪೆಚಿಪ್ಪುಗಳನ್ನು ತುಂಬಿಕೊಳ್ಳುವಂತಿರುವ ಸಣ್ಣಸಣ್ಣ ಮಕ್ಕಳೇ ಸರಿ. ಆದರೂ ನಮ್ಮ ಸಣ್ಣ ಚಿಪ್ಪುಗಳಿಂದ ಸಮುದ್ರದ ನೀರನ್ನು ಎತ್ತಿ ಇಂಗಿಸಲಾಗದಿದ್ದರೂ ನಮ್ಮ ಚಿಪ್ಪುಗಳಲ್ಲಿ ತುಂಬಿಕೊಳ್ಳಬೇಕೆಂದು ತೆಗೆದುಕೊಳ್ಳುವ ಪ್ರತಿಯೊಂದು ನೀರಿನ ಹನಿಯೂ ಆ ಸಮುದ್ರದ ನಿಜವಾದ ಭಾಗವೇ ಆಗಿದೆ. ನಮ್ಮ ಜ್ಞಾನಯುಕ್ತವಾದ ವರ್ಣನೆಗಳು ಭಿನ್ನವಾಗುವುದಕ್ಕೆ ಮುಖ್ಯಕಾರಣವೇನೆಂದರೆ ಇವುಗಳು ಸರ್ವಲೋಕಕ್ಕೂ ಮುಖ್ಯವಾದ ಏಕವಸ್ತುವಿನ ಬೇರೆಬೇರೆ ವರ್ಣಸ್ಥಾನಗಳ ವಿಶೇಷ ಗುಣಗಳನ್ನು ವ್ಯಕ್ತಪಡಿಸುತ್ತವೆ. ಉಪನಿಷತ್ಕಾಲದ ಋಷಿಗಳಿಂದ ಮೊದಲುಮಾಡಿ ನಮ್ಮ ಗಾಂಧಿ ಠಾಕೂರ್ ಮೊದಲಾದವರ ಕಾಲದವರೆವಿಗೂ ನಮ್ಮ ದೇಶೀಯರು ಸತ್ಯವು ವಿವಿಧ ವರ್ಣವುಳ್ಳ ವಸ್ತ್ರಧಾರಿಯೆಂದೂ, ವಿವಿಧಭಾಷೆಗಳಲ್ಲಿ ಮಾತಾಡುತ್ತಿದೆಯೆಂದೂ ಒಪ್ಪಿಕೊಂಡಿದಾರೆ. ಇತರ ದೇಶೀಯ ಯೋಗಿಗಳೂ ಕೂಡ ಇದನ್ನು ಅನುಮೋದಿಸುತ್ತಾರೆ. ನಿಮ್ಮ ದೇಶದ ಜೋಸೆಫ್ ಜ್ಞಾನಿಗಳು ಹೀಗೆ ಹೇಳುತ್ತಾರೆ. "ವನಚರಿಗಳಾದ ಪಕ್ಷಿಗಳನ್ನು ನೋಡಿ. ಅವೂಕೂಡ ಪರಮಾತ್ಮನನ್ನು ತಮ್ಮತಮ್ಮ ರೀತಿಯಲ್ಲಿ ವಿವಿಧಧ್ವನಿಯಿಂದಲೂ ರಾಗದಿಂದಲೂ ಸ್ತುತಿಸುತ್ತೇವೆ. ಆದರೆ ಆ ಪರಮಾತ್ಮನೇನಾದರೂ ಈ ಭಿನ್ನತೆಯಿಂದ ಕೋಪಹೊಂದಿ ಈ ಅಪಸ್ವರಗಳನ್ನು ನಿಲ್ಲಿಸಬೇಕೆಂದು ಎಂದಾದರೂ ಇಚ್ಛಿಸುತ್ತಾನೆಯೇ ? ಇಲ್ಲ. ಮತ್ತೆ ಸಕಲ ಜೀವನಕೋಟಿಯೂ ಅನಂತಮೂರ್ತಿಯಾದ ಪರಮಾತ್ಮನಿಗೆ ಬಹು ಪ್ರಿಯಕರವಾಗಿರುವುದು." ಇದರಂತೆಯೇ ಈ ಮುಸಲ್ಮಾನ ಸೂಫಿಯವರ ವಾಕ್ಯವನ್ನು ಕೇಂಬ್ರಿಡ್ಜ್ ಪಂಡಿತರಾದ ಬ್ರೌನ್‌ರವರ ಭಾಷಾಂತರದಲ್ಲಿ ಕಿ ವಿ ಗೊ ಟ್ಟು ಕೇಳಿ : "ದೊಡ್ಡಪಾತ್ರೆಯಾಗಲೀ ಚಿಕ್ಕಪಾತ್ರೆಯಾಗಲೀ, ದಪ್ಪವಾಗಿರಲಿ ಸಣ್ಣನಾಗಿರಲಿ ; ಸುಂದರವಾಗಿರಲಿ ಇಲ್ಲದಿರಲಿ ; ಕುಂಬಾರನಿವುಗಳನ್ನು

ಚೆನ್ನಾಗಿ ಮಾಡಿರಲಿ ಇಲ್ಲವೇ ಕೆಡಿಸಿರಲಿ; ಹೇಗೆ ಮಾಡಿದ್ದರೂ ಸರಿಯೆ, ಪಾತ್ರೆಯೆಂದಮೇಲೆ ಎಲ್ಲವೂ ದ್ರಾಕ್ಷಾರಸವನ್ನು ಇಡುವುದಕ್ಕೆ ತಾನೇ ಮಾಡಲ್ಪಟ್ಟಿವೆ ? ಆದುದರಿಂದ ಇವುಗಳೆಲ್ಲಕ್ಕೂ ತಕ್ಕ ಬೆಲೆಯನ್ನು ಕೊಡುವ ದ್ರಾಕ್ಷಾರಸವು ಒಂದೇ ಆಗಿರುವಲ್ಲಿ ಈ ಪಾತ್ರೆ ಬೇಕೆಂದಾಗಲೀ ಆ ಪಾತ್ರೆ ಬೇಕೆಂದಾಗಲೀ ನಾವೆಂದಾದರೂ ಕೇಳಲಾದೀತೆ ?"

## ೪. ಇದಕ್ಕಾಗಿಯೇ ಹಿಂದುಗಳು ಈ ಭೇದಗಳನ್ನು ಸಹನೆಯಿಂದ ಕಾಣುತ್ತಾರೆ

ಈ ಮಹತ್ತತ್ತ್ವವನ್ನು ಚೆನ್ನಾಗಿ ಮನಗೊಂಡ ಹಿಂದೂಧರ್ಮವು, ಬದಲಾವಣೆಯಿಲ್ಲದ ಸಿದ್ಧಾಂತ ಒಂದರಲ್ಲಿ ನೆಟ್ಟ ಅವಿವೇಕಯುಕ್ತವಾದ ಅತಿ ಶ್ರದ್ಧೆ (fanatic faith) ಯನ್ನು ಬಿಟ್ಟು ಸರ್ವವ್ಯಾಪಿಯಾದ ದಯಾ ಗುಣವನ್ನು ಅಭಿವೃದ್ಧಿಪಡಿಸಿಕೊಂಡಿತು. ಇದರಿಂದ ಅನಾಗರಿಕ ಜನರ ಅನೇಕ ದೇವತೆಗಳನ್ನು ಮತ್ತು ತನ್ನ ಆರ್ಯಸಂಪ್ರದಾಯಕ್ಕೆ ಸೇರದೆ, ಬಾಹ್ಯವಿಚಾರಗಳಿಂದ ನಡೆದುಬಂದಿದ್ದ ವಿಷಯಗಳನ್ನೂ ಒಪ್ಪಿದ್ದಲ್ಲದೆ ಅವುಗಳೆಲ್ಲವನ್ನೂ ಸರಿಯೆಂದು ಸ್ಥಾಪಿಸಿತು. ಹೀಗೆಯೇ ಪರಮಾತ್ಮ ನಲ್ಲಿ ನಂಬಿಕೆಯುಳ್ಳ ಜನರೆಲ್ಲರನ್ನೂ ಒಂದು ದೊಡ್ಡ ಗುಂಪಿನಲ್ಲಿ ಸೇರಿ ಸಿತು. ಇದರಿಂದ ಎಷ್ಟೋ ವಿವಿಧ ನಂಬಿಕೆಗಳನ್ನುಳ್ಳ ಅನೇಕ ಜಾತಿ ಗಳು ಹಿಂದೂ ಜನಾಂಗದಲ್ಲಿ ಇನ್ನೂ ನೆಲೆಯಾಗಿ ನಿಂತಿವೆ. ಆದರೆ, ಬೇರೆ ಅನೇಕ ಧರ್ಮಗಳಲ್ಲಿ ವಿಶೇಷವಾಗಿ ಕಂಡುಬರುವ ಪರಮತಖಂಡ ನೆಯು ಹಿಂದೂಮತದಲ್ಲಿ ಇಲ್ಲದಿರುವುದನ್ನು ನೋಡಿದರೆ ಆಶ್ಚರ್ಯವೇ ಸರಿ.

## ೫. ಮತ್ತು ಯಾವ ದುರಭಿಮಾನವನ್ನೂ ಹೊಂದಿಲ್ಲ

ಸೆಮೆಟಿಕ್ ಜನರ ಮತಗಳಲ್ಲಿ ಇರುವ ದುಷ್ಟಭಾವವು ನಮ್ಮ ಹಿಂದೂ ಮತದಲ್ಲಿ ಸ್ವಲ್ಪವೂ ಇಲ್ಲವೆಂದು ಹೇಳಬಹುದು, ಅಂದರೆ ಮೋ ಕ್ಷಪ್ರಾಪ್ತಿಗೆ ಇಂಥಾ ಕ್ಲುಪ್ತವಾದ ಮತದ ತತ್ತ್ವಶಾಸ್ತ್ರವನ್ನು ನಂಬಬೇ ಕೆಂಬ ಆವಶ್ಯಕತೆಯೂ, ಹಾಗೆ ನಂಬದಿರುವುದು ಮಹಾಪಾಪವೊಂದೇ

ಅಲ್ಲದೆ ಶಾಶ್ವತ ನರಕಯಾತನೆಯನ್ನು ಹೊಂದತಕ್ಕದ್ದು ಎಂಬ ಭಾವನೆಯು ನಮ್ಮಲ್ಲಿ ಇಲ್ಲ. ಇದರಿಂದ ನಮ್ಮ ಮತಗ್ರಂಥಗಳಲ್ಲಿ ಅಲ್ಲಲ್ಲಿ ಮತಸಂಬಂಧಪಟ್ಟ ದುರಭಿಮಾನ*ದಿಂದ ಉಂಟಾದ ಕ್ರೂರಕರ್ಮಾಚರಣೆಯು ಕಂಡುಬರುತ್ತದೆ, ಮತ್ತೆ ಹೀಗಾದುದು ಒಂದೇ ಪಂಗಡದಲ್ಲಿ ಸೇರುವಂತೆ ಒಟ್ಟಿಗೆ ತರಲ್ಪಟ್ಟ ಬೇರೆಬೇರೆ ಪಂಗಡಗಳು ಪರಸ್ಪರವಾಗಿ ಕಲಹಮಾಡುತ್ತಿದ್ದುದರಿಂದ ಉಂಟಾದ ಪ್ರಥಮ ಫಲವೇ ಎಂದು ಗೊತ್ತಾಗುತ್ತದೆ ; ಆದರೆ ಹಿಂದೂಧರ್ಮದ ಮುಖ್ಯಗುಣವೇನೆಂದರೆ ಇತರ ಮತಗಳನ್ನು ಪ್ರೀತಿಗೌರವದಿಂದ ಕಾಣುವುದೇ ಆಗಿದೆ. ವಿಷ್ಣುಭಕ್ತನೊಬ್ಬನು ಈಶ್ವರಭಕ್ತನೊಬ್ಬನಲ್ಲಿ ಕೋಪದಿಂದ ಕೂಡಿ ತನ್ನ ದೇವತೆಯಾದ ವಿಷ್ಣುವಿನ ವಿಗ್ರಹದ ಮುಂದೆ ನಮಸ್ಕರಿಸಲು, ಆ ವಿಗ್ರಹದ ಮುಖವು ಎರಡು ಭಾಗವಾಗಿ ಒಂದು ಕಡೆ ಈಶ್ವರನೂ ಇನ್ನೊಂದುಕಡೆ ವಿಷ್ಣುವೂ ಆಗಿತೋರಿದ್ದಲ್ಲದೆ ಆ ಎರಡು ಮೂರ್ತಿಗಳೂ ಏಕಮುಖದಿಂದ ಕೂಡಿದಂತೆ ಆ ಮೂಢಭಕ್ತನ ಕಡೆ ಮಂದಹಾಸದಿಂದ ನೋಡಿ ವಿಷ್ಣು ಈಶ್ವರರಾದ ತಾವಿಬ್ಬರೂ ನಿಜವಾಗಿ ನೋಡಿದಲ್ಲಿ ಒಬ್ಬನೇ ಆ ಪರಮಪುರುಷನೆಂದು ಹೇಳಿದರು. ಈ ಕಥೆಯು ಎಷ್ಟು ಅರ್ಥಯುಕ್ತವಾದುದೆಂದು ನಾನು ಹೆಚ್ಚು ಹೇಳಬೇಕಾಗಿಲ್ಲ.

### ೬. ಆದರೂ ಪೂರ್ವದಲ್ಲಿ ನಾವೀಧರ್ಮವನ್ನು ಸಾರ್ವತ್ರಿಕವಾಗಿ ಹರಡಿದ್ದೆವು (e.g., ಪಾಶ್ಚಾತ್ಯ ಸ್ತೋಯಿಕ್ಸ್)

ಒಂದು ವಿಧವಲ್ಲಿ ನೋಡಿದರೆ ಇಂಥಾ ಹಿಂದೂಮತವು ಲೋಕದಲ್ಲೆಲ್ಲಾ ಮತಪ್ರಚಾರಕ ಧರ್ಮಗಳಲ್ಲಿ ಮೇಲ್ಪಂಕ್ತಿ ಹಾಕಿಕೊಟ್ಟಿರುವುದೆಂದೇ ಹೇಳಬಹುದು. ಆದರೆ ಇದರ ಪ್ರಚಾರಕಕೆಲಸವು ಇತರ ಪ್ರಚಾರಕರಲ್ಲಿ ಕಂಡುಬರುವ ದುಷ್ಟಗುಣಗಳಿಂದ ಕೂಡಿಲ್ಲ. ಆದುದರಿಂದಲೇ ಈ ಧರ್ಮವು ಲೋಕದ ಜನರನ್ನೆಲ್ಲಾ ತನ್ನದೊಂದೇ ಮತಕ್ಕೆ ಸೇರಿಸಿಕೊಳ್ಳಬೇಕೆಂಬ ಕೆಲಸವು ತನ್ನ ಕರ್ತವ್ಯವೆಂದು ಭಾವಿಸಲಿಲ್ಲ. ಏಕೆಂದರೆ

---

* Sectarian fanaticism, ಅತಿಶ್ರದ್ಧೆ

ಮುಖ್ಯವಾದುದು ನಡತೆಯೇ ಹೊರತು ನಂಬಿಕೆಯಲ್ಲ. ಬೇರೆಬೇರೆ ದೇವತೆಗಳ ಉಪಾಸಕರನ್ನೂ, ಬೇರೆಬೇರೆ ಕರ್ಮಗಳ ಅನುಯಾಯಿಗಳನ್ನೂ, ಹಿಂದೂ ಧರ್ಮವು ತನ್ನ ಜನಾಂಗದಲ್ಲಿ ಸೇರಿಸಿಕೊಂಡಿದೆ. ಭಗವದ್ಗೀತೆಯಲ್ಲಿ ಹೇಳಿರುವಂತೆ ಕೇವಲ ಸ್ತ್ರೀ ಶೂದ್ರ ಅಂತ್ಯಜರನ್ನೇ ಅಲ್ಲದೆ ಕಿರಾತ ಹೂಣಾದಿ* ಪಾಪಯೋನಿಜರನ್ನು ಕೂಡ ಶ್ರೀ ಕೃಷ್ಣಪರಮಾತ್ಮನು ತನ್ನ ಜನರೆಂದೇ ಪ್ರೀತಿಸುತ್ತಾನೆ. ತಾಂಡ್ಯ ಬ್ರಾಹ್ಮಣದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿರುವ ವ್ರಾತ್ಯಸ್ತೋಮವೆಂಬ ಪೂರ್ವಾಚಾರವು ಕೇವಲ ಒಬ್ಬೊಬ್ಬರಲ್ಲದೆ ಒಟ್ಟು ಒಟ್ಟು ಜನ ಪಂಗಡಗಳೇ ನಮ್ಮ ಹಿಂದೂ ಮತದಲ್ಲಿ ಸೇರುತ್ತಿದ್ದರೆಂದು ಚನ್ನಾಗಿ ತಿಳಿಸುತ್ತದೆ †

---

* ಕಿರಾತ ಹೂಣಾಂಧ್ರ ಪುಳಿಂದ ಪುಕ್ಕಸಾಃ ಆಭೀರ ಕಂಕಾ ಯವನಾಃ ಖಸಾದಯಃ । ಯೇಽನ್ಯೇಚ ಪಾಪಾ ಯದುಪಾಶ್ರಯಾಶ್ರಯಾಚ್ಛುದ್ಧ್ಯಂತಿ ತಸ್ಮೈ ಪ್ರಭವಿಷ್ಣವೇ ನಮಃ ॥

† ಪಂಚವಿಂಶ ಬ್ರಾಹ್ಮಣ, 17, 1—4; ಬೌಧಾಯನ 17, 21-6, ಕಾತ್ಯಾಯನ 22, 4; ಲಾಟ್ಯಾಯನ 8, 6; ಈ ಗ್ರಂಥಗಳನ್ನು ನೋಡಿ. ಶ್ರೀ ಚೈತನ್ಯರಿಂದ ಮೊದಲ್ಗೊಂಡು ರಾಧಾಸ್ವಾಮಿ, ಕಬೀರಪಂಥಿ, ಸಿಕ್, ಬ್ರಹ್ಮಸಮಾಜ ಮತ್ತು ಆರ್ಯಸಮಾಜವೇ ಮೊದಲಾದ ಆಧುನಿಕ ಪಂಥ (sect-ಪಂಗಡ, ಶಾಖೆ) ಗಳು ಹೊರಗಿನವರನ್ನು ತಮ್ಮ ಗುಂಪಿನಲ್ಲಿ ಸೇರಿಸಿಕೊಳ್ಳುತ್ತವೆ. ಹೀಗೆಯೇ ದೇವಲಸ್ಮೃತಿಯು ಬಲಾತ್ಕಾರದಿಂದ ಅನ್ಯಮತ (faith) ಗಳಿಗೆ ಸೇರಿಸಲ್ಪಟ್ಟ ಜನರ, ಇಲ್ಲವೇ ಪತಿತರಾಗಿ ಮಾಡಲ್ಪಟ್ಟ (defiled, ಶೀಲ ಕೆಡಿಸಲ್ಪಟ್ಟು) ವರ್ಣಾಂತರಗಳು ನಿರ್ಬಂಧಕ್ಕೆ ಸಿಕ್ಕಿದ್ದ ಸ್ತ್ರೀಯರ ಮತ್ತು ಲೌಕಿಕ ಪ್ರಯೋಜನಕ್ಕಾಗಿಯೂ ಅನ್ಯಮತಗಳನ್ನು ಸೇರಿದ್ದ ಜನರನ್ನು ಕೂಡ ಸುಲಭರೀತಿಯಲ್ಲಿ ಶುದ್ಧಿಮಾಡಲು (simple purification) ಧರ್ಮ ನಿಯಮಗಳನ್ನು ವಿಧಿಸುತ್ತದೆ.—S. R.—(ಪರಾಶರ ಮಾಧವೀಯವನ್ನು ಓದಿನೋಡಿ. N. S. S.)

೭. ಇದರಿಂದಲೇ ಬೇರೆ ಮತಗಳನ್ನು ನಮ್ಮಲ್ಲಿ ಸೇರಿಸಿಕೊಳ್ಳು, ತ್ತಿದ್ದೆವು:—ವೇದಕಾಲವು

ಆರ್ಯರು ತಮ್ಮ ಜಯಕಾಲದಲ್ಲಿ ತಮ್ಮಿಂದ ಜಿತರಾಗಿದ್ದರೂ ತಮಗೆ ಕಂಟಕರಾಗಿದ್ದ ಪ್ರತಿ ಕಕ್ಷಿಗಳೊಡನೆ ಬೆರೆತಾಗ ಅವರಲ್ಲಿ ಕೆಲವು ವಿಧದಲ್ಲಿ ಹೆಚ್ಚು ಅಭಿವೃದ್ಧಿಯನ್ನೈದಿದ್ದ ಪೂಜಾದಿ ಪದ್ಧತಿಗಳನ್ನು ನೋಡಿ ಹೀಯಾಳಿಸಲಿಲ್ಲ. ಉತ್ತರ ಹಿಂದೂಸ್ಥಾನದ ನಿವಾಸಿಗಳು ಪ್ರಕೃತಿಶಕ್ತಿಗಳನ್ನು ಪೌರಾಣಿಕ ಊಹಾಶಕ್ತಿಯಿಂದುಂಟಾದ ಶೋಭಾಯಮಾನವಾದ ವಸ್ತ್ರಾಲಂಕಾರಗಳಿಂದ ಪೂಜಿಸಿ ಪ್ರಕೃತಿಯ ಪರಿಣಾಮಯುಕ್ತವಾದ ದಿಗ್ದರ್ಶನದಿಂದ ದೇವದೇವತಾ ಯಕ್ಷರಕ್ಷಾದಿಗಳನ್ನು ರಚಿಸಿದ್ದಲ್ಲದೆ, ವೇದಕಾಲದ ಆರ್ಯರೂ ಕೂಡ ಇವುಗಳನ್ನೆಲ್ಲಾ ಒಪ್ಪಿಕೊಂಡು ತಾವೂಕೂಡ ಭಯಭಕ್ತಿ * ಗಳಿಂದ ಪೂಜಿಸುತ್ತಿದ್ದ ದೇವಗಣಗಳೊಡನೆ ಒಂದಾಗಿ ಸೇರಿಸಿಕೊಂಡರು. ಈ ಸಾಮಾನ್ಯ ವಸ್ತುಗಳು ತಮ್ಮ ಅನುಯಾಯಿಗಳಿಂದ ತಮ್ಮ ಯಾವಜ್ಜೀವದ ಪರಮಾನುಗ್ರಹಕ್ಕೆ ಕಾರಣಗಳೆಂದೂ ಸರ್ವಶಕ್ತಿದಾಯಕಗಳೆಂದೂ ಭಾವಿಸಲ್ಪಟ್ಟಿದ್ದವೆಂದರೆ ಈ ಆರ್ಯರಿಗೆ ಅಷ್ಟೇ ಸಾಕಾಗಿತ್ತು. ಋಗ್ವೇದದ ದೇವತೆಗಳೂ ಅಥರ್ವಣವೇದದ ಪಿಶಾಚಾದಿಗಳೂ ತತ್ತ್ವ ಶಾಸ್ತ್ರದ ಪ್ರಭಾವದಿಂದ ಒಟ್ಟುಗೂಡಿ ನಮ್ಮ ಕಲ್ಪನಾಶಕ್ತಿಯು ನಿತ್ಯವಸ್ತುವಿನಲ್ಲಿ ಆರೋಪಿಸುವ ಆಯಾ ಗುಣಗಳನ್ನು ಅನುಸರಿಸಿ ಆಯಾ ಹೆಸರಿನಿಂದ ಕೂಡಿರುವ ಪರಾತ್ಪರವಾದ ನಿತ್ಯವಸ್ತುವೊಂದರಲ್ಲಿ ಮಗ್ನವಾದವು.

೮. ಇತಿಹಾಸ ಕಾಲವು:—ಮತ್ತು ನಾವೆಲ್ಲರೂ ಏಕದೇವತಾಉಪಾಸಕರಾದೆವು.

ನಮ್ಮ ಇತಿಹಾಸಗಳು ನಮ್ಮ ಜನರ ಆಯಾಯ ಕುಲಗಳಲ್ಲಿ ಒಟ್ಟುಗೂಡಿದ ಹೊಸ ಜನರ ಮತ್ತು ಅವರ ದೇವತೆಗಳ ಚರಿತ್ರೆಯನ್ನು ಅಲ್ಲಲ್ಲಿ ಹೇಳುತ್ತವೆ. ಸಾಧಾರಣವಾಗಿ ಮತಗಳ ಮತ್ತು ನಾಗರೀಕತೆಗಳ

* admiration, ಗೌರವ.

ಪರಸ್ಪರ ಸಮ್ಮೇಳನವು ಇವುಗಳಲ್ಲಿ ಪರಸ್ಪರವಾಗಿ ಒಂದರ ಮೇಲೆ ಇನ್ನೊಂದಕ್ಕೆ ಉಂಟಾದ ಪೂರ್ಣಜಯವನ್ನು ಸೂಚಿಸುವುದಿಲ್ಲ. ಏಕೆಂದರೆ ನಿಜವಾದ ಸಮ್ಮೇಳಣದಲ್ಲಿ ವಸ್ತುವಿನಿಯಮವಿದ್ದರೂ ಹೊಸವಸ್ತುಗಳಿಗೆ ತಮ್ಮನ್ನೊಪ್ಪಿಕೊಳ್ಳುವ ಹಳೆಯವಸ್ತುಗಳಿಂದ ಹೊಸದೊಂದು ಅರ್ಥವು ಬಂದು ಕೂಡುತ್ತದೆ. ಪೂರ್ವಾಚಾರಗಳಲ್ಲಿ ಇರುವ ಪ್ರೀತಿ ಶ್ರದ್ಧಾದಿ ಭಾವಗಳು ಹೊಸ ಆಚಾರಗಳಲ್ಲಿ ಸೇರಿದ್ದಲ್ಲದೆ, ಈ ಹೊಸ ಆಚಾರಗಳೂ ಪೂರ್ವಾಚಾರಗಳೊಡನೆ ಬೆರೆಯುತ್ತವೆ. ಎಷ್ಟೋ ಪಂಗಡದವರೂ ಮತ್ತು ಜಾತಿಯವರೂ ತಮಗೆ ಬೇಕಾದ ಗೂಢಾರ್ಥವುಳ್ಳ ಪ್ರಾಣಿಗಳನ್ನು ಹೊಂದಿದ್ದರು, ಮತ್ತು ಈ ಜನಗಳು ಹಿಂದೂಜನರಲ್ಲಿ ಸೇರಿಹೋದಾಗ ಇವರೊಡನೆ ಬಂದಿದ್ದ ಪ್ರಾಣಿಗಳು ಇಲ್ಲಿಯ ದೇವತೆಗಳ ವಾಹನಗಳಾಗಿಯೂ ಅಲಂಕಾರಾದಿ ಮಿತ್ರರಾಗಿಯೂ ಮಾಡಲ್ಪಟ್ಟವು. ಇದರಿಂದ ಒಬ್ಬ ದೇವತೆಯು ನವಿಲಿನ ಮೇಲೆ ಆರೋಹಣ ಮಾಡಿದ್ದಾನೆ, ಇನ್ನೊಬ್ಬನು ಹಂಸಾರೂಢನಾಗಿದ್ದಾನೆ, ಮತ್ತೊಬ್ಬನು ವೃಷಭಾರೂಢನಾಗಿಯೂ, ಮಗದೊಬ್ಬನು ಮೇಷಾರೂಢನೂ ಆಗಿರುವರು. ಶ್ರೀರಾಮರ ಸೇವೆಯಲ್ಲಿ ಹನುಮಂತನು ಕೂಡಿರುವುದನ್ನು ನೋಡಿದರೆ, ಪುರಾತನಕಾಲದ ಪ್ರಕೃತಿ ಉಪಾಸನೆಯೂ ಮತ್ತು ಈಚಿನ ಕಾಲದ ನೇಶ್ವರವಾದವೂ ಒಟ್ಟುಗೂಡಿದುದನ್ನು ತೋರಿಸುತ್ತದೆ. ಕಾಳೀಯ ಸರ್ಪದ ಮೇಲೆ ನೃತ್ಯಮಾಡುತ್ತಿರುವ ಶ್ರೀಕೃಷ್ಣನನ್ನು ನೋಡಿದರೆ, ಸರ್ಪಾರಾಧನೆಯನ್ನು ಹಿಂದಕ್ಕೆ ತಳ್ಳಿದುದನ್ನು ಹೇಳದಿದ್ದರೂ ಅದು ಎಷ್ಟುಮಟ್ಟಿಗೆ ಕೆಳಕ್ಕೆ ಬೀಳುತ್ತಿದ್ದಿತೆಂದು ಸೂಚಿಸುತ್ತದೆ. ಶ್ರೀರಾಮನು ಶಿವಧನುಸ್ಸನ್ನು ಮುರಿದನೆಂಬರೆ ವೇದಕಾಲದ ಧ್ಯೇಯಕ್ಕೂ ಈಶ್ವರಾಧನಕ್ಕೂ ಉಂಟಾದ ಈ ಯುದ್ಧವನ್ನು ಸೂಚಿಸುವುದಲ್ಲದೆ, ಈ ಈಶ್ವರನು ಸ್ವಲ್ಪಕಾಲದಲ್ಲಿಯೇ ದಕ್ಷಿಣಾಭಿಮುಖನಾಗಿ (ಅಂದರೆ ದಕ್ಷಿಣಾಮೂರ್ತಿಯಾಗಿ) ಹೊರಟನೆಂದೂ ವ್ಯಕ್ತಪಡಿಸುತ್ತದೆ. ಇದರಂತೆಯೇ ಇತಿಹಾಸ ಗ್ರಂಥಗಳಲ್ಲಿ ಇನ್ನೂ ಅನೇಕ ಕಥೆಗಳು ವೈದಿಕ ಮತ್ತು ಅವೈದಿಕ ಮತಗಳು ಪ್ರೀತಿ ಒಡಂಬಡಿಕೆಗಳಿಂದ ಒಟ್ಟುಗೂಡಿರುವುದನ್ನು ಸೂಚಿಸುತ್ತವೆ. ವೀರವರ್ಗದಲ್ಲಿ ಸೇರಿದ ಪಿತೃಗಳೂ, ಆಯಾ ದೇಶದ ಸಾಧುಗಳೂ, ಗ್ರಹ

ಗಳೂ ಆಯಾ ಜನರ ಗ್ರಾಮದೇವತೆಗಳೂ* ಇವರೆಲ್ಲರನ್ನೂ ಹಿಂದುಗಳ ದೇವತಾ ಸಮೂಹದಲ್ಲಿ ಸೇರಿಸಿದ್ದರೂ, ಪರಾತ್ಪರ ವಸ್ತುವಾದ ಏಕನಿತ್ಯ ವಸ್ತುವಿಗೆ ಇವರೆಲ್ಲರೂ ಅಧೀನರಾಗಿ ಮಾಡಲ್ಪಟ್ಟು ಇಂಥಾ ಪರಮಾತ್ಮನ ಬೇರೆಬೇರೆ ರೂಪಗಳೆಂದು ಪೂಜಿಸಲ್ಪಡುತ್ತಿದ್ದರು. ಮತ್ತು ಈ ಬಹುದೇವತಾ ಪೂಜೆಯು ಏಕೇಶ್ವರ ಪಂಥವಂತೆ ಕ್ರಮಪಡಿಸಲ್ಪಟ್ಟಿತು. ಆದರೆ ಇದೆಂದಿಗೂ ತನ್ನ ಅನುಯಾಯಿಗಳು ಈ ತನ್ನ ಅಭಿಪ್ರಾಯಕ್ಕೆ ವ್ಯತಿರಿಕ್ತವಾದ ಅಭಿಪ್ರಾಯಗಳನ್ನುಳ್ಳ ಜನರಲ್ಲಿ ಸಂಪೂರ್ಣವಾದ ಅಸಹನೆಯಿಂದ ಕಾಣಬೇಕೆಂದು ಹೇಳುವಂಥಾ ಕಠಿಣಮಾರ್ಗದ ಈಶ್ವರವಾದ† ವಾಗಿರಲಿಲ್ಲ.

## ೨. ಜನಸಂಮಿಶ್ರತೆ ಮತ್ತು ಮತಾಭಿವೃದ್ಧಿ

### ೯. ಜನಸಂಮಿಶ್ರತೆ; ಆರ್ಯರೂ ಮತ್ತು ಅನಾರ್ಯರು

ಇದರಿಂದ ಆರ್ಯರು ಯಾವಾಗಲೂ ಹೆಚ್ಚು ಬಲಶಾಲಿಗಳೂ ಅಭಿಮಾನ ವೀರ್ಯರೂ ಆಗಿದ್ದರೆಂದು ತಿಳಿಯಬೇಕಾಗಿಲ್ಲ. ಎಷ್ಟೋ ಸಲ ಈ ಆರ್ಯರು ಅನಾರ್ಯರ ಧರ್ಮಗಳು ಯೋಗ್ಯವಾಗಿದ್ದಾಗ ಅವುಗಳನ್ನು ತಕ್ಕ ರೀತಿಯಲ್ಲಿ ಸನ್ಮಾನ ಮಾಡುತ್ತಿದ್ದರು. ನಮ್ಮ ಇತಿಹಾಸಗಳು 'ಆಯಾ ಅನಾರ್ಯ ದೇವತೆಗಳು ಆರ್ಯ ದೇವತೆಗಳಿಗಿಂತ ತಾವು ಹೆಚ್ಚೆಂದು ಹೇಳುತ್ತಿದ್ದುದನ್ನು ತಿಳಿಸುತ್ತವೆ. ವೇದಕಾಲದ ದೇವತೆಗಳಿಗೆಲ್ಲರಿಗೂ ರಾಜನಾಗಿದ್ದ ಇಂದ್ರನ ಮೇಲೆ ಶ್ರೀ ಕೃಷ್ಣನು ನಡೆಸಿದ ಯುದ್ಧವೊಂದನ್ನು ನೋಡಿದರೆ ಸಾಲದೆ? ಇರಲಿ, ಶೈವ ಪದ್ಧತಿಯು ಹೇಗೆ ಹುಟ್ಟಿತೆಂದು ಸ್ವಲ್ಪ ನೋಡುವ. ಯಜ್ಞಕರ್ಮವನ್ನು ಹೆಚ್ಚು ಶ್ರದ್ಧಾಭಕ್ತಿಗಳಿಂದ ನಡೆಸುತ್ತಿದ್ದ ಜನರಲ್ಲಿ ಮುಖ್ಯನಾಗಿದ್ದ ದಕ್ಷಬ್ರಹ್ಮನು ಈಶ್ವರನ ಮೇಲೆ ಅತಿ ಕೋಪಹೊಂದಿ ಯುದ್ಧ ಪ್ರಾರಂಭಿಸುತ್ತಲೇ ಆತನ ಸ್ವಂತ ಮನೆಯಲ್ಲಿಯೇ ವೈಮನಸ್ಯವುಂಟಾಗಿ ಅವನ ಮಗಳಾದ ಸತೀ

* Tribal gods. † Monotheism.

ದೇವಿಯು ಸ್ತ್ರೀಯರ ಪಾತಿವ್ರತ್ಯ ಭಕ್ತಿಗಳಿಗೆ ರೂಪವತ್ತಿ ಬಂದಂತಾಗಿ ಈಶ್ವರನಲ್ಲಿ ತೀವ್ರ ಪ್ರೀತಿಯನ್ನಿಟ್ಟು ಕೃತಾರ್ಥಳಾದಳು.

೧೦. ಇದೇ ಹಿಂದೂಜನರ ಮೂಲವು ; ಆರ್ಯ ದ್ರಾವಿಡರ ಸಂಪರ್ಕವು; ಆಗಮ (= ತಂತ್ರ) ಗಳು.

ವೇದ ಸಂಸ್ಕೃತಿಯು ಹೋಮರ್ ಕವಿಯ ಗ್ರೀಕ್ ಜನರಲ್ಲಿಯೂ ಕ್ರಿಸ್ತಶಕದ ಮೊದಲಿನಲ್ಲಿದ್ದ ಐರ್ಲೆಂಡ್ ದೇಶದ ಕೆಲ್ಟ್ ಜನಗಳಲ್ಲಿಯೂ ಮತ್ತು ಕ್ರಿಸ್ತಪೂರ್ವದಲ್ಲಿದ್ದ ಟ್ಯೂಟನ್ ಮತ್ತು ಸ್ಲಾವ್ ಜನಗಳ ಸಂಸ್ಕೃತಿಯನ್ನು ಹೋಲುವುದಲ್ಲದೆ ನಮ್ಮ ಇತಿಹಾಸ ಗ್ರಂಥಗಳಲ್ಲಿ ಈ ವೇದ ಸಂಸ್ಕೃತಿಯು ಇಲ್ಲಿನ ದ್ರಾವಿಡ ಜನರ ಸಂಯೋಗದಿಂದ ಹಿಂದೂ ಸಂಸ್ಕೃತಿಯಾಗಿ ಪರಿಣಾಮ ಹೊಂದಿತು. ಬಹು ಪೂರ್ವದಲ್ಲಿ ಆರ್ಯ ಪೂಜಾ ಪದ್ಧತಿಯು ಏನಾಗಿದ್ದಿತೆಂದರೆ, ನಮ್ಮ ತಲೆಯ ಮೇಲಿರುವ ಸ್ವರ್ಗಲೋಕಾಧಿದೇವನಾದ ದ್ಯೌಃಪಿತೃವನ್ನೂ ಇಲ್ಲವೆ ಬೇರೊಬ್ಬ ದೇವತೆಯನ್ನು ಕರೆದು ಯಜ್ಞ ಕರ್ತೃವನ್ನು ಪ್ರೀತಿಯಿಂದ ಕಾಣಬೇಕೆಂದು ಪ್ರಾರ್ಥಿಸಿ ಈ ಕರ್ತೃವಿನಿಂದ ಹವ್ಯಪಾನೀಯ ಭಕ್ಷ್ಯಾದಿ ಬಲಿಗಳನ್ನು ಸ್ವೀಕರಿಸಬೇಕೆಂಬುದೇ ಆಗಿತ್ತು. ಆದರೆ ಸ್ವಲ್ಪ ಕಾಲದಲ್ಲಿಯೇ ಇಂಥಾ ಯಜ್ಞಹೋಮಾದಿಗಳು ತಪ್ಪಿಹೋಗಿ ಇವುಗಳ ಸ್ಥಾನದಲ್ಲಿ ಪೂಜಾರ್ಚನಾದಿಗಳು ಬಂದು ನೆಲೆಗೊಂಡುವು. ಇದರಂತೆಯೇ ದ್ರಾವಿಡ ಜನರ ಭಕ್ತಿಯಲ್ಲಿ ಮುಖ್ಯಾಂಗವಾಗಿದ್ದ ವಿಗ್ರಹಾರಾಧನೆಯನ್ನು ಆರ್ಯರು ತಮ್ಮ ಧರ್ಮದಲ್ಲಿ ಸೇರಿಸಿಕೊಂಡರು. ಮತ್ತು ಹೀಗೆಯೇ ಅಹಿಂಸಾ, ಸಾತ್ವಿಕಾಹಾರಾದಿ ಧರ್ಮಗಳೂ ಕೂಡ ನಮ್ಮಲ್ಲಿ ವೃದ್ಧಿಯಾಗುತ್ತ ಬಂದವು. ಅಲ್ಲದೆ ವೇದಮಾರ್ಗವು ಆಗಮ (ತಂತ್ರ) ಗಳಿಂದ ಆವರಿಸಲ್ಪಟ್ಟು, ಈಗ ನಮ್ಮ ಹಿಂದೂ ಧರ್ಮದಲ್ಲಿ ಸಂಪ್ರದಾಯವು ಕೇವಲ ವೇದೋಕ್ತವಾಗಿರುವುದಲ್ಲದೆ ಬಹಳಮಟ್ಟಿಗೆ ಆಗಮಯುಕ್ತವೂ ಆಗಿದೆ; ಅಂದರೆ ಈಗಿನ ಹಿಂದೂ ಧರ್ಮದಲ್ಲಿ ಆರ್ಯ ದ್ರಾವಿಡ ಸಂಪ್ರದಾಯಗಳು ಬೇರೆಬೇರೆಯೆಂದು ಗೊತ್ತಾಗದರೀತಿಯಲ್ಲಿ ಕಾಣುತ್ತವೆ ಎಂದಲ್ಲ. ಮತ್ತು ಕೇವಲ ಸಂಯೋಗಕೃತವಾಗಲ್ಲದೆ (resultant) ಅಭಿವೃದ್ಧಿಯುಕ್ತವಾದ(emer-

gent) ಪ್ರತ್ಯೇಕ ಧಾರ್ಮಿಕ ರಚನೆಯೊಂದರಲ್ಲಿ ಸೇರಿಸಲ್ಪಟ್ಟಿವೆ. ಇದರಿಂದ ಹಿಂದೂ ಮತದ ಅಭಿವೃದ್ಧಿಮಾರ್ಗದಲ್ಲಿ ವೇದಾಗಮ ಸಂಪ್ರದಾಯಗಳಲ್ಲಿ ವೈಷಮ್ಯ (friction) ಕಂಡುಬಂದರೂ ಕೊನೆಯಲ್ಲಿ ಇವೆರಡೂ ಸಾಕಾದಷ್ಟು ಮಟ್ಟಿಗೆ ಸಮರಸದಿಂದಕೂಡಿ ಒಂದಾಗಿವೆ. ಹೀಗೆ ವಿಶಾಲವಾದ ಚಾರಿತ್ರಿಕ ದೃಷ್ಟಿಯಿಂದ ನೋಡಿದರೆ, ಹಿಂದೂ ಧರ್ಮವು ಯುಗಾಂತರಗಳಿಂದ ಬೆಳೆದು ಬರುತ್ತ ಕೇವಲ ಸದ್ವಿಷಯ ಮತ್ತು ನಿಜ ವಿಷಯಗಳನ್ನೇ ಅಲ್ಲದೆ ಎಷ್ಟೋಸಲ ತಪ್ಪು (ಕೆಡಕು, evil) ದೋಷ (erroneous) ಗಳನ್ನು ಕೂಡ ಸೇರಿಸಿಕೊಂಡು ಈ ದುಷ್ಟ ವಸ್ತುಗಳನ್ನು ಆಚೆ ಹಾಕಲು ಸತತ ಪ್ರಯತ್ನದಲ್ಲಿದ್ದು ಪೂರ್ಣವಾಗಿಲ್ಲದಿದ್ದರೂ ತಕ್ಕಷ್ಟುಮಟ್ಟಿಗೆ ಜಯಶಾಲಿಯಾಗಿ ಮುಂದುವರಿಯುತ್ತಿದೆ. ಹೀಗಿರುವುದರಿಂದಲೇ ಹಿಂದೂ ಮತವು ಸ್ಥಿರದೃಷ್ಟಿ * ಯನ್ನುಳ್ಳ ಸಶರೀರವಾದ ಪ್ರಾಣಿಯ ಉದಾರ ಸ್ವಭಾವದಿಂದಲೂ ಪ್ರೀತಿವಾತ್ಸಲ್ಯದಿಂದಲೂ ಕೂಡಿರುವ ವಸ್ತುವಾಗಿದೆ. ಇದರಿಂದಲ್ಲವೇ ಉಪನಿಷತ್ತುಗಳು ನಮಗೆ ಏಕವಾದ ನಿತ್ಯವಸ್ತುವನ್ನು ಸರ್ವದಾ ಪೂಜಿಸುತ್ತಿರಬೇಕೆಂದು ಹೇಳುತ್ತಿವೆ? ಅಂದರೆ ಜಾತಿವರ್ಣಗಳಿಂದ ಅಭೇದ್ಯನಾಗಿ ಕೇವಲ ಆಯಾ ಜಾತಿಗಳಿಗೇ ಅಲ್ಲದೆ ಸರ್ವಲೋಕಕ್ಕೂ ಅವಶ್ಯಕವಿದ್ದಂತೆ ತನ್ನ ಅನಂತ ಶಕ್ತಿ ಸಾಮರ್ಥ್ಯದಿಂದ ಅನುಕೂಲಗಳನ್ನು ಕಲ್ಪಿಸಿಕೊಟ್ಟು ಕಾಪಾಡುತ್ತಿರುವ ಪರಮಾತ್ಮನನ್ನು ಪೂಜಿಸಬೇಕಲ್ಲವೆ?

### ೧೧. ಇತರ ಮತಗಳ ಅಭಿವೃದ್ಧಿಯೂ ಮತ್ತು ನಮ್ಮಲ್ಲಿ ಅವುಗಳ ಸಮಾನವಾಗಿ ಸೇರುವಿಕೆಯು

ಆದರೂ ಹೀಗೆ ಬೇರೆಬೇರೆ ಮತಗಳನ್ನು ಹಿಂದೂ ಧರ್ಮದಲ್ಲಿ ಒಟ್ಟುಗೂಡಿಸಿದಮೇಲೆ ಪ್ರತಿಭಾಶಾಲಿಗಳ ವಿವೇಚನೆಯಿಂದ ಬದಲಾವಣೆಗಳು ಅಲ್ಲಲ್ಲಿ ತಲೆದೋರುತ್ತವೆ. ಹಿಂದೂ ಜನರಲ್ಲಿ ನಡೆಯುವ ಮತ ಪ್ರವೃದ್ಧಿಯು ಮುಖ್ಯವಾಗಿ ಜನಮಂಡಲಿ † ಯಿಂದ ನಡೆಯುತ

* (Fixed orientation,) † Democratic

ಕ್ಕದ್ದು. ಇದರಿಂದ ಆಯಾ ಪಂಗಡದವರು ತಮ್ಮ ಅನೂಚಾನ ಸಂಪ್ರದಾಯರೀತಿಯಲ್ಲಿ ತ್ರಿಕರಣಯುಕ್ತವಾದ ಆಚಾರಶುದ್ಧಿಯಿಂದ ತತ್ತ್ವಸಾಕ್ಷಾತ್ಕಾರವನ್ನು ಮಾಡಲವಕಾಶವುಂಟಾಗಿದೆ. ಏಕೆಂದರೆ ಪ್ರತಿಯೊಂದು ಪಂಗಡಕ್ಕೂ ಅದರದರ ಚಾರಿತ್ರಿಕ ಸಂಪ್ರದಾಯವಿರುವುದಲ್ಲದೆ ಈ ಸಂಪ್ರದಾಯವನ್ನು ತನ್ನಲ್ಲಿ ಚೆನ್ನಾಗಿ ಐಕ್ಯಮಾಡಿದಮೇಲೆಯೇ ಇದರ ಆಧ್ಯಾತ್ಮಿಕ ಅಭಿವೃದ್ಧಿಯು ಉಂಟಾಗುತ್ತದೆ. ಅನಾಗರೀಕನಾದ ಕಾಡುಮನುಷ್ಯನೂ ಕೂಡ ಮೂಢ ಪದ್ಧತಿಗಳನ್ನು ಹಠದಿಂದಲೂ ಧೃಡವಿಶ್ವಾಸದಿಂದಲೂ ನಂಬುತ್ತಾನೆ. ಏಕೆಂದರೆ ಇವನ ಅಭಿಪ್ರಾಯಗಳು ನಮಗೆ ಬಾಲ್ಯ ವಿಷಯಗಳಾಗಿ ತೋರಬಹುದಾದರೂ ಅವನಿಗೇನೋ ಇವುಗಳು ಜೀವಶಕ್ತಿಯಿಂದ ಕೂಡಿದ ನಿಜ ವಸ್ತುಗಳೇ ಆಗಿವೆ. ಆದುದರಿಂದ ಇಂಥವನ ಮೂಢ ಪದ್ಧತಿಗಳನ್ನು ಹಾಳುಮಾಡುವುದೆಂದರೆ ಅವನ ಧರ್ಮವನ್ನೇ, ಅವನ ನೀತಿ ಮತ್ತು ಮನಶ್ಯಾಂತಿಗಳನ್ನೇ ಹಾಳುಮಾಡಿದಂತಾಗುವುದು. ಏಕೆಂದರೆ ಮತಾಚಾರಗಳೂ ಮತ್ತು ಜನಸಂಘಗಳೂ* ಸಂಸ್ಕಾರಗಳೂ ಈಗ ನಮಗೆ ಚೆನ್ನಾಗಿ ಕಾಣದಿದ್ದರೂ ಪ್ರಥಮದಲ್ಲೇನೋ ಇವುಗಳು ನೂರಾರು ವರ್ಷಗಳಿಂದ ಬಂದಿರುವ ಅನುಭವದಿಂದಲೇ ಹುಟ್ಟಿರುವವು. ಈ ಲೋಕದಲ್ಲೆಲ್ಲಾ ಹರಡಿದ್ದ ವಿವಿಧ ಮತಗಳನ್ನು ಪರಿಶೀಲಿಸಿ ನೋಡುತ್ತಿರುವಲ್ಲಿ ಹಿಂದೂಜ್ಞಾನಿಯು ಈ ಮತಗಳೆಲ್ಲವೂ ಆಯಾಯ ಅನುಯಾಯಿಗಳು ಸೇರಿ ಬಾಳುತ್ತಿದ್ದ ಸಂಘ ಸಂಸ್ಥೆಗಳನ್ನು ಅನುಸರಿಸಿ ರಚಿಸಲ್ಪಟ್ಟಿರುವುವೆಂದು ತಿಳಿದನು. ಅಂದರೆ ಯಾವ ವಸ್ತುವನ್ನು ನೋಡಿದರೂ ಅದು ಈಗ ಹೀಗಿರುವುದಕ್ಕೆ ಅದರ ಪೂರ್ವಚರಿತ್ರೆಯೇ ಕಾರಣ. ಮತ್ತೆ ಅದನ್ನು ಹಠಾತ್ತಾಗಿ ಬೇರೊಂದು ವಿಧದಲ್ಲಿ ಬದಲಾಯಿಸಲು ಎಂದಿಗೂ ಸಾಧ್ಯವಿಲ್ಲ. ಹೀಗೆಯೇ ಪರಮಾತ್ಮನ ಕೃಪಾವಾತ್ಸಲ್ಯವೂ ಕೂಡ ಸರ್ವಮಾನವ ವರ್ಗದಮೇಲೆಯೂ ವರ್ಷಿಸುತ್ತದೆ. ಪ್ರತಿಯೊಂದು ಜನತೆಗೂ ಕೂಡ ಕೆಲವು ಹಕ್ಕುಗಳಿದ್ದು ಅವುಗಳನ್ನು ಯಾರೂ ಕಿತ್ತುಕೊಳ್ಳುವುದಕ್ಕಾಗುವುದಿಲ್ಲ, ಮತ್ತೆ ಎಲ್ಲರೂ ಗೌರವಿಸಬೇಕಾಗಿದೆ. ಇದರಂತೆಯೇ ಭಗವಚ್ಛಕ್ತಿ (= ಅನುಗ್ರಹ) ಇಲ್ಲದೆ ಯಾವ ಜನಾಂಗವೂ

ಕೂಡ ಪ್ರವೃದ್ಧಿಗೆ† ಬರಲಾರದು. ಇದನ್ನೇ ರಾಬರ್ಟ್ ಬರ್ನ್ಸ್ (R Burns) ಎಂಬ ನಿಮ್ಮ ಪ್ರಸಿದ್ಧ ಕವಿಗಳು ಹೀಗೆ ಚೆನ್ನಾಗಿ ಹೇಳುತ್ತಾರೆ. ತಪ್ಪುದಾರಿಯನ್ನು ತೋರಿದ ಬೆಳಕೂ ಕೂಡ ಆ ಪರಮಾತ್ಮನೊಬ್ಬನಿಂದಲ್ಲದೆ ಬೇರೆ ಎಲ್ಲಿಂದ ಬಂದೀತು ? ಏಕೆಂದರೆ ಬೇರೆ ಜನರ ದೇವತೆಗಳನ್ನು ದೂಷಿಸುವುದೆಂದರೆ ಅವರನ್ನೇ ದೂಷಿಸಿದಂತೆ ಆಯಿತಲ್ಲವೇ ? ಮತ್ತು ಪ್ರತಿಯೊಂದು ಜನಾಂಗವೂ ಕೂಡ ತನ್ನ ದೇವತೆಗಳೊಡನೆ ನಿಕಟ ಸಂಬಂಧದಿಂದತಾನೇ ಬಾಳುತ್ತಿರುವುದು ? ಇದರಿಂದಲೇ ಹಿಂದೂಜ್ಞಾನಿಯು ಅನಾಗರೀಕರಾದ ಕಾಡುಮನುಷ್ಯರ ದೇವತೆಗಳನ್ನೂ ಕೂಡ ತನ್ನ ಪಂಥದಲ್ಲಿ ಸೇರಿಸಿಕೊಂಡು ಅವರಿಗೂ ತನ್ನ ಪೂರ್ವ ದೇವತೆಗಳೊಡನೆ ಏಕಾಸನವನ್ನು ಕೊಟ್ಟನು.

### ೧೨. ಹೀಗೆ ಜನರ ಮನೋಭಿಲಾಷೆಗಳು ಕ್ರಮಪಟ್ಟಂತೆ ಅವರ ನಂಬಿಕೆಗಳೂ ಕೂಡ ಅಭಿವೃದ್ಧಿಪಡೆಯುತ್ತವೆ.

ಯಾವ ಜನರೂ ಕೂಡ ತಮ್ಮ ತಪ್ಪು ಭಾವಗಳನ್ನು ತಿದ್ದಿ ಬದಲಾಯಿಸಿಕೊಳ್ಳಬೇಕೆಂದರೆ ಅವರ ಮನೋಭಿಲಾಷೆಗಳನ್ನು ಮೊದಲು ಬದಲಾಯಿಸುವುದೇ; ಶ್ರೇಷ್ಠಮಾರ್ಗವಾಗಿದೆ. ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಯ ದೇವರೂ ಕೂಡ ಆ ವ್ಯಕ್ತಿಯಂತೆಯೇ ಇರುವನು. ಅಂದರೆ ಆಯಾ ಜನರಂತೆ ಅವರ ದೇವರೂ ಕೂಡ ಆಯಾ ಗುಣಗಳಿಂದ ಕೂಡಿರುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯ ಶಿಕ್ಷಣಾಭಿರುಚಿಗಳೂ, ಅವನ ಸುತ್ತಮುತ್ತಲಿರುವ ಜನರ ಮತ್ತು ಆಯಾ ದೇಶದ ಗುಣಗಳೂ ಆಯಾ ವ್ಯಕ್ತಿಯ ಮತಾಭಿಪ್ರಾಯಗಳ ಲಕ್ಷಣವನ್ನು* ಬಹುಮಟ್ಟಿಗೆ ನಿರ್ಧರಿಸುತ್ತವೆ. ಆದುದರಿಂದಲೇ ಪ್ರತಿಯೊಬ್ಬ ವ್ಯಕ್ತಿಯ (ಸಹಜವಾದ) ಗುಣದೋಷಗಳೂ ಮತ್ತು ಅವನು ಯಾವ ವಿಷಯದಲ್ಲಿಯಾದರೂ ಪಡೆದಿರುವ ವಿಶೇಷಾನುಭವವೂ ಕೂಡ ಸರ್ವಸಾಮಾನ್ಯವಾಗಿ† ಅವನು ಧಾರ್ಮಿಕತತ್ತ್ವ ವಿಚಾರದಲ್ಲಿಹೊಂದುವ ಅಭಿಪ್ರಾಯದಲ್ಲಿ ಚೆನ್ನಾಗಿ ವ್ಯಕ್ತವಾಗುತ್ತವೆ. ಅಂದರೆ

---

* Character. † Inevitably, ಎಂದಿಗೂ ತಪ್ಪದೆ.

ಪ್ರತಿಯೊಬ್ಬ ಮನುಷ್ಯನೂ ಪರಮಾತ್ಮನ ವಿಷಯದಲ್ಲಿ ಪಡೆದಿರುವ ಜ್ಞಾನವು ಆ ಪರಮ ಪುರುಷನನ್ನು ತಿಳಿದುಕೊಳ್ಳಲು ಅವನಿಗೆ ಎಷ್ಟು ಮಟ್ಟಿನ ಶಕ್ತಿಯುಂಟೋ ಅಷ್ಟಕ್ಕೆ ಸರಿಯಾಗಿರುತ್ತದೆ. ಆದುದರಿಂದ ಸಂಘಸುಧಾರಕರು ಇಂಥಾ ದೋಷಗಳನ್ನು ತಿದ್ದುವುದರಲ್ಲಿ ಲಕ್ಷ್ಯವಿಡಬೇಕೇ ಹೊರತು ಅವುಗಳನ್ನು ಸುಮ್ಮನೇ ದೂಷಿಸುತ್ತಿರಬಾರದು. ಏಕೆಂದರೆ ಆಧ್ಯಾತ್ಮಜೀವನವನ್ನು ಪ್ರಜ್ವಲಿಸುವಂತೆ ಮಾಡಿದರೆ ಜನರ ನಂಬಿಕೆಗಳು ತಾವಾಗಿಯೇ ಬದಲಾಯಿಸುತ್ತವೆ. ಮತ್ತು ಇಂಥಾ ಬುದ್ಧಿಪರಿಣಾಮಗಳು * ಪೃಥ ([illegible]) ಆಗಬೇಕಾದರೆ ಇಂಥಾ ನಂಬಿಕೆಗಳು ಅವರವರ ಅಂತರಾತ್ಮಗಳಿಂದಲೇ ಉದ್ಭವಿಸುತ್ತವೆ. ಹೀಗೆಯೇ ಸಂಪ್ರದಾಯಗಳು ಬದಲಾದ ಹೊರತು ಹೊಸ ನಂಬಿಕೆಗಳಾಗಲೀ ಅಭಿಪ್ರಾಯಗಳಾಗಲೀ ಎಂದಿಗೂ ಅಭಿವೃದ್ಧಿ ಹೊಂದಲಾರವು. ಆದುದರಿಂದ ಮತಬೋಧಕರು ತಮ್ಮ ಅಭಿಪ್ರಾಯಗಳನ್ನು ಜನರಲ್ಲಿ ರೂಢಮೂಲವಾಗುವಂತೆ ಮಾಡುವುದನ್ನೇ ಮುಖ್ಯವಾಗಿ ಇಟ್ಟುಕೊಳ್ಳದೆ, ಅವರಲ್ಲಿ ಉತ್ತಮಜೀವನದ ವಿಚಾರದಲ್ಲಿ ಇಂಥಾ ಉತ್ಸಾಹವು† ಉಂಟಾಗುವಂತೆ ಮಾಡಬೇಕು. ಹೀಗೆಂದು ನಾವು ಕಣ್ಣುಬಿಟ್ಟು ನೋಡಿದರೆ ತತ್ತ್ವವೆಲ್ಲವೂ ತನ್ನ ಪಾಡಿಗೆ ತಾನೇ ಗೋಚರಿಸುವುದು. ಆದುದರಿಂದಲೇ ಹಿಂದುಗಳು ಶಕ್ತಿ ಬಲಾತ್ಕಾರಗಳನ್ನು ಉಪಯೋಗಿಸದೆ ಕೇವಲ ಹಿತವಾದಗಳಿಂದ ಕೂಡಿದ ಪ್ರೇರಣೆ ಸೂಚನೆಗಳನ್ನೇ ಈ ಕೆಲಸದಲ್ಲಿ ಉಪಯೋಗಿಸುತ್ತಾರೆ. ಏಕೆಂದರೆ ತಪ್ಪೆಲ್ಲವೂ, ಅಜ್ಞಾನವೆಲ್ಲವೂ ಬಾಲ್ಯಾವಸ್ಥೆಗೆ ಸೇರಿದುದೇ ಸರಿ, ಮತ್ತು ಇದೇನು ಒಂದು ದೊಡ್ಡ ಪಾಪವಲ್ಲ. ಇದು ಬಿಟ್ಟು ಸಾಕಾದಷ್ಟು ಪ್ರೀತ್ಯವಕಾಶಗಳು ದೊರೆತರೆ ತಪ್ಪು ತಾನಾಗಿಯೇ ಮರೆಯಾಗುವುದು. ಇದರಿಂದ ಬಲಾಢ್ಯರಲ್ಲಿ ನಮ್ಮ ಧರ್ಮವು ಕಠಿಣವಾಗಿ ಕಂಡುಬಂದವರೂ ಇದು ದುರ್ಬಲರ ತಪ್ಪುಗಳನ್ನು ಮನ್ನಿಸಿ ಅವರಲ್ಲಿ ದಯೆಯಿಂದಿರುವುದು.

---

* change of view. † aspiration.

## ೧೩. ಮತಾಭಿವೃದ್ಧಿ ಮಾರ್ಗವು ಅರ್ಥಪುಷ್ಟೀಕರಣವೇ ಹೊರತು ಬಾಹ್ಯನಾಮಗಳ ಬದಲಾವಣೆಯಲ್ಲ.

ಹಿಂದುಗಳು ನಡೆಸುವ ಧಾರ್ಮಿಕ ಸುಧಾರಣೆಯು ಕೇವಲ ಬಾಹ್ಯ ನಾಮರೂಪಗಳಿಗೆ ಅನ್ವಯಿಸದೆ ವಸ್ತು ತತ್ತ್ವ*ದಲ್ಲಿ ಅಭಿವೃದ್ಧಿಯನ್ನು ಉಂಟುಮಾಡುತ್ತದೆ. ಹೇಗೆಂದರೆ ಪೂರ್ವದ ಹೆಸರನ್ನು ಇಟ್ಟುಕೊಳ್ಳ ಬಹುದಾದರೂ ಈಗ ಅದರಲ್ಲಿ ಹೆಚ್ಚು ಅರ್ಥವನ್ನು ತಿಳಿಯುವಂತೆ ಪ್ರೋತ್ಸಾಹವನ್ನು ಪಡೆಯುತ್ತೇವೆ. ನಿಮಗೆ ಗೊತ್ತಿರುವ ಉದಾಹರಣೆಯೊಂದನ್ನು ತೆಗೆದುಕೊಂಡರೆ ನಿಮ್ಮ 'ಪೆಂಟಟ್ಯೂಕ್' (Pentateuch) ಎಂಬ ಗ್ರಂಥದಲ್ಲಿರುವ 'ಯಾಹ್ವೆ' ಎಂಬ ದೇವರಾದರೋ ಬಹು ಕ್ರೂರ ಸ್ವಭಾವಿಯು. ಪದೇಪದೇ ಮಾತ್ಸರ್ಯರೋಷಗಳಿಂದ ಕೂಡಿದವನಾಗಿ ತನಗೆ ಕೋಪಬಂದಾಗಲೆಲ್ಲಾ ಸ್ತ್ರೀಪುರುಷ ಶಿಶುಪ್ರಾಣಿಗಳ ಬಲಿಹಿಂಸೆಯನ್ನು ನಡೆಸಬೇಕೆಂದು ವಿಧಿಸುತ್ತಾದೆ. ಇದು ಬಿಟ್ಟು 'ಇಸೈಯ' ಮತ್ತು 'ಹೋಸಿಯ' ಎಂಬ ನಿಮ್ಮ ಪೂರ್ವಜರ ಗ್ರಂಥಗಳಲ್ಲಿ ಯಜ್ಞಕಾಮಿಯಲ್ಲದೆ ಭೂತದಯಾವಾತ್ಸಲ್ಯನಾಗಿ ಹವಿರ್ಬಲಿಗಳನ್ನು ನಿಂದಿಸುತ್ತಲೂ, ತನ್ನನ್ನು ತಿಳಿಯಬೇಕೆಂದು ಹೆಚ್ಚಾಗಿ ಕಾಂಕ್ಷಿಸುತ್ತಿರುವ ಜನರಿಗೆ ಮಾತ್ರ ಗೋಚರಿಸುತ್ತಿರುವ ಪರಮಾತ್ಮನ ಜ್ಞಾನವು ಅಲ್ಲಲ್ಲಿ ಕಂಡುಬರುತ್ತದೆ. ಹೀಗೆಯೇ ನಿಮ್ಮ ಯೇಸು ಸ್ವಾಮಿಯ ದರ್ಶನ (ಮತ) ಗ್ರಂಥ† ಗಳಲ್ಲಿ ಪೂರ್ಣಕೃಪಾನಿಧಿಯಾದ ಪರಮಾತ್ಮನ ಭಾವವು ಪ್ರಕಾಶವಾಗುತ್ತದೆ. ಮತ್ತು ಈ ವಿವಿಧ ಅಭಿವೃದ್ಧಿಮಾರ್ಗಗಳನ್ನು ಒಟ್ಟುಗೂಡಿಸುತ್ತಿರುವ ಸಂಬಂಧವು 'ಯಾಹ್ವೆ' ಎಂಬ ಹೆಸರೇ ಆಗಿದೆ. ಹೀಗೆಯೇ ಹಿಂದೂಮತವು ಯಾವುದೊಂದು ಹೊಸ ಮತವನ್ನು ತನ್ನ ಕೂಟದಲ್ಲಿ ಒಂದನ್ನಾಗಿ ಒಪ್ಪಿಕೊಂಡಾಗ ಅದರ ಪೂರ್ವದ ಹೆಸರು ನಡೆದುಬಂದರೂ ಕೂಡ, ವಸ್ತುವಿನ ಸ್ವಭಾವದಲ್ಲೇನೋ ಸ್ವಲ್ಪವುಟ್ಟಿಗಾದರೂ ಮುಂದಿನ ಉನ್ನತಸ್ಥಿತಿಗೆ ಬೇಕಾದ ಬದಲಾವಣೆಯು ಉಂಟೇ ಉಂಟಾಗುತ್ತದೆ. ಸಂಸ್ಕೃತ ಪುರಾತನ ಗ್ರಂಥಗಳಿಂದ ಉದಾಹರಣೆ

* Content † Revelation

ಯೊಂದನ್ನು ತೆಗೆದುಕೊಂಡರೆ ಶ್ರೀ ಕಾಳಿಕಾದೇವಿಯು ತನ್ನ ಪ್ರತಿಯೊಂದು ರೂಪದಲ್ಲಿಯೂ ಅನಾರ್ಯಕುಲಕ್ಕೆ ಸೇರಿದ ದೇವತೆಯೆಂದು ಚೆನ್ನಾಗಿ ವ್ಯಕ್ತವಾಗುತ್ತದೆ.* ಆದರೆ ಕಾಲಾನುಕಾಲದಲ್ಲಿ ಪರಾತ್ಪರವಸ್ತುವಾದ ಪರಮಾತ್ಮನೊಡನೆ ಅವಳು ಐಕ್ಯ ಮಾಡಲ್ಪಟ್ಟಳು. ಈ ವಿಷಯದಲ್ಲಿ ಕಾಳಿಕಾಸ್ತೋತ್ರವನ್ನು ನೋಡಿ:—

'ಹೇ ಭಗವತಿ, ನಿನ್ನಲ್ಲಿ ಶರಣುಹೋಗುವ ಜನರ ಕಷ್ಟಗಳನ್ನೆಲ್ಲಾ ಪರಿಹರಿಸುವೆಯಾದರೂ ನಿನ್ನನ್ನು ಯಾರೂ ಮನೋವಾಗ್ಬುದ್ಧಿಗಳಿಂದ ತಿಳಿಯಲಾರರು; ಮತ್ತು ಕೇವಲ ಮಾತಿನಿಂದ ನಿನ್ನನ್ನು ಯಾರೂ ಸ್ತೋತ್ರ ಮಾಡಲಾರರು.

'ಹೇ ದೇವಿ, ಬ್ರಹ್ಮನನ್ನೇ ನಿನ್ನ ಸ್ವರೂಪವಾಗಿ ಹೊಂದಿದ್ದೀಯೆ. ಜಗನ್ಮಾತ, ದಯಾನಿಧೇ, ನಿನಗೆ ಪದೇ ಪದೇ ನಮಸ್ಕರಿಸುವೆನು.

''ಸೃಷ್ಟಿಸ್ಥಿತಿಲಯ ಕಾರ್ಯವೆಲ್ಲವೂ ನಿನ್ನ ಲೀಲಾಸಾಗರದ ಕೇವಲ ಒಂದುಲೀಲೆಯೇ ಸರಿ. ಈ ಸರ್ವಪ್ರಪಂಚವನ್ನೂ ನಿಮಿಷಾರ್ಧದಲ್ಲಿ ಸೃಷ್ಟಿ ಮಾಡುವೆ. ಹೇ ಸರ್ವಶಕ್ತಿಪೂರಿತೆ. ನಿನಗೆ ಪೂರ್ಣ ನಮಸ್ಕಾರಗಳು. ಯಾವ ಗುಣರೂಪಗಳನ್ನು ಹೊಂದದಿದ್ದರೂ,ಎಲ್ಲಾ ಬಾಹ್ಯವಸ್ತುಗಳಿಂದ ದೂರವಾಗಿದ್ದರೂ, ಸರ್ವೇಂದ್ರಿಯಗಳಿಗೂ ಅತೀತಳಾಗಿದ್ದರೂ, ಮತ್ತು ಏಕಮಯಿಯೂ, ಸಂಪೂರ್ಣಳೂ, ಅದ್ವಿತೀಯಳೂ, ಸರ್ವವ್ಯಾಪಿಯೂ

---

ಮಹಾಭಾರತ (IV, 7) ದಿಂದ ಈಕೆಯು ಮದ್ಯಮಾಂಸ ಪ್ರಾಣಿಯಜ್ಞ (ಬಲಿ) ಗಳನ್ನು ಕಾಮಿಸುವಳೆಂದು ಕಂಡುಬರುತ್ತದೆ. "ಗೌಡ ವಾಹೊ" (ಕ್ರಿ. ಶ. ೭೦೦) ಎಂಬ ಗ್ರಂಥವು ಕಾಳಿಕಾದೇವಿಗೆ ಅರ್ಪಿಸುತ್ತಿದ್ದ ಪ್ರಾಣಿ ಮತ್ತು ನರಬಲಿಗಳನ್ನು ಕುರಿತು ತಿಳಿಸುತ್ತದೆ. 'ಕ್ಷುದ್ರಕಮಲಾಕರ' (ಕ್ರಿ. ಶ. ೧೫ನೇ ಶತಮಾನ)ರು ಮಿರ್ಜಾಪುರಕ್ಕೆ ಸೇರಿದ ವಿಂಧ್ಯಾಚಲದಲ್ಲಿ ಇದ್ದ ದುರ್ಗಾದೇವಿಯ ವಿಗ್ರಹವನ್ನು ಕುರಿತು ಹೇಳುವಾಗ ಕಾಳಿಕಾದೇವಿಯು ಕಿರಾತಾದಿ ಮೂಲನಿವಾಸಿಗಳ ದೇವತೆಯೆಂದೂ, ಮ್ಲೇಚ್ಛ ಥಗ್ಗರೇ ಮೊದಲಾದ ಜನರಿಂದ ಪೂಜಿಸಲ್ಪಡುತ್ತಿರುವಳೆಂದೂ ತಿಳಿಸುತ್ತಾರೆ.

ಆಗಿದ್ದರೂ ಕೂಡ ಭಕ್ತಕೋಟಿಯು ಹಿತಕ್ಕಾಗಿ ಸರ್ವಾಭೀಷ್ಟ ಕಲ್ಯಾಣ ಗುಣಗಳಿಂದ ಸಂಪೂರಿತವಾದ ರೂಪವನ್ನು ಧರಿಸಿರುವ ಈ ನಿನ್ನನ್ನು ನಂಬಿದವರೆಲ್ಲರಿಗೂ ಪರಮಪದ*ವನ್ನು ಕೊಡುವೆ. ಹೇ ದೇವಿ, ಜೀವಿಕೆಯ ಅವಸ್ಥಾತ್ರಯಗಳೆಲ್ಲವೂ ವ್ಯಕ್ತವಾಗುವ ನಿನ್ನ ಅಡಿದಾವರೆಗಳಿಗೆ ನನ್ನ ಅನಂತನಮಸ್ಕಾರಗಳು.† ಇದರಂತೆಯೇ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ತನ್ನ ಪೂರ್ವಜನ್ಮವು ಹೆಗಿದ್ದರೂ ಸರಿಯೆ, ಈ ಗ್ರಂಥವಲ್ಲೇನೋ ತಾನೇ ಪರಮೇಶ್ವರನಾಗುತ್ತಾನೆ.

೧೪. ಹೀಗೆ ಹೆಚ್ಚು ಅರ್ಥಗೆಟ್ಟ ಜನರ ಇಷ್ಟದೇವತೆಗಳನ್ನು ಪರಮೇಶ್ವರನಲ್ಲಿ ಐಕ್ಯಮಾಡಿದರು.

ಶಿಷ್ಯನು ಬೋಧನೆಗಾಗಿ ತನ್ನ ಪರಮಗುರುವನ್ನು ಸನಿಾಪಿಸಿದಾಗ ಗುರುವರ್ಯನು ನಿನ್ನ ಇಷ್ಟದೇವತೆಯಾರೆಂದು ಶಿಷ್ಯನನ್ನು ಕೇಳುತ್ತಾನೆ. ಏಕೆಂದರೆ ಪ್ರತಿಯೊಬ್ಬ ಮನುಷ್ಯನೂ ತನಗಿಷ್ಟವಾದ ಪೂಜಾ ನಂಬಿಕೆಗಳಿಗೆ ಸರಿಯಾದ ರೂಪಯುಕ್ತವಾದ ದೇವತೆಯನ್ನ ಪೂಜಿಸಲು

* highest good

† ದೇವಿಪ್ರಪನ್ನಾರ್ತಿಹರೇ ಶಿವೇ ತ್ವಂವಾಣೀ ಮನೋಬುದ್ಧಿಭಿರಪ್ರಮೇಯಾ । ಯತೋSಪ ತೋ ನ್ಯೋ ನ ಹಿ ಕಶ್ಚಿದೀಶಃ ಸ್ತೋತುಂ ಸ್ವಶಬ್ದೈರ್ಭವತೀಂ ಕದಾಚಿತ್ ॥ . .

ಬ್ರಹ್ಮಸ್ವರೂಪೇ ಜಗದಂಬಿಕೇSಲಂ ದಯಾಮಯೀಂ ತ್ವಾಂ ಸತತಂ ನಮಾಮಃ ॥ . .... . . ಸರ್ಗಸ್ಥಿತಿ ಪ್ರತ್ಯವಹಾರಕಾರ್ಯಂ ಭವದ್ವಿಲಾಸಸ್ಯ ತರಂಗಮಾತ್ರಂ । ಕರ್ತುಂಕ್ಷಣೇನಾಖಿಲಮಸ್ಯಲಂತ್ವಂ ನಮೋಸ್ತು ತಸ್ಮೈ S ಖಿಲಶಕ್ತಿರೂಪೇ ॥ ತ್ವಂ ನಿರ್ಗುಣಾಕಾರ ವಿವರ್ಜಿತಾಪಿ ತ್ವಂ ಭಾವರಾಜ್ಯಾಚ್ಚಬಹಿರ್ಗತಾಪಿ । ಸರ್ವೇಂದ್ರಿಯಾSಗೋಚರತಾಂ ಗತಾಪಿ ತ್ವೇಕಾಪ್ಯಖಂಡಾ ವಿಭುರದ್ವಯಾಪಿ ॥ ಸ್ವಭಕ್ತಕಲ್ಯಾಣವಿವರ್ಧನಾಯ ಧೃತ್ವಾಸ್ವರೂಪಂ ಗುಣಂ ಹಿತೇಭ್ಯಃ । ನಿಶ್ರೇಯಸಂ ಯಚ್ಛಸಿ ಭಾವಗಮ್ಯಾ ತ್ರಿಭಾವರೂಪೇ ಭವತೀಂನಮಾಮಃ ॥

ಶಕ್ತನಾಗಿರುವನು.* ಆಗ ಗುರುವು ಶಿಷ್ಯನಿಗೆ ಹೀಗೆ ತಾನು ಹೇಳಿದ ಅಭಿಪ್ರಾಯವು ಕೇವಲ ಭಾವರೂಪದಿಂದಿರುವ ವಸ್ತುವಿನ ಸ್ಥೂಲಾಕಾರ ವೆಂದು ತಿಳಿಸಿ ಇದರಿಂದ ಸೂಚಿತವಾಗುವ ಪರಮಾತ್ಮನ ಸಾನ್ನಿಧ್ಯ ವನ್ನು ತಿಳಿಯುವಂತೆ ಕ್ರಮವಾಗಿ ಮುಂದೆ ಮುಂದೆ ಕರೆದುಕೊಂಡು ಹೋಗುತ್ತಾನೆ. ಒಬ್ಬ ಹಿಂದೂ ಗುರುವನ್ನು ಒಬ್ಬ ಕ್ರೈಸ್ತನು ಅಧ್ಯಾತ್ಮ ಬೋಧೆಗಾಗಿ ಸಮೀಪಿಸಿದನೆಂದು ತಿಳಿಯೋಣ. ಆಗ ಗುರುವು ಈ ಕ್ರೈಸ್ತ ಶಿಷ್ಯನಿಗೆ 'ನಿನಗೆ ಕ್ರೈಸ್ತನಲ್ಲಿರುವ ಶ್ರದ್ಧಾಭಕ್ತಿಗಳನ್ನು ಬಿಟ್ಟು ಬಿಡು' ಎಂದು ಹೇಳದೆ ಅವನ ಕ್ರೈಸ್ತಭಾವವು ಇನ್ನೂ ಪೂರ್ಣವಾದುದಲ್ಲವೆಂದು ತೋರಿಸಿ, ನಿಜವಾದ ಕ್ರೈಸ್ತನು ಎಂದರೆ ನಿರ್ಗುಣನಾದ† ಪರಮೇಶ್ವರನ ಜ್ಞಾನವನ್ನರಿಯುವನು. ಹಿಂದೂ ಜನರು ತಾವು ಒಪ್ಪುವ ಪ್ರತಿಯೊಬ್ಬ ದೇವತೆಯನ್ನೂ ಹೆಚ್ಚು ಗೌರವಕ್ಕೆ ಪಾತ್ರವಾಗುವಂತೆ ಮಾಡಿ ಕೊನೆಗೆ ಈ ದೇವತೆಯನ್ನು ಪ್ರತಿಯೊಬ್ಬ ಮನುಷ್ಯನ ಅಂತರಾತ್ಮನೊಡನೆ ಒಂದಾಗಿರುವ ಸರ್ವಪ್ರಾಧಾನ್ಯವಾದ ಪರಮಾತ್ಮ‡ನಲ್ಲಿ ಐಕ್ಯಮಾಡುತ್ತಾರೆ ಈ ರೀತಿಯಲ್ಲಿ ಹಿಂದೂ ಜನರ ದೇವತಾ ಸಮೂಹವು ಆಗಾಗ್ಗೆ ಹೆಚ್ಚಾಗುತಿದ್ದರೂ ಅದಕ್ಕೆ ಯಾವ ಕುಂದಕವೂ ಇಲ್ಲ. ಹಿಂದೂ ಮತವು 'ತತ್ತ್ವಶಾಸ್ತ್ರ§ ದಿಂದೊಡಗೂಡಿದ ಕೇವಲ ಮಂತ್ರವೇಸರಿ', ಇಲ್ಲವೆ "ತತ್ತ್ವಶಾಸ್ತ್ರದಿಂದ ತೇಜೋಯುಕ್ತವಾದ ಕೇವಲ ಚೈತನ್ಯವಾದ" (Animism) ವೇ ಎಂದು ಹೇಳುವ ವಿಮರ್ಶಕರು ನಿಜವನ್ನೇ ಹೇಳುವರು. ಆದರೆ ತತ್ತ್ವಶಾಸ್ತ್ರದಿಂದೊಡಗೂಡಿದ ಮಂತ್ರಶಾಸ್ತ್ರಕ್ಕೂ ಕೇವಲ ಮಂತ್ರಶಾಸ್ತ್ರಕ್ಕೂ ಅಜಗಜಾಂತರ ದೂರವಿದೆ. ಇದರಿಂದಲೇ ಹಿಂದೂಮತವು ತನ್ನಲ್ಲಿ ಬಂದು ಸೇರುವ ಪ್ರತಿಯೊಂದು ಪಂಥದವರನ್ನೂ ಅವರು ಮಂತ್ರವಾದಿಗಳೇ ಆಗಿರಲಿ, ಚೈತನ್ಯ

---

* Has a Right, ಅಧಿಕಾರಿಯಾಗಿರುವನು.

† Incorporated, ಉಪಾಧಿರಹಿತನಾದ.

‡ Reality.

§ Metaphysics

ವಾದಿಗಳೇ ಆಗಿರಲಿ, ಎಲ್ಲರನ್ನೂ ತನ್ನಲ್ಲಿ ಐಕ್ಯಮಾಡಿಕೊಂಡು ಆಯಾ ಪಂಥಗಳೆಲ್ಲವನ್ನೂ ಯೋಗ್ಯರೀತಿಯಲ್ಲಿ ಹೆಚ್ಚು ಗೌರವಕ್ಕೆ ತರುತ್ತವೆ.

## ೧೫. ಮತ್ತು ನಾಮರೂಪಗಳಿಂದ ಕೂಡಿದ ಸಗುಣೋಪಾಸನೆ ಯಿಂದ ನಿರ್ಗುಣೋಪಾಸನೆಗೆ ಎತ್ತಿದರು.

ಆದುದರಿಂದಲೇ ಕೇವಲ ಬಾಹ್ಯನಾಮಗಳಲ್ಲಿರುವ ಭೇದಗಳು ಹಿಂದುಗಳಿಗೆ ಸ್ವಲ್ಪವೂ ಕಷ್ಟಕರವಾಗಿಲ್ಲ. ಏಕೆಂದರೆ ಯಾವ ಹೆಸರನ್ನೇ ಆಗಲಿ ಆದರ ನಿಜಸ್ಥಿತಿಯಿಂದ ನೋಡಿದರೆ ಅದು ಸರ್ವ ಸಾಮಾನ್ಯ ವಾದ ತಾತ್ತ್ವಿಕ ಮತ್ತು ಧಾರ್ಮಿಕ ಸಂಪೂರ್ಣ ಗುಣಗಳನ್ನು ತೋರಿ ಸುತ್ತದೆ. ಎಲ್ಲಾ ಹೆಸರುಗಳೂ ಒಂದೇ ವಸ್ತುವನ್ನು ಸೂಚಿಸುತ್ತವೆ. ಎಂಬ ಅರ್ಥವನ್ನು ಈ ಹೆಸರುಗಳಲ್ಲಿರುವ ಐಕ್ಯತೆಯನ್ನು ನೋಡಿಯೇ ಜನರು ತಿಳಿದುಕೊಳ್ಳುತ್ತಾರೆ. ಆದುದರಿಂದಲೇ ಬ್ರಹ್ಮ ವಿಷ್ಣು ಮಹೇ ಶ್ವರ, ಬುದ್ಧ, ಕೃಷ್ಣ, ಕಾಳಿಕಾದಿ ಚಾರಿತ್ರಿಕ ನಾಮಗಳು ಅದ್ವಿತೀಯ ನಾದ ಪರಮಾತ್ಮನನ್ನು ವರ್ಣಿಸುವದಕ್ಕಾಗಿಯೇ ಹೆಚ್ಚು ಭೇದಬುದ್ಧಿಗೆ ಅವಕಾಶಕೊಡದಂತೆ ಏಕಾರ್ಥದಲ್ಲಿಯೇ ಹೆಚ್ಚಾಗಿ ಉಪಯೋಗಿಸಲ್ಪ ಟ್ಟಿವೆ. ತ್ರಿಲೋಕನಾಥನಾಗಿ ಶೈವರಿಂದ ಶಿವನೆಂದೂ, ವೇದಾಂತಿಗಳಿಂದ ಬ್ರಹ್ಮನೆಂದೂ, ಬೌದ್ಧರಿಂದ ಬುದ್ಧನೆಂದೂ, ನೈಯಾಯಿಕರಿಂದ ಮುಖ್ಯ ಕರ್ತೃವೆಂದೂ, ಜೈನರಿಂದ ಮುಕ್ತನೆಂದೂ, ಮೀಮಾಂಸಕರಿಂದ ಧರ್ಮತತ್ತ್ವ * ವೆಂದೂ ಪೂಜಿಸಲ್ಪಡುವ ಶ್ರೀ ಹರಿಯು ನಮ್ಮ ಪ್ರಾರ್ಥನಾ ಫಲವನ್ನೀಯಲಿ. † ಹೀಗೆಯೇ ಜನಗಳ ಮತಭೇದ ದಿಂದ ಪರಮಾತ್ಮನು ಬ್ರಹ್ಮ ವಿಷ್ಣು ಮಹೇಶ್ವರನೆಂದು ಬೇರೆಬೇರೆ

---

* Principle of law

† ಯಂಶೈವಾಸ್ಸಮುಪಾಸತೆ ಶಿವಇತಿ ಬ್ರಹ್ಮೇತಿ ವೇದಾನ್ತಿನಃ ।
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃಕರ್ತೇತಿ ನೈಯಾಯಿಕಾಃ॥
ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿಮೀಮಾಂಸಕಾಃ ।
ಸೋಯಂ ವೈವಿದಧಾತುವಾಂಛಿತಫಲಂ ತ್ರೈಲೋಕ್ಯನಾಥೋಹರಿಃ ॥

ಯಾಗಿ ಕರೆಯಲ್ಪಡುವನೆಂದು ಶ್ರೇಷ್ಠಜ್ಞಾನಿಗಳಾದ ಶಂಕರಾಚಾರ್ಯರು ಸೂಚಿಸುತ್ತಾರೆ. * ದಕ್ಷಿಣದೇಶದ ಸಾಮಾನ್ಯ ಜನರ ಸಾಂಗತ್ಯವೂ ಕೂಡ ಹೀಗೆಯೇ ಹೇಳುತ್ತದೆ:—

"ಪ್ರತಿಯೊಂದು ಕಡೆಯಿಂದಲೂ ನದಿಗಳು ಬೆಟ್ಟಗಳಿಂದ ಹರಿದು ಬಂದು ಮಹಾಸಾಗರವನ್ನು ಸೇರುತ್ತವೆ. ಮತ್ತು ಅವುಗಳ ಹೆಸರು ಅವುಗಳ ಮೂಲಸ್ಥಾನಗಳಷ್ಟು ಬೇರೆಬೇರೆಯಾಗಿದೆ. ಇದರಂತಲ್ಲವೇ ವಿವಿಧ ನಾಮಗಳಿಂದ ಕರೆಯಲ್ಪಟ್ಟಿದ್ದರೂ ಕೂಡ ಒಬ್ಬನೇ ಆದ ಪರಮಾತ್ಮನನ್ನೇ ಸಕಲಲೋಕದ ಜನರೂ ಪೂಜಿಸುತ್ತಾರೆ? " †

## ೩. ಜನರ ವಿಶೇಷತೆಯನ್ನಿಟ್ಟುಕೊಂಡೇ ಅವರಿಗೆ ಸಹಾಯ ಮಾಡಬೇಕು

### ೧೬. ಆಯಾ ಪಂಗಡದವರ ವಿಶೇಷತೆಯನ್ನು ಇಟ್ಟುಕೊಂಡೇ ಅವರಲ್ಲಿ ಪಾರಮಾರ್ಥಿಕ ಬುದ್ಧಿಯನ್ನುಂಟುಮಾಡಿದರು

ಇದರಿಂದ ಹಿಂದೂ ಸುಧಾರಕರು ಪ್ರತಿಯೊಬ್ಬ ಜನರೂ ತಮ್ಮ ತಮ್ಮ ಪೂರ್ವಸಂಬಂಧಗಳನ್ನು ಇಟ್ಟುಕೊಂಡು ತಮ್ಮ ತಮ್ಮ ವೈಶಿಷ್ಟ್ಯವನ್ನೂ ಅಭಿರುಚಿಗಳನ್ನೂ ಕಾಪಾಡಿಕೊಂಡಿರುವಂತೆ ಅವಕಾಶಕೊಡುತ್ತಾರೆ. ಏಕೆಂದರೆ ವಿದ್ಯಾರ್ಥಿಗಳು ತಮ್ಮ ಶಾಲೆಯ ವಿಚಾರದಲ್ಲಿ ಹೆಮ್ಮೆಯಿಂದಿರುವಂತೆ ಸರ್ವಜನರೂ ಕೂಡ ತಮ್ಮ ತಮ್ಮ ದೇವತೆಗಳ ವಿಷಯದಲ್ಲಿ ಹೆಮ್ಮೆಯಿಂದಿರುತ್ತಾರೆ. ಇದರಿಂದ ಇಂಥಾ ವಿದ್ಯಾರ್ಥಿಗಳನ್ನು ಶಾಲೆಯಿಂದ ಶಾಲೆಗೂ ಬದಲಾಯಿಸಬೇಕಾಗಿಲ್ಲ. ಮತ್ತು ಪ್ರತಿಯೊಂದು ಶಾಲೆಯಪೂಜ್ಯತೆಯನ್ನು ಹೆಚ್ಚಿಸುವುದಕ್ಕಾಗಿ ಕೈಲಾದಷ್ಟುಮಟ್ಟಿಗೆ ಪ್ರಯ

---

† ಹರಿಸ್ತುತಿ ೧೮

‡ ಗೋವರ್‌ರವರ 'ದಕ್ಷಿಣ ಹಿಂದೂಸ್ಥಾನದ ಸಾಮಾನ್ಯಜನರ ಹಾಡುಗಳು, (The Focksongs of Southern India)

ತ್ನ ಮಾಡುತ್ತಲೂ ಆದರ ಪರೀಕ್ಷಾ ಪ್ರಮಾಣಗಳನ್ನೂ ಆದರ್ಶಗಳನ್ನೂ ಉತ್ತಮ ಪಡಿಸುತ್ತಲೂ ಇವೆಲ್ಲರೆ ಪ್ರತಿಯೊಂದು ಶಾಲೆಯೂ ಸರ್ವರಿಗೂ ಬೇಕಾದ ಸಾಮಾನ್ಯ ಲಕ್ಷವನ್ನು ಸೇರುವಂತೆ ಸಹಾಯ ಮಾಡುತ್ತದೆ. ಅಂದರೆ ಈ ಪಾಠಶಾಲೆಗಳೆಲ್ಲವೂ ಒಂದೇ ವಾತಾವರಣದಿಂದ ಕೂಡಿದ್ದು ಒಂದೇ ಆದರ್ಶವನ್ನು ಸಿದ್ಧಿಸುವಂತೆ ಪಾಠ ಹೇಳಿಕೊಡುತ್ತಿರುವವರೆಗೂ ನಾವು ಯಾವ ಶಾಲೆಯಲ್ಲಿ ಓದಿದರೂ ಒಂದೇ, ಇಂಥಾ ಸ್ಥಳದಲ್ಲಿಯೇ ಓದಬೇಕೆಂಬ ಕ್ಲುಪ್ತವಿಲ್ಲ. ಹೀಗೆಂದರೆ ನಿಮ್ಮ ಬ್ಯಾಲಿಯಲ್ ಕಲಾ ಶಾಲೆ (College) ಯೇ ಶ್ರೇಷ್ಠವೆಂದೂ, ಮತ್ತು ಇಲ್ಲವೇ ಮ್ಯಾಗ್ಡಲೀನ್ ಶಾಲೆಯೇ ಅತಿನವೀನವಾದುದೂ ಎನ್ನುವ ಮೂಢವಾದ ಸ್ವದೇಶ ಪ್ರೀತಿಯುಳ್ಳ ಏಕಮತಾಭಿಮಾನಿಗಳು ಅಲ್ಲಲ್ಲಿ ಇದ್ದೇ ಇರುತ್ತಾರೆ. ಆದರೆ ನಿಷ್ಪಕ್ಷಪಾತರಾದ ಪ್ರೇಕ್ಷಕರಿಗೆ ಈ ಕಲಾಶಾಲೆಗಳು ಒಂದಕ್ಕಿಂತ ಒಂದು ಎತ್ತರವಾಗಿರುವ ಅಡ್ಡಸಾಲುಗಳ ಮಟ್ಟದಂತಲ್ಲದೆ ಒಂದೇ ಶಿಖರಕ್ಕೆ ಹೋಗುವ ನೇರಮಾರ್ಗಗಳಂತೆಯೇ ಕಾಣುತ್ತವೆ. ನಾವುಗಳು ಯಾವ ಶಾಲೆಯಲ್ಲಿ ಬೇಕಾದರೂ ಇರಬಹುದು, ಆದರೂ ಏಣಿಯ ಕೆಳಮೆಟ್ಟಲಿನ ಮೇಲಾದರೂ ಇಲ್ಲವೇ ಕೊನೆಯ ಮೆಟ್ಟಲಿನಮೇಲಾದರೂ ಇರಬಹುದು. ಅಂದರೆ ನಾವು ಎಲ್ಲಿರುವೆವು, ನಮ್ಮ ಸ್ಥಿತಿಯು ಏನೆಂಬ ವಿಚಾರದಲ್ಲಿ ಮುಖ್ಯವಾದುದು ನಮ್ಮ ಗುಣವೇ ಹೊರತು ಶಾಲೆಯಲ್ಲ. ಇದರಿಂದ ಹಿಂದೂ ಜನರಲ್ಲಿ ಉತ್ತಮರೂ ಅಯೋಗ್ಯರೂ ಇರುವಂತೆಯೇ ಅನ್ಯಮತಗಳಲ್ಲಿಯೂ ಉತ್ತಮರೂ ನೀಚರೂ ಇದ್ದೇ ಇರುವರು. ಕ್ರೈಸ್ತರಲ್ಲಿಯೂ ಉತ್ತಮರೂ ಅಯೋಗ್ಯರೂ ಎಷ್ಟೋಮಂದಿ ಇದ್ದೇ ಇರುವರು.

## ೧೭. ಪೂರ್ಣಜ್ಞಾನದಿಂದಲೇ ಬಲಾತ್ಕಾರವನ್ನು ಬಿಟ್ಟು ಸಹನೆಯಿಂದ ಇತರರನ್ನು ಮುಂದಕ್ಕೆ ತಂದೆವು.

ಹಿಂದೂ ಜನರ ಈ ಸುಧಾರಣೆಯಲ್ಲಿ ಜ್ಞಾನದೃಷ್ಟಿಯಿಂದಲೂ ಕರ್ಮದೃಷ್ಟಿಯಿಂದಲೂ ಎಷ್ಟೋ ಜನರು ತಪ್ಪು ಕಂಡು ಹಿಡಿದಿದ್ದಾರೆ. ನಿಮ್ಮ ಪಂಡಿತವರ್ಯರಾದ ಕ್ಲೆಮೆಂಟ್ ವೆಬ್ಬರು ಹಿಂಗೆ ಹೇಳುತ್ತಾರೆ:

ಪರಮಾತ್ಮನು ಅನಂತ ರೂಪಗಳಿಂದ ಪದೇ ಪದೆ ಕ್ಲುಪ್ತ ಕಾಲದಲ್ಲಿ ಅವತರಿಸುವನೆಂಬ ಅಭಿಪ್ರಾಯದಿಂದಲೂ. ಪ್ರತಿಯೊಬ್ಬ ದೇವತೆಯೂ, ಮತಪ್ರಚಾರಕನೂ, ಸಾಧುವೂ, ಭಕ್ತನೂ, ಪರಮಾತ್ಮನ ವಿಶೇಷರೂಪವೆಂಬ ನಂಬಿಕೆಯಿಂದಲೂ ಸರ್ವ ವಿಧವಾದ ಕಥೆಗಳನ್ನೂ ಮತ್ತು ಸಂಕೀರ್ತನೆಗಳನ್ನೂ ಮನ್ನಿಸುವುದರಿಂದಲೂ, ಲೋಕವಿರಕ್ತಿಯಿಂದ ಕೂಡಿದ ಯೋಗಾಭ್ಯಾಸಗಳ ಅತ್ಯಂತ ಸಿದ್ಧಿಗಳು ಎಷ್ಟೋ ಅಸಹ್ಯಕರಗಳೂ ಮತ್ತು ತುಚ್ಛವಾದವುಗಳೂ ಆಗಿ ಇದ್ದರೂ ಕೂಡ ತನ್ನ ಪೂರ್ವ ಸಂಬಂಧವನ್ನು ಕಳೆದುಕೊಳ್ಳದೆ ಉಳಿದ ಎಲ್ಲಾ ಮತಗಳಿಗಿಂತಲೂ ಸುಲಭತರವಾಗಿ ಸಾಮಾನ್ಯಧರ್ಮವಾಗಲು ಅವಕಾಶ ಹೊಂದಿತ್ತು. ಅಂದರೆ ಪ್ರತಿಯೊಂದು ಮತವೂ ಒಂದೊಂದು ಪಂಗಡಕ್ಕಾಗಲೀ ವ್ಯಕ್ತಿಗಾಗಲೀ ಬೇಕಾಗಿರುವ ವಿಶೇಷರೂಪವೇ ಸರಿಯೆಂದು ತಿಳಿದು ನಿತ್ಯವಾದ ಪರಮಾತ್ಮನನ್ನು ಸಾಕ್ಷಾತ್ಕರಿಸುವುದಕ್ಕೆ ಸರ್ವಜನರೂ ಮಾಡುತ್ತಿರುವ ಪ್ರಯತ್ನವನ್ನೊಡಗೊಂಡು ತಾನು ಲೋಕಕ್ಕೆಲ್ಲಾ ಪ್ರಕಾಶವಾಗುವ ಇಲ್ಲವೇ ಆದರ್ಶವಾಗುವ ಅನಂತ ರೂಪಗಳಲ್ಲಿ ಉದಾಸೀನದಿಂದಿದ್ದು ತನ್ನ ನಿಜ ಸ್ವಭಾವದಿಂದ ಕೂಡಿದೆ.'* ಈ ವ್ಯಾಖ್ಯೆಯು ಹಿಂದೂ ಮತದ ಸಾಮಾನ್ಯ ನಡತೆಯನ್ನು ಸೂಚಿಸುತ್ತಿದ್ದರೂ, ನಮ್ಮ (ಹಿಂದೂ) ಮತ ದೃಷ್ಟ್ಯಾ ಭಿನ್ನ ಮತಾಂತರಗಳಲ್ಲಿ ಒಂದಕ್ಕಿಂತ ಒಂದು ಉತ್ತಮವೆಂದು ಕಾಣುವುದಿಲ್ಲವೆಂದು ಹೇಳುವಾಗ ಈ ವ್ಯಾಖ್ಯೆಯು ಅಷ್ಟೊಂದು ಸಮ್ಮತವಾದುದಲ್ಲ. ಏಕೆಂದರೆ ಹಿಂದುಗಳು ಉದಾಸೀನತೆಯನ್ನು ಸಹನಾಗುಣವೆಂದು ತಪ್ಪು ತಿಳಿಯುವುದಿಲ್ಲ. ಮತ್ತು ಎಲ್ಲಾ ಧರ್ಮಗಳೂ ನಿತ್ಯ ತತ್ತ್ವವನ್ನು ಬೋಧಿಸುತ್ತಿದ್ದರೂ ಅವೆಲ್ಲವೂ ಒಂದೇ ಸಮನಾದವುಗಳೆಂದು ನಾವೆಂದಿಗೂ ಹೇಳುವುದಿಲ್ಲ. ಈ ವಿಷಯವನ್ನು ಹಿಂದಿನ ಉಪನ್ಯಾಸದ ಅಂತ್ಯಭಾಗದಲ್ಲಿ ಸ್ವಲ್ಪ ಮಟ್ಟಿಗೆ ತಿಳಿಸಿದೆನು. ಆದುದರಿಂದ ಇಲ್ಲಿ ಇನ್ನು ಹೆಚ್ಚಾಗಿ ಹೇಳಬೇಕಾಗಿಲ್ಲ. ಹಿಂದೂಮತದಲ್ಲಿ ಪ್ರತಿಯೊಬ್ಬ ಮ

---

* ನೀಡ್‌ಹ್ಯಾಮ್‌ರವರ " ಶಾಸ್ತ್ರ, ಮತ ಮತ್ತು ತತ್ತ್ವ. " (Science, Religion and Reality). ಪುಟ. ೩೩೪-೫.

ನುಷ್ಯನೂ ಜೀವನ ರಹಸ್ಯವೇನೆಂದು ತಾನು ಪರಮಪುರುಷಾರ್ಥ*ವನ್ನು ಪಡೆಯುವವರೆವಿಗೂ ಧ್ಯಾನಿಸುತ್ತಿರಬೇಕು. ಸಾಮಾನ್ಯ ಭಾವಗಳನ್ನು ಹೆಚ್ಚು ಶಕ್ತಿಯಿಲ್ಲದೆ ಕೂಡಲೇ ಮುಂದೆ ಬರಲು ಸಾಧ್ಯವಿಲ್ಲದ ಜನರ ಉಪಯೋಗಕ್ಕಾಗಿ ಬಿಟ್ಟುಕೊಂಡು ಬಂದಿದ್ದರೂ ಎಲ್ಲಾ ಕಡೆಯಲ್ಲಿಯೂ ಇದಕ್ಕಿಂತ ಉತ್ತಮಭಾವವನ್ನೂ ಹೆಚ್ಚು ಶುದ್ಧವಾದ ಪೂಜೆಯನ್ನೂ ಶ್ಲಾಘಿಸುತ್ತಾರೆ. ಅಂದರೆ ಅಭಿವೃದ್ಧಿ ಮಾರ್ಗದಲ್ಲಿ ನಡೆಯುತ್ತಿರುವವರನ್ನು ಇನ್ನೂ ಜಾಗ್ರತೆಯಿಂದ ಹೋಗುವಂತೆ ಬಲಾತ್ಕಾರ ಮಾಡುವುದು ಹಿಂದೂಮತಕ್ಕೆ ಸರಿಯಾಗಿ ಕಾಣುವುದಿಲ್ಲ. ನಮ್ಮ ಪರಮಾನುಭವಗಳನ್ನು ತಿಳಿದುಕೊಳ್ಳಲಾರದ ಜನರಿಗೆ ಈ ವಿಷಯಗಳನ್ನು ಕುರಿತು ನಾವು ಹೇಳುತ್ತಿರುವಾಗ, ಕಣ್ಣಿಲ್ಲವ ಹುಟ್ಟು ಗುರುಡರಿಗೆ ಕಣ್ಣುಳ್ಳ ಜನರು ತಮ್ಮ ನೇತ್ರಾನುಭವಗಳನ್ನು ಹೇಳಿದಂತೇ ಆಗುವುದು. ಏಕೆಂದರೆ ನಾವು ಇವರ ಅಂತಶ್ಚಕ್ಷುಗಳನ್ನು ಕಾಣುವಂತೆ ಮಾಡುವವರೆಗೂ ಋಷಿಪ್ರೋಕ್ತಗಳಾದ ವಿಷಯಗಳನ್ನು ಇವರು ಕಂಡು ತಿಳಿದುಕೊಳ್ಳಲಾರರು. ಆದುದರಿಂದ ಜನರ ವಿದ್ಯಾಭ್ಯಾಸ, ಆವರಣ, ಧಾರ್ಮಿಕ ಮತ್ತು ಬೌದ್ಧಿಕ ಶಕ್ತಿಗಳನ್ನ ಅನುಸರಿಸಿರುವ ಸ್ವಾಭಾವಿಕ ಬುದ್ಧಿಯನ್ನು ಹೆಚ್ಚು ಕದಲಿಸ (interfere) ದಿದ್ದರೂ, ಹಿಂದೂ ಮತವು ಈ ಜನರು ಎಲ್ಲೆಲ್ಲಿ ನಿಂತಿದ್ದರೂ ಸರಿಯೇ ಅವರವರಿಗೆ ಬೇಕಾದ ಸಹಾಯವನ್ನೂ ಪ್ರೀತಿಯನ್ನೂ ತೋರಿಸುತ್ತಾ ಇವರನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದೊಯ್ಯುತ್ತದೆ. ಹೀಗೆ ಪರಮಾರ್ಥ ಸಾಧನದಲ್ಲಿ ಜನರು ಕ್ಲುಪ್ತ ರೀತಿಯಲ್ಲಿ ವರ್ತಿಸಬೇಕೆಂದು ಬಲಾತ್ಕರಿಸದೆ ಜನರು ತಮ್ಮ ತಮ್ಮ ಬೌದ್ಧಿಕ ಮಾನಸಿಕ ಶಕ್ತಿಗಳನ್ನೂ † ತತ್ವಾನ್ವೇಷಣ ‡ ವನ್ನೂ ಹೆಚ್ಚಿಸುತ್ತಿರಬೇಕೆಂದು ತೋರುತ್ತದೆ ಮತ್ತು ಬುದ್ಧಿದೋಷ ಅಥವಾ ಜ್ಞಾನಕ್ಕೆ ಸಂಬಂಧಪಟ್ಟ ತಪ್ಪು ಧಾರ್ಮಿಕತಪ್ಪಲ್ಲ. ಏಕೆಂದರೆ ಬುದ್ಧಿ ದೌರ್ಬಲ್ಯವು ಶೀಲಹಾನಿಯಲ್ಲ (ಅಂದರೆ ಧರ್ಮ ಗ್ಲಾನಿಯನ್ನು ಸೂಚಿ

* (Revelation) † Intellectual conscience

‡ Sensibility to truth

ಸುವುದಿಲ್ಲ). ಹೀಗಲ್ಲದೆ ಮೋಕ್ಷ ಪ್ರಾಪ್ತಿಗೆ ಪರಮಾತ್ಮ ಸ್ವರೂಪದ ಪೂರ್ಣ ಜ್ಞಾನವು ಅವಶ್ಯಕವೆಂದರೆ ನಮ್ಮಲ್ಲಿ ಎಷ್ಟು ಜನರು ತಾನೇ ನರಕ ಯಾತನೆಯಿಂದ ಪಾರಾಗುವೆವು ? ಇದಕ್ಕಾಗಿಯೇ ಶಕ್ತಿಗೀತೆಯು ಹೀಗೆ ಸಾರುತ್ತಿದೆ:— 'ಹೇ ಜಗನ್ಮಾತೆಯೇ, ತತ್ತ್ವಶಾಸ್ತ್ರವನ್ನರಿಯದೆ, ಭಾವನಾತತ್ತ್ವಸಾರಗಳಿಂದ ‡ ಕೂಡಿದ ರೂಪಯುಕ್ತಳಾದ ನಿನ್ನನ್ನು ಅರಿಯಲಾರದ ಸಾಮಾನ್ಯ ಭಕ್ತಿ ಕೋಟಿಯನ್ನು ಪ್ರೀತಿಸಿ ಕಾಪಾಡುವುದರಲ್ಲಿ ನಿನ್ನ ವಾತ್ಸಲ್ಯಕ್ಕೆ ಪಾರವೇ ಇಲ್ಲ.' ಅಂದರೆ ಪರಮಾತ್ಮನನ್ನು ನಾವು ತಿಳಿಯದಿದ್ದರೂ ಅವನೇನೋ ನಮ್ಮನ್ನು ಚೆನ್ನಾಗಿ ತಿಳಿದೇ ಇರುವನು

## ೧೮. ಅಂತಶ್ಶಕ್ತಿಯನ್ನು ವೃದ್ಧಿಪಡಿಸದೆ ಬಾಹ್ಯ ನಿರ್ಬಂಧನೆಯಿಂದ ಏನೂ ಪ್ರಯೋಜನವಿಲ್ಲ

ಜೀವಾತ್ಮನ ಬೆಳವಣಿಗೆಯನ್ನು ತಡೆಯುತ್ತಿರುವ ಬಂಧನಗಳನ್ನು ಮುರಿದು ದಾಟಿಸುವ ಪರಮಾತ್ಮನ ಶಕ್ತಿಯಲ್ಲಿ ಹಿಂದೂ ಜನರಿಗೆ ಪೂರ್ಣ ವಿಶ್ವಾಸವುಂಟು. ಸರ್ವ ಮತಗಳಲ್ಲಿಯೂ ಮುಖ್ಯ ತತ್ತ್ವವೆಂದು ಹೇಳಲ್ಪಟ್ಟಿರುವ ಪರಮಾತ್ಮನು ಆಯಾ ಜನರಲ್ಲಿ ರೂಢಿಯಾಗಿ ಬಂದಿರುವ ನಂಬಿಕೆಗಳನ್ನು ಆಗಾಗ್ಗೆ ಅಭಿವೃದ್ಧಿಪಡಿಸುತ್ತಾನೆ. ಮತ್ತು ಒಂದು ವಿಧವಾದ ನಿಯಮ (rules) ಗಳಿಗಿಂತ ಉತ್ತಮವಾದ ಇನ್ನೊಂದು ವಿಧದ ನಿಯಮಗಳನ್ನು ಬಹು ಕ್ಷಿಪ್ರದಲ್ಲಿ ಸೇರಲು ಮಾಡುವ ಎಲ್ಲಾ ಪ್ರಯತ್ನಗಳೂ ಅಭಿವೃದ್ಧಿಯನ್ನುಂಟುಮಾಡದೆ ಹಾನಿಕರವಾಗುವುವೆಂಬುದು ಅನುಭವವೇದ್ಯವಾಗಿಯೇ ಇದೆ. ಈಶ್ವರನ ಧರ್ಮ ಕರ್ತರು † ಜನರ ಆಚರಣೆಯನ್ನು ಸಾವಧಾನದಿಂದ ನೋಡುತ್ತಿರುವರು.‡ ಮತ್ತು ಉತ್ಸಾಹಭರಿತರಾದ ಸಂಘ ಸುಧಾರಕರು ತಮ್ಮ ಜೀವಿತಕಾಲದಲ್ಲಿಯೇ ಲೋಕವನ್ನುದ್ಧರಿಸಬೇಕೆಂದು ಸತತ ಪ್ರಯತ್ನ ಮಾಡುತ್ತಿರುವಲ್ಲಿ ತಮ್ಮ ತಮ್ಮ ಉದ್ದಿಷ್ಟ ಅಭಿಪ್ರಾಯಗಳನ್ನು ‡ ರೂಢಿಯಲ್ಲಿ ತರಬೇಕೆಂದು ಹೆಚ್ಚು

---

* Ideal essences † mills of God ‡ ru d

§ Favourite programme

ತವಕ ಪಟ್ಟರೆ ಇವರೆಲ್ಲರೂ ಸಾಧಾರಣವಾಗಿ ನಿರಾಶರಾಗುತ್ತಾರೆ. ಏಕೆಂದರೆ ಮನುಷ್ಯ ಸ್ವಭಾವವನ್ನು ಹೀಗೆ ತೀವ್ರವಾಗಿ ಮುಂದೆವರಿಯುವಂತೆ ಬಲಾತ್ಕರಿಸಲಾಗುವುದಿಲ್ಲ. ಮತ್ತು ಯಾವುದೊಂದು ಮತಕ್ಕೆ ವಿರುದ್ಧವಾದ ನಂಬಿಕೆಯುಳ್ಳ ಜನರಲ್ಲಿ ಸರ್ವ ಸಾಮಾನ್ಯವಾಗುವಂತಹ ಪೂಜಾ ನಂಬಿಕೆಗಳನ್ನು ರೂಢಿಯಲ್ಲಿ ತರಲು ವಿರುದ್ಧ ಭಾವಗಳನ್ನು ಬಲಾತ್ಕಾರದಿಂದ ದೂರೀಕರಿಸುವ ಕಾರ್ಯವು ಸರಿಯೆಂದು ಯಾವ ಹಿಂದೂ ಜನರೂ ಒಪ್ಪುವುದಿಲ್ಲ.* ಅಂದರೆ ಮೋಕ್ಷಪ್ರಾಪ್ತಿಗೆ ಯಾವುದೊಂದು ಮಾರ್ಗವಾದರೂ ಕ್ಲುಪ್ತವಾಗುವಂತೆ ರಾಜಶಾಸನವಾಗಬೇಕೆಂದು ನಮ್ಮ ಜನಗಳು ಸ್ವಲ್ಪವೂ ಕೋರುವುದಿಲ್ಲ. ಮತ್ತು ಇಂಥಾ ನಿಯಮಗಳಲ್ಲಿ ನಮಗೆ ಸ್ವಲ್ಪವೂ ನಂಬಿಕೆಯಿಲ್ಲ. ಏಕೆಂದರೆ ಪರಮಾತ್ಮನ ಪೂಜಾ ಸ್ವಭಾವಗಳಲ್ಲಿ ಯಾವುದೊಂದು ಕ್ಲುಪ್ತವಾದ ನಂಬಿಕೆಯುಳ್ಳವರಿಗೆ ಮಾತ್ರವಲ್ಲದೆ ಇತರರಿಗೆ ಈ ಮಾರ್ಗವಲ್ಲವೆನ್ನುವಷ್ಟು ಮಟ್ಟಿಗೆ ಇದರ ಧರ್ಮವು (ಎಂದಿಗೂ) ಸಂಕುಚಿತವಾಗಿಲ್ಲ. ಪರಮಾತ್ಮನು ಸರ್ವವ್ಯಾಪಿಯೂ ದಯಾಪರನೂ ಎಂದಮೇಲೆ ಇಂಥಾ ಇತರರಿಗೆ ಅವಕಾಶವಿಲ್ಲದಂತಹ ನಿರಂಕುಶಪ್ರಭುತ್ವವೇ ಅವನಲ್ಲಿ ಬದ್ಧಮೂಲವಾಗಿರುವುದೆಂದು ಒಪ್ಪಲಾಗುವುದಿಲ್ಲ. ಮತ್ತು ಯಾವುದೊಂದು ಜನರು ಈಶ್ವರ ಪ್ರಿಯರೆಂದೂ, ಲೋಕದ ಮತಗಳಲ್ಲೆಲ್ಲಾ ಈ ಜನರ ಮತವೇ ಮುಖ್ಯವಾದದ್ದು, ಹೆಚ್ಚು ಬೆಲೆಬಾಳುವಂತಹ ಬೆಲೆಯುಳ್ಳದ್ದೆಂದೂ, ಮತ್ತೆ ಉಳಿದ ಎಲ್ಲಾ ಜನರೂ ಇದರಿಂದ ಪಾಠ ಕಲಿಯಬೇಕೆಂದೂ, ಇಲ್ಲವೆ ಆಧ್ಯಾತ್ಮಿಕ ಮಾರ್ಗದಲ್ಲಿ ಅಧೋಗತಿಯನ್ನು ಪಡೆಯಬೇಕೆಂದೂ ಹೇಳುವುದು ಪರಮಾತ್ಮನಿಗಾಗಲೀ ಮಾನವರಿಗಾಗಲೀ ತಕ್ಕ ಮಾತಲ್ಲ.

## ೧೯. ಜನರ ಆಚಾರವೇ ಮುಖ್ಯವಲ್ಲದೆ, ಅವರ ಕೇವಲ ನಂಬಿಕೆಗಳು ಮುಖ್ಯವಲ್ಲ

ಮುಖ್ಯ ವಿಷಯವೇನೆಂದರೆ ಲೋಕಕ್ಕೆ ಬೇಕಾದುದು ನಮ್ಮ

---

* ನಂಬು, believe

ಆಚಾರವೇ ಹೊರತು ಕೇವಲ ಡಾಂಭಿಕ ನಂಬಿಕೆ * ಯಲ್ಲ. ಜನರ ಕರ್ಮ ಪರಿಪಾಕಗಳಿಂದ ಅವರ ಯೋಗ್ಯತೆಯನ್ನು ತಿಳಿಯಬೇಕೇ ಹೊರತು ಅವರ ಕೇವಲ ನಂಬಿಕೆಗಳನ್ನು ನೋಡಿದರೆ ಏನೂ ಪ್ರಯೋಜನವಿಲ್ಲ. ಏಕೆಂದರೆ ಮತವು ಕೇವಲ ನಿಜವಾದ ನಂಬಿಕೆಯಲ್ಲ. ಮತ್ತು ಸದಾಚಾರವೇ ಸರಿ. † ಇದರಿಂದಲೇ ನಿಜವಾಗಿಯೂ ಧಾರ್ಮಿಕರಾದ ಜನರು ಇತರ ಜನರ ನಂಬಿಕೆಗಳು ನಾನಾರೂಪವಾಗಿವೆಯಲ್ಲ ಎಂದು ಸ್ವಲ್ಪವೂ ಚಿಂತಿಸುವುದಿಲ್ಲ. "ಕೇವಲ ಇವರೇ ಅಲ್ಲದೆ ಎಷ್ಟೋ ಮಂದಿ ಬೇರೆ ಜನಗಳೂ ಕೂಡ ನನ್ನ ಶಿಷ್ಯರಾಗಿದ್ದಾರೆ" ಎಂಬ ನಿಮ್ಮ ಏಸು ಕ್ರಿಸ್ತನ ಮಹಾವಾಕ್ಯವನ್ನು ಕೇಳಿ ಈ ಏಸುವು ಯಹೂದ್ಯರೆಂಬ ಜನರಲ್ಲಿ ಹುಟ್ಟಿ ಅವರ ಜಾತಿಯಲ್ಲಿಯೇ ಇದ್ದು ಪರಂಧಾಮವನ್ನೈದಿದವನು. ಆದರೂ ಹೀಗೆ ತನ್ನ ಒಡಹುಟ್ಟಿದವರಾದ ಯಹೂದ್ಯರಲ್ಲಿ "ಯಹೂದ್ಯರಾಗಿರುವುದು ತಪ್ಪು; ಆದುದರಿಂದ ನೀವೆಲ್ಲರೂ ಕ್ರೈಸ್ತರಾಗಿರೆಂ"ದು ಹೇಳಲಿಲ್ಲ. ಇದು ಬಿಟ್ಟು ಈ ತನ್ನ ಜನಗಳು ತಮ್ಮ ಮತವನ್ನು ಎಲ್ಲಾ ಅಧರ್ಮಗಳಿಂದ ಬಿಡಿಸಿ ಶುದ್ಧೀಕರಿಸಲು ತನ್ನ ಸರ್ವ ಪ್ರಯತ್ನವನ್ನೂ ಮಾಡಿದನು. ಇಷ್ಟೇಕೆ, ಅವನೇನಾದರೂ, ನಮ್ಮ ಹಿಂದೂ ಜನರಲ್ಲಿ ಹುಟ್ಟಿದ್ದ ಪಕ್ಷದಲ್ಲಿ ಇಲ್ಲಿಯೂ ಕೂಡ ಅದೇ ಕೆಲಸವನ್ನು ಮಾಡುತ್ತಿದ್ದನು. ಏಕೆಂದರೆ ನಿಜವಾದ ಸುಧಾರಕ ಜನರ ಸಂಪ್ರದಾಯಗಳನ್ನು ಹೆಚ್ಚಿಸಿ ಶುದ್ಧಿ ಪಡಿಸುವವರೇ ಹೊರತು ಅವುಗಳನ್ನು ಸುಮ್ಮನೆ ತುಚ್ಛೀಕರಿಸುವುದೂ ಇಲ್ಲ, ಅಲಿಗಳೆಯುವುದೂ ಇಲ್ಲ

* Creed

† ನಿಮ್ಮ ಶ್ರೇಷ್ಠ ಜ್ಞಾನಿಗಳಾದ ಸ್ಪಿನೋಸಾರವರ ವಾಕ್ಯವನ್ನು ಕೇಳಿ:— 'ಮತವೆಂಬುದು ಸಕಲಮಾನವ ಜಾತಿಗೂ ಸಾಮಾನ್ಯ (Universal) ವಾಗಿದೆ; ಹೇಗೆಂದರೆ, ಎಲ್ಲೆಲ್ಲಿ ದಾನ ಧರ್ಮಗಳು ಆಜ್ಞಾವಿಧಿಗಳಷ್ಟು ಶಕ್ತಿಯುತವಾಗಿರುವುವೋ, ಅಲ್ಲೆಲ್ಲಾ ಈಶ್ವರನ ಪರಮಪದವು ಮೂರ್ತಿವತ್ತಾಗಿರುತ್ತದೆ."

**೨೦. ಇದು ಬಿಟ್ಟು ದುರಭಿಮಾನಗಳೆಲ್ಲವೂ ಕೇವಲ ಸ್ವಾರ್ಥವಾದ ವುಗಳೇಸರಿ.**

ಇದರಿಂದೆಲ್ಲ ಒಟ್ಟು ಮಾತೇನೆಂದರೆ ಸತ್ಯಕ್ಕಿಂತ ಹೆಚ್ಚಾಗಿ ತಮ್ಮ ತಮ್ಮ ಕುಲಾಚಾರಗಳನ್ನೇ ಅತಿಯಾಗಿ ಪ್ರೀತಿ ಮಾಡುವ ಜನರು ಬರು ಬರುತ್ತಾ ಕೊನೆಗೆ ತಮ್ಮ ಮತಕ್ಕಿಂತಲೂ ತಮ್ಮನ್ನೇ ಹೆಚ್ಚಾಗಿ ಪ್ರೀತಿಸು ತ್ತಾರೆ. ನಮ್ಮಲ್ಲಿ ಕೆಲವರು ಕ್ರಿಸ್ತಮತವೇ ಲೋಕದಲ್ಲೆಲ್ಲಾ ಹೆಚ್ಚು ನಿಜವಾದ ಮತವೆಂದು ತಿಳಿಯೋಣ ಆದರೆ ಸ್ವಲ್ಪ ಕಾಲದಲ್ಲಿಯೇ ನಾವು ಈ ಮತದಲ್ಲಿ ಪ್ರತಿ ಪಕ್ಷದವರೇ* ಉತ್ತಮರೆಂದು ಹೇಳುತ್ತೇವೆ; ಸ್ವಲ್ಪ ಕಾಲವಾದ ಕೂಡಲೇ ಇವರಲ್ಲಿಯೂ ಎಪಿಸ್ಕೋಪಿಜಾತಿಯವರೇ(Episcopelions) ಉತ್ತಮರೆನ್ನುತ್ತೇವೆ, ಇನ್ನೂ ಸ್ವಲ್ಪ ಕಾಲವಾದಮೇಲೆ ಇವರಲ್ಲಿಯೂ ಹೈಚರ್ಚ್ (High Church) ಜನರೇ ಅತ್ಯುತ್ತಮರೆನ್ನು ತ್ತೇವೆ. ಕೊನೆಗೆ ಈ ಹೈಚರ್ಚ್ ಮತದಲ್ಲಿಯೂ ನಮ್ಮ ಸ್ವಂತ ಅಭಿ ಪ್ರಾಯವೇ ಅತ್ಯುತ್ತಮವೆನ್ನುತ್ತೇವೆ.†

**೨೧. ಆದರೂ ಆಯಾ ಜನರಲ್ಲಿ ಅವರವರ ವಿಶೇಷತೆಯು ಇರು ವುದು ಬಹಳ ಅವಶ್ಯಕವಾಗಿದೆ**

ಇದು ಬಿಟ್ಟು ನಮ್ಮ ಹಿಂದೂ ಜನರು ಹೇಳುವಂತೆ ಪ್ರತಿಯೊಬ್ಬ ಮಾನವನೂ, ಪ್ರತಿಯೊಬ್ಬ ಜನರೂ, ಜನಾಂಗವೂ ಪೂಜಾರ್ಹವಾದ ವಿಶೇ ಷ ಗುಣವನ್ನು ಹೊಂದಿರುವರೆಂಬ ಭಾವವು ದಿನೇದಿನೇ ಹೆಚ್ಚುತ್ತಾ ಇದೆ. ಇದರಿಂದ ನಾವೆಲ್ಲರೂ ಪ್ರತಿಯೊಬ್ಬ ಜನರಿಗೂ ‡ ಅವರವರ ವಿಶೇಷ ಗುಣವನ್ನು ಅಭಿವೃದ್ಧಿ ಪಡಿಸಲು ಬೇಕಾದ ಸರ್ವ ಸ್ವಾತಂತ್ರ್ಯವನ್ನೂ ಆಯಾ ಜನರಿಗೆ ಕೊಟ್ಟೇ ಕೊಡಬೇಕು. ವಿಶೇಷತೆಯೊಂದ ಮೇಲೆ ಅದನ್ನು ಇತರರಿಗೆ ತಿಳಿಸಲಾಗುವುದಿಲ್ಲ, ಮತ್ತು ಅದರ ಸ್ವಭಾವವೇ

---

* Protestants

† Heading, ಜಾತಿಪ್ರತಿಷ್ಠೆ

‡ Group

ಹೀಗೆ ಅದ್ವಿತೀಯ ಗುಣದಿಂದಿರುವುದೇ ಆಗಿದೆ. ಮತ್ತು ಒಬ್ಬನಿಗೆ ಪ್ರಯೋಜನವಾಗಿರುವ ವಸ್ತುವು ಇತರರಿಗೂ ಕೂಡ ಅಷ್ಟು ಮಟ್ಟಿಗೆಯೇ ಉಪಯೋಗಕ್ಕೆ ಬರುವುದೆಂದರೆ ಸತ್ಯ* ಸ್ವಭಾವವನ್ನು ನಿರ್ಲಕ್ಷ್ಯ ಮಾಡಿದಂತಾಗುವುದು. ಇಷ್ಟೇ ಅಲ್ಲದೆ ಈ ಲೋಕವೂ ಕೂಡ ವಿವಿಧ ಸ್ವಭಾವಗಳುಳ್ಳ ಸರ್ವ ಮಾನವಕೋಟಿಯನ್ನೂ ತನ್ನಲ್ಲಿ ಇಟ್ಟುಕೊಳ್ಳುವಷ್ಟು ದೊಡ್ಡದಾಗಿದೆ.

## ೨೨. ತಪ್ಪುಗಳನ್ನು ಮೂಲೋತ್ಪಾಟನೆ ಮಾಡುವನೇ ಹೊರತು ಸುಮ್ಮನೇ ಮೇಲೆಮೇಲೆ ನೋಡಿ ಬಿಡುವುದಿಲ್ಲ

ಕೆಲವು ಜನರು ಹಿಂದೂಮತವು ತನ್ನ ಜನರಲ್ಲಿ ಜೀವನಮಾರ್ಗವು ಸ್ವೇಚ್ಛೆಯಾಗಿಯೂ ವಿಶಾಲವಾಗಿಯೂ ಇರುವಂತೆ ಸಹಾಯಮಾಡಿಲ್ಲವೆಂದು ಆಕ್ಷೇಪಿಸುತ್ತಾರೆ. ಆದರೆ ಇಂಥಾ ಅನಿರ್ದಿಷ್ಟವಾದ ಆಕ್ಷೇಪಣೆಯನ್ನು ಪರಿಹರಿಸುವುದು ಕಷ್ಟಸಾಧ್ಯವೇ ಸರಿ. ಏನೇ ಆಗಲಿ, ಹಳೆಯ ಅಭಿಪ್ರಾಯಗಳನ್ನು ಬಲಾತ್ಕಾರದಿಂದ ನಾಶಮಾಡಿದ್ದರೆ ಇದುವರೆಗೆ ದೊರೆತಿರುವ ಸಂಸ್ಕಾರಕ್ಕಿಂತಲೂ ಹೆಚ್ಚಾದ ಅಭಿವೃದ್ಧಿಯನ್ನು ಹಿಂದೂ ಜನರು ಪಡೆಯುತ್ತಿದ್ದರೋ ಎಂದು ದೊಡ್ಡ ಶಂಕೆಯುಂಟಾಗುತ್ತದೆ ಅಂದರೆ ಸಾವಧಾನವಾದ ಅಭಿವೃದ್ಧಿಯಿಂದುಂಟಾಗುವ ಸುಧಾರಣೆಯನ್ನು ಬಿಟ್ಟು ಮತಪರಿವರ್ತನೆಯನ್ನು ಕೈಗೊಂಡಿದ್ದರೆ ಇಷ್ಟು ಗುಣವುಂಟಾಗುತ್ತಿತ್ತೇ ಎಂಬ ಮಹಾಶಂಕೆಯುಂಟಾಗುತ್ತದೆ. ನಮ್ಮ ದೇಶದ ವನವೃಕ್ಷಗಳಂತೆ ವಿಶಾಲವಾಗಿ ಬೆಳೆದಿರುವ ಮಂತ್ರ (magic) ಮತ್ತು ಗಹನವಿದ್ಯೆಗಳನ್ನು† ಹಿಂದೂ ಜನರು ನಿರ್ದಯವಾಗಿ ಕತ್ತರಿಸಲಿಲ್ಲ. ಏಕೆಂದರೆ ಇವರಿಗೆ ವೃಕ್ಷಚ್ಛೇದನೆಗಿಂತಲೂ ಮೂಲೋತ್ಪಾಟನೆಯಲ್ಲಿಯೇ ಹೆಚ್ಚು ಆಸಕ್ತಿಯಿದೆ.

---

* Reality, ಪರಮಾತ್ಮ

† Obscurantism, ಕಷ್ಟವಿಷಯಗಳು

## ೨೩ ಆದರೂ ಮೂಢಾಚಾರಗಳೂ ಎಲ್ಲಾ ಜನರಲ್ಲಿಯೂ ಇನ್ನೂ ಇದ್ದೇ ಇರುವುವು

ಹಿಂದೂ ಮತವು ಅತ್ಯಂತ ಉನ್ನತಸ್ಥಿತಿಯಲ್ಲಿದ್ದಾಗ ಮಾನವ ಗೌರವ ಮತ್ತು ಸತ್ಯಪ್ರೀತಿಯೆಂಬ ಎರಡು ಧರ್ಮಗಳ ಅನುಷ್ಠಾನದಿಂದ ಹಿಂದೂಜನರ ಧಾರ್ಮಿಕ ಜೀವನದಲ್ಲಿ ಹೆಚ್ಚು ಅಭಿವೃದ್ಧಿ ಇದ್ದರೂ, ಈಚೀಚಿನ ಕಾಲದಲ್ಲಿ ಹಿಂದೂಜನರಲ್ಲಿ ಬಲಹೀನತೆಯುಂಟಾಗಿ ಇವರಲ್ಲಿ ಉತ್ಸಾಹಶಕ್ತಿಯು ಕುಂದಿದೆ. ಇದರಿಂದ ಹಿಂದೂ ಜನರಲ್ಲಿ ಎಷ್ಟೋ ಮಂದಿ ಕೇವಲ ಮೂಢಾಚಾರಗಳಲ್ಲಿಯೇ ಮಗ್ನರಾಗಿದ್ದಾರೆ; ಆದರೆ ಕೀಳು ನಾಗರೀಕತೆಯನ್ನು ತಮ್ಮ ಉತ್ತಮನಾಗರೀಕತೆಯಿಂದ ಹಿಂದಕ್ಕೆ ತಳ್ಳಿರುವ ದೇಶಗಳಲ್ಲಿಯೂ ಕೂಡ ಆ ಕೀಳುನಾಗರೀಕತೆಗಳು ಇನ್ನೂ ಅಲ್ಲಲ್ಲಿ ಇದ್ದೇ ಇರುವುವು. ಇಂಥಾ ಅನಾಗರಿಕರನ್ನು ಕಾಣಲು ನಾವೇನು ದೂರ ಹೋಗಬೇಕಾಗಿಲ್ಲ. ಏಕೆಂದರೆ ಈ ವಿಷಯದಲ್ಲಿ ಶ್ರೇಷ್ಠಪಂಡಿತ ರಾದ ಸರ್ ಜೇಮ್ಸ್ ಫ್ರೇಸರ್‌ರವರು ಹೀಗೆ ಹೇಳುತ್ತಾರೆ:—'ನಮ್ಮ ಆಧುನಿಕ ಯೂರೋಪ್ ದೇಶದ ಅಜ್ಞರೂ ಮೂಢಾಚಾರಗಳಲ್ಲಿರುವ ವರೂ ಆದ ಜನರು ಸಾವಿರಾರು ವರ್ಷಗಳ ಹಿಂದೆ ಇದ್ದ ಈಜಿಪ್ಟ್ ಮತ್ತು ಇಂಡಿಯಾದೇಶದ ಜನರಂತೆಯೂ ಲೋಕದ ಅತ್ಯಸೀಮೆಗಳಲ್ಲಿ ಇನ್ನೂ ಕಂಡುಬರುತ್ತಿರುವ ಶುದ್ಧ ಕಾಡುಜನರಂತೆಯೂ ಇದ್ದಾರೆ. ಏಕೆಂದರೆ ಆಗಾಗ್ಗೆ ವರ್ತಮಾನಪತ್ರಿಕೆಗಳಲ್ಲಿ ಈ ಕೆಳಗೆ ಹೇಳುವ ವಿಷಯಗಳನ್ನು ಓದಿ ನಮ್ಮ ನಾಗರಿಕ ಜನರು ಬೆಚ್ಚು ಬೀಳುತ್ತಾರೆ. ಅಂದರೆ ಈ ಹೊತ್ತು ಸ್ಕಾಟ್ಲೆಂಡ್ ದೇಶದಲ್ಲಿ ತಮಗಿಷ್ಟವಿಲ್ಲದ ಮತಾಧಿಕಾರಿಯನ್ನಾ ಗಲೀ, ದೇಶಾಧಿಪತಿಯನ್ನಾಗಲೀ ಕೊಲ್ಲುವುದಕ್ಕಾಗಿ ಒಂದು ಪ್ರತಿಮೆ ಯನ್ನು ಸೂಜಿಗಳಿಂದ ತುಂಬಾ ಚುಚ್ಚಿದರು; ಇಲ್ಲವೆ ಈ ಹೊತ್ತು ಐರ್ಲೆಂಡ್ ದೇಶದಲ್ಲಿ ಇವಳು ಯಕ್ಷಣಿಗಾರಳೆಂಬ ಅಭಿಪ್ರಾಯದಿಂದ ಒಬ್ಬ ಹೆಂಗಸು ಬೆಂಕಿಯಲ್ಲಿ ಸುಡಲ್ಪಟ್ಟಳು; ಇಲ್ಲವೆ ಮತ್ತೊಂದು ದಿನ ರಷ್ಯಾದಲ್ಲಿ ಕಳ್ಳರು ತಮ್ಮ ರಾತ್ರಿಗೆಲಸವನ್ನು ಇತರರ ಕಣ್ಮರೆಯಾಗಿ ಮಾಡಲವಶ್ಯಕವಾದ ದೀಪಗಳಿಗಾಗಿ ಮನುಷ್ಯಮೇಣವನ್ನು ಪಡೆಯಲ

ಒಬ್ಬ ಹುಡುಗಿಯು ಕೊಲ್ಲಲ್ಪಟ್ಟು, ಘೋರವಾಗಿ ಕತ್ತರಿಸಲ್ಪಟ್ಟಳು.' ಅಂದರೆ ನಿಮ್ಮ ಕ್ರೈಸ್ತರಲ್ಲಿಯೂ ಇನ್ನೂ ಎಷ್ಟೋಮಂದಿ ಇಂಥಾ ಮಂತ್ರ ತಂತ್ರಗಳನ್ನು ನಂಬುತ್ತಾರೆ ಮತ್ತು ಯಾವ ಜನರಲ್ಲೇ ಆಗಲಿ ಯಾವ ನಡತೆಯೊಂದು ಬಹು ದಿವಸದಿಂದ ರೂಢಿಯಲ್ಲಿ ಬಂದುಬಿಟ್ಟಿದ್ದರೆ ಅದನ್ನು ನಿಲ್ಲಿಸಲು ಈ ಕಾಲಕ್ಕೆ ತಕ್ಕಷ್ಟು ಮಟ್ಟಿಗೆ ಕಷ್ಟವೇ ಆಗುತ್ತದೆ. ಇದರಿಂದ ಜಾಗ್ರತೆಯಾಗಿ ಬದಲಾಯಿಸುವುದು ಅಸಾಧ್ಯವೆಂದರೆ, ಸಾವ ಕಾಶವಾಗಿ ನಡೆಸುವುದು ಇದಕ್ಕಿಂತ ಇನ್ನೂ ಕಷ್ಟತರವಾಗುತ್ತದೆ. ಏಕೆಂದರೆ ಪ್ರತಿಯೊಂದು ಮತವೂ ಒಂದೊಂದು ರೂಪದಿಂದ ಕೂಡಿರಲು ಬಹು ಪ್ರಯತ್ನಪಡುತ್ತದೆ. ಆದುದರಿಂದಲೇ ಹೆಣ್ಣುದೇವತೆಗಳನ್ನೂ ಗಂಡುದೇವತೆಗಳನ್ನೂ ಪೂಜಿಸುತ್ತಿದ್ದ ಅನಾಗರಿಕ ಜನರು ಬೌದ್ಧ ಮತಕ್ಕೆ ಸೇರಿದಾಗ ಇವರು ತಮ್ಮ ಪುರುಷದೇವತೆಯಾದ ಬುದ್ಧನೊಡನೆ ಸ್ತ್ರೀದೇವತೆಯಾದ ತಾರಾದೇವಿಯೂ ಕೂಡ ಇರಬೇಕೆಂದು ಬಹು ಪ್ರಯಾಸಪಟ್ಟರು. ಆಸ್ಟೋರೆತ್, ಐಸಿಸ್ ಮತ್ತು ಅಫ್ರೊಡೈಟ್ ಎಂಬ ನಿಮ್ಮ ಪೂರ್ವಕಾಲದ ಸ್ತ್ರೀ ದೇವತೆಗಳನ್ನು ಪೂಜಿಸುತ್ತಿದ್ದ ಗ್ರೀಕೋರೋಮನ್ ಜನರು ಕ್ರೈಸ್ತಮತಕ್ಕೆ ಸೇರಿದಾಗ ಮೇರೀದೇವಿಯ ಪೂಜೆಯು ಅಭಿವೃದ್ಧಿಯಾಯಿತು. ಈ ಸಂದರ್ಭದಲ್ಲಿ ಭಾನುವಾರ ಕ್ರೈಸ್ತದೇವಾಲಯಕ್ಕೂ, ಶುಕ್ರವಾರ ಕಾಳಿಕಾದೇವಾಲಯಕ್ಕೂ ಹೋಗು ತ್ತಿದ್ದ ಒಬ್ಬ ನಮ್ಮ ದೇಶದ ಕ್ರೈಸ್ತಸೋದರನನ್ನು ನಿಮ್ಮ ಪಾದ್ರಿಗಳಲ್ಲೊ ಬ್ಬನು 'ಇದೇನು ವಿಚಿತ್ರ ? ನೀನು ಕ್ರೈಸ್ತನಲ್ಲವೇ ?' ಎಂದು ಕೇಳಲು, ಅವನು 'ಹೌದು, ನಾನು ಕ್ರೈಸ್ತನೇ ಸರಿ. ಆದರೆ ನಾನು ನನ್ನ ಮತ ವನ್ನು ಬಿಟ್ಟಂತಾಯಿತೇ ! ' ಎಂದು ಕೇಳಿದನಂತೆ. ಹೀಗೆಯೇ ಹಿಂದೂ ಮತದಿಂದ ಬೇರೆ ಮತಗಳಿಗೆ ಸೇರಿದ ನಮ್ಮ ಜನಗಳಲ್ಲಿ ಎಷ್ಟೋ ಮಂದಿ ಮೃತ್ಯು ಮರಣಭಯ, ಖಾಯಿಲೆ ಕಷ್ಟಗಳಲ್ಲಿ ನಮ್ಮ ಹಿಂದೂ ದೇವತೆಗಳನ್ನೇ ಬಹಳವಾಗಿ ಶರಣು ಹೋಗುತ್ತಾರೆ. ಅಂದರೆ ಬಾಹ್ಯ

---

* The Golden Bough (ಸುವರ್ಣಶಾಖಾ), abridged edition, p. 56

ಮತಗಳಿಂದ ಜನರು ನಿಜಾಂತಃಕರಣ * ವನ್ನು ತಿಳಿಯಲಾಗುವುದಿಲ್ಲ. ಮತ್ತು ಸುಧಾರಕರ ಮಾತನ್ನು ಕೇಳಿ ನಮ್ಮ ಪೂರ್ವಾರ್ಜಿತವೂ ಅಗೋಚರವೂ ಆದ ಆಂತರಿಕ ಸ್ವತ್ತ†ನ್ನು ಕೂಡಲೇ ಬದಲಾಯಿಸುವುದಕ್ಕಾಗುವುದಿಲ್ಲ. ಉತ್ತಮವಾದ ಜ್ಞಾನವನ್ನೂ ಧಾರ್ಮಿಕಜೀವನವನ್ನೂ ಪಡೆಯುವಂತೆ ಶಿಕ್ಷಣವನ್ನು ಹೊಂದದೆ ಈ ಪೂರ್ವಾಭಿಪ್ರಾಯಗಳನ್ನು ನಾವು ಎಂದಿಗೂ ಬಿಡಲಾಗುವುದಿಲ್ಲ.

**೭೪. ಅದರೂ ಒಳಹೊಕ್ಕು ನೋಡಿದರೆ ನಮ್ಮ ಕೆಲಸವು ನಿಜವಾಗಿಯೂ ಕೈಗೂಡಿದೆ.**

ಈ ವಿಷಯದಲ್ಲಿ ನಮ್ಮ ಹಿಂದೂ ಪದ್ಧತಿಯು ಕೇವಲ ನಿಷ್ಫಲಕಾರಿಯೇ ಆಗಿಲ್ಲ. ಮತ್ತು ಇನ್ನೂ ಹೆಚ್ಚು ಅಭಿವೃದ್ಧಿಗೆ ಬರಲು ಅವಕಾಶವಿದ್ದರೂ ಎಲ್ಲಾ ವಿಧದಲ್ಲಿಯೂ ಇಲ್ಲಿಯೂ ಕೂಡ ಉತ್ತಮವಾದ ಅಭಿವೃದ್ಧಿಯು ಕಂಡುಬರುತ್ತದೆ. ಹಿಂದೂಮತದಲ್ಲಿ ಸಾಮಾನ್ಯವಾದೊಂದು ನಂಬಿಕೆಯಾಗಲೀ ಅದರ ಪೂಜೆಗೆಂದು ಗೊತ್ತಾದ ನಿಯಮವೊಂದಾಗಲೀ ಇಲ್ಲದಿದ್ದರೂ ಇದು ಸರ್ವಸಾಮಾನ್ಯವಾದ ಧರ್ಮಪಂಥವೊಂದರಲ್ಲಿ ಅನೇಕಾನೇಕ ಮತಗಳನ್ನೂ ಭಕ್ತಿಮಾರ್ಗಗಳನ್ನೂ ಉಳ್ಳ ಜನರನ್ನೂ ತನ್ನಲ್ಲಿ ಒಟ್ಟುಗೂಡಿಸಿದೆ. ೧೯೧೧ನೇ ವರ್ಷದ ಖಾನೇಷುಮಾರಿಯ ವರದಿಯಲ್ಲಿ ಮಿಸ್ಟರ್ ಬರ್ನ್ಸ್‌ರವರು ಹೀಗೆ ಹೇಳುತ್ತಾರೆ. "ನನ್ನ ವಿಚಾರಣೆಯಿಂದ ಒಟ್ಟು ಫಲಿತಾಂಶವೇನೆಂದರೆ, ಹಿಂದೂಜನರಲ್ಲಿ ಸಾಮಾನ್ಯವಾಗಿ ಎಲ್ಲರೂ ಪರಮೇಶ್ವರನಾದ ಒಬ್ಬ ದೇವನಲ್ಲಿ ಅಂದರ ಭಗವಂತನೆಂದಾಗಲೀ, ಈಶ್ವರನೆಂದಾಗಲೀ, ನಾರಾಯಣನೆಂದಾಗಲೀ, ಇಂಥಾ ಒಬ್ಬ ದೇವನಲ್ಲಿ ಪೂರ್ಣ ನಂಬಿಕೆಯನ್ನಿಟ್ಟಿದ್ದಾರೆ."‡ ಹಿಂದೂಜನರ ಭಾವಗಳು ಮತ್ತು ಆದರ್ಶಗಳು ಎಷ್ಟುಮಟ್ಟಿಗೆ ಹರಡಿವೆಯೆಂದು

* Inner life

† Subconscious heritage

‡ ಮೊದಲನೇ ಭಾಗ, ಪುಟ 362

ಹೇಳುವಲ್ಲಿ ಸರ್ ಹರ್ಬರ್ಟ್ ರಿಸ್ಲೆ ಯವರು ಹೀಗೆ ಹೇಳುತ್ತಾರೆ. "ಈ ಅಭಿಪ್ರಾಯಗಳು ಕೇವಲ ವಿದ್ವಾಂಸರೊಬ್ಬರಿಗೆ ತಿಳಿದ ವಿಷಯಗಳಲ್ಲ, ಮತ್ತು ಬಹಳವಾಗಿ ಪ್ರತಿಯೊಬ್ಬ ಸಾಮಾನ್ಯ ಮನುಷ್ಯನಿಗೂ ಗೊತ್ತಿವೆ. ಹೇಗೆಂದರೆ ಸ್ವಲ್ಪಮಟ್ಟಿಗಾದರೂ ಬುದ್ಧಿವಂತನಾಗಿರುವ ಯಾವನೊಬ್ಬ ಹಿಂದೂ ರೈತನೊಡನೆ ನೀವು ಪರಮಾತ್ಮ, ಕರ್ಮ, ಮಾಯಾ, ಮುಕ್ತಿ ಮೊದಲಾದ ವಿಷಯಗಳನ್ನು ಕುರಿತು ಮಾತಾಡುವುದಾದರೆ ಈ ವಿಷಯಗಳಲ್ಲಿ ನಿಮಗೇಕೆ ಇಷ್ಟು ಕುತೂಹಲವೆಂಬ ತನ್ನ ಶಂಕೆಗೆ ಸಮಾಧಾನವನ್ನು ಹೊಂದಿದಕೂಡಲೇ ಅವನಿಗೆ ಇವುಗಳೆಲ್ಲವೂ ಬಹುಮಟ್ಟಿಗೆ ತಿಳಿದಿವೆಯೆಂದೂ, ಮತ್ತು ತನ್ನ ಭವಿಷ್ಯದ್ವಿಚಾರದಲ್ಲಿ ಇವುಗಳಿಗಿರುವ ಸಂಬಂಧವನ್ನು ತಕ್ಕ ಮಟ್ಟಿಗೆ ಚೆನ್ನಾಗಿಯೇ ತಿಳಿದುಕೊಂಡಿರುವನೆಂದೂ ನೀವು ತಿಳಿಯುವಿರಿ."* ಇದರಿಂದಲೇ ಹಿಂದೂಗಳೆಂದರೆ ಮೇಲೆ ಆಸೇತುಹಿಮಾಲಯದವರೆವಿಗೆ ಎಲ್ಲಿದ್ದರೂ ಸರಿಯೆ ಇವರೆಲ್ಲರಲ್ಲಿಯೂ ಒಂದು ಆಂತರಿಕ ಐಕ್ಯತೆಯು ಇದ್ದೇ ಇರುವುದು.

೨೫. ಹಿಂದುಳಿದ ಜನರಲ್ಲಿ ನಮ್ಮ ಕರ್ತವ್ಯವು ಇನ್ನೂ ಉಳಿದಿದೆ

ಪರ್ವತನಿವಾಸಿಗಳೂ ಮತ್ತು ಇತರ ಅನಾಗರಿಕ ಜನರಾದ ಹೊಸ ಹೊಸ ಜನರನ್ನು ತಮ್ಮಲ್ಲಿ ಸೇರಿಸಿಕೊಳ್ಳುವುದೆಂದರೆ ಈ ಕೆಲಸವು ಎಷ್ಟೋಮಟ್ಟಿಗೆ ನಿಧಾನವಾಗಿ ನಡೆಯತಕ್ಕದ್ದಲ್ಲದೆ ಅಲ್ಲಲ್ಲಿ ಪೂರ್ಣತೆಯನ್ನು ಹೊಂದಲಾರದು. ನಾಗರಿಕ ದೃಷ್ಟಿಯಿಂದ ತಪ್ಪೆಂದು ಹೇಳಿ ಹೊರ ಹಾಕುವುದಕ್ಕೆ ಅವಕಾಶವಿಲ್ಲದೆ ಇನ್ನೂ ಮೂಢವಿಶ್ವಾಸ†ಗಳನ್ನೂ ಪುರಾತನಾಭಿಪ್ರಾಯಗಳನ್ನೂ ಇಟ್ಟುಕೊಂಡಿರುವ ಎಷ್ಟೋ ಜನರು ನಮ್ಮ ಹಿಂದೂ ಜನಾಂಗದಲ್ಲಿ ಇನ್ನೂ ಕಂಡುಬರುವರು. ಈಚೆಗೆ ಕೆಲವು ಶತಮಾನಗಳಿಂದ ಹಿಂದೂ ಜನರು ತಮ್ಮ ಆದರ್ಶಗಳನ್ನು ಶ್ರದ್ಧೆಯಿಂದ ಸೇವಿಸುತ್ತಿಲ್ಲ, ಮತ್ತು ಹಿಂದುಳಿದ ಜನರನ್ನು ಮೇಲಕ್ಕೆತ್ತುವ ಕಾರ್ಯವು ಬಹಳವಾಗಿ ನಿಂತುಹೋಗಿದೆ.‡

---

* ಭಾರತೀಯ ನಿವಾಸಿಗಳು

† Crude beliefs, ತಪ್ಪು ನಂಬಿಕೆಗಳು ‡ Neglected

## ೨೬. ನಮ್ಮ ಮತ ಸಹನೆಯ ಚರಿತ್ರೆ

ಬುದ್ಧಿಭ್ರಮಣವಾಗಿರುವಾಗಲೂ ಕೂಡ ಆತ್ಮಹತ್ಯವನ್ನು ಮಾಡಿಕೊಳ್ಳದಂತೆ ಜನರನ್ನು ಬಲಾತ್ಕಾರದಿಂದಲಾದರೂ ಕಾಪಾಡುವುದು ಎಷ್ಟು ಅವಶ್ಯಕವೋ ಅಷ್ಟರಮಟ್ಟಿಗೆಯೇ ಜನರು ಸರಿಯಾದ ಅಭಿಪ್ರಾಯಗಳನ್ನು ಹೊಂದುವಂತೆ ಅವರನ್ನು ಬಲಾತ್ಕರಿಸುವುದೂ ಯೋಗ್ಯವಾಗುದೇ ಎಂದು ಆಗಾಗ್ಯೆ ಹೇಳುವ ಲೋಕವಾಡಿಕೆ*ಯನ್ನು ಹಿಂದುಗಳು ನಂಬುವುದಿಲ್ಲ. ಈಸ್ರೇಲ್ ಜನರು ಕ್ಯಾನನ್ ದೇಶಕ್ಕೆ ಮೊದಲು ಹೊರಟಾಗಿನಿಂದಲೂ ಮಾನವಚರಿತ್ರೆಯಲ್ಲಿ ಎಲ್ಲೆಲ್ಲಿಯೂ ಕೇವಲ (narrow) ಏಕೇಶ್ವರವಾದದಲ್ಲಿ ಅಂಧಶ್ರದ್ಧೆ† ಇರುವುದು ರಕ್ತಾಕ್ಷರಗಳಿಂದ ಬರೆದಂತೆ ಕಾಣುತ್ತಿರುವುದು. ಇದರಿಂದಲೇ ಇಂಥಾ ಏಕೇಶ್ವರನ ಉಪಾಸಕರು ಅನ್ಯ ಮತಸ್ಥರೊಡನೆ ವೀರ ಯುದ್ಧವನ್ನು‡ ಮಾಡುವಂತೆ ಪ್ರೇರೇಪಿಸಲ್ಪಟ್ಟಿದ್ದಾರೆ, ಮತ್ತು ತಮ್ಮಿಂದ ಜಿತರಾದವರಿಗೆ ತಾವು ಕೊಡುತ್ತಿದ್ದ ಹಿಂಸೆಗೆ ಈಶ್ವರಾನುಗ್ರಹವು ಉಂಟಾಗಬೇಕೆಂದು ಇವರು ಪ್ರಾರ್ಥಿಸುತ್ತಿದ್ದರು. ಪುರಾತನ ಇಸ್ರೇಲ್ ಜನರ ಈ ಗುಣವು ಕ್ರೈಸ್ತರಲ್ಲಿಯೂ ಮಹಮ್ಮದೀಯರಲ್ಲಿಯೂ ಇನ್ನೂ ಕಂಡುಬರುತ್ತಿದೆ. ಮತ್ತು ನಿಮ್ಮ ಪಾಶ್ಚಿಮಾತ್ಯ ನಾಗರೀಕತೆಯನ್ನು ಪಾಲಸ್ಟೈನಿನವರಲ್ಲದೆ ಗ್ರೀಸಿನವರು ತಿದ್ದುಪಾಟುಮಾಡಿದ್ದರೆ ಬಹಳ ಮಟ್ಟಿಗೆ ಉತ್ತಮವಾಗುತ್ತಿತ್ತೋ ಇಲ್ಲವೋ ಎಂದು ಹೇಳತಕ್ಕ ಕಾರ್ಯವು ಇನ್ನೂ ನಿಮ್ಮದೇ ಆಗಿದೆ. ಬೇರೆಬೇರೆ ಮತದವರಾದ ಅನ್ಯ ಜನರನ್ನು ನಾಶಮಾಡುವಂತೆ ಪ್ರೇರೇಪಿಸಿ ಹೀಗೆ ಮಾಡಿದುದು ಸರಿಯೆಂದು ಸಾಧಿಸುವ ಸ್ವಮತ ಭ್ರಾಂತಿ§ಯಿಂದ ಉಂಟಾಗುವ ಮತ ಯುದ್ಧಗಳು ನಮ್ಮ ದೇಶದಹಿಂದುಗಳಿಗೆ ಸಾಮಾನ್ಯವಾಗಿ ಗೊತ್ತೇ ಇರಲಿಲ್ಲ. ಅಂದರೆ ಇಂಥಾ ಸ್ವಮತ ಭ್ರಾಂತಿಯಿಂದ ಉಂಟಾದ ತೊಂದರೆಗಳು ಇರಲೇ ಇರಲಿಲ್ಲವೆಂದು ಭಾವವಲ್ಲ. ಪರಂತು ಸಾಧಾರಣವಾಗಿ ಹಿಂದುಗಳು ಅನ್ಯಮತ ಪ್ರೀತಿಯಿಂ

---

* Sophism, ಕುವಾರ್ತೆ † Interference

‡ Agressive wars § Fanaticism

ದಿದ್ದ ಜನರನ್ನು ವಿಶೇಷವಾಗಿ ಹಿಂಸೆಪಡಿಸುತ್ತಿರಲಿಲ್ಲ. ಅಂದರೆ ಸಾಮಾನ್ಯಭಾಷೆಯಲ್ಲಿ ಹೇಳುವುದಾದರೆ, ಈ ವಿಷಯದಲ್ಲಿ ನಮ್ಮ ಚರಿತ್ರೆಯು ಶುದ್ಧವಾದುದಾಗಿಯೇ ಇದೆ, ಮತ್ತು ವಿಧವಿಧವಾದ ಹಲವು ಪಂಗಡದ ಜನರನ್ನು ತನ್ನಲ್ಲಿ ಶಾಂತಿಯಿಂದ ಒಟ್ಟುಗೂಡಿಸಿಕೊಂಡು ಇದೆ. ಲೋಕದಜನರಲ್ಲಿ ಸುಮಾರು ಐದರಲ್ಲಿ ಒಂದು ಭಾಗದಷ್ಟು ಜನರನ್ನು ತನ್ನ ಅನುಯಾಯಿಗಳನ್ನಾಗಿಉಳ್ಳ ಬೌದ್ಧಮತವು ಯಾವಾಗಲೂ ಅನ್ಯಮತಗಳನ್ನು ಗೌರವಿಸಿದೆ, ಮತ್ತು ಅವುಗಳನ್ನು ಎಂದಿಗೂ ಬಲಾತ್ಕಾರದಿಂದ ಹೊರಹಾಕುವದಕ್ಕೆ ಪ್ರಯತ್ನಿಸಿಲ್ಲ. ಬೌದ್ಧಮತದ ಬಹು ಪುರಾತನ ಗ್ರಂಥ ವೊಂದರಲ್ಲಿ ಹೀಗೆಹೇಳಿದೆ. "ಗೌತಮಬುದ್ಧನು ತನ್ನ ಕಾಲದಲ್ಲಿ ಮತವಾದಿಗಳಲ್ಲಿ ರೂಢಿಯಾಗಿದ್ದ ಪದ್ಧತಿಯನ್ನು ಅಂದರೆ ತಮ್ಮ ಧರ್ಮಗಳೇ ಹೆಚ್ಚು ಮತ್ತು ಇತರ ಧರ್ಮಗಳೆಲ್ಲವೂ ತಪ್ಪು ಎನ್ನುವ ಪದ್ಧತಿಯನ್ನು ಬಹಳವಾಗಿ ನಿಂದಿಸಿದನು. *

ಬುದ್ಧನು ಅನ್ಯಮತಸ್ಥರಲ್ಲಿ ಅಶಾಂತಿಯನ್ನುಂಟುಮಾಡುವ ಎಲ್ಲಾ ವಾದಗಳನ್ನೂ ನಿಲ್ಲಿಸಬೇಕೆಂದು ತನ್ನ ಶಿಷ್ಯರಿಗೆ ಹೇಳುತ್ತಿದ್ದನು. ಹೀಗೆಯೇ ಅಶೋಕ ಚಕ್ರವರ್ತಿಯ ಶಿಲಾಶಾಸನಗಳೊಂದರಲ್ಲಿ ಈ ಸರ್ವಮತ ಸಹನೆಯೇ ಮುಖ್ಯ ವಿಷಯವಾಗಿದೆ; ದೇವಪ್ರಿಯನಾದ ಮಹಾರಾಜನು ಪ್ರತಿಯೊಂದು ಮತದವರ ನಂಬಿಕೆಯನ್ನೂ ಗೌರವಿಸುತ್ತಾನೆ; ಆದರೆ ಮತ ತತ್ತ್ವದ ಪರಿಪುಷ್ಟಿಗಿಂತ ಯಾವ ದಾನ ಮರ್ಯಾದೆಗಳಾ

* ಸುತ್ತ ನಿಪಾತ, 782; ಮತ್ತು ಅಂಗುತ್ತರ ನಿಕಾಯ III 57, 1 ನ್ನು ನೋಡಿ; ಇದರಲ್ಲಿ ಬುದ್ಧನು ಬೌದ್ಧರು ಬೌದ್ಧೇತರರಿಗೂ ದಾನಮಾಡಬೇಕೆಂದು ಪ್ರೋತ್ಸಾಹಿಸುತ್ತಾನೆ. ಮಜ್ಝಿಮನಿಕಾಯ (I. ಪು 483) ದಲ್ಲಿ ಕರ್ಮವನ್ನು ನಂಬುತ್ತಿದ್ದ ಪುಣ್ಯದಿಂದ ಒಬ್ಬಾನೊಬ್ಬ ಆಜೀವಿಕನು ಸ್ವರ್ಗವನ್ನು ಸೇರಿದನೆಂದು ಹೇಳುತ್ತಾನೆ. (ಹೀಗೆಯೇ) ನಿಜವಾಗಿಯೂ ಧಾರ್ಮಿಕ ಶ್ರದ್ಧೆಯಿಂದ ನಡೆಯುತ್ತಿದ್ದ ಬ್ರಾಹ್ಮಣರನ್ನು ಶ್ರೇಷ್ಠ ಗೌರವದಿಂದ ಕಾಣುತ್ತಿದ್ದನು.

ಗಲೀ ಹೆಚ್ಚೆಂದು ಭಾವಿಸುವುದಿಲ್ಲ. ಅಂದರೆ, ಎಲ್ಲಾ ಜನರೂ ತಮ್ಮ ತಮ್ಮ ಸ್ವಂತ ನಂಬಿಕೆಗಳನ್ನು ಗೌರವಿಸುವುದಲ್ಲದೆ ಇತರರ ನಂಬಿಕೆಗಳನ್ನು ದೂಷಿಸದೆ ಇರುವುದೇ ಮುಖ್ಯ ವಿಷಯವು. ಇದಕ್ಕೆ ವ್ಯತಿರಿಕ್ತವಾಗಿ ನಡೆಯುವವರೆಲ್ಲರೂ ಇತರರ ಮತವನ್ನು ತಿರಸ್ಕರಿಸುವುದಲ್ಲದೆ ತಮ್ಮ ಮತವನ್ನೂ ಕೆಡಿಸಿಕೊಳ್ಳುತ್ತಾರೆ.' ಮತ್ತು, 'ನನ್ನ ರಾಜ್ಯದಲ್ಲಿ ಜನರು ಎಲ್ಲಾ ಮತಧರ್ಮ* ಗಳನ್ನೂ ಧೈರ್ಯದಿಂದ ಅವಲಂಬಿಸಬಹುದು.'† ನಮ್ಮದೇಶದ ಹಿಂದೂ ಮತ್ತು ಬೌದ್ಧರಾಜರುಗಳು ಈ ಧರ್ಮವನ್ನು ಅನುಸರಿಸಿದುದರಿಂದ ಬಾಧಿಸಲ್ಪಟ್ಟು ಶರಣಾಗತರಾಗಿ ಬಂದ ಅನ್ಯಮತಸ್ಥರು ಇಲ್ಲಿ ತುಂಬಾ ರಕ್ಷಣೆಯನ್ನು ಪಡೆದರು. ಇದರಿಂದಲೇ ಕ್ರೈಸ್ತ, ಯಹೂದ್ಯ, ಪಾರಸೀ ಜನಗಳು ತಮ್ಮ ತಮ್ಮ ರೀತಿಯಲ್ಲಿ ಮುಂದೆವರಿಯಲು ಬೇಕಾದಷ್ಟು ಅನುಕೂಲವನ್ನು ಹೊಂದಿದರು. ಪ್ರಯಾಗಕ್ಷೇತ್ರದಲ್ಲಿ ನಡೆದ ಮಹೋತ್ಸವಕಾಲದಲ್ಲಿ ಹರ್ಷಚಕ್ರವರ್ತಿಯು ಮೊದಲನೇ ದಿವಸ ಬುದ್ಧದೇವನಿಗೆಂದು ಪ್ರತಿಮೆಯೊಂದನ್ನೂ, ಎರಡನೇ ದಿವಸ ತನ್ನ ತಂದೆಯ ಇಷ್ಟದೇವತೆಯಾದ ಸೂರ್ಯನಿಗೆ ಬೇರೊಂದು ಪ್ರತಿಮೆಯನ್ನೂ, ಮೂರನೇ ದಿವಸ ಈಶ್ವರನಿಗೆ ಮತ್ತೊಂದು ಪ್ರತಿಮೆಯನ್ನೂ ಸಮರ್ಪಿಸಿದನೆಂದು ಆಗ ಇಲ್ಲಿಗೆ ಬಂದಿದ್ದ ಚೈನಾ ಯಾತ್ರಿಕನಾದ ಯುವನ್ ಚ್ವಾಂಗನು ಹೇಳಿದ್ದಾನೆ. ಸ್ಥಾಣೂರವಿ (ಕ್ರಿ. ಶ. ೯ ನೇ ಶತಮಾನ) ಯ ಪ್ರಸಿದ್ಧವಾದ ಕೊತ್ತಾಯಮ್ಮಿನ ಪಟ್ಟೆ (Plates) ಗಳೂ ಮತ್ತು ವಿಜಯರಾಜದೇವನ ಕೊಚಿನ್ ಪಟ್ಟೆಗಳೂ ಆ ಕಾಲದ ನಮ್ಮ ಹಿಂದೂ ರಾಜರು ಕ್ರೈಸ್ತಮತವನ್ನು ಸಹನೆಯಿಂದ ಕಂಡರಲ್ಲದೆ ಆ ಮತಸ್ಥರಿಗೆ ಕೆಲವು ವಿಶೇಷ ಅನುಕೂಲಗಳನ್ನೂ ಕಲ್ಪಿಸಿಕೊಟ್ಟರೆಂದೂ ಘಂಟಾಘೋಷವಾಗಿ ಸಾರುತ್ತಿವೆ. ಹೀಗೆಯೇ ನೆನ್ನೆ ಮೊನ್ನೆ ತಾನೇ ಮೈಸೂರುದೇಶದ ಹಿಂದೂ ರಾಜಶಿಖಾಮಣಿಗಳು ತಮ್ಮ ದೇಶದಲ್ಲಿದ್ದ ಕ್ರೈಸ್ತದೇವಾಲಯವನ್ನು ಜೀರ್ಣೋದ್ಧಾರಮಾಡಲು ಭೂರಿ ಧನವನ್ನು ಕೊಟ್ಟರು.

---

* Texts ವಾಕ್ಯ † 12 ನೇ ಶಿಲಾಶಾಸನ.

## ೪. ಮತ್ತು ಪ್ರೀತಿಸಹನೆಗಳೇ ಲೋಕೈಕ್ಯತೆಗೆ ಮುಖ್ಯಕಾರಣಗಳು

### ೨೭ ಲೋಕಐಕ್ಯತೆಯು ಪ್ರೀತಿಯಿಂದಾಗಬೇಕೇ ಹೊರತು ಎಷ್ಟು ನಿರ್ಬಂಧದಿಂದಲೂ ಸಾಧ್ಯವಿಲ್ಲ

ಈಗ ಎಲ್ಲಿ ನೋಡಿದರೂ ಭೌತಿಕ ಶಾಸ್ತ್ರದ ಪ್ರಾದುರ್ಭಾವದಿಂದ ಈ ಜಗತ್ತೇ ಹ್ರಸ್ವವಾಗಿ ಪರಿಣಮಿಸುತ್ತಿದೆ. ಪರದೇಶಿಯರು ನಮಗೆ ಕೇವಲ ನೆರೆಹೊರೆಯವರಾಗಿದ್ದಾರೆ. ಮತ್ತು ಜನರ ಸಮ್ಮಿಶ್ರತೆಯಿಂದ ಜ್ಞಾನ ವಿನಿಮಯವು ಹೆಚ್ಚಾಗುತ್ತಿದೆ. ನಾವು ಲೋಕವೆಲ್ಲವೂ ಒಂದೇ ಸರ್ವಸಹಾಯಕ ಸಂಘವೆಂದು ನಿಧಾನವಾಗಿ ತಿಳಿದುಕೊಳ್ಳುತ್ತಿದ್ದೇವೆ. ಇತರ ಮತಗಳು ಬಲಿಷ್ಠವಾಗಿವೆಯಾಗಿ ಅವುಗ ವಿಷಯದಲ್ಲಿ ನಾವು ಎಚ್ಚರದಿಂದ ಇರಬೇಕಾಗಿದೆ, ಮತ್ತು ಅವುಗಳೊಡನೆ ನಾವೆಲ್ಲರೂ ಶಾಂತಿ ಸಮರಸತೆಗಳಿಂದ ಕೂಡಿರುವಂತೆ ಅನುಕೂಲಗಳನ್ನು ಹುಡುಕುತ್ತಿದ್ದೇವೆ. ಆದರೆ ಮತ ವಿಷಯದಲ್ಲಿ ಇಂಥಾ ಶಾಂತಿ ಐಕ್ಯತೆಗಳನ್ನು ಪಡೆಯ ಬೇಕೆಂದರೆ ಪೂರ್ಣ ಜ್ಞಾನವು ನಮ್ಮೊಬ್ಬರಲ್ಲಿರುವುದೇ ಹೊರತು, ಮಿಕ್ಕ ಎಲ್ಲಾ ಮತಗಳೂ ಇಂಥಾ ಜ್ಯೋತಿಃ ಪ್ರಕಾಶವನ್ನು ಕಾಣದೆ ಅಂಧ ಕೂಪದಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿವೆಯೆಂದು ಹೇಳುತ್ತಿರುವ ಪರ್ಯಂತ ಈ ಶಾಂತಿ ಸಮರಸತೆಗಳನ್ನು ನಾವೆಂದಿಗೂ ಹೊಂದಲಾರೆವು. ಏಕೆಂದರೆ ಹೀಗೆ ಹೇಳುವುದೇ ಜಗಳಕ್ಕೆ ಕಾಲು ಕೆರದಂತಾಗುವುದು. ಈ ಲೋಕದ ಸರ್ವ ರಾಜಕೀಯ ಆದರ್ಶವೂ ಒಂದೇ ವಿಧವಾದ ನಾಗ ರೀಕತೆಯಿಂದಲೂ ಒಂದೇ ಸಂಘಶಕ್ತಿ (will) ಯಿಂದಲೂ ಒಡಗೂಡಿ ರುವ ಏಕಚಕ್ರಾಧಿಪತ್ಯವಲ್ಲ, ಪರಂತು ಜೀವನ ಮನೋವೃತ್ತಿ, ಆಚಾರ ವ್ಯವಹಾರ*ಗಳಲ್ಲಿ ವಿಶೇಷವಾಗಿ ಭೇದದಿಂದ ಕೂಡಿದ್ದರೂ ಪರಸ್ಪರವಾಗಿ ಶಾಂತಿ ಕ್ರಮಗಳಿಂದಲೂ, ಸಮರಸ, ಸಹಾಯಕ ಭಾವಗಳಿಂದಲೂ ಕೂಡಿ ಒಟ್ಟಿಗೆ ವಾಸಮಾಡುತ್ತಿರುವ ಜನರ ಸಂಘವೇ ಆಗಿದೆ; ಮತ್ತು

* Institution. ವ್ಯವಸ್ಥೆ

ಈ ಜನರು ಇತರ ಜನರಿಂದ ಬರುವ ವಿಷಯಗಳಲ್ಲಿ ಕೇವಲ ಒಂದಾಗದೆ ತಮ್ಮದೇ ಎಂದು ಪ್ರತ್ಯೇಕವಾದ ವಿಶೇಷ ಗುಣವನ್ನು ಲೋಕಾಭಿವೃದ್ಧಿಗಾಗಿ ಅರ್ಪಿಸುತ್ತಿರಬೇಕು. ಅಂದರೆ ಮನುಷ್ಯ ವರ್ಗದ ಪ್ರತಿಯೊಂದು ಜನರಿಗೂ ಅವರವರಿಗೆ ಬೇಕಾದ ಸ್ವಾತಂತ್ರ್ಯ, ಸುರಕ್ಷತೆ, ಆತ್ಮಸಿದ್ಧಿಗಳನ್ನು ಪಡೆಯುವ ಸಾರ್ವದೇಶೀಯ ರಾಷ್ಟ್ರ*ವೆಂಬ ನಮ್ಮ ಆದರ್ಶವಲ್ಲಿ ಹದಿನೆಂಟನೇ ಶತಮಾನದ ವಿಶ್ವಾಭಿರಾಮತೆ†ಯೂ ಕಳೆದ ಶತಮಾನದ ಸ್ವದೇಶ ಪ್ರೀತಿಯೂ ಒಂದಾಗಿ ಸೇರಿವೆ. ಮತ್ತು ಮತ ವಿಷಯದಲ್ಲಿಯೂ ಈ ಆದರ್ಶವನ್ನೇ ನಾವು ಇಟ್ಟುಕೊಳ್ಳದಿದ್ದರೆ, ಲೋಕ ಮತಕ್ಕೆ ಯಾವ ಭವಿಷ್ಯತ್ತನ್ನೂ ಕಾಣಲಾಗುವುದಿಲ್ಲ. ಯಾರದೇ ಆಗಲಿ ಎರಡು ಮೂರು ಭಿನ್ನಭಿನ್ನ ಧರ್ಮಗಳು ತತ್ತ್ವದ ಸಕಲ ತಿರುಳನ್ನೂ ತಾವು ಕಂಡಿರುವೆವೆಂದೂ ಮತ್ತು ತಮ್ಮ ಮಾರ್ಗಾವಲಂಬನವೇ ಮೋಕ್ಷ ಪ್ರಾಪ್ತಿಗೆ ನಿಜವಾದ ದಾರಿಯೆಂದೂ, ಹೀಗಲ್ಲದೆ ಬೇರೆ ಯಾವ ಮಾರ್ಗವೂ ಇಲ್ಲವೆಂದು ಹೇಳಿದೊಡನೆಯೇ ಎಲ್ಲೆಲ್ಲಿಯೂ ಜಗಳಕ್ಕೆ ಪ್ರಾರಂಭವಾಗುತ್ತದೆ. ಇಂಥಾ ಜಗಳದಲ್ಲಿ ಯಾವುದೊಂದು ಮತವೂ ಇತರ ಮತಗಳು ತನಗಿಂತ ಮುಂದೆ ಹೋಗಲು ಅವಕಾಶ ಕೊಡದಿರುವುದಿಲ್ಲದೆ ಲೋಕವೆಲ್ಲವೂ ಭಸ್ಮೀಭೂತವಾದ ಹೊರತು ಯಾರಿಗೂ ಏಕಚಕ್ರಾಧಿಪತ್ಯವು ದೊರೆಯಲಾರದು. ಆದರೆ ಹಾಗೆ ತಮ್ಮದಲ್ಲದ ಬೇರೆ ಮತಗಳನ್ನು ನಾಶಗೊಳಿಸುವುದೆಂದರೆ ಮತದಲ್ಲಿ ಇದೊಂದು ದುರ್ದಿನವೇ ಎನ್ನಬೇಕಲ್ಲದೆ, ಇದನ್ನು ಸಾಧ್ಯವಾದಷ್ಟು ಮಟ್ಟಿಗೆ ನಿಲ್ಲಿಸಬೇಕು. ಆದರೆ ಹೀಗೆ ಮಾಡಬೇಕಾದರೆ ಹಿಂದೂ ಮತದಂಥಾ ಧರ್ಮ ನಿರ್ಣಯವನ್ನು ಆಶ್ರಯಿಸಬೇಕು, ಅಂದರೆ ಸರ್ವಮತಗಳ ಐಕ್ಯತೆಯನ್ನು ಕೇವಲ ಸರ್ವಸಾಮಾನ್ಯವಾದ ನಂಬಿಕೆಯಲ್ಲಿ ಅಲ್ಲದೆ ಸರ್ವ ಸಾಮಾನ್ಯವಾದ ತತ್ತ್ವಾನ್ವೇಷಣವಲ್ಲಿ ಗೊತ್ತುಮಾಡಬೇಕು. ಕೇವಲ ಸಾಂಘಿಕ ಐಕ್ಯತೆಯನ್ನಲ್ಲದೆ, ಪ್ರತಿಯೊಬ್ಬ ವ್ಯಕ್ತಿಗಾಗಿ ಅಲ್ಲದೆ, ಕಿಂತು ತಾನು ಬೇಕಾದಷ್ಟು ಶಕ್ತಿಯನ್ನು ಹೊಂದಿರುವೆನೆಂದು ವ್ಯಕ್ತಪಡಿಸಿರುವ ಪ್ರತಿಯೊಂದು

---

* World Commonwealth † Cosmopolitanism

ಸಾಂಘಿಕ ಜೀವನದ ಸಂಗಡಕ್ಕೂ ಬೇಕಾದಷ್ಟು ಸ್ವಾತಂತ್ರ್ಯವನ್ನು ಕೊಡುವ ಜೀವಕಲಾಯುಕ್ತವಾದ ಐಕ್ಯತೆಯಲ್ಲಿ ಪ್ರೀತಿಯಿಟ್ಟು ಕಾರ್ಯ ಮಾಡೋಣ. ಏಕೆಂದರೆ ಇದುವರೆಗೆ ಹುಟ್ಟಿರುವ ಜೀವನಭಾವನೆಗಳ ಸಕಲ ಚಾರಿತ್ರಿಕ ರೂಪಗಳೂ ಅನುಭವಯುಕ್ತವಾದವುಗಳೇ ಎಂದು ಹೇಳಬಹುದಾದುದರಿಂದ ಇವು ಈಶ್ವರಾಂಶವನ್ನು ಪಡೆಯುತ್ತವೆ. ಇದು ಬಿಟ್ಟು ಯಾವುದಾದರೊಂದು ಮತವು ಮಿಕ್ಕ ಎಲ್ಲಾ ಮತಗಳನ್ನೂ ತನ್ನಲ್ಲಿಯೇ ಕೇವಲ ಐಕ್ಯಮಾಡಿಕೊಂಡು * ಬಿಟ್ಟರೆ ಲೋಕಕ್ಕೆ ಎಷ್ಟೋ ಕುಂದು † ಉಂಟಾಗುತ್ತದೆ. ಮತ್ತು ಪರಮೇಶ್ವರನು ಲೋಕದಲ್ಲಿ ಸರ್ವಕಲಾಯುಕ್ತವಾದ ಗಾನದಂಥಾ ಸಮರಸವಿರಬೇಕೇ ಹೊರತು ನಿರ್ವರ್ಣವಾದ ಕೇವಲ ಏಕರೂಪತೆಯೇ ಇರಬೇಕೆಂದು ಇಚ್ಛಿಸುವುದಿಲ್ಲ. ಇದರಿಂದಲೇ ಹಿಂದೂಮತದ ಸರ್ವವ್ಯಾಪಿಯೂ ಐಕ್ಯಕಾರಿಯೂ ಆದ ಶಕ್ತಿಯು ಮಹಾರಣ್ಯದಂತೆ ಬೆಳೆದು, ಇದರಲ್ಲಿ ಪ್ರತಿಯೊಂದು ಶಾಖೋಪ ಶಾಖೆಯೂ ತನ್ನ ಕಾರ್ಯವನ್ನು ನೆರವೇರಿಸುತ್ತಿರುವುದಲ್ಲದೆ ಇವೆಲ್ಲವೂ ಪರಮಾತ್ಮನ ಇಚ್ಛೆಯಂತೆ ನಡೆಯುತ್ತಿವೆ. ಅಂದರೆ ಪ್ರತಿಯೊಂದು ವಸ್ತುವೂ ತನ್ನ ತನ್ನ ಸ್ಥಳದಲ್ಲಿ ಇದ್ದುಕೊಂಡು ಎಲ್ಲವೂ ಪರಮಾತ್ಮನ ಗಾನದೊಡನೆ ಕಲೆತುಕೊಂಡು ತಮ್ಮ ತಮ್ಮ ವಿವಿಧ ಸ್ವರಗಳಿಂದಲೂ ಒಂದೊಂದು ವೇಳೆ ಅಪಸ್ವರಗಳಿಂದಲೂ ಕೂಡಿ ಆ ಪರಮ ಪುರುಷನ ಅದ್ಭುತ ಗಾನದಲ್ಲಿ ಲೀನವಾಗಿವೆ; ಮತ್ತು ನಿಮ್ಮ ಪುರಾತನ ತತ್ವಜ್ಞಾನಿಗಳಾದ ಹೆರಕ್ಲೈಟಸ್ಸರು ಹೇಳವಂತೆ ಇಂಥಾ ಅದ್ಭುತಗಾನವೇ ನಮ್ಮೆಲ್ಲರ ಮುಖ್ಯ ಆದರ್ಶವಾಗಿರಬೇಕು.

## ೨೮. ಮತಸಹನೆಯಿಂದಲೇ ಮುಂದೆ ಮುಂದೆ ನಮ್ಮ ಮತವು ಲೋಕದಲ್ಲೆಲ್ಲಾ ಹರಡುವುದು

ನಮ್ಮ ಹಿಂದೂಧರ್ಮವು ಈ ಮತ ವಿಷಯದಲ್ಲಿ ಹೇಳುವ ಸಿದ್ಧಾಂತವು ಭವಿಷ್ಯತ್ಕಾಲದಲ್ಲಿ ಎಲ್ಲರಿಂದಲೂ ಸನ್ಮಾನಿಸಲ್ಪಡುತ್ತದೆ ಎಂದು

---

* absorbed, ನುಂಗಿ † poorer

ನನಗೆ ಬಹಳ ಮಟ್ಟಿಗೆ ವ್ಯರ್ಥವಾಗಿ ತೋರುತ್ತದೆ. ಈಗಿನ ಕಾಲದ ಜನಪದದ* ಉತ್ಸಾಹವೂ† ಮತ್ತು ಜನರು ತಮ್ಮ ತಮ್ಮ ಪುರುಷಾರ್ಥಗಳನ್ನು ಗೊತ್ತುಮಾಡಿಕೊಂಡು ಅವುಗಳನ್ನು ಸಿದ್ಧಿಸಲು ತಾವು ನಡೆಸಬೇಕಾದ ಕಾರ್ಯಕ್ರಮಕ್ಕೆ ಇರಬೇಕಾದ ಸ್ವಾತಂತ್ರ್ಯದಲ್ಲಿ ಈ ಜನಪದಕ್ಕೆ ಇರುವ ಪೂರ್ಣನಂಬಿಕೆಯೂ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಟ್ಟಿವೆ. ಸ್ವಯಂ ನಿರ್ಣೀತ‡ವಲ್ಲದ ಯಾವ ವಸ್ತುವೂ ಉತ್ತಮವಾದುದಲ್ಲ. ಮತ್ತು ಸ್ವಯಂಕೃತವಲ್ಲದ ಯಾವ ಸಂಕಲ್ಪವೂ ಶ್ರೇಷ್ಠವಲ್ಲ. ಲೋಕದಲ್ಲಿ ಎಲ್ಲೆಲ್ಲಿಯೂ ಸರ್ವಮತದವರೂ ಒಬ್ಬರನ್ನೊಬ್ಬರು ಪರಸ್ಪರವಾಗಿ ಪ್ರೀತಿಸುತ್ತಿದಾರೆ. ಏಕೆ, ನಾನಿಲ್ಲಿ ಈ ಹೊತ್ತು ಬಂದು ಮಾತಾಡುತ್ತಿರುವುದು ಇದನ್ನು ತಾನೇ ಸೂಚಿಸುತ್ತದೆ? ಸಾರ್ವರಾಷ್ಟ್ರೀಯ ಮತಗಳ ಸಭೆಗಳೂ ಮತ್ತು ಆಗಾಗ್ಗೆ ನೇರುವ ಸಾರ್ವಮತೀಯ ಶ್ರೇಷ್ಠ ಜ್ಞಾನಿಗಳ ಸಂಘಗಳೂ ಜನರಲ್ಲಿ ಅನ್ಯೋನ್ಯ ಪ್ರೀತಿಯನ್ನೂ ಪರಸ್ಪರ ಜ್ಞಾನವನ್ನು ವೃದ್ಧಿಮಾಡುತ್ತವೆ. ಸಾಮಾನ್ಯಮತಧರ್ಮದ § ವ್ಯಾಸಂಗವು ಇತರ ಮತಗಳನ್ನು ಗೌರವದಿಂದ ಕಾಣಬೇಕೆಂಬ ಬುದ್ಧಿಯನ್ನು ಉಂಟುಮಾಡುತ್ತಿದೆ. ಏಕೆಂದರೆ ಇದು ಸರ್ವಮತಗಳ ಮುಖ್ಯ ಐಕ್ಯತೆಯನ್ನು ಸಾರುತ್ತದೆ; ಅಂದರೆ ಜನಶಕ್ತಿಯೂ ಕಾಲಶಕ್ತಿಯೂ, ಅವಶ್ಯಕತೆಯೂ†† ಆಯಾಮತಗಳಲ್ಲಿ ಇರುವ ಹೆಚ್ಚು ವಿಶೇಷಾಂಶಗಳಿಗೆ ಕಾರಣವಾಗಿವೆ. ಇದರಿಂದ ಮತಗಳ ಅನ್ಯೋನ್ಯ ಸಂಬಂಧಗಳನ್ನು ಚೆನ್ನಾಗಿ ತಿಳಿದುಕೊಳ್ಳುತ್ತಿದ್ದೇವೆ. ಮತ್ತು ವಿವಿಧ ಮತಗಳು ವಿರೋಧಭಾವದಿಂದ ಇಲ್ಲದೆ ಅನ್ಯೋನ್ಯವಾಗಿ ಸಹಾಯಕಗಳಾಗಿದ್ದುಕೊಂಡು ತಮಗೆಲ್ಲಕ್ಕೂ ಸಾಮಾನ್ಯವಾದ ಪುರುಷಾರ್ಥ ಸಿದ್ಧಿಯನ್ನು ಪಡೆಯಲು ಪರಸ್ಪರವಾಗಿ ಆವಶ್ಯಕವಾಗಿವೆ ಎಂದು ಈಗ ನಾವು ತಿಳಿದುಕೊಳ್ಳುತ್ತಿದ್ದೇವೆ. ಇತರ ಮತಗಳ ಹೆಚ್ಚು ಸಂಪರ್ಕದಿಂದ ಯಾವುದೊಂದು ಮತವೇ ಆಗಲಿ

---

* Democracy † Spirit.

‡ Self-Chosen § Comparative Religion

†† Need of the hour

ಇಲ್ಲವೆ ಬೇರೊಂದು ಮತವೇ ಆಗಲಿ ಮುಖ್ಯವಾಗಿ ಲೋಕಕ್ಕೆಲ್ಲಾ ಶ್ರೇಷ್ಠರಾದ ಧೈರ್ಯಶಾಲಿಗಳನ್ನೂ, ಸಹನೆಯುಳ್ಳವರನ್ನೂ, ಸ್ವಾರ್ಥತ್ಯಾಗಿಗಳೂ ಮತ್ತು ಪ್ರೀತಿಯುತರೂ ಆದ ಜನರನ್ನೂ, ಹೊಸ ಹೊಸ ಕೆಲಸಗಳನ್ನು ಮಾಡುವ ಶಕ್ತಿಯುಳ್ಳ ಜನರನ್ನೂ ಪಡೆದಿದೆಯೆಂಬ ಮೂಢನಂಬಿಕೆಯು ದೂರವಾಗುತ್ತಿದೆ. ಪ್ರತಿಯೊಂದು ದೊಡ್ಡ ಮತವೂ ತನ್ನ ಅನುಯಾಯಿಗಳ ಕಾಮೋದ್ರೇಕಗಳನ್ನೂ ಆಶಾಶಕ್ತಿಯ ಮುನ್ನುಗ್ಗುವಿಕೆಯನ್ನೂ ಕೋಪಾಂಧತೆಯನ್ನೂ ನಿಲ್ಲಿಸಿದೆ. ಇದರಿಂದ ಕೇವಲ ಅಪ್ರವರ್ಧನ ಸ್ಥಿತಿಯಲ್ಲಿರುವ ಮತವೂ ಕೂಡ ಲೋಕರಚನೆಯಲ್ಲಿ ತನ್ನದೆಂದು ಗೊತ್ತಾದ ನಿರ್ದಿಷ್ಟಸ್ಥಾನವೊಂದನ್ನು ಹೊಂದಿದೆ. ಏಕೆಂದರೆ (ಕೇವಲ) ಕಾಂತಿಯುಕ್ತ ಪುಷ್ಪ ವಿಶೇಷಗಳೂ ಕೂಡ ತಮ್ಮ ಜೀವಣಿಗೆಯಿಂದ ವ್ಯಕ್ತವಾದ ತಮ್ಮ ಬೇರುಗಳಿಗೆ ಸಾರ್ಥಕ್ಯವನ್ನುಂಟುಮಾಡುತ್ತವೆ. ಹೀಗೆಯೇ ಯೋಗ ವಿಷಯದಲ್ಲಿ ಈಗ ನಡೆಯುತ್ತಿರುವ ಅಭಿವೃದ್ಧಿಯು ಕೇವಲ ಶುದ್ಧ ಸಿದ್ಧಾಂತ (dogma) ಗಳನ್ನು ಕೆಳಗೆ ಹಾಕುತ್ತಿದೆ. * ಕೇವಲ ಜ್ಞಾನ ಮಾರ್ಗವು ಬೇರೆ ಬೇರೆಯಾಗಿರುವ ವಸ್ತುಗಳನ್ನು ಬೇರೆ ಮಾಡಿ ಬೇರೆ ಬೇರೆ ಸ್ಥಳಗಳಲ್ಲಿಟ್ಟು, ಪರಸ್ಪರ ಸಂಪರ್ಕವಿಲ್ಲದಂತೆ ದೂರುವಮಾಡುತ್ತಿರುವಲ್ಲಿ, ಇದಕ್ಕತಿಶಯವಾದ ಬುದ್ಧಿಯು (ಪ್ರತಿಭಾಶಕ್ತಿಯು) ಬೇರೆ ಬೇರೆ ವಸ್ತುಗಳಲ್ಲಿರುವ ಪ್ರಕೃತಿಜನ್ಯವಾಗಿರುವ ವಿಶೇಷ ಗುಣಗಳನ್ನು ತೆಗೆದುಕೊಂಡು ಸರ್ವವ್ಯಾಪಿಯಾದ ಪೂರ್ಣವಸ್ತುವಿನಲ್ಲಿ ಅವುಗಳೆಲ್ಲವೂ ಶ್ರೇಷ್ಠ ಐಕ್ಯದಿಂದಿದ್ದುಕೊಂಡು ಒಟ್ಟುಗೂಡು

---

*ನಿಮ್ಮ ಡೀನ್ ಇಂಜರವರ ವಾಕ್ಯವನ್ನು ಕೇಳಿ: "ಮತದಲ್ಲಿ ಮುಖ್ಯಸ್ಥಾನವು ಶಬ್ದದಿಂದ ಅನುಭವ (ಪ್ರತ್ಯಕ್ಷ) ಪ್ರಮಾಣಕ್ಕೆ ಬದಲಾಯಿಸಿ ಬಿಟ್ಟಿದೆ.........ಯೋಗಾಭ್ಯಾಸದಿಂದ ಕೂಡಿದ ಮತದ ಮೂಲತತ್ತ್ವಗಳನ್ನು ಬಹು ಜನರು ನಂಬುವುದೊಂದೇ ಅಲ್ಲದೆ, ಪಂಡಿತಗೋಷ್ಠಿಯಲ್ಲಿ ಅನೇಕರು ಇವುಗಳನ್ನು ತಮ್ಮ ನಂಬಿಕೆಗೆ ಸಾಧನೆಗಳೆನ್ನುತ್ತಾರೆ." (ಆಂಗ್ಲೇಯ ಮತ ಶಾಸ್ತ್ರವೂ ಮತ್ತು ಪ್ಲೇಟೋಯವರ ಯೋಗವೂ, ಪು. 113—115)

ವಂತೆ ಮಾಡುತ್ತದೆ. ಮತವನ್ನು ಹೆಚ್ಚಾಗಿ ತಿಳಿಯದವರೂ ಮತ್ತು ಮತಹೀನರುಗಳೇ ಶುದ್ಧ ವೇದಾಂತವನ್ನು ಕುರಿತು ಕಾದಾಡುತ್ತಾರೆಯೇ ಹೊರತು, ಮತದಲ್ಲಿ ನಿಜವಾದ ಮತಧರ್ಮಗಳನ್ನು ತಿಳಿದು ಅದರಂತೆ ನಡೆಯುವವರು ಯಾರೂ ಕೂಡ ಹೀಗೆಂದಿಗೂ ಮಾಡುವುದಿಲ್ಲ ನಿಮ್ಮ ಸ್ವಿಫ್ಟ್ ಕವಿವರ್ಯನು ಹೃದಯ ಭೇದಿಗಳಾಗ ಮಾತುಗಳನ್ನು ಈ ವಿಷಯದಲ್ಲಿ ಹೀಗೆ ಹೇಳಿದ್ದಾನೆ: "ನಮ್ಮಲ್ಲಿ ಪರಸ್ಪರವಾಗಿ ಒಬ್ಬರನ್ನೊಬ್ಬರು ದ್ವೇಷಿಸುವುದಕ್ಕೆ ಬೇಕಾದಷ್ಟು ಮತವಿದೆಯೇ ಹೊರತು ಅನ್ಯೋನ್ಯವಾಗಿ ಒಬ್ಬರನ್ನೊಬ್ಬರು ಪ್ರೀತಿಸುವುದಕ್ಕೆ ಬೇಕಾದ ಮತವು ನಮ್ಮಲ್ಲಿ ಸ್ವಲ್ಪವಾದರೂ ಇಲ್ಲವೇಇಲ್ಲ. ಹೀಗೆ ನಾವು ನಿಜವಾಗಿಯೂ ಹೆಚ್ಚು ಧರ್ಮಾವಲಂಬಿಗಳಾದಹಾಗೆಲ್ಲಾ, ಅನ್ಯಮತಗಳಲ್ಲಿ ದಯಾರ್ದ್ರ ದೃಷ್ಟಿಯುಳ್ಳವರಾಗುತ್ತೇವೆ."

ಇತಿ ದ್ವಿತೀಯೋಪನ್ಯಾಸಃ

---

ಸೂಚನೆ:—೬೪ನೇ ಪುಟದ ೨ನೇ ಟಿಪ್ಪಣಿಗೆ ಬದಲಾಗಿ ಭಾಷ್ಯ ಭಾಗದಲ್ಲಿ ಕೊಟ್ಟಿರುವ ೨ನೇ ಟಿಪ್ಪಣಿಯನ್ನು ನೋಡಿ.—N. S. S.

## ಉಪನ್ಯಾಸ ೩

# ಹಿಂದೂ ಧರ್ಮ ೧

## (ಮಾಯಾ, ಕರ್ಮ, ಪುರುಷಾರ್ಥ, ಮತ್ತು ಆಶ್ರಮ ಧರ್ಮಗಳು)

## ಮಾಯಾವಾದ ಮತ್ತು ಕರ್ಮ

### ೧. ಮಾಯಾಪಾಶದಿಂದ ಬಿಡುಗಡೆ ಹೊಂದುವುದು ತಾನೇ ಸಕಲ ಪುರುಷಾರ್ಥದ ಧ್ಯೇಯವು ?

ಹಿಂದೂ ಮತದ ಕರ್ಮ ಕಾಂಡವನ್ನು ತಿಳಿಯಕೊಳ್ಳುವುದಕ್ಕೆ ಮುಂದೆ ನಮ್ಮ ಈ ಧರ್ಮಶಾಸ್ತ್ರದ ಮುಖ್ಯಾಭಿಪ್ರಾಯದ ಮೇಲೆ ಹೊರಿಸಿರುವ ಮುಖ್ಯ ಖಂಡನೆಗಳನ್ನು ಚೆನ್ನಾಗಿ ವಿಮರ್ಶಿಸಿ ಮೊದಲು ನಮ್ಮ ದಾರಿಯನ್ನು ಸರಿಮಾಡಿಕೊಳ್ಳಬೇಕು. ಮಾಯಾವಾದವು ಜಗನ್ನಿತ್ಯತ್ವವನ್ನು ತೆಗೆದುಹಾಕಿ ಧರ್ಮ ಸಂಬಂಧಗಳನ್ನೆಲ್ಲಾ ನಿರರ್ಥಕವಾದವುಗಳನ್ನಾಗಿ ಮಾಡುತ್ತದೆಯೆಂದು ಜನರಲ್ಲಿ ದೀರ್ಘಪ್ರತೀತಿಯೊಂದು ನಡೆದು ಬಂದಿದೆ. ಪ್ರಕೃತಿ ಪ್ರಪಂಚ* ವು ನಿತ್ಯವೆಂದೂ ಮತ್ತು ಮಾನುಷ ಚರಿತ್ರೆಯು ಪ್ರಾತಿಭಾಸಿಕವೇ ಸರಿಯೆಂದೂ ನಂಬಿಕೆ ಇದೆ. ಕಾಲವೆಂದರೆ ಅರ್ಥವೇ ಗೊತ್ತಿಲ್ಲ, ಮತ್ತು ಜೀವನಕ್ಕೋ ಎಂದರೆ ಇದೇ ಗತಿಯಲ್ಲದೆ ಬೇರೆ ಏನೂ ಗೊತ್ತಿಲ್ಲ ಅಂತು ಹೇಗೋ ನಮ್ಮ ಮಾನವ ವರ್ಗವನ್ನೆಲ್ಲಾ ತನ್ನಲ್ಲಿ ನುಂಗಿಕೊಂಡಿರುವ ಈ ಮಾಯಾ ಬಂಧನದಿಂದ ಬಿಡಿಸಿಕೊಳ್ಳುವುದೇ ನಮ್ಮ ಸರ್ವ ಪ್ರಯತ್ನದ ಮುಖ್ಯೋದ್ದೇಶವಾಗಿದೆ.

### ೨. ಮಾಯಾವಾದದ ಚರಿತ್ರೆಯು

ವೇದಕಾಲದ ಜ್ಞಾನಿಗಳು ಈ ಲೋಕವು ಸತ್ಯಾತ್ಮಸ್ವಭಾವವುಳ್ಳದ್ದೆಂದು ಸಾರಿದರು. ಆದರೆ ಉಪನಿಷತ್ತುಗಳಲ್ಲಿ ಇದೇ ಲೋಕದ ಸತ್ಯಾ

---

* World of Nature

ಸ್ವಭಾವವು ಕಳೆಗುಂದಿ ಹಿಮ್ಮೆಟ್ಟುತ್ತಿದೆ. ಹೇಗೆಂದರೆ ಉದಾಹರಣೆಗಾಗಿ ಈ ಗ್ರಂಥಗಳಲ್ಲಿ ಕೊಟ್ಟಿರುವ ಸಂಗೀತಸಾಮಗ್ರಿಯಗಳು ಮತ್ತವುಗಳ ಶ್ರುತಿಯೂ, ಹೊನ್ನು ಮಣ್ಣುಗಳೂ ಮತ್ತವುಗಳಿಂದ ಮಾಡಿದ ಸಾಮಾನುಗಳೂ ಈ ನಮ್ಮ ಲೋಕವಸ್ತುಗಳೆಲ್ಲವೂ ಪರಮಾತ್ಮಕಲ್ಪಿತಗಳೆಂದು ಚೆನ್ನಾಗಿ ತಿಳಿಸುತ್ತವೆ. ಯಾಜ್ಞವಲ್ಕ್ಯರು ಹೇಳುವಂತೆ ಲೋಕದಲ್ಲಿನ ಪ್ರತಿಯೊಂದು ವಸ್ತುವೂ ಆತ್ಮತೃಪ್ತಿಗಾಗಿಯೇ ಇದೆ ಎಂದು ವ್ಯಕ್ತವಾಗುತ್ತದೆ. ಶ್ವೇತಾಶ್ವತರ ಉಪನಿಷತ್ತು ಪರಮಾತ್ಮನನ್ನು ಮಹಾಮಾಯಿಯೆಂದು ಹೇಳುವಾಗ ಈ ಮಹದಾಶ್ಚರ್ಯಕರವಾದ ಸರ್ವಸೃಷ್ಟಿಯೂ ಅವನ ಕೃತಕ (ಸೃಷ್ಟಿಗತ) ವಸ್ತುವೆಂದು ಸೂಚಿಸುತ್ತದೆ. ಭ್ರಾಂತಿಮಾನಸರಲ್ಲದ ಬೇರೆ ಯಾರಿಗೂ ಕಾಣಿಸವಂಥಾ ರೂಪಗಳನ್ನು ಪರಮಾತ್ಮನು ಸೃಷ್ಟಿಸುತ್ತಿರುವನೆಂಬ ಅಭಿಪ್ರಾಯವನ್ನು ಉಪನಿಷತ್ತುಗಳು ಒಪ್ಪುವುದಿಲ್ಲ. ಹಿಂದುಗಳಲ್ಲಿ ಅನೇಕರು ಒಪ್ಪಿಕೊಂಡಿರುವ ಆಯಾಯ ಸೇಶ್ವರವಾದಗಳು ಇಂಥಾ ಮಾಯಾವಾದವನ್ನು ಒಪ್ಪುವುದಿಲ್ಲ. ಆದರೆ ಮಾತ್ರ ಹಿಂದೂ ಮತದ ಭಾವನಾ ಶಿಖರವನ್ನು ಹತ್ತಿ ಧ್ವಜಪತಾಕೆಯನ್ನು ಹಿಡಿದು ನಮ್ಮ ಧರ್ಮವನ್ನು ಸಾರೋದ್ಧಾರವಾಗಿ ಸಾರುತ್ತಿರುವರೆಂಬ ಶ್ರೀ ಶಂಕರಾಚಾರ್ಯರೊಬ್ಬರು ಈ ತತ್ತ್ವ * ವನ್ನು ವಿಶೇಷವಾಗಿ ಸಾರಿ ಹೇಳುತ್ತಾರೆ.

### ೩. ಶಂಕರಮತ; ಹುಟ್ಟಿದುದೆಲ್ಲಾ ಅನಿತ್ಯವು (ಲೋಕೇ ಯದಾರಬ್ಧಂ ತದನಿತ್ಯಮ್)

ಶಂಕರಾಚಾರ್ಯರು ಈ ಲೋಕವು ಮಾಯಾಕೃತವೆಂದು ಹೇಳಿ ಇದಕ್ಕಾಗಿ ಹಲವು ಕಾರಣಗಳನ್ನು ಒತ್ತಿ ಹೇಳುವುದೇನೋ ನಿಜ. ದಿಕ್ಕಾಲಾತ್ಮಕವಾದ ಅನುಭವಸಮೂಹದ (manifold, ಕೋಟೆ) ಲ್ಲಿ ಭಿನ್ನದೇಶಗಳಲ್ಲಿ ಏಕಕಾಲೀನವಾಗಿರುವುದಾಗಲೀ, ಕಾಲಪ್ರವಾಹದಲ್ಲಿ ಮುಂದೆ ಹೋಗುವುದಾಗಲೀ ಅಪೂರ್ಣವೂ ಖಂಡಮಾತ್ರವೂ ಆಗಿ

* Theory

ನಡೆಯುವುದಲ್ಲದೆ, ಇದನ್ನು ನಾವೆಂದಿಗೂ ಏಕೀಕರಿಸಲಾರೆವು. ಏಕೆಂದರೆ ನಾವು ಎಷ್ಟು ದೊಡ್ಡ ಐಕ್ಯತೆಯನ್ನು ರಚಿಸಿದರೂ ಇನ್ನೂ ಸ್ವಲ್ಪ ಶೇಷವು ಯಾವಾಗಲೂ ಇದ್ದೇ ಇರುತ್ತದೆ. ಇಂಥಾ ದಿಕ್ಕಾಲಾತ್ಮಕವಾದ ಪ್ರಪಂಚವು ಯಾವುದೊಂದು ಶಾಸ್ತ್ರಾನುಬದ್ಧವಾದ * ಪೂರ್ಣತೆಯಲ್ಲಿ ಅಡಕಲವಕಾಶ ಕೊಡದೆಂದರೆ ಈ ಪೂರ್ಣತೆಯು ಅಪೂರ್ಣವೂ ಅನಿತ್ಯವೂ ಎಂದು ಸೂಚಿಸುತ್ತದೆ, ಮತ್ತು ನಿತ್ಯ ವಸ್ತುವೆಂದ ಮೇಲೆ ಅದು ಯಾವ ಪರಿಣಾಮಕ್ಕೂ ಸಿಕ್ಕದೆ ಸರ್ವದಾ ಇರಬೇಕು.† §ಆದರೆ ಚಾರಿತ್ರಿಕ ವಿಶೇಷವಸ್ತುಗಳು ಚಿರಜೀವಿಗಳಾಗಿರದೆ, ಪ್ರತಿಕ್ಷಣದಲ್ಲಿಯೂ ನಾಶವಾಗುತ್ತವೆ. ಅಂದರೆ ಲೋಕದಲ್ಲಿ ಹುಟ್ಟಿದುದೆಲ್ಲ ಸಾವಿಗೆ ವಶವರ್ತಿಯಾಗಿಯೇ ಇದೆ 'ಲೋಕೇ ಯದಾರಬ್ಧಂ ತದನಿತ್ಯಮ್'. ಇದನ್ನು ನಮ್ಮ ಅಭಿಪ್ರಾಯಗಳಿಗೆ ತಕ್ಕಂತೆ ಹೀಗೆ ಹೇಳಬಹುದು. ಪ್ರತಿಯೊಂದು ಚಾರಿತ್ರಿಕ ವ್ಯಕ್ತಿಯೂ (particular) ತನ್ನ ಪುರುಷಾರ್ಥ (end) ವನ್ನು ಪಡೆದ ಕೂಡಲೇ ತನ್ನ ಲೋಕ ಮಾರ್ಗ‡ವನ್ನು ಮುಗಿಸುತ್ತದೆ. ಮತ್ತು ಈ ಪುರುಷಾರ್ಥವು ನಮಗೆ ಸಿಕ್ಕದಿದ್ದು ಇಂಥಾ ಅಸಾಧ್ಯ ವಸ್ತುವಿನ ಸಾಧನೆಯಲ್ಲಿಯೇ ನಮ್ಮ ಜೀವಿತವೆಲ್ಲವೂ ಕಳೆಯಬೇಕಾಗಿಗಿದ್ದರೆ,†† ಹೀಗೆ ಸರ್ವದಾ ಅಲೆಯುತ್ತಿದ್ದು ಎಂದಿಗೂ ನೆಲೆಯೆಂದು ನಿಲ್ಲದಿದ್ದರೆ, ಆಗ ಈ ಲೋಕಕ್ರಮವೆಲ್ಲವೂ ಅರ್ಥರಹಿತವಾದುದೂ ಮತ್ತು ಸಂಸಾರವೆಲ್ಲವೂ ನೀರಿನಮೇಲಿನ ಗುಳ್ಳೆಯಂತೆ ನಿಸ್ಸಾರವೆಂಬ ಲೋಕವ್ಯಸನವು ಸಾರ್ಥಕವಾಗುತ್ತದೆ. ಅಂದರೆ ನಿರಂತರವಾದ ಗಾನವನ್ನು ಬಿಟ್ಟು ಈ ಗಾನಕ್ಕೆ ಕೊನೆಯೆಂಬ ಎಲ್ಲೆಯೂ ಇರಬೇಕು. ಹೀಗೆ ಚಾರಿತ್ರಿಕ ಮಾರ್ಗವು ಸರ್ವ ಪ್ರಾಧಾನ್ಯವಲ್ಲದೆ, ಅಸಾಧ್ಯವಾದ ಧ್ಯೇಯವನ್ನು ಪ್ರಾಪ್ತಿಸಿರಿ ಎಂಬ ನಿತ್ಯಶಾಸನಕ್ಕೆ ನಾವೆಂದಿಗೂ ಸಿಕ್ಕದಿದ್ದರೆ, ಈ ಚಾರಿತ್ರಿಕಮಾರ್ಗದಲ್ಲಿ ಎಲ್ಲಾದರೊಂದು ಕಡೆ, ಈ ಪೂರ್ಣತೆಯನ್ನು ನಾವು

* Systematic, ಕ್ರಮಬದ್ಧ

† persist ‡ ಕಾಲತ್ರಯ ಸತ್ತಾವಾನ್

§ course †† Arriving

ಪಡೆಯಲೇಬೇಕಲ್ಲದೆ, ಮತ್ತೆ ಈರೀತಿಯಾದ ಸಿದ್ಧಿಯೆಂದರೆ ನಮ್ಮ ಚಾರಿತ್ರಿಕ ವ್ಯಕ್ತಿತ್ವವನ್ನು ದಾಟಿ, ಜನ್ಮಮರಣಾಂತಕವಾದ ಈ ಸಂಸಾರ ಪಾಶದಿಂದ ಬಿಡುಗಡೆ ಹೊಂದುವುದೇ ಎಂದರ್ಥ. ಇದರಿಂದ ಚರಿತ್ರೆಯೆಂದರೆ ಕೇವಲ ಉದ್ದೇಶಸಾಧನೆಯಲ್ಲ, ಮತ್ತೆ ನಾವೂ ಕೂಡ ಈ ಸಾಧನಕಾರ್ಯದಲ್ಲಿ ಮುಂದೆಮುಂದೆ ಹೋಗುತ್ತಿರುವೆವು. ಮತ್ತು ಮೋಕ್ಷವೆಂದರೆ ಪ್ರತಿಯೊಬ್ಬ ವ್ಯಕ್ತಿಯ ಉದ್ದೇಶಸಾಧನೆ*ಯಾಯಿತೆಂದೇ ಅರ್ಥ. ಇಂಥಾ ಪೂರ್ಣತೆಯನ್ನು ಪಡೆದೊಡನೆಯೇ ಚಾರಿತ್ರಿಕ ಸ್ಥಿತಿಯು † ಮುಗಿಯುತ್ತದೆ. ಯಾವ ಪುರುಷನಾದರೂ ತನ್ನ ಉದ್ದೇಶವನ್ನು ಪೂರ್ತಿಮಾಡಿಕೊಂಡನೆಂದರೆ, ಸಂಪೂರ್ಣತೆಗಿರುವ ಭಾವವೈಶಾಲ್ಯತೆ‡ಯನ್ನು ಪರಿಪುಷ್ಟಿಸುವುದಲ್ಲದೆ, ಕಾರ್ಯಸಾಧನೆಗೆ ಬೇಕಾದ ಶಕ್ತಿಯನ್ನು ಅಂದರೆ ತನ್ನ ವ್ಯಕ್ತಿತ್ವವನ್ನು ಇನ್ನೂ ತನ್ನಲ್ಲಿ ಇಟ್ಟುಕೊಂಡಿರುವನು. ಲೋಕವೆಲ್ಲವೂ ತನ್ನ ಪೂರ್ಣ ಅಂದರೆ ಅಂತಿಮಸ್ಥಿತಿಯನ್ನು ಪಡೆದಾಗ ಈ ಮುಕ್ತಾತ್ಮರೆಲ್ಲರೂ ಪರಮಾತ್ಮನ ಶಾಂತಿ§ಸಾಗರದಲ್ಲಿ ಲೀನವಾಗುತ್ತಾರೆ. ಈ ನಮ್ಮ ಪೃಥ್ವಿಯು ಯಾವ ನಕ್ಷತ್ರ ಪ್ರಪಂಚದಲ್ಲಿ ಕೇವಲ ಧೂಳಿನ ಕಣವನ್ನು ಸಣ್ಣಗಿದ್ದುಕೊಂಡು ತೇಲುತ್ತಿರುವುದೋ ಅಂಥಾ ಪ್ರಪಂಚದವಿನಾಶಕ್ಕಾಗಿ ನಿಶ್ಶಬ್ದವಾಗಿಅದರೂಏಕಮನಸ್ಸಿನಿಂದ†† ಪ್ರಯತ್ನಿಸುತ್ತಿರುವ ಮಹಚ್ಛಕ್ತಿಗಳೆಲ್ಲವೂ ತಮ್ಮ ನಿಜಧ್ಯೇಯವನ್ನು ಸೇರಿಯೇ ಸೇರುತ್ತವೆ. ಮತ್ತು ಲೋಕವೆಲ್ಲವೂ (= ತನ್ನ)ಸ್ವಾರ್ಥತ್ಯಾಗ (ಆತ್ಮಯಜ್ಞ)ದಿಂದ ಕೃತಕೃತ್ಯವಾಗುತ್ತದೆ.‡‡ ಈರೀತಿಯಾದ ಲೋಕಸಂಹಾರ (= ಪ್ರಳಯ)ಕ್ಕೆ ದಿಕ್ಕಾಲಾತ್ಮಕವಾದ ಲೋಕವು (system) ಪರಿಮಿತಿಯುಳ್ಳದ್ದು ಮತ್ತು ಅಳತೆಗೊಳಗಾದದ್ದೆಂಬ ಪ್ರಥಮ§§ನಂಬಿಕೆಯಿಂದ ಕೂಡಿದ ಈಗಿನ ಗಣಿತಶಾಸ್ತ್ರದಲ್ಲಿ ಅಗ್ರಗಣ್ಯರಾದ ನಿಮ್ಮ ಐನ್

---

* ಪುರುಷಾರ್ಥಸಿದ್ಧಿ † Existence ‡ Universality

§ Stillness. †† Surely.

‡‡ Fulfil itself, ತನ್ನ ಧ್ಯೇಯವನ್ನು ಪಡೆಯುತ್ತದೆ.

§§ Assumption.

ಸ್ತ್ರೀಯರ ಪರಸ್ಪರ ಸಂಬಂಧವಾದ (Relativity) ವು ಅನನುಕೂಲವಾಗಿಲ್ಲ ಆದರೆ ಇವರಿಂದ ಸರ್ವಶಕ್ತಿಯುತನಾದ, ಅಂದರೆ ಅನಂತವಾದ ಸಾಧ್ಯಮಾರ್ಗಗಳನ್ನುಳ್ಳ ಪರಮಾತ್ಮನ ಸ್ವತಂತ್ರಶಕ್ತಿ ಮತ್ತು ಸ್ಥಿತಿಗತಿಗಳಲ್ಲಿ ಏನೂ ಕಡಿಮೆಯಾಗುವುದಿಲ್ಲ. ಈ ಪ್ರಪಂಚವು ಮುಗಿಯಿತೆಂದು ನಾಟಕದ ಕೊನೆಯ ಪರದೆಯು ಇಳಿಬೀಳುತ್ತದೆ. ಆದರೆ ಬೇರೊಂದು ಸಾಧ್ಯವಸ್ತುವು, ಬೇರೊಂದು ಕಥಾಸಂದರ್ಭವು, ಬೇರೊಂದು ನಾಟಕವು ಪ್ರಾರಂಭವಾಗಿ ಯುಗಾಂತರಗಳವರೆಗೂ ನಡೆಯಬಹುದು.

### ೪. ಪೂರ್ಣವಸ್ತುವಿನಲ್ಲಿ ಯಾವ ಕಾರ್ಯಕ್ಕೂ ಅವಕಾಶವಿಲ್ಲ ; ಅಂದರೆ ಈ ವಾದಕ್ಕೆ ಸ್ಥಳವೇ ಇಲ್ಲ

ಕೆಲವರಿಗೆ ಈರೀತಿಯಾದ ಲೋಕನಾಶವು ನಮ್ಮ ಒದ್ದಾಟ*ಕ್ಕೆಲ್ಲ ಬಹು ಅಲ್ಪ ಫಲವಾಗಿ ಕಂಡುಬಂದು, ನಮಗವರು ನಿತ್ಯಸ್ವರ್ಗವೊಂದನ್ನಾಗಲೀ ಇಲ್ಲವೇ ನಿತ್ಯನರಕವೊಂದನ್ನಾಗಲೀ ಕಲ್ಪಿಸಿ†ಕೊಡುತ್ತಾರೆ. ಆದರೆ ಇಂಥಾ ನಿತ್ಯಸ್ಥಿತಿಗಳ ಅರ್ಥವೆಲ್ಲವೂ ನಿತ್ಯ ಆಲಸ್ಯವೇ ಆಗಿರುತ್ತದೆ. ನಿಮ್ಮ ತತ್ತ್ವಜ್ಞರಾದ ಹರ್ಬರ್ಟ್ ಸ್ಪೆನ್ಸರರು ಹೇಳುವಂತೆ ಪೂರ್ಣತೆಯಿಂದ ಅಂದರೆ ನಮ್ಮ ಸುತ್ತಮುತ್ತಲಿರುವ ಆವರಣದೊಡನೆ ನಮ್ಮ ನಮ್ಮ ಶರೀರಕ್ಕೆ ಇರಬೇಕಾದ ಯೋಗ್ಯ (= ಪೂರ್ಣ) ಸಂಬಂಧದಿಂದ ಚ್ಯುತ (= ಬೇರೆ) ವಾಗುವುದೆಂ‡ದರೆ ನಾಶವಾಗುವುದೆಂದೇ ಅರ್ಥವಾಗುತ್ತದೆ. ಆದರೆ ಇಂಥಾ ಪೂರ್ಣಸ್ಥಿತಿಯೆಂದರೆ ಪೂರ್ಣತಾಟಸ್ಥ್ಯ, ಕೊಳೆಯುವಿಕೆ, ಇಲ್ಲವೆ ಮರಣಸಮವಾದ ನಾಶಸ್ಥಿತಿಯೇ ಸರಿ. ಎಷ್ಟೋ ಜ್ಞಾನಿಗಳು, ಪೂರ್ವದೇಶದಲ್ಲಿಯೂ ಪಶ್ಚಿಮದೇಶದಲ್ಲಿಯೂ ಸಹ, ಸ್ವರ್ಗವೆಂದರೆ ನಾವು ಪರಮೇಶ್ವರನನ್ನು ಇಂಪಾಗಿ ಸ್ತೋತ್ರಿಸುವ ಕಾರ್ಯಸ್ಥಿತಿಯೆಂದೂ ಮತ್ತು ಈ ತನ್ನ ಮಹತ್ವವನ್ನು ಕೇಳುವುದರಲ್ಲಿ ಆ ದೇವನಿಗೆ ಬೇಸರವೇ ಇಲ್ಲವೆಂದೂ ತಿಳಿಯುತ್ತಾರೆ. ಹೀಗೆಯೇ ಮುಕ್ತಾತ್ಮರು ಮಾಡುವ ಪ್ರಯೋಜನಕರವಾದ ಕೆಲಸವೆಂದರೆ ಕಷ್ಟದಲ್ಲಿ ಮುಳುಗಿರುವ ಮನು

* Struggles, ಅಸಾಧ್ಯಪ್ರಯತ್ನ.

† Picture, ಚಿತ್ರಿಸಿ. ‡ Deviation.

ಸ್ಯಕೋಟಿಯನ್ನು ಉದ್ಧರಿಸುವುದೇ ಆಗಿದೆ. ಮತ್ತು ಇನ್ನೂ ಮುಕ್ತಿ ಪಡೆಯದೆ ಇಂಥಾ ಮುಕ್ತಿದಾಯಕವಾದ ಜ್ಞಾನಸಹಾಯಕ್ಕಾಗಿ ಕಾದಿರುವ ಜೀವಾತ್ಮರುಗಳಿರುವವರೆಗೂ, ಇಷ್ಟರಲ್ಲೇ ಮುಕ್ತರಾಗಿರುವ ಮಹಾತ್ಮರಿಗೆ ಇನ್ನೂ ತಾವು ನಡೆಸಬೇಕಾದ ಕೆಲಸವಿದೆ. ಇದು ಬಿಟ್ಟು ಲೋಕಕಾರ್ಯಕ್ಕವು ಪೂರ್ತಿಯಾಗಿದೆಯೆಂದು ಜೀವಾತ್ಮರುಗಳೆಲ್ಲಾ ತಮ್ಮ ಪುರುಷಾರ್ಥವಾದ ಪೂರ್ಣಮುಕ್ತಿಯನ್ನು ಪಡೆದಿರುವರೆಂದರೆ ಅಲ್ಲಿಂದ ಮುಂದಕ್ಕೆ ಮಾಡಬೇಕಾದ ಕಾರ್ಯವು ಯಾವುದೂ ಇರುವುದಿಲ್ಲ. ನಿಮ್ಮ ಶ್ರೇಷ್ಠತತ್ತ್ವಜ್ಞರಾದ ಅರಿಸ್ಟಾಟಲರುಹೇಳುವಂತೆ, "ಅನಂತವಾದ ಜೀವಿಕೆ(duration) ಎಂದರೆ, ಮೊದಲೇ ಒಳ್ಳೆಯದಾಗಿದ್ದ ವಸ್ತುವು ಪೂರ್ವಕ್ಕಿಂತ ಇನ್ನೂ ಉತ್ತಮವಾಗುವುದಕ್ಕೆ ಅವಕಾಶವಿಲ್ಲ: ಅಂದರೆ ಬಿಳಿಯ ಬಣ್ಣವು ಇನ್ನೂ ಹೆಚ್ಚು ಬಿಳುಪನ್ನು ಹೊಂದುವುದಿಲ್ಲ."* ಕಷ್ಟವಿಲ್ಲದೆ ಯಾವ ಸೃಷ್ಟಿಕಾರ್ಯವೂ ಸಾಧ್ಯವಿಲ್ಲ, ಮತ್ತು ಲೋಕವೆಲ್ಲವೂ ಪೂರ್ಣತೆಯು ಲಭಿಸಿತೆಂದರೆ, ಈ ಸೃಷ್ಟಿಕಾರ್ಯವೆಲ್ಲವೂ ಆಗಲೇ ನಿಂತಿತೆಂದರ್ಥವಾಗುತ್ತದೆ. ಇದಕ್ಕಾಗಿಯೇ ನಿಮ್ಮ ತತ್ತ್ವಜ್ಞರಾದ ಬ್ರ್ಯಾಡ್ಲೆಯವರು: "ನಿಜವಾಗಿರುವ ಯಾವ ವಸ್ತುವೂ ಯತ್ಕಿಂಚಿತ್ತಾದರೂ ಚಲಿಸುವುದಿಲ್ಲ" ವೆಂದು ಹೇಳಿದ್ದಾರೆ. ಕಾರ್ಯವೆಂದರೆ ಕೇವಲ ಚಾರಿತ್ರಿಕ (= ವ್ಯವಹಾರಿಕ) ಸ್ಥಿತಿ†ಗೆ ಸೇರಿದ್ದೇ ಹೊರತು ನಿಜವಾದ ಪೂರ್ಣತೆಯು ಇಂಥಾ ಚಾರಿತ್ರಿಕ ವ್ಯವಹಾರಕ್ಕೆ ಎಂದಿಗೂ ಸೇರಿಲ್ಲ. ಏಕೆಂದರೆ ತನ್ನಲ್ಲಿಲ್ಲದೆ ತನಗೆ ಬೇಕೆನ್ನುವ ಬೇರೊಂದು ವಸ್ತುವು ಇದಕ್ಕೆ ಯಾವುದೂ ಇಲ್ಲ, ಮತ್ತೆ ಇವುಗಳನ್ನು ಕುರಿತು ತಾನು ಯಾವ ವಿಧವಾದ ಕಾರ್ಯವನ್ನೂ ಮಾಡಲಾರದು.

### ೫. ಆದರೆ ಸಂಸಾರವು ಅನಂತವಾಗಿದೆ ; ಮತ್ತು ಸರ್ವಮುಕ್ತಿಗೆ ಅವಕಾಶವೇ ಇಲ್ಲ

ಇದಕ್ಕೆ ಪ್ರತಿಯಾಗಿ ಕೆಲವರು ಲೋಕವು ಅನಂತವಾಗಿರುವು

* ನಿಕೋಮಾಕಿಯನ್ ಎಥಿಕ್ಸ್ (ಧರ್ಮಶಾಸ್ತ್ರ), 1, 6.

† Process, ಗತಿ.

ದೆಂದೂ,ಆದುದರಿಂದ ಮಾಡಬೇಕಾದ ಕಾರ್ಯವು ಯಾವಾಗಲೂ ಎಷ್ಟೋ ಇರುವುದೆಂದೂ ಹೇಳುತ್ತಾರೆ. ಅಂದರೆ ಲೋಕದ ಜನರಿಗೆಲ್ಲರಿಗೂ ಪೂರ್ಣತೆಯು ದೊರಕುವ ಕಾಲವೆಂದಿಗೂ ಬರುವುದಿಲ್ಲವೆಂದು ಹೇಳಿದ ಹಾಗಾಯಿತು. ಆದರೆ ಇದರಿಂದ ಪರಮಾತ್ಮನ ಉದ್ದೇಶವೇ ಭಂಗ ವಾಗುತ್ತದೆ. ಏಕೆಂದರೆ ಲೋಕಕ್ರಮವು ಇರುವವರೆಗೂ ಮುಕ್ತಾತ್ಮರು ಗಳೆಲ್ಲರೂ ತಮ್ಮ ತಮ್ಮ ವ್ಯಕ್ತಿತ್ವವನ್ನು ಇನ್ನೂ ಪಡೆದಿರುವರಲ್ಲದೆ ಲೋಕವೆಲ್ಲಕ್ಕೂ ಮುಕ್ತಿಯಾದ ಹೊರತು ಅಂದರೆ ಮುಕ್ತಿಪ್ರಾಪ್ತಿಯಾದ ಹೊರತು ಈ ವ್ಯಕ್ತಿತ್ವದಿಂದ ಅವರೆಂದಿಗೂ ಬಿಡುಗಡೆ ಹೊಂದುವ ಹಾಗಿಲ್ಲ.

## ೬. ಅಂದರೆ ಲೋಕವೆಲ್ಲಾ ಮಿಥ್ಯವಲ್ಲ, ಮುಕ್ತಿದಕ್ಕೆ ಬೇರೊಂದು ಅರ್ಥವಿದೆ

ಹೀಗಿರುವಲ್ಲಿ ಶ್ರೀ ಶಂಕರಾಚಾರ್ಯರು ಕೇವಲ ಮಾಯಾವಾದಿಗಳೆಂದು ಹೇಳುವುದು ಸರಿಯಲ್ಲ. ಏಕೆಂದರೆ ಶಂಕರರು ವಿಜ್ಞಾನವಾದಿಗಳ ಕೇವಲ ಜೀವಾತ್ಮವಾದ (Subjectivism, ಕೈವಲ್ಯವಾದ) ವನು ಖಂಡಿಸುವುದಲ್ಲದೆ, ಬಾಹ್ಯಪ್ರಪಂಚಕ್ಕೆ ಸೇರಿದ ವಸ್ತುಗಳ ಮನಸಾತೀತ ನಿತ್ಯತೆಯನ್ನೂ ಸಾರಿದ್ದಾರೆ. ಅವರು ಕೇವಲ ದೃಷ್ಟಿಸೃಷ್ಟಿವಾದಿಗಳಲ್ಲ, ಅಂದರೆ ನಾವು ನೋಡುತ್ತಿರುವಾಗ ಮಾತ್ರ ಪ್ರಪಂಚವು ನಿಜವಾಗಿದ್ದು, ನಾವು ಕಣ್ಣು ಮುಚ್ಚಿಕೊಂಡೊಡನೆಯೇ ಅದು ಲಯವಾಗಿ ಅದೃಶ್ಯವಾಗುವುದಿಲ್ಲ. ಏಕೆಂದರೆ ನಾವು ವಸ್ತುಗಳನ್ನು (- ಬಾಹ್ಯಪ್ರಪಂಚವನ್ನು) ಪ್ರತ್ಯಕ್ಷರೀತಿಯಿಂದ ಚೆನ್ನಾಗಿ ನೋಡುವೆವೇ ಹೊರತು ಕೇವಲ ಅಜ್ಞಾತನವಾದ ಸ್ವಪ್ನವಸ್ತು (apparitions) ಗಳನ್ನು ಧ್ಯಾನಿಸುವುದಿಲ್ಲ (contemplate) ಹೀಗೆಯೇ ಶ್ರೀ ಶಂಕರರು ಸ್ವಪ್ನಗಳನ್ನು ಜಾಗ್ರದವಸ್ಥೆಗೆ ಸೇರಿದ ವಸ್ತುಗಳಿಂದ ಪ್ರತ್ಯೇಕಿಸುವುದಲ್ಲದೆ ನಾವವುಗಳನ್ನೆಂದಿಗೂ ಒಂದಾಗಿವೆಯೆಂದು ತಪ್ಪು ತಿಳಿಯಬಾರದೆಂದು ಸೂಚಿಸುತ್ತಾರೆ. ಏಕೆಂದರೆ ಜಾಗ್ರದವಸ್ಥೆಗೆ ಸೇರಿದ ನಮ್ಮ ಯಾವ ಅನುಭವಗಳೂ ನ್ಯಾಯಬುದ್ಧಿಗೆ ಗೋಚರವಾದ (logical) ನಮ್ಮ ಜ್ಞಾನಕ್ಕೆ ವಿರೋಧವಾಗಿ

ಕಂಡುಬರುವುದಿಲ್ಲ.* ನಮ್ಮ ಅನುಭವವನ್ನು ಕುರಿತು ಮಾತನಾಡುವು ದಾದರೆ ಅವರು ಕೇವಲ ನಿತ್ಯವಾದಿ (Realist) ಗಳೇ ಆಗುತ್ತಾರೆ, ಏಕೆಂದರೆ ಪ್ರಪಂಚವಸ್ತುಗಳು ನಮ್ಮ ಭಾವ (Thoughts) ಗಳನ್ನು ತಮಗಿಷ್ಟಬಂದಂತೆ ನಡೆಸುತ್ತವೆ (control)†; ಮತ್ತು ಶಂಕರರ ಅವಿ ದ್ಯಾವಾದವೂ ಕೂಡ ಇದೇ ಅಭಿಪ್ರಾಯವನ್ನು ದೃಢೀಕರಿಸುತ್ತದೆ. ಏಕೆಂದರೆ ಅವಿದ್ಯವು ಕೇವಲ ಆಯಾ ವ್ಯಕ್ತಿಗಳ ಮನಸ್ಥಿತಿಗೆ ಸೇರಿದ ಆಯಾ ಜನರ ಸ್ವಂತ ಅಭಿಪ್ರಾಯವಲ್ಲ (protession); ಮತ್ತು ಸಾಂ ತಸ್ಥಿತಿಗೆ ಸೇರಿದ ಸರ್ವಲೋಕಕ್ಕೂ ಬೇಕಾದ ತತ್ತ್ವವಾಗಿ ಸರ್ವಸಾ ಮಾನ್ಯಲೋಕಕ್ಕೂ ಸೇರಿದೆ. ಈ ನಮ್ಮ ವ್ಯಾವಹಾರಿಕಲೋಕವೆಲ್ಲಕ್ಕೂ (ಪೃಥಿವ್ಯಾದಿ ಪ್ರಪಂಚಕ್ಕೂ) ಇದೇ ಮುಖ್ಯಕಾರಣವಾಗಿದೆ. ಹೇಗೆಯೋ ಲೋಕದ ಎಲ್ಲಾ ವಸ್ತುಗಳಿಗೂ ಇದು ಸಾಮಾನ್ಯವಾದ ವಸ್ತುವಿಶೇಷ ವಾಗಿದೆ (ಅಂದರೆ ಸರ್ವಸಾಧಾರಣವಾದ ವಸ್ತುವಾಗಿದೆ). ಮೋಕ್ಷ ಅಥವಾ ಯಾವನೊಬ್ಬ ವ್ಯಕ್ತಿಯ ಮುಕ್ತಿ ಎಂದರೆ ಉಳಿದ ಲೋಕವೆಲ್ಲ ಕ್ಕೂ ನಾಶವಾಯಿತೆಂದು ಅರ್ಥವಲ್ಲ; ಮತ್ತು ತಪ್ಪು ತಿಳಿವಳಿಕೆಯನ್ನು ಬಿಟ್ಟು ನಿಜಜ್ಞಾನವನ್ನು, ಅಂದರೆ ಅವಿದ್ಯೆಯನ್ನು ಬಿಟ್ಟು ನಿಜ ವಿದ್ಯೆಯ ನ್ನು ಪಡೆಯುವುದೆಂದೇ ಅರ್ಥ. ಬಿಸುಲ್ಗುದುರೆಯ ತಪ್ಪುಭಾಸವು (illusion) ನಿಜವಾದ ಶಾಸ್ತ್ರಜ್ಞಾನದಿಂದ ನಾಶವಾಯಿತೆಂದರೆ, ಈ ಅಜ್ಞಾನಾತ್ಮಕವಾದ ಭ್ರಾಂತಿಯು‡ ನಮ್ಮನ್ನು ಆಕರ್ಷಿಸಿ ಮೋಸಪಡಿಸ ಲಾರದಿದ್ದರೂ ಇನ್ನೂ ಭ್ರಾಂತಿಪ್ರಪಂಚಕ್ಕೆ ಸೇರಿದ ವಸ್ತುವೊಂದಾಗಿ

* ನೈವಂ ಜಾಗರಿತೋಪಲಬ್ಧಂ ವಸ್ತುಸ್ತಂಭಾದಿಕಂ ।
ಕಸ್ಯಾಂಚಿದಪಿ ಅವಸ್ಥಾಯಾಂ ಬಾಧ್ಯತೇ ॥

ಬ್ರಹ್ಮಸೂತ್ರಭಾಷ್ಯ, II, 2, 29

† "ನ ವಸ್ತುಯಾಥಾತ್ಮ್ಯಜ್ಞಾನಂ ಪುರುಷಬುದ್ಧ್ಯಪೇಕ್ಷಂ" । ಮತ್ತು "ಭೂತವಸ್ತುವಿಷಯಾಣಾಂ ಪ್ರಾಮಾಣ್ಯಂ ವಸ್ತುತಂತ್ರಮ್" ॥ ಎಂಬ ವಾಕ್ಯಗಳನ್ನು ನೋಡಿ.

‡ Illussion, ಭ್ರಮೆ.

ನಿಂತಿರುತ್ತದೆ. ಅಂದರೆ ಲೋಕವೆಲ್ಲಾ ಇಲ್ಲವೆಂದು ಹೇಳಿದಹಾಗಾಗ ಲಿಲ್ಲ. ಮತ್ತು ಇದನ್ನು ಬೇರೊಂದು ವಿಧದಲ್ಲಿ ತಿಳಿದುಕೊಳ್ಳುವಂತೆ ಅರ್ಥಮಾಡಿದಂತಾಯಿತು.

೭. ಏಕೆಂದರೆ, ಪೂರ್ಣದೃಷ್ಟಿಯಲ್ಲಿ ದ್ವೈತವೆಲ್ಲಿಯೂ ಇಲ್ಲ, ಮತ್ತು ಸರ್ವವೂ ಅದ್ವೈತವಾಗಿಯೇ ಇದೆ.

ಶಂಕರರು ಜೀವಾತ್ಮಪರಮಾತ್ಮರುಗಳಾಗಿರುವ * ಬುದ್ಧಿಭೇದವು (logical dualism, ಸ್ವರೂಪಭೇದ) ನಿತ್ಯವಾದುದಲ್ಲವೆಂದು ಹೇಳು ತ್ತಾರೆ. ಏಕೆಂದರೆ ಇದು ಏಕವಸ್ತುವಾದ (Monism) ದಮೇಲೆ ಆಧಾರಹೊಂದಿ ನಿಂತಿದೆ. ಜೀವವಸ್ತು† (ಜ್ಞಾತೃಜ್ಞೇಯ, ವಿಶೇಷ ವಿಶೇಷ್ಯಗಳೆರಡೂ ಪರಮಾತ್ಮನ ರೂಪ ವಿಶೇಷಗಳಾಗಿವೆ (ಪ್ರಕಾರ ಗಳಾಗಿವೆ, ಆತ್ಮನ ಏವ ಧರ್ಮಾಃ). ಬ್ರಹ್ಮನನ್ನು ಬಿಟ್ಟು ಇವುಗಳಿಗೆ ಯಾವ ಜೀವಶಕ್ತಿ‡ಯೂ ಇಲ್ಲ. 'ಲೋಕದಲ್ಲಿ ಚೇತನಾಚೇತನಗಳಾದ ಸಾಮಾನ್ಯವಸ್ತುಗಳೂ ವಿಶೇಷವಸ್ತುಗಳೂ ಎಷ್ಟೋ ಇವೆ. ಈ ಸಾಮಾ ನ್ಯವಸ್ತುಗಳೆಲ್ಲ ತಮ್ಮ ಅಂತಸ್ಥಿನ ರಚನೆ§ಯಲ್ಲಿ ತಮಗೆಲ್ಲಕ್ಕೂ ಹೆಚ್ಚಾದ ದೊಡ್ಡದೊಂದು ಸಾಮಾನ್ಯವಸ್ತುವಿನಲ್ಲಿ ಅಂದರೆ ಚಿದ್ಘನ ವಸ್ತುವಾದ ಬ್ರಹ್ಮನಲ್ಲಿ ಸೇರಿ ನಮ್ಮ ಗೋಚರಕ್ಕೆ ಬರುತ್ತವೆ.' ಶಂಕರರು ಪರ ಮಾತ್ಮನೂ ಲೋಕವೂ ಎರಡೂ ಒಂದೇ ಎಂದು ಹೇಳದೆ, ಈ ಲೋಕವು ಸ್ವತಂತ್ರವಸ್ತುವೆಂಬ ಅಭಿಪ್ರಾಯವನ್ನು ಖಂಡಿಸುತ್ತಾರೆ.‡‡ ಟೀಕಾ

---

* Subject and object. † Subject and object

‡ Exisience § graduated scale.

††ಅನೇಕಾ ಹಿ ವಿಲಕ್ಷಣಾಶ್ಚೇತನಾಚೇತನರೂಪಾಃ ಸಾಮಾನ್ಯ ವಿಶೇಷಾಸ್ತೇಷಾಂ ಪಾರಂಪರ್ಯಗತ್ಯಾ ಏಕಸ್ಮಿನ್ ಮಹಾಸಾಮಾನ್ಯೇ ಅಂತ ರ್ಭಾವಃ ಪ್ರಜ್ಞಾನಘನೇ ॥ ಬೃಹದಾರಣ್ಯಕೋಪನಿಷದ್ಭಾಷ್ಯ II, 4, 9.

‡‡ ಭಾಮತಿಯನ್ನು ನೋಡಿ:—ನ ಖಲ್ವನನ್ಯತ್ವಮಿತಿ ಅಭೇದಂ ಬ್ರೂಮಃ, ಕಿಂತು ಭೇದಂ ವ್ಯಾಸೇಧಾಮ॥

ಕಾರರು ಹೇಳುವಂತೆ: "ಲೋಕವು ಬ್ರಹ್ಮನೊಡನೆ ಒಂದಾಗಿಲ್ಲ. ಮತ್ತು ಈ ತನ್ನ ಮೂಲಸ್ಥಾನವನ್ನು ಬಿಟ್ಟ ಮೇಲೆ ಈ ಲೋಕಕ್ಕೆ ಬೇರೆ ಯಾವ ವಿಧವಾದ ಸ್ವತಂತ್ರಜೀವಿಕೆಯೂ ಇಲ್ಲ."* ಹೀಗೆಯೇ ಕಾರ್ಯ ನಿತ್ಯವಲ್ಲವೆಂದು ಶಂಕರರು ಹೇಳುವಾಗ, ಈ ತಮ್ಮ ವಾಕ್ಯವನ್ನು "ಕಾರಣ ವನ್ನು ಬಿಟ್ಟಮೇಲೆ," ಇಲ್ಲವೆ 'ಪರಮಾತ್ಮನನ್ನು ಬಿಟ್ಟುಬಿಟ್ಟರೆ' ಎಂಬಿವೇ ಮೊದಲಾದ ವಾಕ್ಯಗಳಿಂದ ವಿಶೇಷಮಾಡುತ್ತಾರೆ†(qualifies)

## ೮. ಆರಂಭವಾದವು ಅಜ್ಞೇಯವು ಮತ್ತು ನಿಷ್ಪ್ರಯೋಜಕವು

ಸಾಂತವಸ್ತುವು ಅನಂತವಸ್ತುವಿನ ಶರೀರದಿಂದ ಹೇಗೆ ಉತ್ಪನ್ನ ವಾಯಿತೆಂದು ಪ್ರಶ್ನೆ ಎತ್ತಿದರೆ ಶಂಕರರು ಅದೆಲ್ಲವೂ ತಿಳಿದುಕೊಳ್ಳಲಾಗದ ರಹಸ್ಯ ಇಲ್ಲವೆ ಮಾಯವೆಂದು ಹೇಳುತ್ತಾರೆ. ಸತತವೂ ನಿಜವಾದ ನಿತ್ಯವಸ್ತುವಿದೆಯೆಂದು ನಮಗೆ ಗೊತ್ತುಂಟು. ಮತ್ತೀ ಲೋಕವು ಪರ ಮಾತ್ಮನಲ್ಲಿ ಆಶ್ರಯಿಸಿದೆ ಎಂದು ತಿಳಿದಿದ್ದೇವೆ; ಆದರೆ ಮಾತ್ರ ಇದು ಹೇಗೆ ನಿಂತಿದೆ ಎಂದು ನಮಗೆ ಸ್ವಲ್ಪವಾದರೂ ಗೊತ್ತಿಲ್ಲ. ಅದು ನಮ್ಮ ಯಾವತ್ಜ್ಞಾನದೃಷ್ಟಿಗೂ ಬಹುಅತೀತವಾಗಿದೆ. ಸೃಷ್ಟಿವಾದಕ್ಕೆ‡ಯಾವ ಬಲವೂ ಇಲ್ಲ. ಏಕೆಂದರೆ ಇದು ಪರಮಾತ್ಮನು ಕೆಲವು ಕಾಲ ಏಕಾಂಗಿ ಯಾಗಿ ವಾಸಮಾಡುತ್ತಿದ್ದು,ಇವನಿಗೆ ಅನಂತರ ಹಠಾತ್ತಾಗಿ ಸಂಘವಿರಬೇಕೆಂಬ ಅಭಿಪ್ರಾಯವು ಚೆನ್ನಾಗಿ ಮನಗಾಣುತ್ತಲೇ ಇವನು ಈ ಲೋಕವನ್ನು ಸೃಷ್ಟಿಸಿದನೆಂದು ನಂಬುತ್ತದೆ.§ ಮತ್ತು ವ್ಯಕ್ತವಾದವು ಇದಕ್ಕಿಂತ ಏನೂ ಹೆಚ್ಚಾಗಿ ಮನೋರಂಜಕವಾಗಿಲ್ಲ. ಏಕೆಂದರೆ ಸಾಂತವಾದ ವಸ್ತುವು ಅನಂತವಸ್ತುವನ್ನು ಹೇಗೆ ಪ್ರದರ್ಶಿಸಬಲ್ಲದೆಂದು ತಿಳಿಯಲಾಗುವುದಿಲ್ಲ

* ಕಾರಣಾತ್ ಪೃಥಕ್ ಸತ್ತಾಶೂನ್ಯತ್ವಂ ಸಾಧ್ಯತೇ, ನತು ಐಕ್ಯಾಭಿಪ್ರಾಯೇಣ

† ಕಾರಣವ್ಯತಿರೇಕೇಣ, ಬ್ರಹ್ಮವ್ಯತಿರೇಕೇಣ

‡ Hypothesis § Assumes

ಇದು ಬಿಟ್ಟು ಪರಮಾತ್ಮನೇ ಜಗದ್ರೂಪದಲ್ಲಿ ಪರಿಣಾಮ ಹೊಂದಿದಾನೆಂದು ಹೇಳಿದರೆ, ಈ ಪರಿಣಾಮಕಾರ್ಯದಲ್ಲಿ ಪರಮಾತ್ಮನು ತನ್ನ ಪೂರ್ಣಾಂಶದಿಂದ ಸೇರಿರುವನೇ ಇಲ್ಲ ಅಂಶಮಾತ್ರದಿಂದ ಇರುವನೇ ಎಂಬ ಪ್ರಶ್ನೆಯು ತಲೆದೋರುತ್ತದೆ. ಪೂರ್ಣವೆಂದು ಹೇಳಿದರೆ ಈ ಪ್ರಪಂಚವನ್ನು ಬಿಟ್ಟು ಪರಮಾತ್ಮನು ಇದಕ್ಕಿಂತ ಅತೀತನಾಗಿಲ್ಲವೆನ್ನುವ ಕೀಳುತರದ ಈಶ್ವರನ ಸರ್ವವ್ಯಾಪಿತ್ವವಾದಿ*ಗಳಾಗುವೆವು. ಅಂಶಮಾತ್ರದಿಂದ ಇರುವನೆಂದರೆ ಪರಮಾತ್ಮನು ವಿಭಾಗಕ್ಕೆ ಒಳಗಾಗತಕ್ಕವನೆಂದು ಅರ್ಥವಾಗುತ್ತದೆ. ಮತ್ತು ಇಂಥಾ ಪರಮಾತ್ಮನ ಒಂದಂಶವನ್ನು ಮೇಲೂ ಮತ್ತೊಂದಂಶವನ್ನು ಕೆಳಗೂ ನಾವು ಬೇರೆಬೇರೆಯಾಗಿ ಇಡಲಾಗುವುದಿಲ್ಲ. ಏಕೆಂದರೆ ಹೀಗೆ ಮಾಡಿವಲ್ಲಿ ಅರ್ಧ ಕೋಳಿಯನ್ನು ಅಡಿಗೆಗಾಗಿ ತೆಗೆದುಕೊಂಡು ಉಳಿವರ್ಧ ಕೋಳಿಯನ್ನು ಮೊಟ್ಟೆಹಾಕುವುದಕ್ಕೂ ಬಿಟ್ಟಂತೆ ಆಗುವುದು.† ಇದರಿಂದ ಶಂಕರರು ಪರಮಾತ್ಮನಿಗೂ ಲೋಕಕ್ಕೂ ಇರುವ ಸಂಬಂಧವನ್ನು ಕೇವಲ ತಾರ್ಕಿಕರೀತಿಯಿಂದ (ಬುದ್ಧಿಮಾರ್ಗದಿಂದ, ತರ್ಕಮಾರ್ಗದಿಂದ, logica ly) ನಿರ್ಧರಿಸಲಾಗುವುದಿಲ್ಲವೆಂದು ನಂಬುತ್ತಾರೆ. ಅವರು ನಮಗೆ ಉಭಯಾಂತಗಳನ್ನು ಭದ್ರವಾಗಿ ಹಿಡಿದುಕೊಳ್ಳಿರೆಂದು ಹೇಳುತ್ತಾರೆ. ಮತ್ತೆ ಇವೆರಡೂ ಎಲ್ಲಿ ಒಟ್ಟುಗೂಡುತ್ತವೆಯೆಂದು ನಾವು ಹೇಳುವುದಕ್ಕಾಗದಿದ್ದರೂ ಬಾಧೆಯಿಲ್ಲ.

### ೯. ಹೀಗೆಯೇ ಜೀವೇಶ್ವರ ಸಂಬಂಧವೂ ಕೂಡ ಅಜ್ಞೆಯವೇ ಆಗಿದೆ.

ನಮ್ಮ ದೇಶದ ದರ್ಶನ ಚರಿತ್ರೆಯೂ ಮತ್ತು ನಿಮ್ಮ ದೇಶದ

* Lower pantheism

† ನ ಹಿ ಕುಕ್ಕುಟ್ಯಾದೇರೇಕದೇಶೋ ಭೋಗಾಯ ಪಚ್ಯತ ಏಕದೇಶಸ್ತು ಪ್ರಸವಾಯ ಕಲ್ಪ್ಯತೇ, ವಿರೋಧಾತ್ ॥ ಬ್ರಹ್ಮಸೂತ್ರದ ಆನಂದಗಿರಿ ಟೀಕೆಯಲ್ಲಿ I. 2-8

ಚರಿತ್ರೆಯೂ ಕೂಡ ಪರಮಾತ್ಮನಿಗೂ ನಮ್ಮ ಲೋಕಕ್ಕೂ ಇರುವ ಸಂಬಂಧದ ಗುಟ್ಟೇನೆಂಬುದನ್ನು ತಿಳಿಯಲು ಮಾನವ ವೃಷ್ಟಿಗೆ ಅಸಾಧ್ಯವೆಂಬುದನ್ನು ಬಹಳವಾಗಿ ತಿಳಿಸುತ್ತವೆ. ಇದು ಬಿಟ್ಟು ದೊಡ್ಡ ತತ್ತ್ವಜ್ಞಾನಿಗಳಿಲ್ಲರೂ ಈ ಗುಟ್ಟನ್ನು ತಿಳಿಯಲು ಕಷ್ಟಸಾಧ್ಯವೇ ಎಂದು ಒಪ್ಪಿಕೊಂಡು ಮನುಷ್ಯರು ಸರ್ವಜ್ಞರಲ್ಲವೆಂಬ ಭಾವದಿಂದ ತಮ್ಮಲ್ಲಿ ಆತ್ಮತೃಪ್ತಿಯನ್ನು ಉಂಟುಮಾಡಿಕೊಳ್ಳುತ್ತಾರೆ. ಪೂರ್ವದೇಶದಲ್ಲಿ ಶಂಕರರೂ ಪಶ್ಚಿಮದೇಶದಲ್ಲಿ ಬ್ರ್ಯಾಡ್ಲೆಯವರೂ ಈ ಉತ್ತಮವಾದ ಅವಿಜ್ಞೇಯವಾದ*ದ ಭಾವವನ್ನು ಅನುಸರಿಸುತ್ತಾರೆ. ಅಂದರೆ ಈ ಪ್ರಪಂಚವೂ ಮತ್ತಿದರ ಪ್ರಭೇದಗಳೂ ಇವೆ ಎಂದು ನಾವು ತಿಳಿಯುತ್ತೇವೆ. ಮತ್ತಿಮ ಆತ್ಮಸಂತುಷ್ಟಶಕ್ತಿ†ಯುಳ್ಳದುದಲ್ಲ, ಮತ್ತೆ ಬೇರೊಂದು ವಸ್ತುವಿನಮೇಲೆ ನಿಂತಿದೆ. ಈ ವಸ್ತುವೇ ಪರಮಾತ್ಮನು. ಆದರೆ ಇವೆರಡರ ಸಂಬಂಧವು ಇನ್ನೂ ದೊಡ್ಡಗುಟ್ಟಾಗಿಯೇ ಇವೆ. "ಪರಮಾತ್ಮನು ತಾನು ಮಾಡಿದ ಸರ್ವಪ್ರಪಂಚವನ್ನೂ ನೋಡಿದನು, ಮತ್ತದೆಲ್ಲವೂ ಬಹು ಚೆನ್ನಾಗಿ ಇದ್ದಿತು" ಎಂಬ ವಾಕ್ಯದಲ್ಲಿ ಹೇಳಿರುವ ಅಭಿಪ್ರಾಯವು ಈ ನಮ್ಮ ಪ್ರಶ್ನೆಗೆ ಸದುತ್ತರವನ್ನೀಯದು. ಏಕೆಂದರೆ ಇದು ಲೋಕವು "ಬಹು ಚೆನ್ನಾಗಿದೆ" ಎಂದು ನಂಬಿಬಿಡುತ್ತದೆಯೇ ಹೊರತು ಈ ವಿಷಯದಲ್ಲಿ ನಮಗೆ ಎಷ್ಟೋ ಶಂಕೆಗಳು ಇನ್ನೂ ಇದ್ದೇ ಇವೆ. ಸದ್ಗುಣವಿಶಿಷ್ಟನಾದ ಪೂಜ್ಯದೇವನು ಪ್ರಕೃತಿಯ ಭೀಕರ ವಿಷಯಗಳಿಗೆ ಕಾರಣನು ಎಂದು ನಂಬಲಾಗದೆ ನಿಮ್ಮ ಪ್ಲೇಟೋತತ್ತ್ವಜ್ಞರು ಹೀಗೆಂದು ತಿಳಿಯುತ್ತಾರೆ: ಅಂದರೆ, ಸದ್ಗುಣವಿಶಿಷ್ಟನಾದ ಪರಮಾತ್ಮನು ಈ ಪ್ರಕೃತಿಯ ಅಜೇಯ ಗುಣವನ್ನು‡ ತಿದ್ದಲು ಎಷ್ಟುಮಾಡಿದರೂ ಸ್ವಲ್ಪಮಟ್ಟಿಗೆ ವಿಫಲವನ್ನು ಹೊಂದಬೇಕಾಯಿತು. ನಿಮ್ಮ ಕ್ರಿಶ್ಚಿಯನ್

---

* Agnosticism

† Self-sufficient, ತನ್ನಲ್ಲಿ ತಾನು ತೃಪ್ತನಾಗುವಿಕೆ.

‡ Intractableness

ಜ್ಞಾನಿಗಳು (Gnostics) ದುಷ್ಟಪಿಶಾಚಿಯಿಂದ ಸೃಷ್ಟಿಸಲ್ಪಟ್ಟ ಲೋಕವನ್ನು ಕಾಪಾಡುವ ಕಾರ್ಯವನ್ನು ಈಶ್ವರನು ಕೈಗೊಂಡಿರುವನು ಎಂಬ ಅಭಿಪ್ರಾಯವನ್ನು ಹೇಳಲು ಪ್ರಯತ್ನಪಟ್ಟರು. ಇದರಿಂದ ನಿಮ್ಮ ಆಗಸ್ಟೈನ್ ಸಾಧುಗಳು ತಮ್ಮ "ಪೂರ್ಣನಷ್ಟಸ್ವಭಾವ"ವೆಂಬ ಅಭಿಪ್ರಾಯವನ್ನೂ ಮತ್ತು ಮೋಕ್ಷಮಾರ್ಗವನ್ನೂ ಸಿದ್ಧಾಂತರೂಪದಲ್ಲಿ ರಚಿಸಿದರು. ಇಷ್ಟಾದರೂ ಕೆಲವರು ಪರಮಾತ್ಮನು ಸರ್ವಶಕ್ತಿಯುತನು ಎಂಬ ಅಭಿಪ್ರಾಯವನ್ನು ಪೂರ್ಣವಾಗಿ ನಂಬಿಕೊಂಡು, ನಿಮ್ಮ ತತ್ತ್ವಜ್ಞರಾದ ಜೆ. ಎಸ್. ಮಿಲ್ಲರು ಹೇಳುವಂತೆ ಅವನನ್ನು ಈ ದುಷ್ಟಪಿಶಾಚಿಯ ಕರ್ತೃವೆಂದು ಹೇಳಿ ಈ ಸಂಶಯಾತ್ಮಕವಾದ ಅಭಿನಂದನವನ್ನು ಕೊಟ್ಟರು. ಹೀಗೆಯೇ ನಿಮ್ಮ ಲೈಬ್ನಿಡ್ಸ್ ತತ್ತ್ವಜ್ಞರು ಈ ಲೋಕವು ಬಹುಮಟ್ಟಿಗೆ ದೋಷಯುಕ್ತವಾಗಿದ್ದರೂ ಸಾಧ್ಯವಾದ ಸರ್ವಲೋಕಗಳಿಗಿಂತಲೂ ನಮ್ಮ ಲೋಕವೇ ಅತ್ಯುತ್ತಮವಾದುದೆಂದು ವಾದಿಸುತ್ತಾರೆ. ಆದರೆ ಈ ಅಭಿಪ್ರಾಯವು ಪರಮಾತ್ಮನ ಶಕ್ತಿಗೆ ಅಗೌರವಭಾವವನ್ನು ಸೂಚಿಸುತ್ತದೆ. (ಜರ್ಮನಿಯ) ಹೀಗೆಲ್‌ರವರ ಈಶ್ವರಪೂರ್ಣವಾದ* (ಅದ್ವೈತವಾದ, ಪರಬ್ರಹ್ಮೈಕವಾದ)ವು ಪೂರ್ಣವಸ್ತುವು ಅಪೂರ್ಣತೆಯಲ್ಲಿ ಏಕೆ ಬಿದ್ದಿತೋ ಎಂಬುದನ್ನು ಹೇಳಲಾಗದೇ ಇರುವುದು. (ಫ್ರಾನ್ಸಿನ) ಬರ್ಗ್ಸನ್§ರವರು ಲೋಕದಲ್ಲಿ ಜೀವಪ್ರಕೃತಿಗಳಿಗೆ ಇರುವ ವೈಷಮ್ಯವನ್ನು ಒತ್ತಿಸಾರುವುದಲ್ಲದೆ ಇವೆರಡೂ ಎಲ್ಲಕ್ಕೂ ಆದಿಯಾದ ಏಕಚಿತ್ತ (consciousness) ದ ಸದಸದ್ರೂಪ†ಗಳೆಂದು ನಂಬುತ್ತಾರೆ; ಆದರೆ ಇವರು ಈ ಆದಿತತ್ತ್ವದಿಂದ ಈ ಎರಡು ಕರ್ಮಮಾರ್ಗಗಳು ಹೇಗೆ ಹುಟ್ಟಿದವೆಂದು ಸಕಾರಣವಾಗಿ ಹೇಳಲಾರರು. ಹೀಗೆಯೇ (ಇಟಲಿಯ) ಕ್ರೋಚೆಯವರೂ ಕೂಡ ಪರಮಾತ್ಮನ ಭಿನ್ನರೂಪಗಳಾದ ಜ್ಞಾನಕರ್ಮಗಳನ್ನು ಸಾಧಿಸುತ್ತಾರೆ; ಆದರೆ ಏಕವಸ್ತುವಾದ ಪರಮಾತ್ಮನಿಂದ ಈ ಭಿನ್ನರೂಪಗಳು ಹೇಗೆ ಹುಟ್ಟಿದವೆಂಬುದನ್ನು ತತ್ತ್ವರೀತಿಯಿಂದ‡

---

* Absolutism † Positive and Negative

‡ Metaphysical Deduction § ಭಾಷ್ಯವನ್ನು ನೋಡಿ

ತಿಳಿಸುವುದಿಲ್ಲ. ಈ ರೂಪಗಳೇ ಪರಾತ್ಪರವಸ್ತುಗಳಾದರೆ ಪರಮಾತ್ಮ ನೆಂಬ ಬೇರೊಂದುವಸ್ತುವಿಗೆ ಅವಕಾಶವಿಲ್ಲ; ಮತ್ತು ಪರಮಾತ್ಮನಿರುವ ನೆಂದರೆ ಇದು ಭೇದವಿಶಿಷ್ಟವಾದ* ಪರಮಾತ್ಮನೆಂದೇ ಅರ್ಥವಾಗುತ್ತದೆ.

## ೧೦. ಮತ್ತೀ ಅಜ್ಞೇಯವಾದವೇ ಉತ್ತಮವು; ಏಕೆಂದರೆ ಸ್ವಾತ್ಮ ವಿಕಾಸವೂ ಕೂಡ ಮಾಯವೇ ಆಗಿದೆ

ಇದರಿಂದ ಸಾಧುವಾದ † ಅಜ್ಞೇಯವಾದವು ಈ ಸಂದರ್ಭದಲ್ಲಿ ಹೆಚ್ಚು ನಿಜವಾಗಿದೆ ಎಂದು ಕಾಣುತ್ತದೆ. ಆದರೆ ಮನುಷ್ಯನ ನ್ಯಾಯ ಬುದ್ಧಿಯು ಈ ತೆರನಾದ ಸೋಲನ್ನು ಒಪ್ಪಲು ಎಂದಿಗೂ ಇಷ್ಟಪಡುವು ದಿಲ್ಲ. ಇದು ಪರಮಾತ್ಮನು ಜ್ಞಾನಾತೀತನು ಮತ್ತು ಲೋಕವೆಲ್ಲವೂ ಯಾವುದೋ ಒಂದು ರೀತಿಯಲ್ಲಿ ಅವನ ಮೇಲೆ ಆಧಾರಹೊಂದಿ ನಿಂತಿದೆ ಎಂಬ ಅಭಿಪ್ರಾಯದಲ್ಲಿ ನಿಲ್ಲಲಾರದು. ಮತ್ತು ಈ ಪರಮಾತ್ಮನನ್ನು ತಿಳಿಯತಕ್ಕವನನ್ನಾಗಿ ‡ ಮಾಡಿ, ಲೋಕವನ್ನು ಈತಿಳಿವಳಿಕೆಗೊಳಗಾದ ವಸ್ತುವಿನ ವ್ಯಕ್ತರೂಪವೆಂದು ಸಂಬಂಧಿಸುತ್ತದೆ. ಶಂಕರರು ಮಾನವ ಬುದ್ಧಿಯ § ದುರ್ಬಲವನ್ನು ನೋಡಿ ಇಂತಹ ಉಪಮಾನಗಳಿಗೆ †† ಅವ ಕಾಶ ಕೊಡುತ್ತಾರೆ. ಪರಮಾತ್ಮನ ಸಂಪೂರ್ಣತೆಯು ಲೋಕರೂಪ ವಾಗಿ ಹರಿಯುತ್ತದೆ. ಅಂದರೆ ಲೋಕವು ಸರ್ವಶ್ರೇಷ್ಠಶಿಲ್ಪಿಯಾದ ಪರಮಾತ್ಮನ ಅನಂತಶಕ್ತಿಗಳ‡‡ ಪೂರ್ಣಪ್ರವಾಹ (outflow) ವಾಗಿದೆ. ಲೀಲೆ ಅಥವಾ ಆಟವು ಸೃಷ್ಟಿರೂಪವಾದ ಕಲೆಯಲ್ಲಿ ಕೂಡಿರುವ ನ್ಯಾಯ ವಿಧಾನ,§§ ಸ್ವಾತಂತ್ರ್ಯ ಮತ್ತು ಸ್ವಂತ ರಚನೆಯಲ್ಲಿರುವ ಸಂತೋಷ ಕೆಲಸವನ್ನು ವ್ಯಕ್ತಪಡಿಸುತ್ತದೆ. ನಾವು ಪರಮಾತ್ಮನನ್ನು ಸಗುಣ

---

* Dissolute † Wise

‡ Determinate, ಜ್ಞೇಯವಸ್ತು, ನಿರ್ಧರಿತ ಪ್ರಮಾಣವುಳ್ಳದ್ದು

§ Mind †† Metaphors

‡‡ ಹೆಚ್ಚು §§ Rationality

ಬ್ರಹ್ಮನೆಂದು * ಕಾಣುತ್ತ ಆತ್ಮಪ್ರಕಾಶಕ್ಕೂ ಆತ್ಮಸಂಭಾಷಣೆಗೂ † ಬೇಕಾದ ಸರ್ವಶಕ್ತಿಯಿಂದ ಕೂಡಿರುವನೆಂದು ತಿಳಿಯುತ್ತೇವೆ. ಏಕೆಂದರೆ ಪ್ರವೃದ್ಧಿಹೊಂದದ ಪೂರ್ಣತೆ ಎಂದರೆ ಅಚಿಂತ್ಯವಸ್ತುವೇ ಆಗಿದೆ. ಹೀಗೆಯೇ ಆತ್ಮಪ್ರಕಾಶದ ತತ್ತ್ವ (principle) ವನ್ನು ಕೆಲವರು ಮಾಯೆಯೆಂದು ಕರೆಯುತ್ತಾರೆ. ಇದು ಬಾಹ್ಯ ವಸ್ತು ತತ್ತ್ವ‡ ವನ್ನು ಸೂಚಿಸುತ್ತಿರುವುದಲ್ಲದೆ, ಈ ತತ್ತ್ವದೊಡನೆ ಸೇರಿ ತನ್ನನ್ನು ವ್ಯಕ್ತಪಡಿಸಲು ಶಕ್ತಿಯುಳ್ಳದ್ದಾಗುತ್ತದೆ. ಆದರೆ ಈ ಪ್ರಯತ್ನಗಳೆಲ್ಲ ಪರಮಾತ್ಮನಿಗೂ ಲೋಕಕ್ಕೂ ಇರುವ ಸಂಬಂಧವು ಯಾವ ವಿಧದದ್ದೆಂದು ತಿಳಿದು ಕೊಳ್ಳಲು ಸಾಧನ ಮಾರ್ಗಗಳೇ ಸರಿ.

### ೧೧. ಆದರೂ ಲೋಕವೆಲ್ಲಾ ಕೇವಲ ಸ್ವಪ್ನಪ್ರಾಯವಲ್ಲ

ಇದು ಹೇಗಾದರೂ ಇರಲಿ. ಯಾವ ಕಾಲದಲ್ಲಿಯೂ ಯಾವ ಶಾಸ್ತ್ರ ಸಿದ್ಧಾಂತ (theory) ವೂ ಜೀವನವು ಸ್ವಪ್ನವೆಂದೂ, ಮತ್ತು ಅನುಭವ ಗೋಚರವಾದ ವಿಷಯಗಳೆಲ್ಲವೂ§ ಭ್ರಾಂತಿಗಳೆಂದೂ ಹೇಳಿಲ್ಲ. ಶಂಕರರ ನವೀನ ಶಿಷ್ಯರಲ್ಲಿ ಒಬ್ಬಿಬ್ಬರು ಈ ಅಭಿಪ್ರಾಯಕ್ಕೆ ಅವಕಾಶವುಂಟೆಂದು ಸೂಚಿಸುತ್ತಾರೆ; ಆದರೆ ಇವರು ಭಾರತೀಯರ ಜ್ಞಾನ ಶಾಸ್ತ್ರದ ಮುಖ್ಯಮಾರ್ಗವನ್ನು†† ಸೂಚಿಸುತ್ತಾರೆಂದು ಹೇಳುವುದಕ್ಕಾಗುವುದಿಲ್ಲ.

### ೧೨ ಲೋಕವೆಲ್ಲಾ ಈಶ್ವರೀಮಯವೆಂದರೆ ಧರ್ಮಕ್ಕೆ ಅವಕಾಶವೇ ಇಲ್ಲ:—ಆದರೆ ಪರಮಾತ್ಮನು ಜೀವಾತ್ಮನಿಗಿಂತ ಭಿನ್ನನಾಗಿರುವನು

ಮುಂದಿನ ಅಪವಾದವು ಇದಕ್ಕೆ ಅತ್ಯಂತ ಭಿನ್ನವಾದ ಸ್ಥಾನದಿಂದ ಹುಟ್ಟಿಬರುತ್ತದೆ. ಅಂದರೆ ಹಿಂದುಗಳಿಗೆ ಧರ್ಮನಿಯಮಗಳು ಅರ್ಥ

---

* Personal lord † Communication

‡ Principle of objectivity

§ Events †† Tendency

ರಹಿತವಾಗಿವೆ; ಏಕೆಂದರೆ ಜಗತ್ತೆಲ್ಲವೂ ಈಶ್ವರೀಮಯವಾಗಿದೆ, ಮತ್ತು ಲೋಕವೆಲ್ಲವೂ ದೇವರೇ ಆಗಿರುವಾಗ ಕಳ್ಳಸಾಕರ* ಪೂಜ್ಯಕರ್ಮಗಳನ್ನು ನಾವು ನಿಲ್ಲಿಸಲು ಯಾವ ಕಾರಣವೂ ಇಲ್ಲ. ನಿಮ್ಮ ಲಂಡನ್ ಪಟ್ಟಣದಲ್ಲಿರುವ ಪಿಕ್ಯಾಡಿಲಿಯ ಸರ್ಕಸ್ಸೂ ದೇವರೇ? ಹೈಡ್ ಪಾರ್ಕಿನ ಮೂಲೆಯೂ ದೇವರೇ? ಎಂದು ಕುಚೋದ್ಯ ಪ್ರಶ್ನೆಯನ್ನು ಕೇಳುವುದರಿಂದ ನಮ್ಮ ಭಾರತೀಯ ದರ್ಶನ ಶಾಸ್ತ್ರಗಳೆಲ್ಲದರಲ್ಲಿಯೂ ಸೇರಿರುವ ಈಶ್ವರನ ಸರ್ವತ್ರ ಸಾಕ್ಷಿತೆಯ † ಭಾವ (Theory) ವನ್ನು ಖಂಡಿಸುವೆವೆಂದು ನಿಮ್ಮ ವಿಮರ್ಶಕರು ನಂಬುತ್ತಾರೆ. ಇದಕ್ಕೆ ತಕ್ಕಂತೆ ನಮ್ಮ ಹಿಂದೂ ಮತವು ಪರಮಾತ್ಮನು ಲೋಕದಿಂದ ಬೇರೆಯಾಗಿ ಇರುತ್ತ ಎಲ್ಲಕ್ಕೂ ದೂರವಾಗಿಯೂ ಅತೀತನಾಗಿಯೂ ಇರುವನೆಂಬ ನಿರಂಜನ ನಿರುತ್ಸಾಹಕ ‡ ಭಾವವನ್ನು ಸ್ವಲ್ಪವೂ ಒಪ್ಪುವುದಿಲ್ಲ. ಏಕೆಂದರೆ ಲೋಕದ ಪ್ರಕೃತಿಧರ್ಮಗಳು ಪರಮಾತ್ಮನ ಅನುಲ್ಲಂಘನೀಯವಾದ § ಉದ್ದೇಶವನ್ನು ನೆರವೇರಿಸುವ ವಸ್ತುಗಳೇ ಆಗಿವೆ. ಪ್ರಕೃತಿಯ ಕ್ಲುಪ್ತ ರೀತಿಯೂ, †† ವಿಶ್ವದ ಕ್ರಮಸ್ಥಿತಿಯೂ ಮತ್ತು ಪರಿಣಾಮ ಮಾರ್ಗದ ಸಾವಧಾನ ರೀತಿಯಿಂದ ಮುಂದಕ್ಕೂ ಮೇಲೆಮೇಲಕ್ಕೂ ಹೋಗುವಿಕೆಯೂ, ಇವುಗಳೆಲ್ಲವೂ ನಿರಾತ್ಮಕವಾದ ಯಂತ್ರದ ಅರಿವಿಲ್ಲದ‡‡ ಸ್ಪಂದ (Throbbing) ವನ್ನಲ್ಲದೆ, ಸರ್ವಜ್ಞನಾದ ಆತ್ಮನ ಸೂಚನಾ ಬುದ್ಧಿಯನ್ನೂ §§ ಉದ್ಘೋಷಿಸುತ್ತವೆ. ಪ್ರಪಂಚದಲ್ಲಿ ಪರಮಾತ್ಮನು ಅಂತರ್ಯಾಮಿಯಾಗಿರುವನೆಂದರೆ ಪರಮಾತ್ಮನೂ ಪ್ರಪಂಚವೂ ಎರಡೂ ಒಂದೇ ವಸ್ತುವೆಂದು ಅರ್ಥವಲ್ಲ. ಏಕೆಂದರೆ ಈ ಎರಡನೆಯ ಅಭಿಪ್ರಾಯದಂತೆ

* Perjurer, ಸುಳ್ಳುಸಾಕ್ಷಿಗಳು

† ಅಂತರ್ಯಾಮಿತ್ವ, Immanence

‡ Cold and formal (ಶೀತ ಮತ್ತು ಬಾಹ್ಯಗುಣಗಳುಳ್ಳ)

§ ಅಪ್ರತಿಹತವಾದ, Sovereign

†† Uniformity; ‡‡ ಅಚೇತನ, Unconscious

§§ Directing mind

ಪರಮಾತ್ಮನು ಸರ್ವವಸ್ತುಗಳಲ್ಲಿಯೂ ಎಷ್ಟರಮಟ್ಟಿಗೆ ಅಂತರ್ಯಾಮಿಯಾಗಿರುವನೆಂದರೆ ಈ ಪರಮಾತ್ಮನನ್ನು ಈ ಲೋಕದಲ್ಲಿಯೇ ನೋಡುವುದಕ್ಕೆ ನಮ್ಮ ಕಣ್ಣುಬಿಟ್ಟು ನೋಡಿದರೆ ಸಾಕು, ಮತ್ತು ಈ ಸರ್ವವಸ್ತುಗಳನ್ನು ಬಿಟ್ಟರೆ ಇದರ ಹೊರಗೆ ಪರಮಾತ್ಮನ ಕಿಂಚಿದಂಶವೂ ಇಲ್ಲ. ಅಂದರೆ ಪರಮಾತ್ಮನು ನಮ್ಮೆದುರಿಗೆ ಎಲ್ಲೆಲ್ಲಿಯೂ ವಿಶದವಾಗಿ ಕಾಣುತ್ತಿದ್ದಾನೆ. ಮತ್ತು ಈ ಲೋಕವೆಲ್ಲವೂ ಕೇವಲ ಜ್ಞಾನಗೋಚರವಲ್ಲದೆ ಆ ಪರಮಾತ್ಮನನ್ನು ಸಂಪೂರ್ಣವಾಗಿ ಪ್ರಕಾಶಪಡಿಸುತ್ತದೆ. ಆದರೆ ಹಿಂದೂ ಮತವು ಪರಾತ್ಪರ ವಸ್ತುವಿನ ಅತೀತಗುಣವನ್ನು * ಜಾಗ್ರತೆಯಿಂದ ಒತ್ತಿ ಹೇಳುತ್ತದೆ. "ಇವನು ಲೋಕವನ್ನು ಧರಿಸುವನೇ ಹೊರತು ಅದರಲ್ಲಿ ಪೂರ್ಣವಾಗಿ ಮಗ್ನನಾಗಿ ನಾಶ ಹೊಂದಿಲ್ಲ" ಅಂದರೆ ಲೋಕವೆಲ್ಲವೂ ಪರಮಾತ್ಮನಿಂದ ನಿಂತಿದೆಯೇ ಹೊರತು ಪರಮಾತ್ಮನು ಜಗತ್ತಿನಿಂದ ನಿಂತಿಲ್ಲ. ಪ್ರಪಂಚದಲ್ಲಿ ಆಯಾ ವ್ಯಕ್ತಿಗಳಿಗೆ ಪ್ರತ್ಯೇಕ ಜೀವವಿದೆ (existence) ಯೆಂದು ನಾವು ತಿಳಿಯುತ್ತೇವೆ. ಆಯಾ ವ್ಯಕ್ತಿಗಳಲ್ಲಿ ಪರಮಾತ್ಮಶಕ್ತಿಯು † ಕೊಂಚವಾಗಿ ಬೆಳಗಲಿ, ಹೆಚ್ಚಾಗಿ ಬೆಳಗಲಿ ಈ ಶಕ್ತಿಕಣಗಳೆಲ್ಲವೂ ತಾವು ಬೆಳಗುವ ಮೂಲ ಪ್ರಕಾಶ ‡ ದಿಂದ ಭಿನ್ನವಾಗಿವೆ.

೧೪. ಮತ್ತು ಲೋಕದಲ್ಲಿ ಈ ಈಶ್ವರೀವಿಕಾಸವು ಭಿನ್ನಭಿನ್ನವಾಗಿರುವುದು ; ಇದರಿಂದ ಚಿಕ್ಕವರಲ್ಲಿದ್ದ ಈ ಅಂತಶ್ಶಕ್ತಿಯನ್ನು ಶ್ರೇಷ್ಠರೆಲ್ಲರೂ ಹೊರಕ್ಕೆ ತರಲು ಪ್ರಯತ್ನಿಸುವರು

ಹಿಂದೂ ಮತವು ಪರಮಾತ್ಮನ ಅಂತರ್ಯಾಮಿತ್ವಭಾವವು ಅನೇಕ ಸೋಪಾನ (degrees) ಗಳನ್ನುಳ್ಳ ನಿಜಸ್ಥಿತಿಯೆಂದು ಒಪ್ಪುತ್ತದೆ. ಪರಮಾತ್ಮನಿಂದ ಪ್ರಕಾಶ ಹೊಂದದ ಯಾವ ವಸ್ತುವೂ ಇಲ್ಲದಿದ್ದರೂ,

* Transcendent character † ಭೂತಭೃನ್ನಚಭೂತಸ್ಥಃ
‡ Spark

ಪರಮಾತ್ಮನು ನಿರವಯವ ವಸ್ತುಗಳಿಗಿಂತಲೂ ಹೆಚ್ಚಾಗಿ ಸಾವಯಾವ ವಸ್ತುಗಳಲ್ಲಿಯೂ ಅಚೇತನ ವಸ್ತುಗಳಿಗಿಂತ ಹೆಚ್ಚಾಗಿ ಸಚೇತನವಸ್ತುಗಳಲ್ಲಿಯೂ, ಕೀಳು ಪ್ರಾಣಿಗಳಿಂತ ಹೆಚ್ಚಾಗಿ ಮನುಷ್ಯರಲ್ಲಿಯೂ, ದುಷ್ಟನಿಗಿಂತ ಹೆಚ್ಚಾಗಿ ಶಿಷ್ಟ (ಸತ್ಪುರಷ) ರಲ್ಲಿಯೂ ವ್ಯಕ್ತವಾಗುತ್ತಾನೆ. ಆದರೆ ಅತಿ ಅಧ್ಭುವಾದ ವಸ್ತುವನ್ನೂ ಕೂಡ ಇದು ಸಂಪೂರ್ಣವಾಗಿ ಪರಮಾತ್ಮ ರಹಿತವಾಗಿರುವುದು, ಮತ್ತು ನರಕಾಗ್ನಿಗೆ ಬಿಸಾಡಲು ಮಾತ್ರ ತಕ್ಕದ್ದೆಂದು ದೂರ ಹಾಕುವುದಕ್ಕಾಗುವುದಿಲ್ಲ. ಹಿಂದೂ ಮತವು ಅಂತರ್ಯಾಮಿಯಾಗಿರುವ ಪರಮಾತ್ಮನನ್ನು ನಂಬಿ, ಇಂಥಾ ಪರಮಾತ್ಮನ ಸಾನ್ನಿಧ್ಯದಿಂದ ತಪ್ಪಿಸಿಕೊಳ್ಳಲು ಎಲ್ಲಿಯೂ ಅವಕಾಶವಿಲ್ಲವೆಂದು ಸಾರುತ್ತಿದ್ದರೂ, ಪ್ರತಿಯೊಂದು ವಸ್ತುವೂ ಕೂಡ ನಮಗೆ ಕಂಡು ಬರುವ (ಬಾಹ್ಯ) ರೀತಿಯಲ್ಲಿಯೇ ಪರಮಾತ್ಮನೆಂದು ಹೇಳುವುದಿಲ್ಲ. ಹೇಗೆಂದರೆ ಪರಮಾತ್ಮನ ಕಾರ್ಯ (Activity) ದಿಂದ ಇರಬಹುದೆಂದು ಅವಕಾಶ ಪಡೆದಹೊರತು ನಿಜಸ್ಥಿತಿಯಿಂದ ಇರಲಾಗದಿದ್ದರೂ ನಮ್ಮ ಕಣ್ಣಿಗೆ ಕಾಣುವ ಪಿಕ್ಕ್ಯಾಡಲಿಯು ಈ ಸ್ಥಿತಿಯಲ್ಲಿಯೇ ಪರಮಾತ್ಮನಲ್ಲ. ಅತಿನೀಚ ಜನರಲ್ಲಿಯೂ ಕೂಡ ಪರಮಾತ್ಮನ ಸಾಧ್ಯಾಂಶಗಳು ಇದ್ದೇ ಇವೆ. ಅಂದರೆ ಅತಿ ಪಾಪಿಷ್ಠ ಜನರಲ್ಲಿಯೂ ಪರಮಾತ್ಮನ ಶಾಶ್ವತ ಕರಗಳು, ಅಂದರೆ ಪಾಪೋದ್ಧಾರಕ ವರದಹಸ್ತವು ಇದ್ದೇ ಇರುವುದು. ನಿಜವಾಗಿ ನೋಡಿದಲ್ಲಿ ಯಾರೂಕೂಡ ಉತ್ತಮವಾದ ಮೋಕ್ಷಮಾರ್ಗದಿಂದ ಬಾಹ್ಯರಲ್ಲ. ಏಕೆಂದರೆ, ಪ್ರತಿಯೊಬ್ಬ ಸಾಧುವಿಗೂ ದುಷ್ಟವಾಗಿದ್ದ ಪೂರ್ವಜನ್ಮವಿದ್ದಂತೆಯೇ ಪ್ರತಿಯೊಬ್ಬ ಪಾಪಿಗೂ ಉತ್ತಮವಾದ ಮುಂದಿನ ಜನ್ಮವೂ ಇರುವುದು. ಯಾರೇ ಆಗಲಿ ತಾನು ಯೋಚಿಸಿಕೊಂಡಷ್ಟುಮಟ್ಟಿಗೆ ಒಳ್ಳೆಯವನಾಗಲೀ ಕೆಟ್ಟವನಾಗಲೀ ಆಗಿ ಇರುವುದಿಲ್ಲ. ಮತ್ತು ಲೋಕದ ಮಹಾತ್ಮರೆಲ್ಲರೂ ಸಾಮಾನ್ಯಜನರಲ್ಲಿಯೂ ಪಾಪಿಗಳಲ್ಲಿಯೂ (ನಿದ್ರಿಸುವಂತೆ ಒಳಗೆ) ಗುಪ್ತವಾಗಿರುವ ದೈವೀಪ್ರಕೃತಿಯನ್ನು ಹೊರಕ್ಕೆ ತೆಗೆದು ಪ್ರಕಾಶಿಸುವಂತೆ ಮಾಡಲು ಕಾರ್ಯೋನ್ಮುಖರಾಗುತ್ತಾರೆ.

## ಕರ್ಮ ಮತ್ತು ಸ್ವಾತಂತ್ರ್ಯ

### ೧೪. ಕರ್ಮವಿದ್ದರೂ ಸ್ವಾತಂತ್ರ್ಯವಿರುತ್ತದೆ; ಮತ್ತು ಧರ್ಮ ಕರ್ತವ್ಯವೂ ಇರುತ್ತದೆ.

ಒಂದೊಂದುಸಲ ಕರ್ಮತತ್ತ್ವವನ್ನು ಸರ್ವ ಧಾರ್ಮಿಕಸಿದ್ಧಾಂತಕ್ಕೂ ಆಧಾರ ಭೂತವೆಂದು ಸಾಮಾನ್ಯವಾಗಿ ತಿಳಿದಿರುವ ಮಾನವ ಸ್ವಾತಂತ್ರ್ಯವೇ ಇಲ್ಲವೆಂದು ಹೇಳುವಂತೆ ಅರ್ಥ ಮಾಡುತ್ತಾರೆ. ಆದರೆ ಸರಿಯಾಗಿ ನೋಡಿದಲ್ಲಿ ಈ ತತ್ತ್ವವು (law) ಸ್ವಾತಂತ್ರ್ಯದ ನಿಜತ್ವಕ್ಕೆ ವಿರೋಧವಾಗಿಲ್ಲ. ಏಕೆಂದರೆ ಯಕ್ಷಿಣೀ (ಅಥವಾ ಮಾಟ) ದಲ್ಲಿರುವ ನಂಬಿಕೆಯನ್ನು ತಪ್ಪಿಸುವ ಶಾಸ್ತ್ರತತ್ತ್ವವೇ (principle) ಇದು. ಪ್ರಕೃತಿಯ ಸ್ಥಿತಿಗತಿಗಳು ತಮ್ಮ ಹಿಂದೆ ಗುಪ್ತವಾಗಿ ಚಲಿಸುತ್ತಿರುವ ಸರೂಪ ಗಣಗಳ * ಇಷ್ಟಾನಿಷ್ಟ ಆವೇಗಗಳಿಂದಲ್ಲದೆ, ಅನುಲ್ಲಂಘನೀಯ ಧರ್ಮಗಳ ಚಾಲನದಿಂದಲೂ† ಇಷ್ಟೆಂದು ಗೊತ್ತು ಹೊಂದುತ್ತವೆ. ಸೂರ್ಯನು ತನ್ನ ಅಹೋಮಾರ್ಗವನ್ನೂ ಮತ್ತು ಚಂದ್ರನು ತನ್ನ ರಾತ್ರಿ ಮಾರ್ಗವನ್ನೂ ಆಕಾಶಮಧ್ಯದಲ್ಲಿ ನಡೆಸುತ್ತಿದ್ದರೆ, ಋತುಗಳ ನಿಶ್ಶಬ್ದ ಮೆರವಣಿಗೆಯು ಬೆಳಕು ನೆರಳುಗಳರೂಪದಿಂದ ಭೂಮಿಯ ಮೇಲೆ ನಡೆಯುತ್ತಿದ್ದರೆ ಇವುಗಳೆಲ್ಲವೂ ತಮಗೆಲ್ಲಕ್ಕೂ ಹೆಚ್ಚಾದ ಶಕ್ತಿಯೊಂದರಿಂದ ತಮ್ಮ ಮಾರ್ಗದಲ್ಲಿ ನಡೆಯುವಂತೆ ಪ್ರೇರಣೆ (guided) ಯನ್ನು ಹೊಂದುತ್ತಿವೆ. ನಿಜವಾಗಿಯೂ, ಓ ಗಾರ್ಗಿ, ಆ ಅನಂತ ವಸ್ತುವಿನ ಆಜ್ಞೆಯಂತೆ ಸೂರ್ಯ ಚಂದ್ರರು ಬೇರೆಯಾಗಿ ನಿಲ್ಲುತ್ತಾರೆ; ದ್ಯಾವಾಪೃಥಿವಿಗಳೂ ಬೇರೆಯಾಗಿ ನಿಲ್ಲುತ್ತವೆ;....ಕ್ಷಣ, ಗಂಟೆ, ದಿವಾರಾತ್ರಿ, ಪಕ್ಷ, ಮಾಸ, ಋತು ಮತ್ತು ವರ್ಷಗಳೂ ಬೇರೆ ಬೇರೆಯಾಗಿ ನಿಲ್ಲುತ್ತವೆ. ನಿಜವಾಗಿಯೂ, ಓ ಗಾರ್ಗಿ, ಆ ಅನಂತ ವಸ್ತುವಿನ ಆಜ್ಞೆಯಂತೆ ಕೆಲವು ನದಿಗಳು ಹಿಮವತ್ಪರ್ವತಗಳಿಂದ ಪೂರ್ವದಿಕ್ಕಿಗೆ ಹರಿಯುತ್ತವೆ; ಮತ್ತೆ ಕೆಲವು ಪಶ್ಚಿಮ ದಿಕ್ಕಿಗೂ, ತಾವು ಹರಿದು ಹೋಗುವ ಪ್ರತಿಯೊಂದು ದಿಕ್ಕಿ

---

* (personal spirits) † (operation)

ನಲ್ಲಿಯೂ ಹರಿಯುತ್ತಿವೆ." * ಹೀಗೆ ಎಲ್ಲಾ ಕಡೆಯಲ್ಲಿಯೂ ಅವಶ್ಯಕತೆಯ ಪ್ರಚಾರವು ಹರಡಿದೆ; ಮತ್ತು ಜಗತ್ತೆಲ್ಲವೂ ಸರ್ವ ಸ್ಥಳಗಳಲ್ಲಿಯೂ ಧರ್ಮಕ್ಕೊಳಗಾಗಿದೆ.

೧೫. ಹೊರಗಿದ್ದಂತೆ ಒಳಗೂ ಧರ್ಮವಿದೆ ಮತ್ತಿದು ಬಹು ಪ್ರೋತ್ಸಾಹಕರವಾಗಿದೆ

ಕರ್ಮತತ್ತ್ವವು (Theory) ಧರ್ಮದ ಪ್ರಚಾರವನ್ನು † ಬಾಹ್ಯ ಪ್ರಕೃತಿಯಲ್ಲಿ ಮಾತ್ರವಲ್ಲದೆ, ಮಾನಸಿಕ ಮತ್ತು ಧಾರ್ಮಿಕ ಲೋಕಗಳಲ್ಲಿಯೂ ಕೂಡ ಕಾಣುತ್ತದೆ. ಋತು (ಅಥವಾ ಕ್ರಮವು) ಪ್ರಕೃತಿಯಲ್ಲಿಯೂ, ಮಾನವ ಸಂಘದಲ್ಲಿಯೂ ಒಂದೇ ಸಮನಾಗಿ ಪ್ರಕಾಶಿಸುತ್ತದೆ. ನಾವು ಪ್ರತಿಕ್ಷಣದಲ್ಲಿಯೂ ನಮ್ಮ ಶೀಲವನ್ನು ರಚಿಸಿಕೊಳ್ಳುತ್ತಲೂ ನಮ್ಮ ಭವಿಷ್ಯತ್ತನ್ನು ‡ ತಿದ್ದಿಕೊಳ್ಳುತ್ತಲೂ ಇದೇವೆ. ಹೀಗೆಯೇ, 'ನಾವು ಪ್ರಾರಂಭಿಸಿದ ಯಾವ ಕೆಲಸಕ್ಕೂ ನಾಶವಿಲ್ಲ; ಮತ್ತು ಅದರಸಿದ್ಧಿಗೆ ಯಾವ ಬಾಧೆಯೂ ಇಲ್ಲ. ನಾವು ಮಾಡಬಹುದಾದ ಸ್ವಲ್ಪ ಸತ್ಕಾರ್ಯವೂ ಕೂಡ ನಮ್ಮನ್ನು ದೊಡ್ಡ ಕಷ್ಟಗಳಿಂದ ಪಾರುಮಾಡುತ್ತದೆ.'§ ನಾವು ಬೇಕೆಂದು ಇಚ್ಛಿಸುವ ವಸ್ತುವು ನಮ್ಮ ಈ ದೇಹದೊಡನೆಯೇ ನಾಶವಾಗುವುದಿಲ್ಲ; ಮತ್ತು ಈ ವಿಷಯವು ಅನಂತತೆಯು†† ನಮ್ಮ ಕಣ್ಣೆದುರಿಗೆಯೇ ಸಾಧ್ಯವಾಗಿರುವುದೆಂದು ‡‡ ನಮ್ಮ ಜೀವನವನ್ನು ಹುರಿದುಂಬಿಸುತ್ತದೆ.

೧೬. ಇದರಿಂದ ದುಷ್ಕರ್ಮಿಗಳಿಗೆ ಯಾವ ಅವಕಾಶವೂ ಇಲ್ಲ; ಏಕೆಂದರೆ ಯಾರೂ ತಮ್ಮ ಪೂರ್ವಕರ್ಮದಿಂದ ತಪ್ಪಿಸಿಕೊಳ್ಳಲಾರರು.

ಅಸುರಕಾರ್ಯಗಳನ್ನು ದೈವಾಜ್ಞೆಯೆಂದು §§ ಮಾಡುತ್ತ ಸರ್ವ ಕೆಲಸಗಳೂ ವಿಧಿ ಲಿಖಿತದಂತೆ ** ಸ್ವಲ್ಪವೂ ತಪ್ಪದೆ ನಡೆಯು

---

* ಬೃಹ. ಉಪ. III ೮, ೯ † Rule, ಆಡಳಿತ ‡ Destinies
§ ಭಗವದ್ಗೀತಾ ೩, ೪೦; †† Eternity ‡‡ Present sense
§§ Divine sanction ** God's will

ತ್ತವೆ ಎಂದು ಹೇಳುತ್ತ, ಜನರು ಆತ್ಮ ತೃಪ್ತಿಯನ್ನು ಪಡೆಯುತ್ತಿದ್ದ ಕಾಲದಲ್ಲಿ ಕರ್ಮತತ್ತ್ವವು ಧರ್ಮ ಪ್ರಾಧಾನ್ಯವನ್ನು ಒತ್ತಿ ಹೇಳುತ್ತ ಪರಮಾತ್ಮನನ್ನು ಧರ್ಮ ಸಾಮ್ರಾಜ್ಯ * ದೊಡನೆ ಐಕ್ಯಮಾಡಿತು. ಹೌದು, ಎಲ್ಲಿ ನೋಡಿದರಲ್ಲಿ, ಸರ್ವವೂ ಧರ್ಮಮಯವೇ ಆಗಿದೆ. ಆದರೆ ಇದೆಲ್ಲವೂ ಕೂಡ ಪರಮಾತ್ಮಮಯವೇ ಆಗಿದೆ. ಅಂದರೆ ಕರ್ಮವು ಕೇವಲ ಯಾಂತ್ರಿಕ † ತತ್ತ್ವವಲ್ಲ, ಮತ್ತೆ ಪಾರಮಾರ್ಥಿಕ ಅವಶ್ಯಕತೆಯೇ ಆಗಿದೆ. ಇದು ಈಶ್ವರನ ಮನಸ್ಸಂಕಲ್ಪಗಳ ರೂಪ ಧಾರಿಯೇ‡ ಆಗಿದೆ; ಮತ್ತು ಪರಮಾತ್ಮನೇ ಇದರ ಯಜಮಾನನು, ಅಂದರೆ ಕರ್ಮಾಧ್ಯಕ್ಷನು. § ಹೀಗೆಯೇ ಧರ್ಮವು ಈಶ್ವರನ ಒಂದು ಗುಣವೇ ಸರಿ. ಇದರಿಂದ ಇಂಥಾ ಪರಮಾತ್ಮನ ಗುಣವನ್ನು ಏಸುವು "ಬದಲಾವಣೆಯಿಲ್ಲದ, ಮತ್ತು ಈಶದಪಿ ಕದಲುವಿಕೆಯಿಂದುಂಟಾದ ನೆರಳನ್ನು ಹೊಂದಿಲ್ಲದ" ಶುದ್ಧ ಗುಣವೆಂದು ಬೋಧಿಸಿದಾನೆ. ಏಕೆಂದರೆ ಸರ್ವ ಕಾರ್ಯಗಳೂ, ಸರ್ವಭಾವನೆಗಳೂ ಕೂಡ ಅದೃಶ್ಯವಾಗಿದ್ದರೂ ಕೂಡ ಸಾರ್ವತ್ರಿಕವಾಗಿರುವ ಧರ್ಮ ತಕ್ಕಡಿಯಲ್ಲಿ†† ತೂಕ ಮಾಡಲ್ಪಡುತ್ತವೆ. ಅಂದರೆ ಫಲಿತಾಂಶದ‡‡ ದಿವಸವು ಯಾವುದೋ ದೂರ ಕಾಲದ ಭವಿಷ್ಯತ್ತಿನಲ್ಲಿ ಅಲ್ಲದೆ ಈಗ ಇಲ್ಲೇ ಇದೆಯಲ್ಲದೆ ಅದನ್ನು ಯಾರೂ ತಪ್ಪಿಸಿಕೊಳ್ಳಲಾರರು. ಈಶ್ವರ ನಿಯಮಗಳನ್ನು ಯಾರೂ ಉಲ್ಲಂಘಿಸುವುದಕ್ಕಾಗುವುದಿಲ್ಲ. ಏಕೆಂದರೆ ಅವುಗಳನ್ನು ಯಾರೂ ಕೂಡ ನಮ್ಮ ಮೇಲೆ ಹೊರಿಸಿಲ್ಲ, §§ ಮತ್ತೆ ಅವುಗಳು ನಮ್ಮ ಪ್ರಕೃತಿಯೊಡನೆ ** ಸೇರಿಸಿ ರಚಿಸಲ್ಪಟ್ಟವೆ. †‡ ಹೀಗಿರುವಲ್ಲಿ ಪಾಪವೆಂದರೆ ಪರಮಾತ್ಮನನ್ನೆದುರಿಸುವುದಲ್ಲ. ಮತ್ತೆ ಜೀವಾತ್ಮನಿಲ್ಲವೆಂದು ಹೇಳಿದಂತಾಯಿತು. ಮತ್ತಿದು ಕೇವಲ ಧರ್ಮೋಲ್ಲಂಘನೆಯಲ್ಲ, ಪರಂತು ಆತ್ಮ ದ್ರೋಹವೇ

---

* Rule † ಭೌತಿಕ ಪ್ರಕೃತಿಯ, mechanical

‡ Embodiment § ಶ್ವೇತಾ, ಉಪ, ೬, ೧೧

†† Balance scales ‡‡ Judgement

§§ Imposed ** Nature †‡ Wrought into

ಸರಿ. ಹೇಗೆಂದರೆ, ನಾವು ನಮ್ಮೊಡನೆ ಸತತವೂ ನಮ್ಮ ಪೂರ್ವ ಕರ್ಮವನ್ನೆಲ್ಲಾ * ಹೊತ್ತುಕೊಂಡು ಬರುತ್ತೇವೆ. ಏಕೆಂದರೆ, ಅದನ್ನು ಯಾವ ಕಾಲವೂ ಕಡಿಮೆ ಮಾಡಲಾರದು, † ಮತ್ತು ಮೃತ್ಯುವೂ ಅಳಿಸಲಾರದು.

೧೭. ಇದರಿಂದ ಕ್ಷಮಾನುತಾಪಗಳಿಗವಕಾಶವುಂಟು ; ಮತ್ತು ನಾವಲ್ಲದೆ ಬೇರೆಯವರು ಯಾರೂ ನಮ್ಮನ್ನು ಕಾಪಾಡಲಾರರು

ಇಂಥಾ ಭಾವ ‡ ದಲ್ಲಿ ಪಶ್ಚಾತ್ತಾಪಕ್ಕೂ ಅನಂತರ ಉಂಟಾಗುವ ಕ್ಷಮೆಗೂ ಅವಕಾಶವಿದೆ. ಇದು ಬಿಟ್ಟು ಕರ್ಮದಲ್ಲಿ ನಂಬಿಕೆಯು ಧಾರ್ಮಿಕ ಜೀವನ, ಪೂಜಾಪ್ರಾರ್ಥನೆಗಳನ್ನು ಅಸಾಧ್ಯವಾಗಿ ಮಾಡುವುದೆಂದು ಹೇಳುವ ವಿಮರ್ಶಕರು ಈ ತತ್ತ್ವವನ್ನು ಚೆನ್ನಾಗಿ ತಿಳಿದುಕೊಂಡಿಲ್ಲ. ಅವರ ಅಭಿಪ್ರಾಯದಲ್ಲಿ ಈಶ್ವರನು ತನ್ನ ಧರ್ಮಪರವಾಗಿ ತನ್ನ ಎಲ್ಲಾ ಹಕ್ಕು ಬಾಧ್ಯತೆಗಳನ್ನು ಬಿಟ್ಟುಕೊಟ್ಟಿರುವನು. ಅಂದರೆ ದೇವರಿಗೆ ಪ್ರಾರ್ಥಿಸುವುದು ಬಿರುಗಾಳಿಯನ್ನು ನಮಗೆ ಶಕ್ತಿಯನ್ನು ಕೊಡುವಂತೆಯೂ, ಇಲ್ಲವೆ ಭೂಕಂಪಕ್ಕೆ ನಮ್ಮ ಪಾಪಗಳನ್ನು ಮನ್ನಿಸೆಂದು ಆಜ್ಞಾಪಿಸುವಂತೆಯೂ ಮೂಢವಿಷಯವಾಗಿದೆ. ನಿಜ, ಹಿಂದೂ ಜನರು ಪ್ರಾರ್ಥನೆಯನ್ನು ನಮಗೆ ಬೇಕಾದ ವಸ್ತುಗಳನ್ನು ಕೊಡುವಂಥ ಅಲ್ಲಾವುದ್ದೀನನ (ಅದ್ಭುತ) ದೀಪದಂಥ ವಸ್ತುವಿಶೇಷವೆಂದು ತಿಳಿಯುವುದಿಲ್ಲ. ಏಕೆಂದರೆ ದೇವರು ಸೂರ್ಯನನ್ನು ಅವನ ನಿತ್ಯ ಗೆಲಸದಿಂದಲೂ, ಬಂದೂಕದ ಗುಂಡನ್ನು ಮಧ್ಯಮಾರ್ಗದಲ್ಲಿ ಮುಂದೆ ಹೋಗದಂತೆಯೂ ನಿಲ್ಲಿಸುವಂಥ ಮಂತ್ರಗಾರನಲ್ಲ. ಆದರೆ ಅವನ ಸತ್ಯಸ್ಥೈರ್ಯಗಳೂ ಮತ್ತವನ ದಯಾಧರ್ಮಗಳೂ ಧರ್ಮನಿಯಮ (law) ದ ಅನುಲ್ಲಂಘನೀಯ ಕಾರ್ಯದಲ್ಲಿ ರೂಪವನ್ನು ಧರಿಸಿವೆ. ಹೀಗಿರುವುದರಿಂದ ಕ್ಷಮಾಗುಣವು ಈಶ್ವರೀಧರ್ಮದ ಸಂಕು

* Past † Blur ‡ ನಿಬಂಧನೆ, Scheme

ಚಿತ ಕಾರ್ಯ * ವಲ್ಲ, ಮತ್ತೆ ಅದರ ಪ್ರಕಾಶ † ವೇ ಸರಿ. ಇಂಥ ಧರ್ಮ ನಿಯಮದ ಅನುಲ್ಲಂಘನೆಯು ಸ್ವಲ್ಪವೂ ತಪ್ಪದೆಂದು ನಾವು ಎಷ್ಟು ಬೇಕಾದರೂ ಹೇಳಬಹುದು, ಆದರೂ ಇದರ ಜೊತೆಯಲ್ಲೇ ಪಾಪ ಗಳಿಗೆ ಕ್ಷಮಾಪಣೆಯೂ ಉಂಟೆಂದು ನಂಬಬಹುದು. ಆಧ್ಯಾತ್ಮಿಕ ಬೆಳ ವಣಿಗೆ ಮತ್ತು ಅನುಭವಗಳು ಪ್ರಪಂಚದ ಇತರ ವಿಷಯಗಳಿಗೂ ಅನ್ವ ಯಿಸುವಂಥ ‡ ಧರ್ಮಗಳಿಂದಲೇ ಕೂಡಿವೆ §. ಇದರಿಂದ ನಾವು ಶಾರೀ ರಕ ಸುಖಕ್ಕಾಗಿ ಮನಸೋತು ಬೀಜಬಿತ್ತಿದರೆ ಕೊನೆಯಲ್ಲಿ ಶಾರೀರಕ ರೋಗಗಳನ್ನು ಫಲವಾಗಿ ಪಡೆಯುತ್ತೇವೆ; ಮತ್ತು ಇಂಥಾ ದೂಷಿತ ದೇಹಕ್ಕೆ ತಕ್ಕ ದಂಡನೆಯು ಕೃಶವಾದ ಬುದ್ಧಿ ಮತ್ತು ಅಜ್ಞಾನಾವೃತ ವಾದ ಮನಸ್ಸೇ†† ಆಗಿವೆ. ನಾವು ಬೇಕೆಂದು ತಿಳಿದೂಕೂಡ ಧಾರ್ಮಿಕ ಮತ್ತು ಪಾರಮಾರ್ಥಿಕ ಜ್ಞಾನಕ್ಕೆ ಕಣ್ಣು ಮುಚ್ಚಿಕೊಂಡು, ಪಾಪ ಕೂಪದಲ್ಲಿ ಬಿದ್ದರೆ, ಈ ಈಶ್ವರೀಪ್ರಪಂಚದಲ್ಲಿ ಪಾಪವು ನಮ್ಮನ್ನು ಕಂಡುಹಿಡಿದು, (ನಮ್ಮ ಸ್ವೇಚ್ಛಾಕೃತವಾದ ಅಂಧತೆಯು ನಮ್ಮನ್ನು) ಹಳ್ಳದಲ್ಲಿ ಕೆಡಹುವುದೆಂದು ನಾವು ದೃಢವಾಗಿ ತಿಳಿದುಕೊಳ್ಳಬಹುದು. ಏಕೆಂದರೆ ಧಾರ್ಮಿಕ ದೇವನು ಯಾವ ಮನುಷ್ಯನಿಗೂ ಅವನು ಸಂಪಾದಿಸಿರುವ ಫಲಗಳನ್ನು ಅವನಿಗೆ ಕೊಡದೆ ನಿಲ್ಲಿಸಿಕೊಳ್ಳಲಾ ರನು. ಮತ್ತು ಲೋಕಕ್ಕೆ ಸೇರಿದ ಯಾವುದೋ ಒಂದು ಬಾಹ್ಯಪ್ರತಿ ನಿಧಿವಸ್ತುವಿನ ‡‡ ಸಹಾಯದಿಂದ ಪರಿತಾಪಪಡೆಯುವೆನೆಂದು ಪೂರ್ವದ ತಪ್ಪನ್ನು ಅಳಿಸುವುದಕ್ಕಾಗುವುದಿಲ್ಲ §§ ಏಕೆಂದರೆ, ನಾವು ಮಾಡಿದ ತಪ್ಪನ್ನು ಇತರರಿಗೆ ಯಾರಿಗೂ ಕೊಡಲಾಗುವುದಿಲ್ಲ. ಮತ್ತೆ ಅದನ್ನು ಆತ್ಮನಿಗ್ರಹದಿಂದುಂಟಾಗುವ ದುಃಖದಿಂದ ತಿದ್ದಿಕೊಳ್ಳಬಹುದು. **

* Mitigation † ವ್ಯಕ್ತೀಕರಣ expression

‡ ಆಳುವಂಥಾ Rule § Governed

†† ಆತ್ಮಾ Soul ‡‡ Substitute

§§ಮುನಿರ್ಮನುತೆ ಮೂರ್ಖೋ ಮುಚ್ಯತೆ । ಮುನಿಗಳು ಮನನ ಮಾಡುತ್ತಾರೆ, ಮತ್ತು ಮೂರ್ಖರು ಇವುಗಳಿಂದ ಮುಕ್ತರಾಗುತ್ತಾರೆ.

** Atone

ಅಂದರೆ ಪರಮಾತ್ಮನ ಕೃಪಾಪಾತ್ರರಾಗಲು ನಾವು ಮಾಡಿದ ಪಾಪದ ಫಲವನ್ನು ಅನುಭವಿಸಿದ ಹೊರತು ಮುಂದೆ ಹೋಗಲು ಸಾಧ್ಯವೇ ಇಲ್ಲ.

೧೮. ಕರ್ಮವು ಜನರ ಸಂದರ್ಭಾನುಕೂಲಗಳನ್ನು ಅನುಸರಿಸಿ ನಿರ್ಬಂಧಿಸುತ್ತಿದ್ದರೂ ಕೂಡ ಇನ್ನೂ ಸ್ವಲ್ಪ ಸ್ವಾತಂತ್ರ್ಯ ವಿದೆ

ಕರ್ಮತತ್ತ್ವವು ಪ್ರತಿಯೊಬ್ಬ ವ್ಯಕ್ತಿಯೂ ಹುಟ್ಟಿರುವ ಸ್ಥಳ ಸಂದರ್ಭಗಳನ್ನು ಚೆನ್ನಾಗಿ ಪರಿಶೀಲಿಸಿ ತಿಳಿದುಕೊಳ್ಳುತ್ತದೆ. ಪ್ರಾಚೀನ (= ಸಂಚಿತ) ಕರ್ಮವು ಪೂರ್ಣವಾಗಿ ನಿರ್ಧರಿಸಲ್ಪಟ್ಟಿದೆ ಎಂದು ಹೇಳಿ ದರೂ, ನಮ್ಮ ಭವಿಷ್ಯತ್ (= ಆಗಾಮಿ) ಕರ್ಮವು ಮಾತ್ರ ಸ್ವಲ್ಪ ಮಟ್ಟಿಗೆಯೇ ಗೊತ್ತುಮಾಡಲ್ಪಟ್ಟಿದೆ ಎಂದು ಒಪ್ಪುತ್ತದೆ. ಏಕೆಂದರೆ ಮನುಷ್ಯರಲ್ಲಿರುವ ಆಧ್ಯಾತ್ಮಿಕತತ್ತ್ವವು ಅವರವರ ಶೀಲಸಂಸ್ಕಾರಗಳಿಗೆ ತಕ್ಕಂತೆ ಪ್ರತಿಯೊಬ್ಬರಿಗೂ ಸ್ವಾತಂತ್ರ್ಯವನ್ನು ಕೊಡುತ್ತದೆ. (ಏಕೆಂ ದರೆ) ಮನುಷ್ಯನು ಪ್ರಕೃತಿಗುಣಗಳ† ಕೇವಲ ಯಂತ್ರವಿಶೇಷವೊಂದಲ್ಲ ಮತ್ತವನು ತನ್ನಲ್ಲಿರುವ ಆತ್ಮಶಕ್ತಿಯ ‡ ಸಹಾಯದಿಂದ ತನ್ನನ್ನು ತಮ್ಮ ದಾಸನನ್ನಾಗಿ ಮಾಡಲೆತ್ನಿಸುವ ಸ್ವತಃ ಕರ್ಮಿಗಳಾದ§ ಶಕ್ತಿಗಳ ಮೇಲೆ ವಿಜಯಶಾಲಿಯಾಗಬಹುದು. ಇದರಿಂದಲೇ ಭಗದ್ಗೀತೆಯು ಜನರು ತಮ್ಮನ್ನು ತಮ್ಮಿಂದಲೇ ಮೇಲಕ್ಕೆತ್ತಿ ಉದ್ಧರಿಸಿಕೊಳ್ಳಬೇ ಕೆಂದು ಸರ್ವರಿಗೂ ಬೋಧಿಸುತ್ತದೆ. ಹೇಗೆಂದರೆ ನಮಗೆ ಕೊಟ್ಟಿರುವ ವಸ್ತುಗಳನ್ನು ನಮ್ಮ ಧ್ಯೇಯಗಳನ್ನು ಸಮಾಪಿಸುವಂತೆ ಉಪಯೋಗಿಸಿ ಕೊಳ್ಳಬಹುದು. ಜೀವನಕ್ರೀಡೆಯಲ್ಲಿ ಆಟದ ಕಾರ್ಡುಗಳು †† ನಮ್ಮ ನಮ್ಮ ಕೈಯಲ್ಲಿಯೇ ಕೊಡಲ್ಪಟ್ಟಿವೆ. ಆದರೆ ಮಾತ್ರ ನಾವವುಗಳನ್ನು ಚೆನ್ನಾಗಿ ನೋಡಿ ಆರಿಸಿ ತೆಗೆದುಕೊಳ್ಳುವುದಿಲ್ಲ. ಅವುಗಳು ನಮ್ಮ

---

* ವಸ್ತುಸಮುದಾಯ, material † Instincts ‡ Spiri
§ Automatic †† ಕಾಗದ, cards

ಪೂರ್ವಕರ್ಮಕ್ಕೆ ಸೇರಿವೆ. ಆದರೂ ನಮಗಿಷ್ಟಬಂದಂತೆ ನಾವು ಆಟ ಹೇಳಬಹುದು, ನಮಗೆ ಬೇಕಾದ ಕೂಟ (suit) ವನ್ನು ಕಟ್ಟ (lead) ಬಹುದು ; ಮತ್ತು ನಾವು ಆಡಿದಂತೆ ಗೆಲುವು ಸೋಲುಗಳು ನಮ್ಮವೇ ಆಗಿವೆ. ಹೀಗೆ ಇರುವುದೇ ನಮ್ಮ ಸರ್ವಸ್ವಾತಂತ್ರ್ಯವು.

೧೯. ಜನರ ಭವಿಷ್ಯತ್ತನ್ನು ನಿರ್ಧರಿಸುವುದಕ್ಕಾಗದಿದ್ದರೂ, ಇವರಲ್ಲಿ ಯಾವ ಹುಚ್ಚು ಸ್ವೇಚ್ಛೆಗೂ ವಿಧಿವಾದಕ್ಕೂ ಅವಕಾಶವಿಲ್ಲ.

ಇದರಿಂದ ಯಾರ ಸ್ವೇಚ್ಛೆಗೂ ಅವಕಾಶವಿಲ್ಲದಿದ್ದರೂ, * ಪ್ರತಿಯೊಬ್ಬ ವ್ಯಕ್ತಿಯೂ ಮುಂದೆ ಏನೇನು ಆಗುತ್ತಾನೆ ಎಂಬುದನ್ನು ಮೊದಲೇ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಯ ಕಾರ್ಯಗಳನ್ನೂ ಅವು ಅವನ ಪದ್ಧತಿಯನ್ನನುಸರಿಸಿವಂತೆ, ಅಂದರೆ ಅವನ ಕಾರ್ಯಗಳು ಕೇವಲ ಅತನ ಇಷ್ಟಕ್ಕೊಳಗಾಗದೆ, ಯಾಂತ್ರಿಕ ರೀತಿಯಲ್ಲಿ † ನಡೆಯುವಷ್ಟು ಮಟ್ಟಿಗೆ ನಾವವುಗಳನ್ನು ಕುರಿತು ಭವಿಷ್ಯತ್ತನ್ನು ಹೇಳಬಹುದು. ಆದರೆ ತಾವಾಗಿ ಆರಿಸುವುದೆಂದರೆ ಸ್ವೇಚ್ಛೆಯಲ್ಲ. ಏಕೆಂದರೆ ಮನುಷ್ಯ ಕಾರ್ಯಗಳಲ್ಲಿ ಕ್ಲುಪ್ತವಿಲ್ಲದ, ‡ ಸಂಬಂಧವಿಲ್ಲದ, ಕಾರಣಬದ್ಧವಲ್ಲದ ವಸ್ತುವೆಂಬ ಅರ್ಥದಲ್ಲಿ, ನಮಗೆ ಸ್ವತಂತ್ರ ಬುದ್ಧಿಯುಂಟೆಂದು § ಒಪ್ಪುವ ಹಾಗಿಲ್ಲ; ಆದರೆ ಇಂತಹ ಬುದ್ಧಿ (ಸಂಕಲ್ಪ ಶಕ್ತಿ) ಯನ್ನು ತಿಳಿಯಲು ಯಾರಿಗೂ ಸಾಧ್ಯವಿಲ್ಲ. †† ಏಕೆಂದರೆ ಇದಕ್ಕೆ ಕಾರ್ಯ ಕಾರಣದ ಸಾಮಾನ್ಯ ಪ್ರವಾಹದೊಡನೆ ಯಾವ ಸಂಬಂಧವೂ ಇಲ್ಲ; ಮತ್ತಿದು ಕ್ಲುಪ್ತವಿಲ್ಲದ ‡‡ ಕ್ರಮವಿಲ್ಲದ §§ ರೀತಿಯಲ್ಲಿ ಕೆಲಸ ಮಾಡುತ್ತದೆ. ಅಂದರೆ ಮನುಷ್ಯ ಕೃತ್ಯಗಳು ಇಂತಹ ಸಂಕಲ್ಪ ಶಕ್ತಿಯಿಂದ ಗೊತ್ತು ಮಾಡಲ್ಪಡುತ್ತಿದ್ದರೆ ಶಿಕ್ಷೆಯಲ್ಲಾಗಲೀ

---

* Caprice † Mechanical ‡ Undetermined

§ Free will †† Defies all analysis

‡‡ Irregular (ಗೊತ್ತಿಲ್ಲದ) §§ Chaotic

ಶೀಲ ಪರಿವರ್ತನೆಯಲ್ಲಾಗಲೀ * ಏನೂ ಪ್ರಯೋಜನವಿಲ್ಲ. † ಆದರೆ ಕರ್ಮ ತತ್ತ್ವವು ಮನುಷ್ಯನಿಗೆ ಕೊಟ್ಟಿರುವ ವಸ್ತುಗಳನ್ನು ತನಗೆ ತಿಳಿದಿರುವ ಜ್ಞಾನಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳಲು ಸ್ವಾತಂತ್ರ್ಯವನ್ನು ಕೊಡುತ್ತದೆ. ಇದರಿಂದ ಮನುಷ್ಯನು ಪ್ರಕೃತಿಯಲ್ಲಿಯೂ, ತನ್ನ ಮನಸ್ಸಿನಲ್ಲಿಯೂ, ಸಂಘದಲ್ಲಿಯೂ ಇರುವ ಸಾಮಾನ್ಯ ಕಾರ್ಯಗಳನ್ನು ‡ ತಾನೇ ಆಳುತ್ತಾನೆ. ಹೀಗೆ ನಿಜವಾದ ಕಾರಣಬದ್ಧವಾದ§ ಸ್ವಾತಂತ್ರ್ಯಕ್ಕೆ ಅವಕಾಶವಿದೆಯಲ್ಲದೆ, "ಅನಿರ್ಧಾರಿತ ಮಾರ್ಗ" †† ಮತ್ತು ಕೇವಲ "ಸಮಯವಾದ" ‡‡ ಗಳು ತಪ್ಪು "ವಿಧಿವಾದ" §§ಕ್ಕೆ ಅವಕಾಶ ಕೊಡುತ್ತವೆ.

## ೭೦. ಲೋಕವೆಲ್ಲಾ ಕೇವಲ ವಿಧಿಲಿಖಿತವಾಗಿಲ್ಲ, ಮತ್ತು ಸ್ವಲ್ಪ ಸ್ವಾತಂತ್ರ್ಯವೂ ಉಂಟು

ಪ್ರಪಂಚವೆಂದರೆ ಇದರಲ್ಲಿ ಪ್ರತಿಯೊಂದು ಸಣ್ಣ ವಿಷಯವೂ ಮೊದಲಿಂದಲೇ ಆಜ್ಞಾಬದ್ಧನಾಗಿಲ್ಲ. ಅಂದರೆ ಪೂರ್ವದಲ್ಲಿಯೇ ಕ್ಲುಪ್ತವಾದ ಕ್ರಮದ ಕೇವಲ ಹರಡುವಿಕೆಯೇ ನಮ್ಮೆದುರಿಗೆ ನಡೆಯುತ್ತಿರುವ ಲೋಕಮಾರ್ಗವಲ್ಲ. ** ಏಕೆಂದರೆ ಯಾವ ಮಹೇಶ್ವರನಿಗೂ ಕೂಡ ಪೂರ್ಣ ಭವಿಷ್ಯತ್ ಜ್ಞಾನವಿಲ್ಲ ; ಮತ್ತು ನಾವೆಲ್ಲರೂ ಕೂಡ ಅವನ ಕಾರ್ಯದಲ್ಲಿ ಜೊತೆಗಾರರಾಗಿದ್ದೇವೆ. ಇದು ಬಿಟ್ಟು, ಪರಮಾತ್ಮನು ನಮ್ಮಿಂದ ಮೇಲೆಯೂ, ಆಚೆಯೂ ಕೇವಲ ಅತೀತನಾಗಿಯೇ ಇಲ್ಲದೆ ನಮ್ಮಲ್ಲಿಯೂ ಕೂಡ ಇದಾನೆ. ಇದರಿಂದ ನಮ್ಮಲ್ಲಿರುವ ಈ ಈಶ್ವರಾಂಶವನ್ನು ಚೆನ್ನಾಗಿ ಉಪಯೋಗಿಸಿದ್ದೇ ಆದರೆ ಹಠಾತ್ತಾದ ಹೃದಯ ಮಾರ್ಪಾಡ ಗಳನ್ನೂ ಕೂಡ ಉಂಟುಮಾಡಬಲ್ಲದು. ಹೀಗಿರುವುದರಿಂದ

---

* Training † Meaning ‡ Uniformities
§ Rational †† Indeterminism ‡‡ Chance
§§ Fatalism ** We do not have

ಸದ್ಯೋ( ಬೀಜೋತ್ಪತ್ತಿಯ* ಅರ್ಥದಲ್ಲಿ ಪರಿಣಾಮವು† ಅಸಾಧ್ಯವೇನಲ್ಲ. ಅಂದರೆ ನಿಜತತ್ತ್ವವು (Real) ಕಾರ್ಯ ತತ್ಪರವಾಗಿ ಅಭಿವೃದ್ಧಿ ಹೊಂದುತ್ತಿರುವ ಜೀವನವೇ ಅಲ್ಲದೆ ಕೇವಲ ಯಾಂತ್ರಿಕ ಕಾರ್ಯದ ನಿತ್ಯಕ್ರಮವಲ್ಲ. ‡

೭೧. ಹೀಗೆಯೇ ಸರ್ವಪಾಪಿಗಳೂ ತಾವು ತಮ್ಮನ್ನು ಕಾಪಾಡಿ ಕೊಳ್ಳಬಹುದು, ಏಕೆಂದರೆ ಯಾರೂ ಅಷ್ಟು ಪೂರ್ಣವಾಗಿ ಕೆಟ್ಟಿಲ್ಲ.

ಈ ರೀತಿಯಲ್ಲಿ ಕರ್ಮತತ್ತ್ವವು ಪಾಪಾತ್ಮರಿಗೂ ಕೂಡ ತಮ್ಮ ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಮುಂದೆಹೋಗಲು ಎಂದಿಗೂ ಬಹಳ ತಡವಿಲ್ಲವೆಂದು ಪ್ರೋತ್ಸಾಹ ಕೊಡುತ್ತದೆ. ಮತ್ತಿದು ಆಶಾಮಾರ್ಗ ವನ್ನು ನಿರಾಶಾ, ದುಃಖ ಮತ್ತು ಪಾಪ ಭಯಗಳಿಂದ ಕೂಡಿರುವ ಜನ ರಿಗೂ ಕೂಡ ಎಂದಿಗೂ ಮುಚ್ಚುವುದಿಲ್ಲ. ಮತ್ತು ಪಾಪಾತ್ಮ ರುಗಳನ್ನು ದಯೆಯಿಂದ ಕಾಣುವಂತೆ ನಮ್ಮನ್ನು ಪ್ರೋತ್ಸಾಹಿಸುತ್ತದೆ. ಏಕೆಂದರೆ ಜನರು ದುಷ್ಟರಾಗಿರುವುದಕ್ಕಿಂತ ಹೆಚ್ಚಾಗಿ ದುರ್ಬಲರಾಗಿ ದ್ದಾರೆ. ಜನರ ಮನಸ್ಸು ಅತಿಯಾಗಿ ದುಷ್ಟವಾಗಿದ್ದುಕೊಂಡು ಅವರು ಒಳ್ಳೆಯದಕ್ಕಿಂತ ಹೆಚ್ಚಾಗಿ ಕೆಟ್ಟದ್ದನ್ನೇ, ಸ್ವರ್ಗಕ್ಕೆ ಹತ್ತುವ ಇಕ್ಕಟ್ಟು ಮಾರ್ಗಕ್ಕಿಂತ ಹೆಚ್ಚಾಗಿ ನರಕಕ್ಕೆ ಇಳಿಯುವ ಸುಲಭ ಮಾರ್ಗವನ್ನೇ ಇಚ್ಛಿಸುತ್ತಾರೆಂಬುದು ನಿಜವಾದ ವಿಷಯ ವಲ್ಲ

೭೨. ಆದರೆ, ನಮ್ಮ ಜನರು ಕೆಟ್ಟು, ಧರ್ಮ ಶ್ರದ್ಧಾಹೀನರಾ ದಾಗ ಕರ್ಮವು ವಿಧಿಲಿಖಿತವೆಂದು ಅಪಾರ್ಥ ಹೊಂದಿತು, ಮತ್ತಿದು ಸರಿಯಲ್ಲ

ಅನ್ಯಾಯವಾಗಿ§ ಭರತಖಂಡದಲ್ಲಿ ಜನರು ದುರ್ಬಲರಾಗಿ ತಮ್ಮ

* Epigenisis † Evolution ‡ Routine
§ Unfortunately

ಕ್ಕೈಲಾದಷ್ಟು ಕೆಲಸವನ್ನು ಮಾಡಲು ಇಷ್ಟವಿಲ್ಲದವರಾದಾಗ ಕರ್ಮತತ್ತ್ವವು "ಅದೃಷ್ಟವಾದ" ದೊಡನೆ ಒಂದೆಂಬ ಅಪಾರ್ಥ ಹೊಂದಿತು. * ಇದು ತಮೋಗುಣಕ್ಕೂ ಭಯಕ್ಕೂ ಅವಕಾಶ ಕೊಡುವಂತೆ ಮಾಡಲ್ಪಟ್ಟು ಆಶೆಯನ್ನಲ್ಲದೆ ನಿರಾಶೆಯನ್ನು ಸಾರುವಂತೆ ಪರಿಣಾಮ ಪಡೆಯಿತು. ಇದರಿಂದ ಪಾಪಕರ್ಮಿಗಳಿಗೆ ಇದು ಹೀಗೆ ಹೇಳುತ್ತಿತ್ತು: "ನೀವೆಲ್ಲರೂ ದಾರಿಗೆಟ್ಟು ಹಾಳಾಗುತ್ತಿರುವ ಜನರಲ್ಲದೆ, ಎಂದೆಂದಿಗೂ ನಿಮ್ಮ ಹಣೆಯಬರೆಹವಿದ್ದುದೇ ಇಷ್ಟು. ಅನಾದಿಕಾಲದಿಂದ ಮೊದಲುಗೊಂಡು ಇದೇ ನಿಮ್ಮ ವಿಧಿಲಿಖಿತವಾದ ಮಾರ್ಗವಾಗಿದೆ." ಅವರೂ ಇಂಥಾ ನಿರಾಶಾಮಾರ್ಗವು † ಕರ್ಮತತ್ತ್ವದ ಅವಶ್ಯಕಫಲವಲ್ಲವೆಂಬುದನ್ನು ಸೂಚಿಸುವುದಕ್ಕೆ ಬೇಕಾದುದನ್ನೆಲ್ಲಾ ನಾನು ಈ ಮೊದಲೇ ಹೇಳಿದ್ದೇನೆ.

## ೩. ಚತುರ್ವಿಧ ಪುರುಷಾರ್ಥವು

### ೨೩. ಹಿಂದೂ ಧರ್ಮವು ಉತ್ತಮವಾದೊಂದು ಜೀವನ ಮಾರ್ಗವೇ ಹೊರತು ಕೇವಲ ಯಾವ ನಂಬಿಕೆಯೂ ಅಲ್ಲ

ಇನ್ನು ಹಿಂದೂಮತದ ಆಚರಣೆಯನ್ನು ಸ್ವಲ್ಪ ನೋಡೋಣ. ಹಿಂದೂಮತವು ಕೇವಲ ಯಾವುದೊಂದು 'ಜ್ಞಾನರೂಪ'‡ಕ್ಕಿಂತ ಹೆಚ್ಚಾಗಿ 'ಜೀವನಮಾರ್ಗವೇ' § ಆಗಿದೆ. ಏಕೆಂದರೆ ಜ್ಞಾನವಿಷಯಗಳಲ್ಲಿ ಇದು ನಮಗೆ ಸ್ವಾತಂತ್ರ್ಯವನ್ನು ಕೊಟ್ಟರೂ ಕೂಡ ನಡತೆಯಲ್ಲಿ ಮಾತ್ರ ಒಂದು ನಿಯತವಾದ ಧರ್ಮಮಾರ್ಗವನ್ನು ಅನುಸರಿಸಬೇಕೆಂದು ವಿಧಿಸುತ್ತದೆ. ಆಸ್ತಿಕರಾಗಲಿ ನಾಸ್ತಿಕರಾಗಲಿ, ಸಂದೇಹವಾದಿಗಳಾಗಲಿ, ಅಜ್ಞೇಯವಾದಿಗಳಾಗಲಿ, ಯಾರೇ ಆಗಲಿ ಆರ್ಯಧರ್ಮದ†† ಜೀವನಮಾರ್ಗ ಮತ್ತು ನಾಗರೀಕತೆಯ ಉನ್ನತಿಮಾರ್ಗಗಳನ್ನು‡‡ ಒಪ್ಪಿಕೊಂಡರೆ,

---

* Confused † Philosophy, ತತ್ತ್ವ

‡ Form of thought § Way of life

†† Hindu system ‡‡ Culture

ಎಲ್ಲರೂ ಹಿಂದುಗಳಾಗಬಹುದು. ಏಕೆಂದರೆ, ಹಿಂದೂಮತವು ಕೇವಲ ಮತತತ್ತ್ವಗಳಲ್ಲಿ ಐಕ್ಯತೆಯನ್ನಲ್ಲದೆ * ಜೀವನದ ವಿಷಯದಲ್ಲಿಯೂ ಕೂಡ ನಮ್ಮ ಆಧ್ಯಾತ್ಮಿಕ ಮತ್ತು ನೈತಿಕ ದೃಷ್ಟಿಯು ಒಂದಾಗಿರಬೇಕೆಂದು ಒತ್ತಿಹೇಳುತ್ತದೆ. ಹೀಗಿರುವುದರಿಂದ ಸತ್ಕಾರ್ಯಿಯು—ಮತ್ತು ಯಾವುದೊಂದು ಅಭಿಪ್ರಾಯದಲ್ಲಿ ಕೇವಲ ನಂಬಿಕೆಯುಳ್ಳವನಲ್ಲ—ದುರ್ಗತಿಗೆ ಎಂದಿಗೂ ಬೀಳಲಾರನು, 'ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ.' † ಏಕೆಂದರೆ ಬಹು ನಿಜವಾದ ಅರ್ಥವಲ್ಲಿ ನಡತೆಯು‡ ಜ್ಞಾನಕ್ಕಿಂತ ಮೊದಲು ಪ್ರಾರಂಭಿಸುತ್ತದೆ. ಮತ್ತು ಸಂಕಲ್ಪ § ವನ್ನು ಪೂರ್ಣವಾಗಿ ನಡೆಸುವುದರಿಂದ ಮಾತ್ರ ತತ್ತ್ವದ†† ತಿರುಳೇನೆಂದು ನಾವು ಚೆನ್ನಾಗಿ ತಿಳಿದುಕೊಳ್ಳುವೆವು. ನಮ್ಮ ಮತಶಾಸ್ತ್ರದ ನಂಬಿಕೆಗಳು ಮತ್ತು ದಾರ್ಶನಿಕ‡‡ ಅಭಿಪ್ರಾಯಗಳೂ ಏನೇ ಆಗಿದ್ದರೂ ಕೂಡ ನಾವೆಲ್ಲರೂ ದಯೆಯುಳ್ಳವರೂ, ಸತ್ಯವಂತರೂ, ಉಪಕಾರಿಗಳಲ್ಲಿ ಕೃತಜ್ಞರೂ ಮತ್ತು ದುರ್ಭಾಗ್ಯರಲ್ಲಿ ಪ್ರೀತಿಯುಳ್ಳವರೂ §§ ಆಗಿರಬೇಕೆಂದು ಒಪ್ಪುತ್ತೇವೆ. ಹಿಂದೂಮತವು ಧಾರ್ಮಿಕ ಜೀವನವನ್ನು ಸಾರುತ್ತ ನೀತಿಕಟ್ಟಳೆ ಅಥವಾ ಧರ್ಮವು ಹೇಳುವಂತೆ ನಡೆಯುವುದು ತಮ್ಮ ಕರ್ತವ್ಯವೆಂದು ತಿಳಿಯುವವರನ್ನೆಲ್ಲಾ ತನ್ನ ಸಂಘದಲ್ಲಿ ಆಕರ್ಷಿಸಿ ಒಟ್ಟುಗೂಡಿಸುತ್ತದೆ.** ಏಕೆಂದರೆ, ಹಿಂದೂಮತವು ಕೇವಲ ಜಾತಿಯೊಂದಲ್ಲದೆ ನ್ಯಾಯಮಾರ್ಗದ†‡ ಧರ್ಮವನ್ನು ಒಪ್ಪಿಕೊಂಡು ಶ್ರದ್ಧೆಯಿಂದ ಸತ್ಯಸಿದ್ಧಿಗಾಗಿ ಪ್ರಯತ್ನಿಸುತ್ತಿರುವ ಜನರೆಲ್ಲರ ಒಂದು ಸೋದರ ವರ್ಗವಾಗಿದೆ.‡§

---

* Conformity † ಭಗವದ್ಗೀತೆ

‡ ಆಚಾರ, ಅಭ್ಯಾಸ, Practice § Theory

†† Doctrine ‡‡ Metaphysical

§§ Sympathetic, ಕನಿಕರವುಳ್ಳ ** Draws

†‡ Right ‡§ ಸಂಘ, Fellowship

೨೪. **ಧರ್ಮವೆಂದರೆ ಸತ್ಸ್ವಮರ್ಮ, ಸದಾಚಾರವು ಮತ್ತು ಅಧರ್ಮವು ಲೋಕ ನಿಯಮಗಳನ್ನತಿಕ್ರಮಿಸಿದ ದುರಾಚಾರವೇ ಸರಿ**

ಇದರಿಂದ ಧರ್ಮವೆಂದರೆ ಸತ್ಪ್ರವೃತ್ತಿ ಸದಾಚಾರಗಳೇ ಎಂದರ್ಥ. ಋಗ್ವೇದದಲ್ಲಿ 'ಋತ' ವೆಂದರೆ ಪ್ರಪಂಚದ ಸನ್ಮಾರ್ಗ * ವೆಂದರ್ಥ ಮತ್ತಿದು ಸತ್ಯ ಅಥವಾ ವಸ್ತುತತ್ತ್ವಕ್ಕೂ ಮತ್ತು ಧರ್ಮ ಅಥವಾ ಪರಿಣಾಮದ ಮಾರ್ಗಕ್ಕೂ ಒಂದಾಗಿ ನಿಂತಿದೆ. ಧೃ-ಧರಿಸು, ಹಿಡಿದುಕೊಳ್ಳು ಎಂಬ ಧಾತುವಿನಿಂದ ಉಂಟಾದ ಧರ್ಮಶಬ್ದವು ವಸ್ತುಗಳನ್ನು ಧರಿಸಿ ಅಥವಾ ಹಿಡಿದುಕೊಂಡು, ಅವು ಇರುವಂತೆ (in being) ಅವುಗಳನ್ನು ರಕ್ಷಿಸುವ ತತ್ತ್ವವೆಂದು ಅರ್ಥವಾಗುತ್ತದೆ. ಪ್ರತಿಯೊಂದು ಜೀವನ ರೂಪವೂ, ಪ್ರತಿಯೊಂದು ಜನಸಂಗಡವೂ ತಮ್ಮ ತಮ್ಮ ಧರ್ಮ ಅಂದರೆ ತಮ್ಮ ತಮ್ಮ ಜೀವಿಕೆ ಅಥವಾ ಇರುವಿಕೆಯ ಮಾರ್ಗವನ್ನು† ಹೊಂದಿದೆ. ಇದರಿಂದ ಧರ್ಮ ಅಥವಾ ಸದ್ವೃತ್ತಿಯು‡ ವಸ್ತುತತ್ತ್ವ (truth) ಗಳೊಡನೆ ಸಮರಸದಿಂದಿರುವುದೆಂದು ಅರ್ಥ; ಮತ್ತು ಅಧರ್ಮ ಅಥವಾ ದುರ್ವೃತ್ತಿ§ ಯೆಂದರೆ ಇದಕ್ಕೆವ್ಯತಿರಿಕ್ತವಾಗಿರುವುದು. ಧಾರ್ಮಿಕ ದುಷ್ಟತನ ** ವೆಂದರೆ ಲೋಕವನ್ನು ಪೂರ್ಣವಾಗಿ ಆವರಿಸಿಕೊಂಡು ಆಳುತ್ತಿರುವ ಸತ್ಯದೊಡನೆ ವಿರೋಧದಿಂದಿರುವುದೆಂದರ್ಥವಾಗುತ್ತದೆ.

೨೫. **ಆಶೆಯೇ ಜನರ ಸರ್ವಕರ್ಮಕ್ಕೂ ಮುಖ್ಯಕಾರಣವಾಗಿದೆ; ಮತ್ತು ನಮ್ಮ ಧರ್ಮವು ಈ ಸರ್ವ ಆಶೆಗಳನ್ನೂ ಶಾಶ್ವತ ಧರ್ಮದೊಡನೆ, ಅಂದರೆ ಸ್ವರ್ಗ ಮರ್ತ್ಯ ಲೋಕಗಳನ್ನೆರಡನ್ನೂ ಒಟ್ಟುಗೂಡಿಸುತ್ತದೆ**

ಹೀಗಾಗಲು ಆಶೆಗಳೇ ಸರ್ವ ಮಾನುಷ ಕರ್ಮದ ಮುಖ್ಯ ಮೂಲಗಳಾಗಿವೆ. ಹೇಗಂದರೆ, ತಮ್ಮ ಉದ್ದೇಶಗಳಲ್ಲಿ ಭಿನ್ನಭಿನ್ನವಾಗಿದ್ದು

---

* Right order, ಸತ್ ಸ್ಥಿತಿ † ವಿಧಿ, Law of its being
‡ ಶೀಲ, Virtue § ದುರಾಚಾರ, Vice ** Evil

ಕೊಂಡು ತಮ್ಮ ಇಷ್ಟಾಪೂರ್ತಿಗೆ ಜನರನ್ನು ಬೇರೆಬೇರೆ ಮಾರ್ಗಗಳಲ್ಲಿ ಪ್ರವರ್ತಿಸುವಂತೆ ಮಾಡುವ ಕೆಲವು ಮುಖ್ಯ ಆಶೆಗಳಿಲ್ಲಿಯೇ ಸಕಲ ಮನುಷ್ಯಜೀವನವೂ ನಿಂತಿದೆ. ಈ ಅನೇಕ ಆಶೆಗಳು ಪರಸ್ಪರ ಸಂಬಂಧ ವಿಲ್ಲದೆ ಪರಸ್ಪರವಾಗಿ ಮಾರ್ಪಾಡು ಹೊಂದದೇ ಅಥವಾ ಜಗಳವಾಡದೆ ಇದ್ದಲ್ಲಿ ಅವುಗಳ ವಿವಿಧರೂಪವಿಕಾಸ*ಗಳು ಬೇರೆಬೇರೆಯಾಗಿದ್ದುಕೊಂಡು ಪರಸ್ಪರ ಐಕ್ಯಸಂಬಂಧವಿಲ್ಲದೆ ಇರುತ್ತವೆ ಸಂಸಾರ ಜೀವನವು ಆರ್ಥಿಕ ಪ್ರವೃತ್ತಿಗಳೊಡನೆ ಹೆಚ್ಚು ಸಂಬಂಧವನ್ನು ಹೊಂದಿಲ್ಲ. ಮತ್ತು ಕೈಗಾರಿಕೆಯ ಸಂಬಂಧಗಳು ಧಾರ್ಮಿಕದೃಷ್ಟಿಯಿಂದ ಯಾವ ವಿಶೇಷ ಗುಣವನ್ನೂ ಹೊಂದಿಲ್ಲ. ಮತಕ್ಕೆ ಸಂಬಂಧಿಸಿದ ಕೆಲಸಗಳು ಜೀವನದ ಲೌಕಿಕ ವಿಚಾರಗಳಲ್ಲಿ ಯಾವ ಅಭಿರುಚಿಯನ್ನೂ ಹೊಂದದೇ ಇರಬಹುದು.† ಆದರೆ ಮನುಷ್ಯನು ಪೂರ್ಣವಾದ ವಸ್ತುವೊಂದಾಗಿರುವುದರಿಂದ ಅವನ ಕೆಲಸಗಳೆಲ್ಲ ತಮ್ಮಿಂದ ಆಚೆಹೋಗಿ ಇತರ ಕೆಲಸಗಳೊಡನೆ ಸೇರುವ ಐಕ್ಯತೆಯನ್ನು ಪಡೆದಿವೆ. ಮತ್ತು ಪ್ರತಿಯೊಬ್ಬ ವ್ಯಕ್ತಿಗೂ ಅವನವನ ಸ್ವಭಾವಕ್ಕೆ ಸೇರಿದ ಕಾಮುಕ‡ ಮತ್ತು ಪೋಷಕ§ ಪ್ರೀತಿ ವಾತ್ಸಲ್ಯಗುಣಗಳೂ, ಐಶ್ವರ್ಯಾಧಿಕಾರಗಳಲ್ಲಿ ಸ್ವರ್ಗಲೋಕ ಹಿತೈಷಣೆಯೂ, ಮತ್ತು ಅದೃಷ್ಟಪ್ರಪಂಚದೊಡನೆ ಐಕ್ಯತೆಯಿಂದಿರಲು ತೀವ್ರ ಆಶೆಯೂ ಇದ್ದೇ ಇರುವುವು. ಈ ವಿವಿಧ ಕರ್ಮಪ್ರವೃತ್ತಿಗಳು ಪರಸ್ಪರವಾಗಿ ಕೆಲಸಮಾಡಿ, ತಮ್ಮತಮ್ಮಲ್ಲಿ ಮಾರ್ಪಾಡುಗಳನ್ನು ಹೊಂದುತ್ತವೆ; ಮತ್ತವುಗಳು ಮನುಷ್ಯ ಜೀವನದಲ್ಲಿ ಪರಸ್ಪರ ಸಂಬಂಧ ಹೊಂದಿಯೇ ಕೆಲಸಮಾಡುತ್ತವೆ. ಇದರಿಂದ ಜೀವನವು ಒಂದಾಗಿದ್ದರೆ, ಇದಕ್ಕೆಲ್ಲ ಮುಖ್ಯವಾದ ಜೀವನಶಾಸ್ತ್ರವು ಒಂದಿದ್ದುಕೊಂಡು ಚತುರ್ವಿಧ ಪುರುಷಾರ್ಥಗಳಾದ ಧರ್ಮ ಅಥವಾ ಸತ್ಕಾರ್ಯ,** ಅರ್ಥ ಅಥವಾ ಐಶ್ವರ್ಯ, ಕಾಮ ಅಥವಾ ಕಲಾವಿದ್ಯೆ ಮತ್ತು ನಾಗರಿಕ ಜೀವನ, ಮತ್ತು ಮೋಕ್ಷ ಅಥವಾ ಆಧ್ಯಾತ್ಮಿಕ ಸ್ವಾತಂತ್ರ್ಯಗಳನ್ನು ಒಪ್ಪಿಕೊ

* Expressions † Indifferent ‡ Sex

§ Parental * ಸಾಧುವೃತ್ತಿ, Righteousness

ಳ್ಳುತ್ತದೆ. ಭಾರತೀಯ ಆಚಾರಕಾಂಡವು* ಆಶಾಲೋಕವನ್ನು ಶಾಶ್ವತ ಲೋಕದೊಡನೆ, ಅಂದರೆ ಇದಕ್ಕೆ ಬೇಕಾದ ಆಧ್ಯಾತ್ಮಿಕಬುದ್ಧಿ† (ದೃಷ್ಟಿ) ಯೊಡನೆ ಕೂಡಿಸುತ್ತದೆ. ಹೀಗೆ ನಮ್ಮ ಧರ್ಮವು, ಭೂಲೋಕ ಸ್ವರ್ಗ ಲೋಕಗಳೆರಡನ್ನೂ ಒಟ್ಟುಗೂಡಿಸುತ್ತದೆ.

## ೨೬. ಹೀಗೆಯೇ ಭೌತಿಕ ಪಾರಮಾರ್ಥಿಕ ಜೀವನಗಳಿಗೆ ಯಾವ ವೈಷಮ್ಯವೂ ಇಲ್ಲ.

ಹಿಂದೂಮತವು ನಮ್ಮ ಪ್ರಕೃತಿಜನ್ಯಗಳಾದ ಆಶೆಗಳು ಮತ್ತು ಸಾಂಘಿಕ ಉದ್ದೇಶಗಳನ್ನು ತನ್ನಲ್ಲುಳ್ಳ ಮನುಷ್ಯಲೋಕಕ್ಕೂ ಶಿಕ್ಷಣ‡ ಮತ್ತು ಪರಲೋಕ ಸಾಧನೆಯ ಆಶೆಗಳನ್ನು ತನ್ನಲ್ಲುಳ್ಳ ಆಧ್ಯಾತ್ಮಿಕ ಜೀವನಕ್ಕೂ ನಿಜವಾದ ಶಾಶ್ವತ ವೈಷಮ್ಯವಿರುವುದೆಂದು ನಂಬುವುದಿಲ್ಲ, ಮತ್ತು ತನ್ನ ಸುತ್ತಮುತ್ತಲಿರುವ ಲೋಕದೊಡನೆ ತಕ್ಕ ಸಂಬಂಧವನ್ನು ಹೊಂದಿಲ್ಲದ ಕೇವಲ ಪ್ರಾಕೃತಿಕ ಜೀವನವನ್ನು§ ಮಾತ್ರ ಖಂಡಿಸುತ್ತದೆ. ಇಹಲೋಕ ಮತ್ತು ಇಲ್ಲಿಯ ಒಳ್ಳೆಯವಸ್ತುಗಳನ್ನು ಪ್ರಾಮುಖ್ಯವಾಗಿಟ್ಟುಕೊಳ್ಳುವ ಜೀವನವು ತೃಪ್ತಿಕರವಾಗಿಲ್ಲ, ಏಕೆಂದರೆ ಎಷ್ಟೇ ಐಶ್ವರ್ಯವಿದ್ದರೂ ಅದೂ ಕೂಡ ಕೊನೆಗಾಣುತ್ತ, ನಿಸ್ಸಾರತೆಯಲ್ಲಿ ಕರಗಿಹೋಗುತ್ತದೆ. ನಾವು ನಮ್ಮ ನಂಬಿಕೆಯನ್ನಿಟ್ಟಿರುವ ಲೋಕವೂ ಮತ್ತೆ ಉಳಿದ ಎಲ್ಲಾ ವಸ್ತುಗಳೂ ನಮ್ಮ ಗೆಲವು ಕಾಲದಲ್ಲಿ ನಮ್ಮನ್ನು ಬಿಟ್ಟುಬಿಟ್ಟು ಹೋಗುತ್ತವೆ. ಇದರಿಂದ ಹಿಂದೂ ತತ್ತ್ವಜ್ಞಾನಿಯು ಇಹಲೋಕಕ್ಕೆ ಶಾಶ್ವತವಸ್ತುವಿನೊಡನೆ ಇರುವ ಸಂಬಂಧವು ಕಿತ್ತುಹೋದಲ್ಲಿ ಉಂಟಾಗುವ ಈ ಲೋಕದ ನಶ್ವರ (– ಕ್ಷಣಿಕ) ಸ್ಥಿತಿಯನ್ನೂ ಮತ್ತು ಇದರ ಶೋಚನೀಯ ನಿಷ್ಫಲತೆಯನ್ನೂ ಕುರಿತು ಯೋಚಿಸುತ್ತಾನೆ.

---

* Code † Perspective

‡ Discipline § ಬಾಳು, Existence

## ೨೭. ಲೋಕವಿಷಯಗಳು ಯಾವುವೂ ನಿತ್ಯವಲ್ಲದಿದ್ದರೂ, ಅವುಗಳನ್ನು ಬಿಡುವುದಕ್ಕಾಗುವುದಿಲ್ಲ

ಏಕೆಂದರೆ ಎಲ್ಲಾ ಲೌಕಿಕ ಸಂಬಂಧಗಳು ಅಂತ್ಯವುಳ್ಳವುಗಳಾಗಿದ್ದರೂ ಇವುಗಳನ್ನು ಇಲ್ಲವೆಂದು ಹೇಳಿ ದೂರು ಹಾಕುವುದಕ್ಕಾಗುವುದಿಲ್ಲ.* ಇವುಗಳು ಶಾಶ್ವತವಾಗಿಲ್ಲದೆ ಇರುವುದರಿಂದಲೇ ಇವುಗಳು ಇಲ್ಲವೇ ಇಲ್ಲವೆನ್ನುವಂತೆ ವರ್ತಿಸುವುದೆಂದರೆ ನಮ್ಮಲ್ಲಿ ನಾವೇ ನಾಶವನ್ನು ತಂದಿಟ್ಟುಕೊಂಡಂತೆ ಆಗುತ್ತದೆ. ಏಕೆಂದರೆ ಶಾಶ್ವತವಸ್ತುವು ಕ್ಷಣಿಕವಸ್ತುವಿನಲ್ಲಿ ವಿಕಾಸವಾಗಿರುವುದು, ಮತ್ತು ಕ್ಷಣಿಕವಸ್ತುವು ಶಾಶ್ವತವಸ್ತುವಿನ ಸಿದ್ಧಿಗೆ ಸಾಧನಮಾರ್ಗವಾಗಿದೆ. ಸಾಂತರೂಪದಲ್ಲಿ ಸತ್ಯವು ಅನಂತವಾದ ಸತ್ಯಕ್ಕೆ ದಾರಿ ತೋರಿಸುತ್ತದೆ ಮತ್ತು ತ್ಯಾಗವೆಂದರೆ ಸಾಂತವಸ್ತುವಿನಿಂದ ಇದು ಸಾಂತವಸ್ತುವೆಂದು ತಿಳಿದುಕೊಂಡು, ಇದರೊಡನೆ ಸೇರಿಕೊಳ್ಳದೆ ದೂರದಿಂದಿರುವುದು, † ಮತ್ತು ಸಾಂತವಸ್ತುವಿನಲ್ಲಿ ಇದು ಅನಂತ ವಸ್ತುವಿನ ರೂಪವಿಶೇಷವೆಂದು ಪ್ರೀತಿಯಿಂದ ಒಟ್ಟುಗೂಡಿರುವ ರಾಗವಿಶೇಷವು. ‡ ಇವೆರಡೂ ಪರಸ್ಪರವಾಗಿ ಚೆನ್ನಾಗಿ ಸೇರಿಕೊಂಡಿವೆ. ಮತ್ತಿವುಗಳನ್ನು ಬೇರೆಮಾಡುವುದೆಂದರೆ ಹಾನಿಕರವೇ ಸರಿ. ಈ ವಿಷಯದಲ್ಲಿ ಉಪನಿಷದ್ವಾಕ್ಯವು ಹೀಗೆ ಹೇಳುತ್ತದೆ. "ಕೇವಲ ಈ ಲೋಕವನ್ನೇ ಸೇವಿಸುತ್ತಿರುವವರು§ ಅಂಧಕೂಪದಲ್ಲಿರುವರು. ಆದರೆ ಕೇವಲ ಅನಂತ ವಸ್ತುವನ್ನೇ ಸೇವಿಸುತ್ತಿರುವವರು ಇವರಿಗಿಂತಲೂ ಹೆಚ್ಚಾದ ಅಂಧಕೂಪದಲ್ಲಿರುವರು. ಇವೆರಡನ್ನೂ ಒಪ್ಪಿಕೊಳ್ಳುವವರು ಸಾಂತವಸ್ತುವಿನ ಜ್ಞಾನದಿಂದ ಮೃತ್ಯುಪಾಶದಿಂದ ತಮ್ಮನ್ನು ಕಾಪಾಡಿಕೊಂಡು, ಅನಂತ ವಸ್ತುವಿನ ಜ್ಞಾನದಿಂದ ಅಮೃತತ್ವವನ್ನು ಪಡೆಯುತ್ತಾರೆ."

* Ignored
† Detachment
‡ Feeling
§ ಪೂಜಿಸು, worship

### ೨೮. ಅರ್ಥವು ನಮ್ಮ ಪುರುಷಾರ್ಥ (Personality, ಆಶೆ) ಸಿದ್ಧಿಯ ಉಪಕರಣವಾಗಿದೆ

ಹೇಗೆಯೋ ಅರ್ಥವು ಮನುಷ್ಯನ ಆರ್ಥಿಕ ಮತ್ತು ರಾಜ್ಯ ಜೀವನವನ್ನು, ಅಂದರೆ ಅಧಿಕಾರ ಮತ್ತು ಸ್ವತ್ತುಗಳಿಗಾಗಿ ಇರುವ ಆಶೆಯನ್ನು ಚೆನ್ನಾಗಿ ನೋಡಿ ತಿಳಿದುಕೊಂಡಿದೆ. * ಸ್ವತ್ತಿನ ಸಂಪಾದನೆಗೆ ಅವಕಾಶ ಕೊಡುವ ಆಶಾಶಕ್ತಿ (urge) ಯು ಮನುಷ್ಯ ಪ್ರಕೃತಿಯಲ್ಲಿ ಬಹು ಮುಖ್ಯವಾದುದು. ಮಾನವಮನಸ್ಸಿನ ಪ್ರಕೃತಿಯನ್ನು ಬದಲಾಯಿಸಿದ ಹೊರತು, ಸ್ವತ್ತಿನ ಅಭಿಪ್ರಾಯವನ್ನು † ಮೂಲೋತ್ಪಾದನ ಮಾಡುವುದಕ್ಕಾಗುವುದಿಲ್ಲ. ಅನೇಕ ಜನರಿಗೆ ಸ್ವತ್ತು ಅಥವಾ ಆಸ್ತಿಯು ತಮ್ಮ ತಮ್ಮ ಪುರುಷತ್ವದ ‡ ಪ್ರಕಾಶಕ್ಕೂ § ಮತ್ತು ಇತರ ಜನರೊಡನೆ ನಡೆಸುವ ತಮ್ಮ ನಡೆವಳಿಕೆಗೂ †† ಬೇಕಾದ ಪ್ರತೀಕ ವಸ್ತುವೇ ‡‡ ಆಗಿದೆ.

### ೨೯. ಮೋಕ್ಷಪ್ರಾಪ್ತಿಯಾಗಬೇಕಾದರೆ, ಅರ್ಥಕಾಮಗಳನ್ನು ಧರ್ಮ ರೀತಿಯಲ್ಲಿಯೇ ಸಾಧಿಸಬೇಕು

ಅರ್ಥ ಕಾಮಗಳ ಅಂದರೆ ಐಶ್ವರ್ಯ ಮತ್ತು ಸಂತೋಷವನ್ನು ಪಡೆಯಲು ನಾವು ಮಾಡುವ ಪ್ರಯತ್ನವು ಸರಿಯಾದ ಮಾನವ ಆಶೆಯಾಗಿರುವಲ್ಲಿ, ಇವುಗಳು ಕೊನೆಗೆ ಮಾನವರ ಆಧ್ಯಾತ್ಮಿಕ ಸ್ವಾತಂತ್ರ್ಯಕ್ಕೆ §§ ಸಾಧನವಾಗಬೇಕಾಗಿದ್ದರೆ, ಇವುಗಳನ್ನು ಸಾಧು (ಧರ್ಮ) ರೀತಿಯಲ್ಲೇ ಪಡೆಯಬೇಕು. ಅಂದರೆ ಈ ಪ್ರತಿಯೊಂದು ಪುರಷಾರ್ಥವೂ ಧಾರ್ಮಿಕ ರೀತಿಯಲ್ಲಿ ನಡೆಯಬೇಕು. ** ಸ್ವಾತಂತ್ರ್ಯವನ್ನು ಪಡೆಯ

---

* ತನ್ನಲ್ಲಿ ಒಳಕೊಂಡಿದೆ, Takes note † Idea (ಆಶೆ)
‡ Personality § Expression
†† ವ್ಯವಹಾರ, Intercourse ‡‡ Medium §§ ಮೋಕ್ಷ
** ಧಾರ್ಮಿಕ ಶಿಕ್ಷಣ (discipline)ವನ್ನು ಹೊಂದಲೇಬೇಕು.

ಬೇಕಾದರೆ ಶಿಕ್ಷಣದ ಬಂಧನಗಳಿಂದಲೂ ಮತ್ತು ನಮ್ಮ ನಮ್ಮ ಆಶಾ ಪ್ರವೃತ್ತಿಗಳ ತ್ಯಾಗದಿಂದ * ಮಾತ್ರವೇ ಸಾಧ್ಯ. ಸಂಪಾದಿಸಿ ಅನುಭವಿಸುವ † ಸ್ವಾತಂತ್ರ್ಯವನ್ನು ಪಡೆಯಲು ನಾವು ನಮ್ಮ ರೂಪುಗಳನ್ನು ಸಂಕೋಚಮಾಡಿಕೊಂಡು ನಮ್ಮ ಇಚ್ಛಾಶಕ್ತಿಯನ್ನು ‡ ಕೆಲವು ಮಾರ್ಗಗಳಲ್ಲಿ ಮಿತದಿಂದ ಇರುವಂತೆ ನೋಡಿಕೊಳ್ಳಬೇಕು. § ಇದರಿಂದಲೇ ರಾಜಕೀಯ ಸ್ವಾತಂತ್ರ್ಯವನ್ನು ಪಡೆದಿರುವ ದೇಶಗಳು ತಮ್ಮ ಜ್ಞಾನ ಕರ್ಮಗಳಲ್ಲಿ ಬಹಳವಾಗಿ ಬಂಧಿಸಲ್ಪಟ್ಟವೆ.†† ಏಕೆಂದರೆ ರಾಜಕೀಯ ಸ್ವಾತಂತ್ರ್ಯವು ಜ್ಞಾನ ಕರ್ಮಗಳ ಸ್ವಾತಂತ್ರ್ಯವನ್ನು ಬಹಳವಾಗಿ ಕಡಿಮೆ ಮಾಡಿದ ಹೊರತು ಸಾಧ್ಯವೇ ಇಲ್ಲ. ಹೀಗೆಯೇ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಹಿಂದೂ ಜನರು ತಮ್ಮ ನಿತ್ಯ (daily) ಜೀವನದ ಬಹು ಸಣ್ಣ ಸಣ್ಣ ವಿಷಯಗಳನ್ನೂ ‡‡ ಒಂದು ನಿಯಮಕ್ಕೆ ತಂದುಕೊಂಡರು. ಮತ್ತೆ ಇವುಗಳೇ ಧರ್ಮದ ಕಟ್ಟಲೆಗಳು. ಈ ವಿಧಿಗಳು ದೇಶದ ಎಲ್ಲಾ ಭಾಗಗಳಲ್ಲಿಯೂ ಅಥವಾ ಹಿಂದೂ ಚರಿತ್ರೆಯ ಎಲ್ಲಾ ಕಾಲಗಳಲ್ಲಿಯೂ ಒಂದೇ ಸಮನಾಗಿರಲಿಲ್ಲ. ಇದರಿಂದ ಹಿಂದೂ ಧರ್ಮಕರ್ತರು ನಾಗರೀಕತೆಯು ಸಿಂಧೂನದಿಯಿಂದ ರಾಮಸೇತುವರಿವಿಗೂ ಹರಡುತ್ತಿದ್ದಾಗ ಈ ದೇಶದ ಆಯಾ ಜನರಲ್ಲಿ ರೂಢಿಯಲ್ಲಿದ್ದ, ನಾನಾರೂಪದಿಂದಿದ್ದು ಬಹು ಕ್ಲೇಶಕರವಾಗಿದ್ದ §§ ಆಚಾರ ಪ್ರಭೇದಗಳೆಲ್ಲವನ್ನೂ ನಡೆವಳಿಕೆಯಲ್ಲಿ ಇರುವುವೆಂದು ಒಪ್ಪಿಕೊಂಡರು. ಇದರಿಂದ ಧರ್ಮಗ್ರಂಥಗಳು ಈ ಪ್ರಭೇದಗಳಲ್ಲಿ ತಮಗೆ ಧಾರ್ಮಿಕ ದೃಷ್ಟಿಯಿಂದ ದುಷ್ಟವೆಂದು ಕಂಡು ಬಂದವುಗಳನ್ನೆಲ್ಲ ತಿದ್ದಿ ಹೊಸರೂಪವನ್ನು ಕೊಡಲು ಪ್ರಯತ್ನಿಸುತ್ತಿದ್ದರೂ ಈ ಪ್ರಭೇದಗಳೆಲ್ಲ ನಿಜವೆಂದು ಒಪ್ಪಿಕೊಳ್ಳುತ್ತವೆ.** ಹೀಗೆ ಇವುಗಳನ್ನೆಲ್ಲಾ ಒಪ್ಪಿಕೊಳ್ಳುತ್ತಿದ್ದರೂ, ಈ

---

*Surrender † ಭೋಗಪಡು, Enjoy ‡ Will, ಸಂಕಲ್ಪ
§ Bind †† ಹಿಡಿತದಲ್ಲಿ ಇಡಲ್ಪಟ್ಟವೆ
‡‡ Most intimate details §§ Bewildering ** ಬೌಧಾಯನ, ಬೃಹಸ್ಪತಿ, ದೇವಲ ಮತ್ತು ಗೌತಮ ಸ್ಮೃತಿಗಳನ್ನು ನೋಡಿ.

ಆಚಾರಗಳಲ್ಲಿ ಉತ್ತಮರೀತಿಯೊಂದನ್ನು * ಅಂದರೆ ಯಾರಿಗೂ ಹೆಚ್ಚು ವಿರೋಧವಿಲ್ಲದಂತೆ ನಿಧಾನವಾಗಿ † ರೂಢಿಯಲ್ಲಿ ತರುವಂಥ ಆದರ್ಶ ಪ್ರಮಾಣವೊಂದನ್ನು ವಿಧಿಸಿದೆ; ಮತ್ತು ತೈತ್ತರೀಯ ಉಪನಿಷತ್ ಪ್ರಕಾರ ಹೆಚ್ಚು ಧರ್ಮಜ್ಞರಲ್ಲದ ತರುಣರು ಸಂಶಯ ಸ್ಥಳಗಳಲ್ಲಿ 'ವಿವೇಚನಾಪರರಾದ ಯೋಗ್ಯರೂ (apt), ಮತ್ತು ಭಕ್ತರಾಗಿದ್ದರೂ ಕಠಿಣಚಿತ್ತರಲ್ಲದ, ಗುಣಗ್ರಾಹಿಗಳಾದ' ಬ್ರಾಹ್ಮಣರು ಆಚರಿಸುವ ಧರ್ಮವನ್ನೇ ಪ್ರಮಾಣವನ್ನಾಗಿ ಇಟ್ಟುಕೊಳ್ಳಬೇಕು. ಹೀಗೆಯೇ ಮನುಮಹರ್ಷಿಗಳು ಸತ್ಪುರುಷರು ಮತ್ತು ದ್ವಿಜರಲ್ಲಿ ಧಾರ್ಮಿಕರಾದ ಜನರ ನಡತೆಯನ್ನು ಸರ್ವದೇಶ ಕುಲ ಮತ್ತು ಜಾತಿಗಳ ಆಚಾರ ಪದ್ಧತಿಗೆ ಸಮ್ಮತ (ಅವಿರುದ್ಧ) ವಾಗಿರುವುದೆಂದು ತಿಳಿಯಬಹುದೆಂದು ಸಾರಿಹೇಳುತ್ತಾರೆ.

## ೩೦. ಮೋಕ್ಷವೆಂದರೆ ಆಧ್ಯಾತ್ಮ ಸಿದ್ಧಿಯು; ಮತ್ತಿದೇ ಎಲ್ಲಕ್ಕೂ ಮುಖ್ಯವಾದ ಪುರುಷಾರ್ಥವಾಗಿದೆ

ಮೋಕ್ಷವೆಂದರೆ ಆಧ್ಯಾತ್ಮಿಕ ಸಿದ್ಧಿಯು. ಹಿಂದೂಧರ್ಮವು ಮನುಷ್ಯನು ಕೇವಲ ಅನ್ನದಿಂದಲೇ ಬದುಕುತ್ತಿಲ್ಲ, ಮತ್ತು ಕೇವಲ ಕೆಲಸ(ಕರ್ಮ) ದಿಂದಾಗಲಿ, (ಮೂಲ) ಧನದಿಂದಾಗಲಿ, ಆಶೆ ಅಧಿಕಾರ ಅಥವಾ ಬಾಹ್ಯಪ್ರಕೃತಿಯೊಡನಿರುವ ಸಂಬಂಧದಿಂದಾಗಲಿ ಬದುಕುತ್ತಿಲ್ಲವೆಂದು ಹೇಳುತ್ತದೆ; ಮತ್ತು ಇವನು ತನ್ನ ಪಾರಮಾರ್ಥಿಕ ಜೀವನದಿಂದ ಬದುಕುತ್ತಾನೆ ಇಲ್ಲವೇ ಬದುಕಬೇಕಾಗಿದೆ. ಮೋಕ್ಷವೆಂದರೆ ಆತ್ಮನ ಬಂಧವಿಮೋಚನೆ, ಅಥವಾ ಶಾಶ್ವತ ವಸ್ತುವಿನ ಹೃದಯಸ್ಥಳದಲ್ಲಿ ನಮ್ಮಲ್ಲಿರುವ ಆತ್ಮನ ಸಿದ್ಧಿ. ಇದೀಗ ಶ್ರೇಷ್ಠವಾದ ಸುಖದಾಯಕ ವಸ್ತುವು ಮತ್ತು ಈ ಉದ್ದೇಶದ ಸಿದ್ಧಿಗಾಗಿಯೇ ಉಳಿದ ಎಲ್ಲಾ ಕಾರ್ಯಗಳೂ ಚೆನ್ನಾಗಿ ಜೋಡಿಸಲ್ಪಟ್ಟಿವೆ. ‡

---

* Refinement † Imperceptibly

‡ Directed

### ೩೧. ಈ ಮೋಕ್ಷಮಾರ್ಗಗಳು (ಆಯಾಜನರಿಗೆ ತಕ್ಕಂತೆ) ಭಿನ್ನ ಭಿನ್ನವಾಗಿರಬಹುದು

ಇಂಥಾ ಸ್ವಾತಂತ್ರ್ಯ ಸಾಧನೆಯ ಮಾರ್ಗಗಳನ್ನು ನಿಷ್ಕರ್ಶಿಸುವಲ್ಲಿ ನಮ್ಮ ಹಿಂದೂ ಜ್ಞಾನಿಗಳು ಬಹು ಉದಾರ ಭಾವದಿಂದ ಇರುತ್ತಿದ್ದರೂ ಆಕಾಶದಲ್ಲಿ ಪಕ್ಷಿಗಳು ಹಾರುವಂತೆಯೂ, ಸಮುದ್ರದಲ್ಲಿ ಮೀನುಗಳು ಈಜುವಂತೆಯೂ ಆತ್ಮ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸುತ್ತಿರುವ ಪುರುಷನು ಪರಮಾತ್ಮನನ್ನು ಸೇರುವುದಕ್ಕಾಗಿ ನಡೆಯುತ್ತಿರುವ ದಾರಿಯು ತನ್ನ ದಾರಿಯಲ್ಲಿ ಹಿಂದೆ ನಡೆದು ಬಂದ ಯಾವ ಗುರುತನ್ನೂ ತೋರಿಕೊಡುವುದಿಲ್ಲ.*

### ೩೨. ಭಕ್ತಿ ಜ್ಞಾನಕರ್ಮಗಳೆಂಬ ಮೂರು ಮಾರ್ಗಗಳೂ ನಮ್ಮ ಮನಸ್ಸನ್ನನುಸರಿಸಿ ಭಿನ್ನವಾಗಿವೆ

ಈ ವಿಧವಾದ ಭಿನ್ನಭಿನ್ನ ಮಾರ್ಗಗಳು ಸೌಲಭ್ಯ ದೃಷ್ಟಿಯಿಂದ ಭಕ್ತಿ ಜ್ಞಾನ ಕರ್ಮಗಳೆಂದು ಮೂರು ತೆರನಾಗಿ ವಿಭಾಗಿಸಲ್ಪಟ್ಟಿವೆ. ಈ ಮೂರು ಮಾರ್ಗಗಳೂ ಒಂದನ್ನೊಂದು ಪರಸ್ಪರವಾಗಿ ದೂರೀಕರಿಸದೆ ತಮ್ಮಲ್ಲಿರುವ ಮುಖ್ಯವಾದ ರೂಪುಗಳನ್ನು ಚೆನ್ನಾಗಿ ಸ್ಪಷ್ಟೀಕರಿಸುತ್ತವೆ. ಜ್ಞಾನವೆಂದರೆ ಬುದ್ಧಿಯ ವಿಶೇಷತೆ† ಅಥವಾ ವಾದ ‡ ಶಕ್ತಿಯೆಂದರ್ಥ ವಲ್ಲ, ಮತ್ತೆ ಜ್ಞಾನವೆಂದರೆ ಸಿದ್ಧಿಪಡೆದ ಅನುಭವವೆಂದು ಅರ್ಥ. ಪರ ಮಾತ್ಮ ಸನ್ನಿಧಿಯಲ್ಲಿ ವಾಸಿಸಿದಾಗ ಮಾತ್ರ ನಾವು ಪಾಪದಿಂದ ಮುಕ್ತ ರಾಗುತ್ತೇವೆ. ನಮಗೆ ನಿಜವಾದ ಅಂತರ್ದೃಷ್ಟಿ § ಇದ್ದರೆ ಸತ್ಕ ರ್ಮವು ತನ್ನಷ್ಟಿಗೆ ತಾನೇ ಉಂಟಾಗುತ್ತದೆ.†† ಏಕೆಂದರೆ ಸತ್ಯವು

* ಶಕುನೀನಾಂ ಇವಾಕಾಶೇ ಜಲೇ ವಾರಿಚರಾನಿವ ।
ಯಥಾಪದಂನದೃಶ್ಯೇತ ತಥಾ ಜ್ಞಾನವಿದಾಂಗತಿಃ ॥

† Acumen ‡ Dialectical

§ ಸೂಕ್ಷ್ಮದೃಷ್ಟಿ Insight †† ಆಚರಣೆಯಲ್ಲಿ ಕಂಡು ಬರುತ್ತದೆ

ಸನ್ಮಾರ್ಗದಲ್ಲಿ ಹೊರತು ಬೇರೆ ಯಾವ ರೀತಿಯಲ್ಲಿಯೂ ನಡೆಯಲಾರದು. ಹೀಗೆಯೇ ಭಕ್ತಿ ಮಾರ್ಗವು ಬಹಳ ಜನರಂಜಕವಾಗಿ ಅತ್ಯಂತ ರೂಢಿಯಲ್ಲಿದೆ. ಸಾಧುಗಳೂ ಮತ್ತು ಪಾಪಿಷ್ಠರೂ, ಪಂಡಿತಪಾಮರರೂ, * ಜ್ಞಾನಿಗಳೂ ಮತ್ತು ಅಜ್ಞಾನಿಗಳೂ† ಎಲ್ಲರಿಗೂ ಈ ಮಾರ್ಗವು ಸುಲಭವಾಗಿದೆ. ಪ್ರಾರ್ಥನೆ ಮತ್ತು ಸಹಾಯ ಕೋರಿಕೆ.‡ ಉಪವಾಸ ಮತ್ತು ಯಜ್ಞ, ಧ್ಯಾನ§ ಮತ್ತು ಆತ್ಮವಿಮರ್ಶೆ ಇವುಗಳೆಲ್ಲವೂ ಭಕ್ತಿಮಾರ್ಗದಲ್ಲಿ†† ಸೇರಿಸಲ್ಪಟ್ಟಿವೆ. ಇಂಥಾ ಭಕ್ತಿಯು ತನ್ನ ಶ್ರೇಷ್ಠ ಸ್ಥಿತಿಯಲ್ಲಿ ಜ್ಞಾನದೊಡನೆ ಅನ್ವಯ ಹೊಂದಿ, ಇವೆರಡೂ ಸತ್ಕರ್ಮ ಅಥವಾ ಸದ್ವೃತ್ತಿಯಲ್ಲಿ‡‡ ಫಲೀಕರಿಸುತ್ತವೆ.

## ೪. ಆಶ್ರಮ ಧರ್ಮ ಮತ್ತು ವಿವಾಹ

### ೩೩. ಕರ್ಮವು ಜನರ ಗುಣಕರ್ಮಗಳನ್ನನುಸರಿಸಿ ವರ್ಣಾಶ್ರಮ ಧರ್ಮವಾಗಿದೆ

ಕರ್ಮತತ್ತ್ವದ ವ್ಯಕ್ತಿಕ ಮತ್ತು ಸಾಂಘಿಕ ಭಾಗಗಳು ಒಂದರೊಡನೆ ಇನ್ನೊಂದು ಅಭೇದ್ಯ ರೀತಿಯಲ್ಲಿ ಹೆಣೆದುಕೊಂಡಿರುವಲ್ಲಿ ಜಾತಿ ಅಥವಾ ವರ್ಣ ಧರ್ಮ (Theory) ವು ಸಂಘ ವಿಷಯವನ್ನು, ಆಶ್ರಮ ಧರ್ಮ ಅಥವಾ ಜೀವನಕಾಲವಿಭಾಗವು ವ್ಯಕ್ತಿಯ ವಿಷಯವನ್ನೂ ಹೆಚ್ಚಾಗಿ ಹೇಳುತ್ತವೆ. ನಾಲ್ಕು ಆಶ್ರಮಗಳಾದ ಬ್ರಹ್ಮಚರ್ಯ ಅಥವಾ ವಿದ್ಯಾಭ್ಯಾಸಕಾಲ, ಗಾರ್ಹಸ್ಥ್ಯ ಅಥವಾ ಸಂಸಾರಿಯಂತೆ ಲೋಕಸೇವೆ ಮಾಡುವ ಕಾಲ, ವಾನಪ್ರಸ್ಥ ಅಥವಾ ಸಮಾಜ ಬಂಧನಗಳಿಂದ ಬಿಡಿಸಿಕೊಳ್ಳುವುದಕ್ಕಾಗಿ ಲೋಕ ಮಾರ್ಗದಿಂದ ದೂರವಾಗಿರುವ ಕಾಲ

---

* ಅಜ್ಞಾನಿ, Ignorant † ಅವಿವೇಕಿ, foolish

‡ Petition § Communion

†† Life of devotion ‡‡ Virtuous life

ಮತ್ತು ಸನ್ಯಾಸ ಅಥವಾ ಸರ್ವಸಂಘಪರಿತ್ಯಾಗವಮಾಡಿ ನಿಜಸ್ವಾತಂತ್ರ್ಯವು ಇಂದು ನಾಳೆ ಲಭಿಸುವುದೆಂದು ಇದನ್ನು ಧೈರ್ಯದಿಂದ ನಿರೀಕ್ಷಿಸುತ್ತಿರುವ ಕಾಲ: ಇಂಥಾ ಚತುರಾಶ್ರಮಗಳು ಶಾಶ್ವತ ಜೀವನಕ್ಕೆಂದು ಜೇರೆ ಹೇರೆ ಅಂತಸ್ತುಗಳಿಂದ ಮುಂದುವರಿಯುತ್ತಿರುವಲ್ಲಿ, ಈ ನಮ್ಮ ಜೀವನವೆಲ್ಲವೂ ತೀರ್ಥಯಾತ್ರೆಯಾಗಿದೆ ಎಂದು ಸೂಚಿಸುತ್ತವೆ.

೩೪. ಬ್ರಹ್ಮಚರ್ಯವು ತನುಮನಗಳನ್ನು ತಿದ್ದಿ ಕ್ರಮಪಡಿಸುತ್ತದೆ; ಪುತ್ರಿದನ್ನು ಪೂರ್ವದಲ್ಲಿ ಸ್ತ್ರೀಯರಿಗೂ ವಿಧಿಸಿದ್ದರು.

ಇದರಲ್ಲಿ ಪ್ರಥಮಾಶ್ರಮವು ವಿದ್ಯಾಭ್ಯಾಸ ಮಾಡುವ ಮನುಶ್ಯರೀರಗಳ ಶಿಕ್ಷಣಕಾಲವಾಗಿದೆ. ಮೃದು ಸ್ವಭಾವವುಳ್ಳ ಯೌವನವು ಧರ್ಮ ಜೀವನಕ್ಕೆ ತಕ್ಕಂತೆ ಬದಲಾವಣೆಯನ್ನು ಹೊಂದುತ್ತದೆ ವಿದ್ಯಾರ್ಥಿಯು ತನ್ನ ಗುರುಗಳ ಮನೆಯಲ್ಲಿ ಕ್ಲುಪ್ತಕಾಲದವರೆಗಿದ್ದು, ತನ್ನ ಮುಂದಿನ ಜೀವನದದಲ್ಲಿ ಉಪಯೋಗವಾಗುವ ವಿದ್ಯಾ ಶಾಸ್ತ್ರಗಳನ್ನು ಕಲಿಯಬೇಕು. ಹೀಗೆಯೇ ಸ್ತ್ರೀಯರಿಗೂ ಬ್ರಹ್ಮಚರ್ಯವು ವಿಧಿಸಲ್ಪಟ್ಟಿತ್ತು. *ಈ ಬಾಲಕರು ತಮ್ಮತಮ್ಮ ಪಂಗಡ (classes, ಜಾತಿ) ಗಳಿಗೆ ತಕ್ಕ ವಿದ್ಯಾಶಿಕ್ಷಣವನ್ನು ಹೊಂದಿ ಜೀವನದ ಕಷ್ಟಸಮಯಗಳಲ್ಲಿ ತಮ್ಮತಮ್ಮ ಜಾತಿಕರ್ಮಗಳನ್ನು ಕೈಗೊಳ್ಳಲು ಅನುಕೂಲ ಪಡೆದಿದ್ದರು. ಮತ್ತು ಭಿನ್ನಾಚಾರಯುಕ್ತರಾದ ಭಿನ್ನ ವಂಶೋದ್ಭವರಾದ ಸ್ತ್ರೀಯರನ್ನು ವಿವಾಹ ರೀತಿಯಲ್ಲಿ ಪಾಣಿಗ್ರಹಣ ಮಾಡಿದಾಗ ಈ ವೇದಾಧ್ಯಯನಕ್ಕೆ ಹೆಚ್ಚು ನಿಯಮಗಳು† ಗೊತ್ತುಮಾಡಲ್ಪಟ್ಟವು.

---

* ಪುರಾ ಕಲ್ಪೇಷು ನಾರೀಣಾಂ ಮುಂಜಿಬಂಧನಂ ಇಷ್ಯತೇ ।
ಅಧ್ಯಾಪನಂಚ ವೇದಾನಾಂ ಸಾವಿತ್ರೀವಚನಂ ತಥಾ ॥

† ವಿಧಿನಿಷೇಧ, restricted

**೩೫. ಗಾರ್ಹಸ್ಥ್ಯವು ಜನರ ಪೂರ್ಣತೆಗಾಗಿ ಬೇಕಾದ ಧರ್ಮವು! ಮತ್ತಿದರ ಸಾಂಘಿಕ ರೂಪವು ಶ್ರಾದ್ಧಕರ್ಮದಲ್ಲಿ ಕಾಣುತ್ತದೆ.**

ದ್ವಿತೀಯಾಶ್ರಮವು ಸಾಂಸಾರಿಕ ಜೀವನ ಅಥವಾ ಗಾರ್ಹಸ್ಥ್ಯವು. ಸಾಧಾರಣವಾಗಿ ಯಾವ ಮನುಷ್ಯನೂ ತನ್ನಿಂದ ತಾನೇ ಕೂಡಿದವನಾಗಿ ಸ್ವಯಂತುಷ್ಟನಾಗಿಲ್ಲ. * ನಿಮ್ಮ ದೊಡ್ಡ ಜ್ಞಾನಿಯಾದ ಅರಿಸ್ಟಾಟಲರ ದೇವರು ತನ್ನ ಏಕಾಂಗಿಯಾದ ಜೀವನವನ್ನು ತಾನೊಬ್ಬನೇ ಸಂತೋಷ ದಿಂದ ಅನುಭವಿಸಬಹುದು, ಆದರೆ ಲೋಕದ ಸ್ತ್ರೀಪುರುಷರು ಹಾಗೆ ಮಾಡಲಾರರು. ಇವರೆಲ್ಲರೂ ಸಾಧಾರಣವಾಗಿ ಗಾರ್ಹಸ್ಥ್ಯ ಮಾರ್ಗ ವನ್ನು ಪ್ರವೇಶಿಸುವಂತೆ ಪ್ರೋತ್ಸಾಹಪಡೆಯುತ್ತಾರೆ. †

---

* Self-sufficiency

† ಪರಾಶರ ಸಂಹಿತೆ (ಮುಂಬಯಿ ಸಂಸ್ಕೃತ ಗ್ರಂಥಮಾಲಾ ೨ನೇ ಭಾಗ. ಪು. ೮೩.)ಯ ಭಾಷ್ಯದಲ್ಲಿ ಸಾಯಣಾಚಾರ್ಯರು ಉಲ್ಲೇಖಿ ಸುವಂತೆ ಹಾರೀತ ಸ್ಮೃತಿಯು (xx, ೨೨) ಕನ್ಯೆಯರನ್ನು ಎರಡು ಪಂಗಡವಾಗಿ ವಿಭಾಗಮಾಡಿದೆ: ಅಂದರೆ, ಕೆಲವರು "ಬ್ರಹ್ಮವಾದಿ" ಗಳು ಅಥವಾ ಬ್ರಹ್ಮಜ್ಞಾನದಲ್ಲಿ ನಿಷ್ಟೆ (ಕಾಂಕ್ಷೆ) ಯುಳ್ಳವರು, ಮತ್ತೆ ಕೆಲವರು 'ಸದ್ಯೋವಧು'ಗಳು ಅಥವಾ ವಿವಾಹ ಹೊಂದುವರು. ಇದ ರಿಂದಲೇ ನಮ್ಮ ಪುರಾತನ ಸಂಸ್ಕೃತ ಗ್ರಂಥಗಳಲ್ಲಿ ಕಂಡು ಬರುವ ಕೆಲವು ಮುಖ್ಯ ಸ್ತ್ರೀಯರು, ಬೃಹ. ಉಪ.ನ ಗಾರ್ಗಿ, ಮಹಾಭಾರತ ದ ಸುಲಭಾ, ಮತ್ತು ರಾಮಾಯಣದ ಶಬರಿಯರಂತೆ ಆಜನ್ಮ (= ನಿತ್ಯ) ಕನ್ಯೆಯರಾಗಿದ್ದರು. ಆದರೆ ಹಿಂದೂ ಧರ್ಮಶಾಸ್ತ್ರವು ಇಂಥಾ ವಿಶೇಷ ವಿಷಯಗಳನ್ನಲ್ಲದೆ ಸಾಮಾನ್ಯವಿಷಯಗಳನ್ನೂ ಮತ್ತವುಗಳಿಗೆ ಬೇಕಾದ ವಿಧಿನಿಯಮ (functional rules) ಗಳನ್ನು ಮಾತ್ರ ಹೇಳುತ್ತದೆ. ಏಕೆಂದರೆ, ಇದು ಸಾಧಾರಣ ಜನರಿಗಾಗಿ ಧರ್ಮಗಳನ್ನು ನಿರ್ಣಯ ಮಾಡುತ್ತದೆಯೇ ಹೊರತು ಅಸಾಧಾರಣ ಜನರಿಗಲ್ಲ.

ನಿಮ್ಮ ಪ್ರಸಿದ್ಧ ಮಾನಸಿಕ ವೈದ್ಯರಾದ ಫ್ರಾಯ್ಡರು* ಈಗ ಯೂರೋಪಿನಲ್ಲಿ ಸರ್ವಜನರಲ್ಲಿಯೂ ಹರಡುತ್ತಿರುವ ಅಭಿಪ್ರಾಯವನ್ನು ಅಂದರೆ ಫಲಪರಿಣಾಮದೃಷ್ಟಿಯಿಂದ ಜನಗ ಮುಂದೆಯೂ ಮತ್ತು ಧೈರ್ಯವಾಗಿಯೂ ಸಾಧಿಸುವ ಆಶೆಗಳಿಗಿಂತ ಹೆಚ್ಚಾಗಿ ನಿಗ್ರಹಿಸಿದ್ದ ಆಶೆಗಳೇ ಹಾನಿಕರಗಳೆಂಬ ತತ್ತ್ವವನ್ನು ನಮ್ಮ ಭಾರತೀಯರು ನೂರಾರು ವರ್ಷಗಳಿಂದ ತಿಳಿದಿದ್ದಾರೆ. ಇದರಿಂದ ಇವರು ಜನರಿಗೆ ತಮ್ಮ ಸ್ವಾಭಾವಿಕವಾದ ಆಶೆಗಳಿಗೆ ಸಾಧಾರಣ ಅವಕಾಶವು† ಅಂದರೆ ಗಾರ್ಹಸ್ಥ್ಯವು ದೊರತ ಹೊರತು ಇವರಿಗೆ ಸನ್ಯಾಸಕ್ಕೆ ಅಧಿಕಾರವಿಲ್ಲವೆಂದು ಸನ್ಯಾಸದಲ್ಲಿರುವ ತಪ್ಪು ಆಶೆಯನ್ನು ಬಹಳವಾಗಿ ಹೀಯಾಳಿಸುತ್ತಿದ್ದರು. ಮದುವೆಯಿಂದ ಹಿಂಜರಿದವನು ಯುದ್ಧದಿಂದ ಹಿಂಜರಿದವನಂತೆಯೇ ದೂಷಣಾರ್ಹನಾಗುತ್ತಿದ್ದನು. ಏಕೆಂದರೆ ಜೀವನಕ್ರಮದಲ್ಲಿ ಸೋತವರೊಬ್ಬರೇ ಸವೃತ್ತಿಗೆ ದೊರೆತ ಅವಕಾಶವನ್ನು ಬಿಟ್ಟು ತಪ್ಪಿಸಿಕೊಳ್ಳುತ್ತಾರೆ. ಇದು ಬಿಟ್ಟು ಭಾರತೀಯರು ವಿವಾಹವು ಪೂಜ್ಯಸಂಸ್ಕಾರವೆಂದು ತಿಳಿಯುತ್ತಾರೆ. ಇಷ್ಟೇ ಅಲ್ಲ. ಮತ್ತೆ ನಮ್ಮ ದೇವತೆಗಳೆಲ್ಲ ಸಾಧಾರಣವಾಗಿ ವಿವಾಹಿತರಾಗಿಯೇ ಇದಾರೆ. ಭಾರತೀಯರು ನಿರ್ಗುಣಬ್ರಹ್ಮನ ಧ್ಯಾನಸಮಾಧಿ‡ ಯಿಂದ ಕೆಳಗಿಳಿದು ರೂಪದೇವತೆಯೊಬ್ಬನನ್ನು ಪೂಜಿಸಲುಪಕ್ರಮಿಸಿದಾಗ ಈ ದೇವತೆಗಳು ಯಾವಾಗಲೂ ಪತ್ನಿಯುಕ್ತರಾಗಿಯೇ ಇರುವರು. ಮತ್ತೆ ಈ ರೀತಿಯಲ್ಲಿ ಕೇವಲ ಬ್ರಹ್ಮಚಾರಿಯನ್ನಾಗಲಿ ಕನ್ಯೆಯನ್ನಾಗಲಿ ಇವರು ಪೂಜಿಸುವುದಿಲ್ಲ. ಇದರಿಂದಲೆ ಶಿವನು ಅರ್ಧನಾರೀಶ್ವರನಾಗಿದ್ದಾನೆ, ಮತ್ತು ಅವನ ಈ ರೂಪು§ ಸಹಾಯಕ ರೀತಿಯಲ್ಲಿ ಅನ್ಯೋನ್ಯಾಶ್ರಯ†† ವಿಟ್ಟುಕೊಂಡು, ಬೇರೆಬೇರೆ ಇದ್ದಾಗ ಅಪೂರ್ಣವಾಗಿದ್ದುಕೊಂಡು, ಎರಡೂಕೂಡಿ ಪೂರ್ಣತ್ವವುಳ್ಳ

---

* ಭಾಷ್ಯವನ್ನು ನೋಡಿ † Normal expression

§ Adoration, ಉಪಾಸನೆ, ಪೂಜೆ ‡ ಮೂರ್ತಿ, Images

†† Interdependent

ಪರಾತ್ಪರ ವಸ್ತುವಿನ ಸ್ತ್ರೀಪುರುಷಕಾರ್ಯಗಳನ್ನು * ಸೂಚಿಸುತ್ತದೆ. ಏಕೆಂದರೆ ಕಾಮಜೀವನದಲ್ಲಿ† ಅಪವಿತ್ರವಾದುದಾಗಲಿ, ದುಷ್ಟವಾದುದಾಗಲಿ ಯಾವ ವಿಷಯವೂ ಇಲ್ಲ. ಮತ್ತು ವಿವಾಹ ಸಂಸ್ಕಾರ (institution) ದಿಂದ ಧಾರ್ಮಿಕ ಮತ್ತು ಬುದ್ಧಿ ವಿಷಯಗಳಲ್ಲಿ ದೊರೆಯುವ ಹೆಚ್ಚು ಸ್ನೇಹಕ್ಕೆ ಈ ಕಾಮಜೀವನವು ಆಧಾರವಾಗುತ್ತದೆ. ಆದರೆ ವಿವಾಹವು ಕೇವಲ ಮನುಷ್ಯನ ದುಸ್ಸ್ವಭಾವಕ್ಕೆ ಕೊಟ್ಟ ಅವಕಾಶವಲ್ಲದೆ ಜನರ ಆಧ್ಯಾತ್ಮಿಕ ಬೆಳವಣಿಗೆಗೆ ದೊರೆತ ಒಂದು ದೊಡ್ಡ ಅನುಕೂಲವೇ ಆಗಿದೆ. ಇದರಿಂದ ವಿವಾಹವು ಕೇವಲ ವ್ಯಕ್ತಿಕ‡ ಜೀವಣಿಗೆಗಾಗಿ ವಿಧಿಸಲ್ಪಡದೆ ವಂಶದ§ ಮುಖ್ಯ ಧ್ಯೇಯದ ಪ್ರಚಾರಕ್ಕಾಗಿಯೂ ವಿಧಿಸಲ್ಪಟ್ಟಿದೆ. ವಿವಾಹಸಂಸ್ಕಾರಕ್ಕೆ ಈ ರೀತಿಯಾದ ಸಾಮಾಜಿಕಭಾಗವೊಂದಿದೆ. ಪ್ರತಿಯೊಂದು ಮನೆಯೂ (family) ತನ್ನಲ್ಲಿ ಈಗಿರುವ ಜನರಿಗೂ ಮೃತರಾದ ಜನರಿಗೂ ಇರುವ ನಿತ್ಯಸಂಬಂಧವಾಗಿದೆ.†† ಹೀಗೆಯೇ ಶ್ರಾದ್ಧಕರ್ಮವು ಕುಲದ ಮಹದೇಕತ್ವದ ‡‡ ಅಭಿಪ್ರಾಯವನ್ನು ತನ್ನ ಜನರಲ್ಲಿ ರೂಢಿಮಾಡುವ§§ ಉದ್ದೇಶಹೊಂದಿದೆ. ಇದಕ್ಕಾಗಿಯೇ ಈ ಕರ್ಮದ ಕೊನೆಯಲ್ಲಿ ಕರ್ತೃವು "ಓ ಪಿತೃಗಳೇ, ನನಗೆ ವೀರನಾದ ಪುತ್ರನು ಉಂಟಾಗುವಂತೆ ಅನುಗ್ರಹಿಸಿ" ಎಂದು ಪ್ರಾರ್ಥಿಸುತ್ತಾನೆ.**

## ೩೬. ವಿವಾಹವು ಜನರ ಸಾಧಾರಣ ಪ್ರೀತಿಯನ್ನು ತಿದ್ದಿ ಉತ್ತಮಪಡಿಸುತ್ತದೆ

ಹೀಗೆ ಹಿಂದೂ ಆದರ್ಶವು ವಿವಾಹ ಸಂಸ್ಕಾರದಲ್ಲಿ ವ್ಯಕ್ತಿಕ

---

* Functions † Sex-life ‡ Personality

§ ಕುಲ, Family †† Partnership ‡‡ Solidarity

§§ Impress

** "ವೀರಂ ಮೇ ದತ್ತಪಿತರಃ ।" ಹೀಗೆಯೇ "ನಮಗೆ ಶೂರರಾದ ಮಕ್ಕಳುಂಟಾಗಲೆಂ"ಬ ವೈದಿಕ ಪ್ರಾರ್ಥನೆಯನ್ನು ನೋಡಿ, "ಸುವೀರಾಸೋ ಭವೇಮ॥"

ಮತ್ತು ಸಾಮಾಜಿಕ ವಿಷಯಗಳನ್ನು ಮುಖ್ಯವಾಗಿ ಮಾಡಿವೆ. ಪುರುಷನು ಕ್ರೂರಯಜಮಾನನಲ್ಲ, ಮತ್ತು ಸ್ತ್ರೀಯು ದಾಸಿಯಲ್ಲ, ಪರಂತು ಇವರಿಬ್ಬರೂ ತಮ್ಮ ತಮ್ಮ ಅಭಿಲಾಷೆಗಳನ್ನು * ದೊಡ್ಡವರಿಗೆಂದು ಬಿಟ್ಟು ಕೊಡುವ ಉತ್ತಮ ಆದರ್ಶದ ನಿತ್ಯ ಸೇವಕರಾಗಿರುವರು. ಇಂದ್ರಿಯ ಕಾಮವು ತನ್ನನ್ನು ತಾನೇ ಮರೆಯುವ ಭಕ್ತಿಯ ಉತ್ತಮ ರೂಪದಲ್ಲಿ ಶ್ರೇಷ್ಠ ಪರಿಣಾಮವನ್ನು ಹೊಂದುತ್ತದೆ†. ವಿವಾಹವೆಂದರೆ ಹಿಂದುಗಳಿಗೆ ಇದು ಇನ್ನೂ ಚೆನ್ನಾಗಿ ತಿಳಿಯಬೇಕಾದ ವಿಷಯ ‡ ವಾಗಿದೆಯೇ ಹೊರತು ಇಷ್ಟರಲ್ಲೇ ಪೂರ್ಣವಾಗಿ ತಿಳಿದ ವಸ್ತುವಾಗಿಲ್ಲ.§ ಏಕೆಂದರೆ ಕಲ್ಪನಾಕಥೆಗಳಲ್ಲಿ ಹೊರತು ಪರಸ್ಪರವಾಗಿ ಪ್ರತಿಯೊಂದು ವಿಷಯದಲ್ಲಿಯೂ, ಅಂದರೆ ಇಚ್ಛಾ (taste) ಗುಣ (temper) ಗಳಲ್ಲಿಯೂ ಜೀವಕಾರ್ಯಾಭಿರುಚಿ (interests) ಗಳಲ್ಲಿಯೂ ಚೆನ್ನಾಗಿ ಒಪ್ಪಿಕೊಂಡಿರುವ (ಅನುಕೂಲವಾದ) ದಾಂಪತ್ಯವನ್ನು ಎಲ್ಲಿಯೂ ಹೆಚ್ಚಾಗಿ ಕಾಣೆವು. ಹೀಗೆ ಒಟ್ಟುಗೂಡಿಸಲು ಸಾಧ್ಯವಲ್ಲದ ವ್ಯಕ್ತಿವಿಶೇಷಗಳು †† ಎಷ್ಟೋ ಇರುತ್ತವೆ, ಮತ್ತೀ ಭೇದಗಳನ್ನು ಸುಖಕರವಾದ‡‡ ಜೀವನಕ್ಕೆ ಅನುಕೂಲವುಂಟಾಗುವಂತೆ ಮಾಡುವುದೇ§§ ವಿವಾಹಸಂಸ್ಕಾರದ ಮುಖ್ಯ ಕರ್ತವ್ಯವಾಗಿದೆ. ಪ್ರವೃತ್ತಿ**ರಾಗ (passions)ಗಳು ಶ್ರೇಷ್ಠವಾದ*† ಪೂರ್ಣತೆಯನ್ನು ರಚಿಸುವುದಕ್ಕೆ ಬೇಕಾದ ಇನ್ನೂ ಕೆಲಸಕ್ಕೆ ಎತ್ತದ ಹೊಸ *‡ ಸಾಮಾನುಗಳಾಗಿವೆ. ನಮ್ಮ ಸಹಧರ್ಮಿಣಿ (mate) ಯರನ್ನು ಪಡೆಯುವಲ್ಲಿ ಸ್ವಲ್ಪಮಟ್ಟಿಗೆ ಆರಿಸಿ ತೆಗೆದುಕೊಳ್ಳಲು ಅವಕಾಶವಿದ್ದರೂ ಸಾಧಾರಣವಾಗಿ ಎಷ್ಟೋ ಉತ್ತಮವಾದ ವಿವಾಹದಲ್ಲಿಯೂ ಕೂಡ ಬಹಳಮಟ್ಟಿಗೆ ಆಪಾಯ*§ ವಿದೆ. ನಮ್ಮ ಜೀವನ ಸರ್ವಸ್ವ

---

* Inclination † Subordinated

‡ ಕಠಿನ ಪ್ರಶ್ನೆ, Problem; § Datum

†† Peculiarities ‡‡ Harmonious

§§ Promote ** Instincts, ಆಶೆಗಳು *† Ideal

*‡ Raw *§ Chance ದೈವಯೋಗ, ಯದೃಚ್ಛೆ

ಮಾನ ಆ ಗುಪ್ತಬಾಂಡೆಯನ್ನು ಎಷ್ಟು ಕೆತ್ತಿದರೂ ವಿಧಿ ಅಥವಾ ಅಪಾಯ ವೆನ್ನುವ ಇದನ್ನು ಯಾವಹೆಸರಿನಿಂದ ಬೇಕಾದರೂ ಕರೆಯಿರಿ— ಇಂಥಾ ಕಪ್ಪುಗೆರೆಯು ಪುನಃಪುನಃ ಈ ಬಾಂಡೆಯಲ್ಲಿ ಕಾಣುತ್ತಲೇ ಇರುವುದು. ಇದರಿಂದ ನಿಜವಾಗಿಯೂ ಉತ್ತಮ ಫಲಕಾರಿಯಾದ ವಿವಾಹವು ಯಾವುದೆಂದರೆ ಹೀಗೆ ಹಠಾತ್ತಾಗಿ ದೊರೆತ ಸಹಚಾರಿಯನ್ನು ನಮ್ಮ ಮಿತ್ರತ್ವದಿಂದಿಡುವುದೇ ಆಗಿದೆ ವಿವಾಹವೆಂದರೆ ಕರ್ಮರಂಗದಲ್ಲಿ ನಡೆಯುವ ಕೊನೆಯ ಕಾರ್ಯವಲ್ಲ,* ಮತ್ತೆ ನಮ್ಮ ಸ್ವಂತ ಆಶಾ (Interests) ಭಿಲಾಷೆ (Inclinations) ಗಳನ್ನು ತಗ್ಗಿಸಿ † ಉತ್ತಮ ಆದರ್ಶವನ್ನು ಸಾಧಿಸಲು ನಾವು ಪ್ರಯತ್ನಪಟ್ಟು ನಡೆವ ಕಷ್ಟಜೀವನದ ಪ್ರಾರಂಭವೇ ಆಗಿದೆ. ಸರ್ವಸಾಮಾನ್ಯವಾದ ಆದರ್ಶದ ಸೇವೆಯು ಎಷ್ಟು ಹೆಚ್ಚು ಭೇದದಿಂದ ಕೂಡಿರುವ ಜನರನ್ನಾದರೂ ನಿಜವಾದ ಐಕ್ಯದಲ್ಲಿ ಒಟ್ಟುಗೂಡಿಸ ಬಲ್ಲದು. ಏಕೆಂದರೆ ಪ್ರೀತಿಯು ತನಗೆ ಬೇಕಾದ ಆತ್ಮಯಜ್ಞ, ಸ್ವಾರ್ಥತ್ಯಾಗ ‡ ಗಳನ್ನು ಕೇಳುತ್ತದೆ§. ಹೀಗೆ ನಡೆಯುತ್ತ ಸಹನಾ ನಿಗ್ರಹಗಳಿಂದ ಕೇವಲ ಮಾನವ ಗುಣಯುಕ್ತವಾಗಿದ್ದ ಪ್ರೀತಿ (love, ಅನುರಾಗ) ಯನ್ನು ಪರಮಾತ್ಮನ ಪ್ರೀತಿಯಾಗುವಂತೆ ಉತ್ತಮವಾದದನ್ನಾಗಿ ಮಾಡುತ್ತೇವೆ.

### ೩೭. ಮತ್ತು ದಂಪತಿಗಳಿಬ್ಬರ ಆಶಾಭಿಲಾಷೆಗಳನ್ನು ತಿದ್ದಿ ಚೆನ್ನಾಗಿ ಒಟ್ಟುಗೂಡಿಸುತ್ತದೆ:— ವಿವಾಹಭೇದಗಳು

ಆದರ್ಶತರವಾದ ಶ್ರೇಷ್ಠ (ideal) ವಿವಾಹದಲ್ಲಿ ದಂಪತಿಗಳಿಬ್ಬರ ನಿಜವಾದ ಆಶೆಗಳೂ ಪೂರ್ಣವಾಗಿ ಹೊಂದಿಸಲ್ಪಡುತ್ತವೆ. †† ಇದರಿಂದ ಧಾರ್ಮಿಕ ರೀತಿಯಿಂದ ಪೂರ್ಣತರವಾದ ವಿವಾಹವೆಂದರೆ ಏಕಪತಿನಿಷ್ಠತೆ‡‡ಯೇ ಆಗಿದೆ ಲೋಕದಲ್ಲಿ ಯಾವುದಕ್ಕೂ ಹೆದರದೆ ದಂಪತಿ

* End of the struggle † Subordinate
‡ Sacrifice § Demands
†† Reconciled ‡‡ Monogamous

ಗಳಿಬ್ಬರೂ ಪರಸ್ಪರವಾಗಿ ಸಹಾಯಮಾಡುತ್ತಿರುವ ಸೀತಾರಾಮರ ಅಥವಾ ಸಾವಿತ್ರೀ ಸತ್ಯವಾನರ ಸಂಬಂಧವು ನಮ್ಮ ಮತ ಗ್ರಂಥಗಳಲ್ಲಿ ಬಹುವಾಗಿ ಆದರ್ಶೀಕೃತವಾಗಿದೆ. * ಮತ್ತು ಇಂಥ ಸರ್ವ (absolute) ಪೂರ್ಣತೆಯು ದೊರೆಯದಿದ್ದಲ್ಲಿ ಅದರ ಸಮೀಪವರ್ತಿಗಳಾದ ವಸ್ತು † ಗಳಿಂದ ನಾವು ತೃಪ್ತರಾಗಬೇಕು. ಆದರೆ, ಕೀಳು ವಸ್ತುವಿನೊಡನೆ ಉತ್ತಮವಸ್ತುವನ್ನು ನಾವು ಒಂದೆಂದು ತಪ್ಪು ತಿಳಿದುಕೊಳ್ಳಬೇಕಾಗಿಲ್ಲ. ಹಿಂದೂಧರ್ಮಗ್ರಂಥಗಳಲ್ಲಿ ಭಿನ್ನರೂಪಗಳಾದ ಎಂಟು ವಿವಾಹಗಳನ್ನು ಸರಿಯೆಂದು ಒಪ್ಪಿಕೊಂಡಿದಾರೆ.‡ ಅಂದರೆ ಮನುವು ತನ್ನ ಸಮಕಾಲೀನರ ಆಚರಣೆಗಳನ್ನು ಗಣನೆಗೆ ತಾರದೆ ಇರಲಿಲ್ಲ;§ ಆದರೂ ಈ ವಿವಿಧ ವಿವಾಹಗಳನ್ನು ಒಂದು ಕ್ರಮದಲ್ಲಿ ಜೋಡಿಸಿದಾನೆ. ಸ್ವಾಭಿಷ್ಟವನ್ನು ತಗ್ಗಿಸಿರುವ†† ವಿವಾಹಗಳು ಪ್ರಥಮ ಸ್ಥಾನದಲ್ಲಿ ಬರುತ್ತಿರಲು, ಅನ್ಯೋನ್ಯಪ್ರೀತಿ (ಗಾಂಧರ್ವ) ಶಕ್ತಿ (ರಾಕ್ಷಸ), ಮಾರಾಟ ಅಥವಾ ವಿಕ್ರಯ (ಅಸುರ) ದಿಂದ ಪಡೆದ ವಿವಾಹಗಳು ಕೀಳುಸ್ಥಾನವನ್ನು ಹೊಂದಿವೆ. ಮತ್ತು ಎಲ್ಲಕ್ಕೂ ಕೊನೆಯದೆಂದರೆ ಪೈಶಾಚ ವಿವಾಹವೇ ಆಗಿದೆ. ಏಕೆಂದರೆ ಯಾವನೊಬ್ಬ ಕಾಮುಕನು ಕನ್ಯೆಯೊಬ್ಬಳನ್ನು ಅವಳಿಗೆ ಇಷ್ಟವಿಲ್ಲದಿದ್ದರೂ ಅವಳು ಮಲಗಿರುವಾಗ ಆಗಲಿ, ಮದ್ಯಪಾನದಿಂದ ಮತ್ತಾಗಿರುವಾಗ ಆಗಲಿ, ಅಥವಾ ಬುದ್ಧಿಕೆಟ್ಟಿರುವಾಗ ಆಗಲಿ ಅವಳನ್ನು ಮೋಸದಿಂದ (ಇಲ್ಲವೆ ಬಲಾತ್ಕಾರದಿಂದ) ಆಕ್ರಮಿಸಿ ಭೋಗಪಟ್ಟಲ್ಲಿ ಇದನ್ನು ಪೈಶಾಚವಿವಾಹವೆನ್ನುತ್ತಾರೆ.‡‡ ಇದು ವಿವಾಹದಲ್ಲಿ ಬಹುನೀಚವಾದದ್ದು. ಆದರೂ ಇಂಥಾ ದೋಷಕ್ಕೊಳಗಾದ ಸ್ತ್ರೀಯರಿಗೆ ಪತ್ನೀಸ್ಥಾನವನು, ಕೊಟ್ಟು, ಇವರ ಮಕ್ಕಳಿಗೆ ತಕ್ಕ ಹಕ್ಕುಬಾಧ್ಯತೆ§§ಗಳನ್ನು ಕೊಡ

---

* idealised † Approximation ‡ Recognised

§ Not shut his eyes †† Subordinated

‡‡ ಮನು III, 34 §§ Legitimacy

ಬೇಕೆಂದು ಉತ್ತಮಾ*ಭಿಪ್ರಾಯ † ದಿಂದ ಇದನ್ನು ಸಮ್ಮತವಾದ ವಿವಾಹಗಳಲ್ಲಿ ಒಂದನ್ನಾಗಿ ಒಪ್ಪಿಕೊಂಡಿದಾರೆ.

## ೩೮. ದಾಂಪತ್ಯಾನುಕೂಲಕ್ಕಾಗಿ ಒಬ್ಬಳನ್ನೇ ಅಲ್ಲದೆ ಅನೇಕ ಪತ್ನಿಯರನ್ನು ಮದುವೆ ಮಾಡಿಕೊಳ್ಳಬಹುದು

ಸಂಸಾರಸೌಕರ್ಯದ ಪ್ರಯೋಜನವನ್ನು ಮುಖ್ಯವಾಗಿ ಮಾಡಬೇಕಾಗಿ‡ ಬಂದಾಗ ಏಕಪತ್ನೀವ್ರತದ ಧ್ಯೇಯವನ್ನು ಸ್ವಲ್ಪ ಬದಲಾಯಿಸಬೇಕಾಯಿತು. ಇದರಿಂದ ಏಕಪತ್ನೀ ವ್ರತವನ್ನು ಉತ್ತಮವೆಂದು ಹೇಳುತ್ತಿದ್ದರೂ ಬಹುಪತ್ನೀವ್ರತವು ಸ್ವೀಕರಿಸಲ್ಪಡುತ್ತಿದ್ದಿತು. ಗಂಡು ಮಕ್ಕಳಿಲ್ಲದಾಗ, ಅಥವಾ ತಪ್ಪಿಂದಾಗಲಿ ಹಠಾತ್ತಾಗಾಗಲಿ ವಿವಾಹಿತರಾಗಿದ್ದರೂ ಪುರುಷನು ಪರಸ್ತ್ರೀಯನ್ನು ಕೆಡಿಸಿದಾಗ§ ನಿರ್ಗತಿ (desertion) ಯಿಂದಲೂ, ಜನರ ಧಿಕ್ಕಾರದಿಂದಲೂ ಕಾಪಾಡಿ, ಅವಮಾನ, ಅವನತಿ (Degradation)ಯ ಜೀವನದಿಂದರಕ್ಷಿಸಿ, ತಂದೆತಾಯಿಗಳ (ದುಷ್ಟ) ನಡತೆಗಾಗಿ ಶಿಕ್ಷಣಾರ್ಹರಲ್ಲದ ಅವಳ†† ಮಕ್ಕಳನ್ನು ಪೋಷಿಸುವುದು ಪುರುಷನ ಕರ್ತವ್ಯವಾಗಿದೆ; ಮತ್ತೆ ಇದಕ್ಕಾಗಿ ಬಹು ಪತ್ನೀತ್ವವನ್ನು ಸ್ವೀಕರಿಸಬೇಕಾಗಿದೆ.‡‡ ರಾಮಾಯಣದ ಕಥೆಯಲ್ಲಿ ಮುಖ್ಯವಾಗಿ ಬೋಧಿಸುವ ವಿಷಯಗಳಲ್ಲಿ ಇಂಥಾ ಬಹುಪತ್ನೀತ್ವದ ದೋಷವೂ ಒಂದಾಗಿದೆ. ಇದರಿಂದಲೇ ದಶರಥ ಮಹಾರಾಜನ ಅರಮನೆಯು ಇಂಥಾ ಬಹುಪತ್ನೀತ್ವದ ದ್ರೋಹಕಾರ್ಯಗಳ ಮುಖ್ಯ ರಂಗವಾಗಿದ್ದುದರಿಂದ ಈ ಕಥೆಯ ಮುಖ್ಯನಾಯಕರಾದ ಶ್ರೀ ರಾಮರು ಏಕಪತ್ನೀತ್ವದ ಧ್ಯೇಯಕ್ಕಾಗಿ ಕಂಕಣಬದ್ಧರಾಗಿ ನಿಂತರು.§§

---

** ಶ್ಲಾಘ್ಯ, Laudable *† Motive

‡ Insistence § Seduced †† Responsible

‡‡ Permissible §§ Stand for

**೩೯. ಸರ್ವರೂ ವಿವಾಹಿತರಾಗಬೇಕೆಂದರೆ ಹೆಚ್ಚುಮಂದಿ ಕನ್ಯೆಯರು ಅವಿವಾಹಿತರಾಗಿರುವುದಿಲ್ಲ; ಆದರೂ ಇದರಿಂದ ಇನ್ನೂ ದೋಷಗಳಿರುತ್ತವೆ**

ಹೀಗೆ ಸರ್ವಜನರಿಗೂ ವಿವಾಹವು ಕ್ಲುಪ್ತವಾದುದೆಂದು ಹೇಳುವ ಜನಸಂಘವು* ಜೀವನದಲ್ಲಿ ಯಾವ (ಪುರುಷಾರ್ಥ) ಪ್ರಯೋಜನವನ್ನೂ† ಕಾಣದ ಅವಿವಾಹಿತರಾದ ಸ್ತ್ರೀಯರ ಸಂಖ್ಯೆಯನ್ನು ಹೆಚ್ಚು ಮಾಡದಿದ್ದರೂ ಇನ್ನೂ ದೋಷಯುಕ್ತವಾಗಿಯೇ ಇದೆ; ಮತ್ತೆ ವಿಧವಾ ಪುನರ್ವಿವಾಹವನ್ನು ನಿಷೇಧಿಸುವಂತೆ ಬಲಾತ್ಕಾರವನ್ನು‡ ಪಡೆಯುತ್ತದೆ§ ಇಷ್ಟೇ ಅಲ್ಲದೆ ತನಗೆ ಗೊತ್ತಿಲ್ಲದಂತೆಯೇ ಬಾಲಿಕೆಯರ ವಿವಾಹಕಾಲವನ್ನು ದಿನೇದಿನೇ ಕಡಿಮೆಮಾಡುತ್ತದೆ.†† ಇದರಿಂದ ನಮ್ಮ ಮುಖ್ಯಸ್ಥರು ಈ ವಿಧವಾದ ನಮ್ಮ ಪೂರ್ವಾಭಿಪ್ರಾಯಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ನಮ್ಮ ಸಮಾಜದಲ್ಲಿ ಇದಕ್ಕಿಂತ ಉತ್ತಮವಾದ ಸ್ಥಿತಿಯು‡‡ ಉಂಟಾಗುವಂತೆ ಧೈರ್ಯ ವಿವೇಕಗಳಿಂದ ಕೆಲಸ ಮಾಡುವುದು ಅತ್ಯವಶ್ಯಕವಾಗಿದೆ.

**೪೦ ಪಾರಮಾರ್ಥಿಕ ವಿವಾಹವನ್ನು ಯಾರೂ ಛೇದಿಸಲಾಗುವುದಿಲ್ಲ; ಮತ್ತು ಹಾಗೆ ಮಾಡುವವರೆಲ್ಲರೂ ದುರ್ಬಲರೇ ಸರಿ**

ಅಂದರೆ ವಿವಾಹದಲ್ಲಿ ಪಾರಮಾರ್ಥಿಕ ಆದರ್ಶವು ಉಂಟೆಂದು ತಿಳಿದ§§ ಕೂಡಲೇ ನಾವು ಇಂಥಾ ವಿವಾಹ ಸಂಬಂಧವು ಅಭೇದ್ಯವಾದುದೆಂದು

---

* System, ವ್ಯವಸ್ಥೆ, ಪದ್ಧತಿ † Meaning in life ‡ ದಾಕ್ಷಿಣ್ಯ, ಹಿಂಸೆ, obliged § ಋಗ್ವೇದ X 18—8; ಅಶ್ವಲಾಯನ, IV, 2, 18; ಮತ್ತು ಅಗ್ನಿಪುರಾಣ, 153 ಗಳನ್ನು ನೋಡಿ. †† Tends to lower ‡‡ State of affairs §§ Recognition

ಇದನ್ನು ಸರ್ವದಾ ನೋಡಿಕೊಳ್ಳುತ್ತಿರಬೇಕು. ಜೀವನ ವಿಷಯದಲ್ಲಿ ಸಣ್ಣ ಭಾವದಿಂದ ನೋಡುತ್ತ * ಕ್ಷಣಿಕ ಆಶಾಸಂತೋಷಗಳನ್ನು † ನಮ್ಮ ಮಾರ್ಗದರ್ಶಿಗಳನ್ನಾಗಿ ಇಟ್ಟುಕೊಂಡಿರುವವರೆವಿಗೂ ವಿವಾಹ ಸಂಬಂಧವನ್ನು ಶಾಶ್ವತವಾದುದೆಂದು ಕಾಣುವುದಕ್ಕಾಗುವುದಿಲ್ಲ. ಮೋಹದ ಪ್ರಥಮ ದಿವಸಗಳಲ್ಲಿ ನಮ್ಮ ಒಡತಿಯರನ್ನು ‡ ಸ್ವರ್ಗದಿಂದಿಳಿದ ಅಪ್ಸರೆಯರೆಂದು ನೋಡುತ್ತಿದ್ದರೂ. ಈ ಆಶ್ಚರ್ಯವು ಕೆಲವು ದಿವಸಗಳಲ್ಲೇ ಕರಗಿ ಹೋಗಿ, ಪೂರ್ಣ ಸೌಂದರ್ಯಾನಂದಗಳು ಬೇಕೆಂದು ನಾವು ಇನ್ನೂ ಕಾತರಿಸುತ್ತಿದ್ದರೆ, ನಮಗೆ ಎಷ್ಟೋ ಸಲ ಕೋಪವುಂಟಾಗಿ ನಾವು ವ್ಯಸನದಲ್ಲಿ ಸಿಕ್ಕಿ ನೋಯುತ್ತೇವೆ. ಆದರೆ ಇಷ್ಟು ಕಷ್ಟವೆಲ್ಲ ತಪ್ಪು ಭಾವದ§ ಫಲವೇ ಆಗಿದೆ. ಏಕೆಂದರೆ ಪೂರ್ಣ ಸಂಬಂಧವನ್ನು ಉಂಟುಮಾಡಬೇಕೇ ಹೊರತು ಇದು ಕೂಡಲೇ ಕೈಗೆ ಸಿಕ್ಕುವಂಥಾದುದಲ್ಲ. ಆದರೆ ಹೀಗೆ ಸಮರಸವಿಲ್ಲದಿರುವುದೇ ಇನ್ನೂ ಹೆಚ್ಚು ಬಲುಮೆ (vigorous)ಯಿಂದ ಕೆಲಸ ಮಾಡಬೇಕೆಂದು ಆವಶ್ಯಕ ಮಾಡುತ್ತದೆ. ಇದು ಬಿಟ್ಟು ವಿವಾಹಚ್ಛೇದ (Divorce) ಮಾಡುವುದೆಂದರೆ ಅಪಜಯವನ್ನು ಒಪ್ಪಿಕೊಂಡಂತೆಯೇ ಆಗುತ್ತದೆ. ಇದರಿಂದ ತಮ್ಮ ಸಹಚಾರಿಗಳೊಡನೆ ಸರಿಯಾಗಿ ಕೂಡದಿರುವ ಜನರೆಲ್ಲರೂ ಸೋತವರೆಂದೇ ಅರ್ಥವಾಗುತ್ತದೆ.

೪೧. ಈಗಿನ ಕಾಲದ ಹೆಚ್ಚು ವಿವಾಹಚ್ಛೇದಗಳಿಗೆ ಈಗಿನಕಾಲ ಸ್ಥಿತಿಗಳೇ (ಜನರ ಆಶಾಕರ್ಮಗಳೇ) ಹೆಚ್ಚು ಕಾರಣವಾಗಿವೆ.

ಆಧುನಿಕ ಸ್ಥಿತಿಗಳೇ ವಿವಾಹಚ್ಛೇದ ಮತ್ತು ಅಗಲಿಕೆ (separation) ಗಳ ಹೆಚ್ಚು ಸಂಖ್ಯೆಗೆ ಕಾರಣವಾಗಿವೆ.** ಜೀವನವು ಬಹಳವಾಗಿ ತೀವ್ರಗತಿಯನ್ನು ಹೊಂದಿದೆ, ಮತ್ತು ನಾವು ಜನರನ್ನು ಪರ

* Small view of life † Fancy or feeling
‡ Partners § Ideal, ಆದರ್ಶ ** Responsible

ಸ್ಫುಟವಾಗಿ ತಿಳಿದುಕೊಳ್ಳಲು ಸಾಕಾದಷ್ಟು ಕಾಲವಿಲ್ಲ. ನಮ್ಮ ನಡತೆಯನ್ನು ಸರಿಯೆನ್ನಲು ವ್ಯಕ್ತಿಯ ಇಚ್ಛೆಗಾಗಿ* ಬಹಳ ಹೆಚ್ಚಾದ ಹಕ್ಕು † ಗಳನ್ನು ಮುಂದೆ ತರುತ್ತ ಶಿಕ್ಷಣೆಯನ್ನು ವಿಧಿಸಕೂಡದೆಂದು ಹೆಚ್ಚಾಗಿ ವಿರೋಧಿಸುತ್ತಿದ್ದೇವೆ. ಇದರಿಂದಲೇ ನಾವು ಆತ್ಮಪ್ರಕಾಶ‡ ಮತ್ತು ಅಭಿವೃದ್ಧಿಯನ್ನು ಸ್ವಾಭಾವಿಕ ಆಶಾ§ರಾಗಗಳ ಜೀವನದೊಡನೆ ಒಂದೆಂದು ತಪ್ಪು ತಿಳಿದುಕೊಳ್ಳುತ್ತೇವೆ. ನಾವು ನಮ್ಮನ್ನು ದೈವೀ ಶಕ್ತಿಯಿಂದೊಡಗೂಡಿದ ಜೀವಿಗಳೆಂದಲ್ಲದೆ ಆರೋಗ್ಯದಿಂದಿರುವ ಪ್ರಾಣಿಗಳೆಂದು ನೋಡಲುಪಕ್ರಮಿಸಿದ್ದೇವೆ. ಅಂದರೆ ನಮ್ಮ ಚರಿತ್ರೆಯ ಆದಿಯಿಂದಲೂ ನಮ್ಮಲ್ಲಿ ಪಾಪವನ್ನು ಹೊಂದಿದ್ದೆವು, ಆದರೆ ಈಚೀಚೆಗೆ ಅದನ್ನು ಪೂಜಿಸಲುಪಕ್ರಮಿಸಿದ್ದೇವೆ. ಸ್ತ್ರೀ ಪುರುಷರು ತಮ್ಮ ಗಂಡ ಹೆಂಡಿರಲ್ಲಿ ಬೇಸರಹೊಂದಿ ಬೇರೆಯವರೊಡನೆ ಕಲೆಯುವದು ಅಷ್ಟೇನೂ ಹೆಚ್ಚಾದ ನವೀನ ವಿಷಯವಲ್ಲ. ಆದರೆ ಇದರಲ್ಲಿ ನಿಜವಾಗಿಯೂ ನವೀನವಾಗಿರುವ ವಿಷಯವೇನೆಂದರೆ ಈ ನಡತೆಯು ಸರಿಯೆಂದು ನಾವೀಗ ನವೀನ ತತ್ತ್ವ ಶಾಸ್ತ್ರವೊಂದನ್ನು ಪ್ರಾರಂಭಿಸಿದ್ದೇವೆ. ಆಚ್ಛಾದಿತವಾದ ರಾಗ (Feeling) ಗಳು ಪ್ರವೃದ್ಧವಾದ ಜ್ಞಾನವೆಂದು ವೇಷಮಾಡುತ್ತಿವೆ. ನಿಜವಾದ ಗಂಡನನ್ನು ಬಿಟ್ಟು ಬೇರೊಬ್ಬನನ್ನು ಸೇರುವವಳನ್ನು ತಪ್ಪು ಅಭಿಪ್ರಾಯ††ಗಳನ್ನೂ ಕಪಟ ಧರ್ಮಶಾಸ್ತ್ರಗಳನ್ನೂ ಬಿಟ್ಟು ನಡೆಯುವಷ್ಟು ಧೈರ್ಯವುಳ್ಳ ನಾಯಕಿಯಾಗಿರುವಳೆಂದು ಆದರ್ಶ ಸ್ತ್ರೀಯನ್ನಾಗಿ ಎಣಿಸುತ್ತೇವೆ, ಮತ್ತು ದುರ್ವಾರ್ತೆಯಲ್ಲಾಗಲಿ ಸುವಾರ್ತೆಯಲ್ಲಾಗಲಿ ಗಂಡನನ್ನು ಬಿಡದೆ ಒಟ್ಟಿಗಿರುವ ನಾರೀಮಣಿಯನ್ನು ಲೋಕಾಚಾರಕ್ಕೆ ಕಟ್ಟುಬಿದ್ದಿರುವ ಭಯಿಷ್ಟಳೆಂದು ಜರಿಯುತ್ತೇವೆ. ಹೀಗೆ ವೈವಾಹಿಕ ಅಕ್ರಮಗಳು ‡‡ ಹೆಚ್ಚು ಭಯವನ್ನುಂಟುಮಾಡದೆ ಹೆಚ್ಚು ಪ್ರಿಯಕರಗಳಾದ ವಿಷಯಗಳಾಗಿವೆ.

---

* Will † Claims ‡ Expression

§ Instincts †† Sentiment

‡‡ ಕಾಮದ ದುಷ್ಪ್ರವರ್ತನೆಗಳು, Sexual irregularities

## ೪೭. ನಾವು ಸ್ತ್ರೀಯರಲ್ಲಿ ಉತ್ತಮ ಅಭಿಪ್ರಾಯವನ್ನೇ ಇಟ್ಟಿರುವೆವು; ಮತ್ತು ಈಗಿನಕಾಲದ ಸ್ತ್ರೀಯರು ಬಹಳವಾಗಿ ಕೆಟ್ಟಿರೆ

ಸ್ತ್ರೀಯರ ದುಷ್ಟಚಾರಿತ್ರ್ಯವನ್ನು ದೂಷಿಸುವುದರಲ್ಲಿ ನಾವೂ ಕೂಡ ಹೆಚ್ಚು ಭಾಗಿಗಳಾಗಿದ್ದರೂ ಸ್ತ್ರೀಯು ನಿಮ್ಮ ಬೈಬಲ್ಲಿನ ಆಡಮಿನಂಥಾ ಪುರುಷನನ್ನು ನಿರಂತರ ಪಾಶದಲ್ಲಿಳೆಯುವ ಪಾಪಿಯು, ನಾಶಪಾಶದಿಂದ ಳೆಯುವವಳು, ಮತ್ತು ನಿಮ್ಮ ಡೊನಾಲ್ಡ್‌ಸನ್ನರು ಹೇಳಿದಂತೆ "ಪುರುಷಾಕಾರವಾದ ಯುದ್ಧದ ನಾವೆಯ ಹತ್ತಿರ ಹೋಗಿ ಅದನ್ನು ಚೂರು ಚೂರಾಗಿ ಒಡೆದು ಹಾಕಲು ಎಡೆಬಿಡದೆ ಪ್ರಯತ್ನಿಸುತ್ತಿರುವ ಅಗ್ನಿನಾವೆ" ಯೆಂದು ಹೇಳುವಂಥಾ ಪ್ರಮಾಣ ವಾಕ್ಯಗಳನ್ನು ಹೊಂದಿದ್ದರೂ ಸ್ತ್ರೀಯರ ವಿಷಯದಲ್ಲಿ ಭಾರತೀಯರ ಅಭಿಪ್ರಾಯವು ಸಾಧಾರಣವಾಗಿ ಉತ್ತಮವಾದುದಾಗಿಯೇ ಇದೆ. ಹೇಗೆಂದರೆ ಸ್ತ್ರೀಯನ್ನು ಪುರುಷನಿಗೆ ಅವನ ಸರ್ವ ಕಾರ್ಯಗಳಲ್ಲಿಯೂ ಸಹಾಯಕಳೆಂದು, ಅಂದರೆ ಸಹಧರ್ಮಿಣಿಯೆಂದು ತಿಳಿಯುತ್ತೇವೆ.* ಮತ್ತು ಲೋಕದ ಸೇವೆಯಲ್ಲಿ ಸ್ತ್ರೀಯರಿಗೂ ಒಂದು ಪ್ರತ್ಯೇಕ ಸ್ಥಳವಿದೆಯೆಂದು ನಂಬುತ್ತೇವೆ. ಏಕೆಂದರೆ ಇವರಿಗೆ ಪ್ರತ್ಯೇಕವಾದ ಕರ್ತವ್ಯಗಳೂ ಜವಾಬ್ದಾರಿಗಳೂ † ಇದ್ದೇ ಇರುವುವು ಹೆಚ್ಚು ಜ್ಞಾನಿಯೂ, ಪ್ರಸಿದ್ಧ ತಾರ್ಕಿಕಳೂ ಆದ ನಿಮ್ಮ ಶ್ರೀಮತಿ ಬರ್ಟ್ರೆಂಡ್ ರಸಲ್ಲಳೂ ಕೂಡ ಸಿದ್ಧಿಸಿರುವುವೆಂಬ ಸಾಮಾನ್ಯ

* ಋಗ್ವೇದದ ಸಾಯಣ ಭಾಷ್ಯವು (V 61, 8,) ಹೀಗೆ ಹೇಳುತ್ತದೆ: "ಏಕವಸ್ತುವಿನ ಸಮಾರ್ಧಗಳಾದ ಗಂಡ ಹೆಂಡಿರು ಎಲ್ಲಾ ವಿಚಾರದಲ್ಲಿಯೂ ಸಮವಾಗಿದಾರೆ, ಮತ್ತೆ ಇವರಿಬ್ಬರೂ ಎಲ್ಲಾ ಲೌಕಿಕ ವೈದಿಕ ಕಾರ್ಯಗಳಲ್ಲಿಯೂ ಒಟ್ಟಿಗೆ ಸೇರಿ ಸಮವಾಗಿ (equal part) ಕೆಲಸ ಮಾಡಬೇಕು." ಆದರೆ ಈ ಧ್ಯೇಯವು ಮನು ಮತ್ತು ಯಾಜ್ಞವಲ್ಕ್ಯ ಸ್ಮೃತಿಗಳ ಕೆಲವು ಸ್ಥಳಗಳಲ್ಲಿ ತಗ್ಗಿಹೋಗಿದೆ.

† Responsibilities

ಕಾರ್ಯರಾಶಿಗೆ * ತಾನು ಮಾತ್ರ ಕೊಡಬಲ್ಲದಾದ ವಿದ್ಯಾಜ್ಞಾನಗಳನ್ನು ಪ್ರತಿಯೊಂದು ಜಾತಿ (sex), ವರ್ಣವೂ ಹೊಂದಿದೆಯಲ್ಲದೆ ಕೀಳು ರೀತಿಯಲ್ಲಿ ಅನುಸರಿಸುವುದರಿಂದ ತನ್ನಿಂದಲೂ ಸಂಘದಿಂದಲೂ (ತಾನು ಮಾಡಬಹುದಾದಷ್ಟು ಸಹಾಯವನ್ನು ಮಾಡದಿರುವುದರಿಂದ ಇಷ್ಟುಮಟ್ಟಿಗೆ) ಒಂದುವಿಧವಾದ ಕಳವನ್ನೇ ಮಾಡುತ್ತದೆ" ಎಂದು ಒಪ್ಪಿಕೊಳ್ಳುತ್ತಾಳೆ.† ಏಕೆಂದರೆ ಮಕ್ಕಳನ್ನು ಸ್ವರ್ಗದಿಂದ ಅಲ್ಲಾಡಿಸಿ ಪಡೆಯಲಾಗದೆ ಇವುಗಳು ತಮ್ಮ ತಮ್ಮ ತಾಯಂದಿರ ಶರೀರದಲ್ಲಿ ಬೆಳೆಯಬೇಕಾಗಿರುವವರೆವಿಗೂ ಸ್ತ್ರೀಯರಿಗೆ ಪ್ರತ್ಯೇಕ ಕೆಲಸವು ಇದ್ದೇ ಇರುವುದು. ಮಕ್ಕಳ ಧಾರಣೆ (bearing) ಪಾಲನಗಳಲ್ಲಿಯೇ ಅವರ ಬುದ್ಧಿಶಕ್ತಿಗಳನ್ನು ಹೆಚ್ಚಾಗಿ ಉಪಯೋಗಿಸಬೇಕಾಗಿರುವುದರಿಂದ ಸಂಸಾರಕ್ಕೆ ಸಂಬಂಧಪಟ್ಟ ಆರ್ಥಿಕಜವಾಬ್ದಾರಿಗಳನ್ನು ಅವರಿಗೆ ಕೊಟ್ಟಿಲ್ಲ. ಹೀಗೆ ಪುರುಷರು ಲೋಕಮಾರ್ಗವನ್ನನುಸರಿಸಬೇಕಾಗಿರುವಲ್ಲಿ (= ಯಜ್ಞಪ್ರಾಧಾನ್ಯ) ಸ್ತ್ರೀಯರು ಆತ್ಮನಿಗ್ರಹ ಮತ್ತು ತ್ಯಾಗಬುದ್ಧಿಯಲ್ಲಿ ಉನ್ನತಶಿಖರಗಳನ್ನು ಹತ್ತುವಷ್ಟು ಶಕ್ತರಾಗಿದ್ದಾರೆ (= ತಪಃಪ್ರಾಧಾನ್ಯ). ಸ್ತ್ರೀಯರಿಗೆಂದು ಮಾಡಿರುದ ಕಠಿಣತರವಾದ ಧರ್ಮಶಾಸ್ತ್ರವು ಅವರಿಗೊಂದು ಭೂಷಣಪ್ರಾಯವೇ ಸರಿ. ಏಕೆಂದರೆ ಇದು ಸ್ತ್ರೀಯರು ಸಹಜವಾಗಿಯೂ ಪುರುಷರಿಗಿಂತ ಉತ್ತಮರಾಗಿರುವುದೆಂದು ಒಪ್ಪಿಕೊಳ್ಳುತ್ತದೆ. ಆದರೆ ನಾನೊಂದು ಮಾತನ್ನು ಹೇಳಬಹುದಾದರೆ ಈಗಿನ ಕಾಲದ ಸ್ತ್ರೀಯರು ತಮ್ಮ ನಿಜವಾದ ಆತ್ಮಗೌರವವನ್ನು ಕಳೆದುಕೊಳ್ಳುತ್ತಿದಾರೆ. ಈಗಿನವರು ತಮ್ಮ ವ್ಯಕ್ತಿತ್ವವನ್ನೂ ವಿಶೇಷತ್ವವನ್ನೂ ಗೌರವಿಸದೆ ಪುರುಷರನ್ನು ಅನುಕರಿಸುವುದರಿಂದ ತಮಗೆ ತಿಳಿಯದಂತೆಯೇ ಪುರುಷರಿಗೆ ಹೆಚ್ಚಾದ ಒಂದು ಮರ್ಯಾದೆಯನ್ನೂ ಮತ್ತು ಹೆಚ್ಚುಹೆಚ್ಚು ಯಾಂತ್ರಿಕ ಸ್ವಭಾವವನ್ನೂ ಹೊಂದುತ್ತಿದಾರೆ. ಮತ್ತು ಇಂಥಾ ಸಾಹಸಕಾರ್ಯ

---

* Common stock of achievement.

† "ಹೈಪ್ಯಾಷಿಯಾ."

ಗಳು* ತಮ್ಮ (= ಸ್ತ್ರೀಯರ) ಆಂತರಿಕ ಪ್ರಕೃತಿಯೊಡನೆ ವೈಷಮ್ಯದಿಂತಿರುವಂತೆ ಮಾಡುತ್ತಿವೆ.

**೪೩. ವಾನಪ್ರಸ್ಥಾಶ್ರಮದಲ್ಲಿ ಅಧ್ಯಾತ್ಮಸಿದ್ಧಿಗಾಗಿ ಹೆಚ್ಚು ಧ್ಯಾನಾದಿಗಳಲ್ಲಿ ನಿರತರಾಗಿರಬೇಕು.**

ಇದೆಲ್ಲ ಮುಗಿದು ಗೃಹಕೃತ್ಯದ ಜವಾಬ್ದಾರಿಗಳನ್ನು ಬಿಟ್ಟ ಮೇಲೆ ತೃತೀಯಾಶ್ರಮವು ಪ್ರಾರಂಭಿಸುತ್ತದೆ. ಗಂಡನ ಪಾರಮಾರ್ಥಿಕ ಉದ್ದೇಶಗಳಲ್ಲಿ ತಾನೂ ಒಂದಾಗಿದ್ದರೆ ತನ್ನ ಭರ್ತೃವಿನೊಡನೆ ಅಂಥಾ ಹೆಂಡತಿಯೂ ಕೂಡ ಕಾಡಿಗೆ ಹೋಗುತ್ತಾಳೆ. ಮನುವಚನದಂತೆ ಪುರುಷನು ತಾತನಾದಮೇಲೆ, ಅಥವಾ ಅವನ ಚರ್ಮದಲ್ಲಿ ನೆರಿಯುಂಟಾದಮೇಲೆ ಇಲ್ಲವೇ ಕೂದಲು ನರೆತಮೇಲೆ ಈ ತೃತೀಯಾಶ್ರಮವನ್ನು ಕೈಗೊಳ್ಳಬೇಕು. ಜನರ ದೇಹಶಕ್ತಿಯು ಕ್ಷೀಣವಾದಾಗ ಕಾಡಿಗೆ ಹೋಗಿ, ಪಾರಮಾರ್ಥಿಕವಾದ ನಿಜಜೀವನವನ್ನು ಕೈಗೊಳ್ಳಲು ಆತ್ಮಸಿದ್ಧಿಮಾಡಿಕೊಳ್ಳಬೇಕು. ಈ ತೃತೀಯಾಶ್ರಮದ ಮುಖ್ಯೋದ್ದೇಶವೇನೆಂದರೆ ಜೀವನದ ಗೊಂದಲದಿಂದ ತಪ್ಪಿಸಿಕೊಂಡು ಕಾಡಿನ ಏಕಾಂತಸ್ಥಳಕ್ಕೆ ಹೋಗಿ ಪಾರಮಾರ್ಥಿಕವಿಷಯಗಳನ್ನು ಧ್ಯಾನಮಾರ್ಗದಿಂದ (ಯೋಚಿಸಿ) ತಿಳಿಯುವುದೇ ಆಗಿದೆ.

**೪೪. ಏಕೆಂದರೆ ಜನರು ಕೇವಲ ಸಾಂಘಿಕ ಪ್ರಾಣಿಗಳಲ್ಲ; ಮತ್ತು ಹೆಚ್ಚು ಶಕ್ತಿಗಳನ್ನೂ ಧರ್ಮಗಳನ್ನೂ ಹೊಂದಿದಾರೆ.**

ಏಕೆಂದರೆ ಮನುಷ್ಯನ ನಿಜಸ್ಥಿತಿ†ಯನ್ನು ಕೇವಲ ಸಮಾಜದ ಅವಶ್ಯಕತೆಗಳೊಡನೆ ಕೂಡಿಸಿ ತಗ್ಗಿಸುವಂತಿಲ್ಲ. ಮನುಷ್ಯನಾದರೋ ಕೇವಲ ಸಂಘಸಂಸ್ಕೃತಿಯ ಪಾರುಪತ್ಯಗಾರನೂ, ಸ್ವದೇಶರಕ್ಷಕನೂ ಇಲ್ಲವೆ

---

* Pursuits † Stature, ಯೋಗ್ಯತೆ

ಅಪರ ಐಶ್ವರ್ಯ ಸಂಪಾದಕನಾಗಿರುವುದಕ್ಕಿಂತಲೂ ಹೆಚ್ಚಾದ ಗುಣಗಳನ್ನು ಪಡೆದಿದ್ದಾನೆ. ಇವನ ಸಾಂಘಿಕ ಕಾರ್ಯಶಕ್ತಿಯು* ಇವನಿಗಿರುವ ಪಾರಮಾರ್ಥಿಕ (ಪುರುಷತ್ವ) ಶಕ್ತಿಗೆ† ತಕ್ಕಪರಿಣಾಮವಲ್ಲ. ನಮ್ಮ ಪಾರಮಾರ್ಥಿಕ ಜೀವನವಾದ ಆತ್ಮವು ತನ್ನಲ್ಲಿ ನಮ್ಮ ಅನಂತಶಕ್ತಿಯನ್ನು ಕೂಡಿಟ್ಟುಕೊಂಡಿದೆ. ಈ ವಿಷಯವನ್ನು "ಮನೆಯ ಸಂಸಾರಕ್ಕಾಗಿ ವ್ಯಕ್ತಿಯನ್ನು ಅರ್ಪಿಸಿಬಿಡು,‡ ಸಮಾಜಕ್ಕಾಗಿ ಕುಲ (family) ವನ್ನೂ, ದೇಶಕ್ಕಾಗಿ ಸಂಘವನ್ನೂ ಮತ್ತು ಆತ್ಮನಿಗಾಗಿ ಸರ್ವಲೋಕವನ್ನೂ ಅರ್ಪಿಸಿಬಿಡು" ಎಂದು ಸಂಸ್ಕೃತ ಶ್ಲೋಕವೊಂದು ಸೂಚಿಸುತ್ತದೆ. ಅಂದರೆ ಮನೆಯಾಗಲಿ, ದೇಶವಾಗಲಿ, ಜನ (nation) ವಾಗಲಿ ಲೋಕವಾಗಲಿ ಯಾವುದೂ ಮನುಷ್ಯನಲ್ಲಿರುವ ಆತ್ಮನನ್ನು ತೃಪ್ತಿಗೊಳಿಸಲಾರದು. ಇದರಿಂದ ಪ್ರತಿಯೊಬ್ಬ ಮನುಷ್ಯನೂ ತನ್ನ ಜೀವನದ ಒಂದು ಕಾಲದಲ್ಲಿ ತನ್ನ ಗೃಹಿಣೀಪುತ್ರರನ್ನೂ, ಜಾತಿಕರ್ಮಗಳನ್ನೂ ಬಿಡಬೇಕಾಗಿ ಬರುತ್ತದೆ. ಏಕೆಂದರೆ ಜೀವನಮಾರ್ಗದ ಅಂತ್ಯಭಾಗವನ್ನು ಪ್ರತಿಯೊಬ್ಬರೂ ಏಕಾಂಗಿಗಳಾಗಿಯೇ ನಡೆಯಬೇಕು.

## ೪೫. ಹೀಗೆಯೇ ಸನ್ಯಾಸಿಯು ಸರ್ವಧರ್ಮಾತೀತನಾಗಿ, ಮೋಕ್ಷವನ್ನು ಪಡೆದು, ಸಮದೃಷ್ಟಿಯಿಂದಿರುವನು

ಹೀಗೆಯೇ ಅಂತ್ಯಾಶ್ರಮಿಯಾದ ಸನ್ಯಾಸಿಯ ಉದ್ದೇಶವು ಕೇವಲ ತನ್ನನ್ನು ಬಾಹ್ಯಜೀವನದ ರಗಳೆ (= ಚಿಂತೆ) ಗಳಿಂದ ಕಾಪಾಡಿಕೊಳ್ಳುವುದಲ್ಲ, ಮತ್ತು ಧನಸನ್ಮಾನಗಳಿಂದ ಮನಸೋಲದಿರುವ ಆಧ್ಯಾತ್ಮಿಕ ಮುಕ್ತಿಸ್ಥಿತಿಯನ್ನು ಪಡೆಯುವುದೇ ಆಗಿದೆ; ಮತ್ತು ಗೆಲುವಿನಿಂದ ಉಬ್ಬದೆಯೂ, ಸೋಲಿನಿಂದ ತಗ್ಗದೆಯೂ ಇರುವುದೇ ಆಗಿದೆ. ಇವನು ಸಮಚಿತ್ತತ್ವವನ್ನು ಅಭ್ಯಾಸದಿಂದ ಸಿದ್ಧಿಸಿಕೊಂಡು "ಅಪಶಬ್ದಗಳನ್ನು ಸಹನೆಯಿಂದ ಕೇಳುತ್ತ ಯಾರನ್ನೂ ದೂಷಿಸುವುದಿಲ್ಲ; ಮತ್ತು ತನ್ನ

* Efficiency † Manhood
‡ Sacrifice, ಬಲಿಕೊಡು.

ಭೌತಿಕಶರೀರಕ್ಕಾಗಿ ಯಾರನ್ನೂ ದ್ವೇಷಿಸುವುದಿಲ್ಲ." * ಇಂಥಾ ಮುಕ್ತಾತ್ಮರು ಸರ್ವ ಆಶಾ (ambition) ವ್ಯಾಮೋಹ (attachment) ಗಳನ್ನೂ ಬಿಟ್ಟು, ತಮ್ಮ ಮನಸ್ಸಿ † ನಲ್ಲಿಯೇ ಲೋಕದ ಸ್ವಾತಂತ್ರ್ಯಕ್ಕೆ ರೂಪುಗೊಟ್ಟಿರುವ ಏಕಾಂಗಿಗಳಾದ ಮಹಾತ್ಮರುಗಳಾಗಿರುವರು. ಇವರು ಈ ಪೃಥ್ವಿಯ ಸರ್ವವೈಶಾಲ್ಯ‡ವನ್ನೂ ತಮ್ಮಲ್ಲಿಯೇ ಉಂಟಾಗುವಂತೆ ಮಾಡಿಕೊಂಡು ಸರ್ವರನ್ನೂ ಪ್ರೀತಿಯಿಂದ ಕಾಣುತ್ತ ಧರ್ಮಪಥದಲ್ಲಿ ನಡೆಯುತ್ತಾರೆ. ಆದರೆ ಸಮಾಜ ವ್ಯವಸ್ಥೆಯು (order) ಇಂಥಾ ಸನ್ಯಾಸಿಗಳು ತನಗೆ ಸ್ಥೂಲರೀತಿಯಲ್ಲಿ § ಸಹಾಯ ಮಾಡದೆ, ತನ್ನ ವಿವಿಧರೂಪಗಳಿಗೆ ತಕ್ಕ ಮನ್ನಣೆಯನ್ನು ಕೊಟ್ಟು, ಆದರಂತೆ ನಡೆಯದೆ ಇರುವುದರಿಂದ †† ಇವರನ್ನು ಪರೋಪಜೀವಿ (parasites) ಗಳೆಂದು ತಿಳಿಯುತ್ತದೆ. ಹೀಗೆಯೇ ಇವರು ಯಾವ ಕುಲ, ಮತ,‡‡ ಜಾತಿ (race) ಅಥವಾ ಜನಾಂಗಕ್ಕೂ ತಕ್ಕ ಶ್ರದ್ಧಾಭಕ್ತಿಗಳನ್ನು§§ ತೋರಿಸದೆ ಇರುವುದರಿಂದ ಸರ್ಕಾರ (State) ವೂ ಇವರನ್ನು ಅಪನಂಬಿಕೆಯಿಂದ ಕಾಣುತ್ತದೆ. ಇವರು ಯಾವ ಕೈಗಾರಿಕೆಯ ಕಾರ್ಖಾನೆಯಲ್ಲಾಗಲೀ. ಸಮಾಜಸಂಸ್ಥೆ (system) ಯಲ್ಲಾಗಲಿ, ರಾಜ (ನೈತಿಕ) ಸಭೆಯಲ್ಲಾಗಲಿ ** ಸೇರಿ ಕೆಲಸ ಮಾಡುವುದಿಲ್ಲ. ಈ ಸನ್ಯಾಸಿಗಳು ಜನರ ಜೀವನಕ್ಕೆ ಲೋಕವನ್ನು ಕಷ್ಟಕರವಾಗಿ ಮಾಡುವ ನಮ್ಮ ಯಾವ ರಾಜೋಪಾಯ (policy, ಮಾರ್ಗ) ಗಳನ್ನೂ ಸೇವಿಸುವುದಿಲ್ಲ, ಜನರನ್ನು ಕೇವಲ ಯಾಂತ್ರಿಕ ಸ್ವಭಾವಿ (mechanise) ಗಳನ್ನಾಗಿ ಮಾಡುವ ಯಾವ ಕೈಗಾರಿಕೆಗಳಿಗೂ ಪ್ರೋತ್ಸಾಹಗೊಡುವುದಿಲ್ಲ, ಮತ್ತು ಯುದ್ಧಗಳನ್ನುಂಟುಮಾಡುವ ನಮ್ಮ ಜನಾಂಗದ ಯಾವ ಅಹಂಭಾವಗಳಿಗೂ ಸಹಾಯ ಮಾಡುವುದಿಲ್ಲ. ಏಕೆಂದರೆ ಕೇವಲ ಸ್ವದೇಶಾಭಿಮಾನವು ಇಂಥಾ ಪವಿತ್ರಾತ್ಮರುಗಳಿಗೆ (fine souls) ಸಾಕಾಗುವುದಿಲ್ಲ. ಕೇವಲ ನಮ್ಮ ಭರತಖಂಡ ಅಥವಾ

* ಮನು. VI, 47 † Spirit ‡ ವಾರಣಾಸೀ ಮೇದಿನೀ
§ Materially ** Care for †† ದೇವಾಲಯ, church
‡‡ Loyalty §§ Political machine

ನಿಮ್ಮ ಇಂಗ್ಲೆಂಡ್ ದೇಶವಲ್ಲದೆ ಸರ್ವಲೋಕವೂ ಇವರ ಸೇವೆಗೆ * ಭಾಗಿಯಾಗಿದೆ. ಇದರಿಂದ ಇವರು ಸರ್ವಜನರನ್ನೂ, ಸರ್ವಸಂಘಗಳನ್ನೂ † ಒಂದೇ ವಿಧದಿಂದ ನೋಡುತ್ತಾರೆ (= ಸಮತಾ ಸರ್ವಸ್ಮಿನ್).

## ೪೬. ಆದರೂ ಸನ್ಯಾಸವೇ ಸರ್ವಸ್ವಾಮುಖ್ಯವಲ್ಲದೆ, ಸರ್ವಾಶ್ರಮಗಳೂ ಮುಖ್ಯವಾಗಿವೆ.

ಆದರೆ ಕ್ರೈಸ್ತ ಮತ್ತು ಬೌದ್ಧಮತಗಳಲ್ಲಿ ಕೆಲವು ಪಂಥದವರು ಸನ್ಯಾಸವೃತ್ತಿಗಿಂತ ‡ ಲೋಕವೃತ್ತಿಯು ಕೀಳುತರದ್ದೆಂದು ಹೇಳಿ ಸರ್ವಜನರನ್ನೂ ಒಂದೇ ಬಾರಿಗೆ§ ಆಶ್ರಮ**ದಲ್ಲಿಡುವುದಕ್ಕೆ ಇಚ್ಛಿಸುತ್ತಿದ್ದರೂ ಮತ್ತು ಹಿಂದುಗಳು ಸನ್ಯಾಸಧರ್ಮ (life) ವನ್ನು ಮಾನ್ಯ ಮಾಡುತ್ತಿದ್ದರೂ ಕೂಡ ಇವರು ಗೃಹಸ್ಥಧರ್ಮ (state) ವನ್ನು ದೂಷಿಸದೆ ಸುಮ್ಮನಿದ್ದರು. ಏಕೆಂದರೆ ಪ್ರತಿಯೊಂದು ಆಶ್ರಮಧರ್ಮವೂ ಬೇಕಾಗಿದೆಯಲ್ಲದೆ, ಈ ತನ್ನ ಅವಶ್ಯಕತೆಯು ಇರುವವರೆಗೂ ಪ್ರಯೋಜನಕಾರಿಯಾಗಿಯೇ ಇದೆ. ಹಣ್ಣು ಎಲೆಯನ್ನು ಅಲೆಗಳೆಯುವುದಿಲ್ಲ, ಮತ್ತು ಎಲೆಯು ತಾಳನ್ನೂ,†† ತಾಳು ಬೇರನ್ನೂ ಅಲೆಗಳೆಯುವುದಿಲ್ಲ. ಅಂದರೆ ನಿಯಮವೇನೆಂದರೆ ನಾವು ಒಂದಾಶ್ರಮದಿಂದ ಇನ್ನೊಂದಾಶ್ರಮಕ್ಕೆ ಸಾವಧಾನದಿಂದ ಮುಂದೆಮುಂದೆ ಹೋಗುತ್ತಿರಬೇಕು.

## ೪೭. ಹೀಗೆಯೇ ಸನ್ಯಾಸಿಗಳೂ ಕೂಡ ಲೋಕವನ್ನು ಬಿಡದೆ ಅದರ ಹಿತಕ್ಕಾಗಿ ಕೆಲಸ ಮಾಡುತ್ತಿರುವರು

ಹೀಗೆ ಮುಕ್ತಾತ್ಮರಾದ ಜನರು ಲೋಕದ ಯೋಗಕ್ಷೇಮದಲ್ಲಿ ಉದಾಸೀನದಿಂದಿರುವುದಿಲ್ಲ.‡‡ ಮಹಾತ್ಮ ಬುದ್ಧರ ವಿಚಾರದಲ್ಲಿ ಅವರು

---

* Devotion † Groups ‡ Life of the monk §At one swoop **Cloister, ಮಠ, ವಿಹಾರ ††Stalk, ದಂಟು ‡‡ ಸನ್ಯಾಸವೆಂದರೆ ನಾನು ನನ್ನದೆಂಬ ಭಾವಗಳನ್ನು ಪೂರ್ಣವಾಗಿ ಬಿಡುವುದೇ ಹೊರತು. ಕೇವಲ ಶಾಸ್ತ್ರೋಕ್ತವಾದ ಕರ್ಮಗಳನ್ನು ಮಾ

ನಿರ್ವಾಣದ ಹೊಸ್ತಿಲಿ*ನಲ್ಲಿದ್ದಾಗ ಅವರು ಆ ಮಾರ್ಗವನ್ನು ಬಿಟ್ಟು ಲೋಕದಲ್ಲಿ ದುಃಖತಾಪ (suffering) ಗಳಲ್ಲಿ ಇನ್ನೂ ಒಬ್ಬ ಪ್ರಾಣಿಯಾದರೂ ಇರುವವರೆವಿಗೂ ತಾವು ಆ ಹೊಸ್ತಿಲನ್ನು ದಾಟಿ ಮುಂದೆ ಹೋಗುವುದಿಲ್ಲವೆಂದು ಶಪಥ ಮಾಡಿದರೆಂದು ಗ್ರಂಥಗಳಲ್ಲಿ ಹೇಳಿದೆ. ಇದೇ ಅಭಿಪ್ರಾಯವನ್ನು ಭಾಗವತದ ದಿವ್ಯ (sublime) ಶ್ಲೋಕ ಒಂದರಲ್ಲಿ ಹೀಗೆ ಹೇಳಿದೆ: "ಅಷ್ಟೈಶ್ವರ್ಯದಿಂದ ಕೂಡಿದ ಬ್ರಹ್ಮಾನಂದಮಯವಾದ ಪರಮಪದವನ್ನಾಗಲಿ, ಪುನರ್ಜನ್ಮದಿಂದ ಮುಕ್ತಿಯನ್ನಾಗಲಿ ನಾನೇನು ಆಶಿಸುವುದಿಲ್ಲ. ಮತ್ತೆ ಬಳಲುತ್ತಿರುವ ಸಕಲಪ್ರಾಣಿಗಳ ದುಃಖವನ್ನು ತೆಗೆದುಕೊಂಡು, ಅವುಗಳು ಈ ತಮ್ಮ ವ್ಯಸನದಿಂದ ಪಾರಾಗುವಂತೆ ಅವರೊಡನೆ ನಾನು ಬೆರೆಯಬೇಕೆಂಬುದೇ ನನ್ನ ಸಕಲ ಪ್ರಾರ್ಥನೆಯಾಗಿದೆ." ಇದರಿಂದ ಸರ್ವ ತಪಸ್ವಿಗಳಿಗೂ ಶ್ರೇಷ್ಠನಾದ ಮಹಾದೇವನು ಲೋಕೋದ್ಧಾರಕ್ಕಾಗಿ ವಿಷವನ್ನೇ ಕುಡಿದುಬಿಟ್ಟನು. ಅಂದರೆ ಪರಮಪದದಲ್ಲಿ ಸ್ವಾತಂತ್ರ್ಯವು ತನಗಿಂತ ಕೆಳಗಿನ ಅಂತಸ್ತುಗಳಲ್ಲಿರುವ ಜನರೊಡನೆ ಸೇರಿ ಅವರಂತೆ ಕಷ್ಟಗಳನ್ನು ಸಹಿಸಿಕೊಂಡು, ಆತ್ಮಯಜ್ಞವನ್ನು ಮಾಡಿ, ಬೇಕಾದಲ್ಲಿ ಸಾಯುವುದಕ್ಕೂ ಸಿದ್ಧವಾಗಿರುವ ಧೈರ್ಯರೂಪದಲ್ಲಿ ತನ್ನ ನಿಜಸ್ವರೂಪವನ್ನು ವ್ಯಕ್ತಪಡಿಸುತ್ತದೆ.

### ೪೮. ಈ ಧರ್ಮಗಳನ್ನು ನಮ್ಮ ಶ್ರೇಷ್ಠಜನರಲ್ಲಿ ನೋಡಿ ತಿಳಿದುಕೊಳ್ಳಬೇಕೇ ಹೊರತು ಅನ್ಯಥಾ ಮಾರ್ಗವಿಲ್ಲ

ಈ ಚತುರ್ವಿಧ ಜೀವನವು ಹಿಂದೂ ಜನರಲ್ಲಿ ಇನ್ನೂ ಹೆಚ್ಚಾಗಿ ರೂಢಿಯಲ್ಲಿದೆ.† ಯಾವ ಸಮಾಜದ ಸಾಧಾರಣ ಗುಣವು ತನ್ನ ಜನರಲ್ಲಿ ಬಹುಮಂದಿಯಲ್ಲಿ ಯಾವ ಕಾಲದಲ್ಲಿಯೂ ಉತ್ತಮರೀತಿಯಲ್ಲಿ ವ್ಯಕ್ತವಾ

---

ಹದೆ ಬಿಟ್ಟುಬಿಡುವುದಲ್ಲ. "ಅಹಂಕಾರ ಮಮಕಾರ ತ್ಯಾಗ ಏವ ಸನ್ಯಾಸೋ ವಕ್ಷ್ಯತೆ ನಾಽಶೇಷಶಾಸ್ತ್ರಾರ್ಥತ್ಯಾಗಃ ॥ ಮನುಸ್ಮೃತಿ (VI, 32) ಯ ಮೇಲಣ ಮೇಧಾತಿಥಿಯ ಭಾಷ್ಯ.

* Threshold † Dominates

ಗುವುದಿಲ್ಲ. ಮತ್ತೆ ಪ್ರತಿಯೊಂದು ಜನರಲ್ಲಿಯೂ ಸ್ವತಃಸಿದ್ಧವಾದ ಮಹನೀಯರ ಸಂಗಡ ಹೊಂದಿದ್ದು, ಇದು ಇತರ ಜನರಿಗಿಂತಲೂ ಚೆನ್ನಾಗಿ ತಮ್ಮ ಜನರೆಲ್ಲರ ಚಿತ್ತವನ್ನೂ ಅವರ ಮಹದುದ್ದೇಶಗಳನ್ನೂ ಉತ್ತಮ ಮನೋವೃತ್ತಿಗಳನ್ನೂ (emotions) ಮತ್ತು ಮುಖ್ಯ ಆಶಯ†ವನ್ನೂ ತನ್ನದೊಂದು ವಿಶೇಷರೂಪದಿಂದ ಚೆನ್ನಾಗಿ ವಿಶದೀಕರಿಸುತ್ತದೆ.‡ ಮತ್ತು ಆ ಜನಸಂಘವೆಲ್ಲವೂ ಇವರನ್ನೇ ತನ್ನ ಆದರ್ಶಕರನ್ನಾಗಿ ಇಟ್ಟುಕೊಂಡು ಇವರ ಮಾತಿನಂತೆ ನಡೆಯುತ್ತದೆ. ಅಂದರೆ ಬತ್ತಿಯು ತುದಿಯಲ್ಲಿ ಉರಿಯುತ್ತಿದ್ದಾಗ ತಾನೇ ದೀಪವೆಲ್ಲಾ ಉರಿಯುತ್ತಿದೆ (ಎಂದು ಹೇಳುತ್ತೇವೆ.)

ಇತಿ ತೃತೀಯೋಪನ್ಯಾಸಃ.

---

* Natural † Tendency ‡ ನಿರೂಪಿಸು, Represents

ಸೂಚನೆ—೮೨ನೇ ಪುಟ ೭ ಪಙ್ಕ್ತಿ "ಅರ್ಥ" ಕ್ಕೆ ಮೂಲ "ಜ್ಞಾನೈವನಿವರ್ತ್ಯತ್ವಂ" ।

೮೩ನೇ ಪುಟ ೧ನೇ ಪಙ್ಕ್ತಿ "ಐನ್‌ಸ್ಟೈನ್‌ರ" ಟಿಪ್ಪಣಿ—ಭಾಷ್ಯವನ್ನು ನೋಡಿ.

# ನಾಲ್ಕನೆಯ ಉಪನ್ಯಾಸ.

# ಹಿಂದೂ ಧರ್ಮ ೨

## (ಜಾತಿ ಮತ್ತು ಸಂಘಧರ್ಮಗಳು)

## ೧. ಪ್ರೀತಿ ಸಹನೆಗಳಿಂದಲೇ ಲೋಕವು ನಿಂತಿದೆ

### ೧. ವರ್ಣಧರ್ಮವು ಸರ್ವಜಾತಿ(Race)ಮತ್ತು ಸಂಸ್ಕೃತಿಗಳನ್ನು ವಿಶ್ವಾಸ ಸಹನೆಗಳಿಂದ ಒಟ್ಟುಗೂಡಿಸುತ್ತದೆ.

ಹಿಂದೂಧರ್ಮವು ವಿವಿಧ ಜಾತಿ (Races) ಯ ಜನರನ್ನು ವಿವಿಧಸಂಸ್ಕೃತಿ*ಗಳನ್ನು ಒಟ್ಟುಗೂಡಿಸುವುದೊಳ್ಳೆಯದೆಂದು ನಂಬಿರುವ ಇದರ ಸ್ವಭಾವವಾದ ಸಾರ್ವತ್ರಿಕವಾಗಿ ಎಲ್ಲವನ್ನೂ ಏಕೀಕರಿಸುವ ಶಕ್ತಿಯನ್ನು ಜಾತಿಗಟ್ಟೆಂಬುದು ಚೆನ್ನಾಗಿ ಪ್ರದರ್ಶಿಸುತ್ತದೆ.† ಏಕೆಂದರೆ ನಂಬಲಸಾಧ್ಯವಾಗಿ ಕಂಡರೂ‡ ಜಾತಿಧರ್ಮವು (system) ಸಹನೆ ಮತ್ತು ನಂಬಿಕೆಗಳ ಫಲವೇ ಆಗಿದೆ. ಇದು ಈಗ ಕಷ್ಟಕರವೂ ಸಹನೆ ಇಲ್ಲದ ವಸ್ತುವೂ§ ಆಗಿ ಪರಿಣಮಿಸಿದ್ದು††, ಜನರಲ್ಲಿ ತಾರತಮ್ಯವನ್ನು ತೋರಿಸುತ್ತ ಸ್ವಾರ್ಥಬುದ್ಧಿ‡‡ಯನ್ನು ಹೆಚ್ಚಿಸುತ್ತಿದ್ದರೂ ಕೂಡ ಈ ದುಷ್ಟಫಲಗಳು ಈ ಧರ್ಮ (system) ದ ಮುಖ್ಯ ಉದ್ದೇಶಗಳಲ್ಲ. ನಮ್ಮ ದೇಶದಲ್ಲಿ ಮುಂದಾಳುಗಳಾಗಿ ಹೊರಟಿರುವ§§ ಜ್ಞಾನಿಗಳು ತಮಗೆ ನಿಜವಾಗಿರುವ ಮರ್ಯಾದೆ*ಗೆ ತಕ್ಕಷ್ಟು ಶಕ್ತಿಯನ್ನು ಹೊಂದಿದ್ದರೆ ನಮಗೆ ತಿಳಿಯದಷ್ಟುಮಟ್ಟಿಗೆ ಈ ಧರ್ಮವನ್ನು ಬದಲಾಯಿಸಿಬಿಡುತ್ತಿದ್ದರು. ಈ ಹೊತ್ತು ಈ ಜಾತಿಪದ್ಧತಿ†ಯ ದೋಷಗಳನ್ನು

* ನಾಗರೀಕತೆ, Culture † Illustrates, ಉದಾಹರಿಸು

‡ Parodoxical § Instrument

†† Degenerated, ಕೆಟ್ಟು ‡‡ Exclusiveness

§§ Progressive * Authority † System

ಹೇಳುವುದು ನನ್ನ ಉದ್ದೇಶವಲ್ಲ; ಮತ್ತೆ ಇದರಲ್ಲಿರುವ ಮುಖ್ಯತತ್ತ್ವಗಳನ್ನು ನಿಮಗೆ ತಿಳಿಸಬೇಕೆಂಬುದೇ ನನ್ನ ಇಷ್ಟವಾಗಿದೆ.

೨. ಈ ಜಾತಿಗಳು ವಿವಿಧ ಕಾರಣಗಳಿಂದ ಹುಟ್ಟಿವೆ

ಈಗಿನ ಕಾಲದ ಜಾತಿಧರ್ಮದ ಸ್ವಲ್ಪ ದಿಗ್ದರ್ಶನವೂ* ಕೂಡ ಇಂಥಾ ವ್ಯವಸ್ಥೆಯ† ವಿವಿಧ‡ ಮೂಲಗಳನ್ನು ಪ್ರದರ್ಶಿಸುತ್ತದೆ. ಜಾತಿಯೆಂದರೆ ಪಂಗಡ (tribal), ಜನಾಂಗ (racial), ಮತವಿಷಯಕ (sectarian), ವೃತ್ತಿ (occupational) ವಿಷಯಕವೆಂದು ಹಲವು ತೆರನಾಗಿದೆ. ಕೆಲವು ಸ್ಥಲಾಂತರಗಮನದಿಂದ ಉಂಟಾಗಿವೆ. ಯಾವುದೊಂದು ಪುರಾತನ ಜಾತಿಯ ಜನರು ದೇಶದ ಬೇರೊಂದುಕಡೆಗೆ ಬಂದು ನಿಂತರೆ, ಕೂಡಲೇ ಅಲ್ಲಿನವರ ಹೊಸದೊಂದು ಜಾತಿಯವರಾಗುತ್ತಾರೆ.

೩ ವರ್ಣವು ಇಲ್ಲಿಗೆ ಬಂದ ಅನೇಕ ಜನರಿಂದ ಉಂಟಾದ ಕಷ್ಟಗಳನ್ನು ಸೂಚಿಸುತ್ತದೆ

ವರ್ಣವೆಂಬ ಸಂಸ್ಕೃತ ಪದದಿಂದ ಚೆನ್ನಾಗಿ ವ್ಯಕ್ತವಾಗುವಂತೆ ಜಾತಿಯು ಮೊದಮೊದಲು ಮೈಬಣ್ಣವನ್ನು ಸೂಚಿಸುತ್ತಿತ್ತು. ನಾವು ಹಿಂದೂದೇಶದ ಪುರಾತನ ಚರಿತ್ರೆಯನ್ನು ನೋಡಿದರೆ ಈ ದೇಶವು ಒಂದು ಜನಾಂಗವಾದಮೇಲೆ ಇನ್ನೊಂದು ಜನಾಂಗದವರಿಂದ ಸೋಲಿಸಲ್ಪಟ್ಟಿದೆ ಎಂದು ತಿಳಿಯುತ್ತೇವೆ. ಏಕೆ, ಈ ದೇಶದ ಚರಿತ್ರೆಯ ಪ್ರಾರಂಭಕಾಲದಲ್ಲಿಯೂ ಕೂಡ ಹಿಂದೂಸ್ಥಾನವು ಬೇರೆಬೇರೆ ಬುಡಕಟ್ಟುಗಳಿಗೆ§ ಸೇರಿದ ಪ್ರಾಚೀನ ಕಪ್ಪು ಜನರು,** ಬಲಿಷ್ಠರಾದ ದ್ರಾವಿಡರು, ಹೊಂಬಣ್ಣದ ಮಾಂಗಲ್ ಮತ್ತು ಮುಂದೆ ನುಗ್ಗುತ್ತಾ ಸಾಯಿಗಳಾದ ಆರ್ಯರಿಂದಲೂ ತುಂಬಿದ್ದಿತು. ಸ್ವಲ್ಪ ಕಾಲದಲ್ಲಿಯೇ ನಮ್ಮ ಜನರು ಪರ್ಷಿ

---

* Survey † Institution ‡ Complex
§ Racial groups ** Dark aboriginal tribes

ಯಾ,ಗ್ರೀಕ್ಸ್ ಮತ್ತು ಶಕಸ್ಥಾನ (Scythians) ದವರೊಡನೆ ವಿಶೇಷ ಸಂಪರ್ಕ*ವನ್ನು ಬೆಳಸಿ, ಈ ಹೊರಗಿನಿಂದ ಬಂದ ಜನರಲ್ಲಿ ಕೆಲವರು ನಮ್ಮ ಭರತಖಂಡದಲ್ಲಿಯೇ ನೆಲೆಮಾಡಿಕೊಂಡು ನಿಂತರು. ಇದರಿಂದ ನಮ್ಮ ದೇಶದಲ್ಲಿರುವಂತೆ ವಿವಿಧ ಜನಾಂಗಗಳಲ್ಲಿರುವ ಪರಸ್ಪರ ಸಂಬಂಧವು† ಇನ್ನು ಯಾವ ದೇಶದಲ್ಲಿಯೂ (ಇಷ್ಟು) ತೊಡಕಾಗಿ ಇಲ್ಲ.

## ೪. ಪ್ರಧ್ವಂಸವು ಒಳ್ಳೆಯದಲ್ಲ, ಏಕೆಂದರೆ ಇದು ಅಶಕ್ತರನ್ನೂ, ಅನಾಗರೀಕರನ್ನೂ ನಾಶಮಾಡಿಬಿಡುತ್ತದೆ

ಹೀಗಿರುವಲ್ಲಿ ಈ ಜನತೆಯ ಹೋರಾಟವನ್ನು‡ಹೇಗೆ ನಿಲ್ಲಿಸಬೇಕೆನ್ನುವುದರಲ್ಲಿ ಯಾವಯಾವ ಮಾರ್ಗಗಳು ಪ್ರಸಿದ್ಧವಾಗಿವೆ ಎಂದು ನೋಡಿದರೆ ಪ್ರಧ್ವಂಸ (extermination), ವಿಜಯ (Subordination ವಶ್ಯತ್ವ) ಮತ್ತು ಐಕ್ಯತೆ ಅಥವಾ ಸಮರಸತೆ (harmonisation) ಎಂಬ ಪ್ರತ್ಯೇಕ ಮಾರ್ಗಗಳು ಸೃಷ್ಟಿಗೋಚರವಾಗುತ್ತವೆ. ಮೊದಲನೇ ಮಾರ್ಗವು ಲೋಕದ ಚರಿತ್ರೆಯಲ್ಲಿ ಅನೇಕವೇಳೆ ಅನುಸರಿಸಲ್ಪಟ್ಟಿದೆ. ಮತ್ತು ಮನುಷ್ಯವರ್ಗವು ದುಷ್ಟಜನರಿಂದ ಅಕಾಲಮೃತ್ಯುವನ್ನು ಪಡೆದ ಅನೇಕಜನ ಪಂಗಡಗಳ ಗೋರಿಗಳಿಂದ ಅಲ್ಲಲ್ಲಿ ಗುರುತಾಗಿದೆ. ಆದರೆ ಇಂಥಾ ಮಾನವ ಜೀವಹಿಂಸೆಗೆ ಅವಶ್ಯಕವಾದ ಕಾರಣಗಳೇನಾದರೂ ಇವೆಯೇ? ಯಾವುದಾದರೊಂದು ಜನಾಂಗದ (racial) ಸಂಸ್ಕೃತಿಯು ನಿರ್ನಾಮಮಾಡಲ್ಪಟ್ಟಾಗ§ ಲೋಕಕ್ಕೆ ಎಷ್ಟು ನಷ್ಟವಾಗುತ್ತದೆ ಎಂದು ನಮಗೆ ಏನಾದರೂ ಪೂರ್ಣಾಭಿಪ್ರಾಯವಿದೆಯೇ? ನಿಜ, ಬಾಹ್ಯದೃಷ್ಟಿಗೆ ಕಂಡಂತೆ "ರೆಡ್ ಇಂಡಿಯನ್" ಜನರು ಲೋಕದ ಅಭಿವೃದ್ಧಿಗೆ ಯಾವ ಹೆಚ್ಚು ಸಹಾಯವನ್ನೂ ಮಾಡಿಲ್ಲ. ಆದರೆ ಪರಮಾತ್ಮನಿಗೆ

* ಪರಿಚಯ, Intercourse † Racial problems, ಸಮಾಜದ ವ್ಯವಹಾರ

‡ Racial conflict § Exinguished

ಇಚ್ಛೆ ಬಂದರೆ* ಅವರಲ್ಲಿ ಇದುವರೆಗೂ ವಿಕಾಸವಾಗಿದ್ದ ಶಕ್ತಿಬೀಜ ಗಳು ಎಷ್ಟುಮಟ್ಟಿಗೆ ಫಲಿಸುತ್ತವೆ ಎಂದು ನಮಗೆ ಸ್ವಲ್ಪವಾದರೂ ಪೂರ್ಣತಿಳಿವಳಿಕೆಯಿದೆಯೇ ? ಅಂದರೆ ಇತರ ಜನಗಳಲ್ಲಿ ಇಷ್ಟರಲ್ಲೇ ಚೆನ್ನಾಗಿ ಬೆಳೆದು ಸಿದ್ಧವಾಗಿರುವುದಲ್ಲದೆ, ಅವರಲ್ಲಿ ಇನ್ನೂ ಬೀಜಪ್ರಾಯವಲ್ಲಿರುವ ಶಕ್ತಿಗಳಿಗಿಂತ ನಮ್ಮ ನಾಗರಿಕತೆ, ನಮ್ಮ ಸಂಸ್ಥೆ ಮತ್ತು ನಮ್ಮ ಆಚಾರವ್ಯವಹಾರಗಳು ಎಷ್ಟೋ ಮಟ್ಟಿಗೆ ಅನಂತಪಾಲು† ಉತ್ತಮವಾಗಿವೆ ಎಂದು ಹೇಳುವಷ್ಟು ಮಟ್ಟಿಗೆ ನಾವು ನಮ್ಮನ್ನೂ ಲೋಕವನ್ನೂ ಮತ್ತು ಪರಮಾತ್ಮನ ಉದ್ದೇಶವನ್ನು ಚೆನ್ನಾಗಿ ತಿಳಿದುಕೊಂಡಿರುವೆವೇ ? ಇದು ಬಿಟ್ಟು ಯಾವ ಜನಾಂಗ (race) ದ ಸಾಧ್ಯಶಕ್ತಿಗಳನ್ನೂ ಮುಂದಾಗಿಯೇ ಇಷ್ಟೆಂದು ನಾವು ನಿರ್ಧರಿಸುವುದಕ್ಕಾಗುವುದಿಲ್ಲ. ನಾಗರೀಕತೆಗಳನ್ನು ಒಂದು ದಿನದಲ್ಲಿ ಕಟ್ಟುವುದಕ್ಕಾಗುವುದಿಲ್ಲ, ಮತ್ತು ದೈವ ಸಂಕಲ್ಪವು ಅನುಕೂಲವಾಗಿದ್ದು ನಮ್ಮ ಅಜ್ಞಾನದಲ್ಲಿ ನಾವು ಇನ್ನೂ ಕಡಮೆಯಾದ ಹೆಮ್ಮೆಯಿಂದ ಇದ್ದಿದ್ದರೆ ಧೈರ್ಯದಿಂದ ನಾನು ಹೀಗೆ ಹೇಳಬಲ್ಲೆ. ಲೋಕವೆಲ್ಲಾ ಈ ರೆಡ್ ಇಂಡಿಯನ್ ಜನರಿಂದ ಬರುತ್ತಿದ್ದ ಉತ್ತಮ ವಿಷಯಗಳಿಂದ ಎಷ್ಟೋಮಟ್ಟಿಗೆ ಉತ್ತಮಸ್ಥಿತಿಯಲ್ಲಿ ಇರುತ್ತಿದ್ದಿತು. ಮನುಷ್ಯ ಚರಿತ್ರೆಯ ಪ್ರಾಚೀನತೆ ಮತ್ತು ಮನುಷ್ಯ ಜಾತಿ ವಿಶೇಷಗಳು‡ ಹೇಗೆ ಬೇರೆಬೇರೆಯಾದವು ಎಂದು ನೋಡಿದರೆ ನಮ್ಮ ನಾಗರಿಕತೆಯೂ ಬಹಳ ಹೊಸದಾಗಿ ಕಾಣುತ್ತದೆ. ಈಗ ಮಾನವ ವರ್ಗದ ಮುಂದಾಳುಗಳಾಗಿರುವ ಬ್ರಿಟಿಷ್ ಜನರ ಕೆಲವು ಪೂರ್ವಜರು ನಿಮ್ಮ ಪ್ರಸಿದ್ಧ ಸಾರ್ವಭೌಮರೂ ಲೇಖಕರೂ ಆಗಿದ್ದ ಜೂಲಿಯಸ್ ಸೀಸರರು ಹೇಳುವುದನ್ನು ನೋಡಿದರೆ ಏನೂ ಹೆಚ್ಚು ನಾಗರೀಕತೆಯನ್ನು ಪಡೆದಿರಲಿಲ್ಲ. ಚರ್ಮಧಾರಿಗಳಾಗಿದ್ದು ತಮ್ಮ ಧಾರ್ಮಿಕ ಪೂಜೆಗಳಲ್ಲಿ ತಮ್ಮ ತಮ್ಮ ದೇವತೆಗಳನ್ನು ತೃಪ್ತಿಪಡಿಸಲು ಜನರನ್ನು

---

* Good time † Immeasurably. ಪ್ರಮಾತೀತವಾಗಿ

‡ Human types ;—

ಸಜೀವವಾಗಿ ಸುಡುತ್ತಿದ್ದ ನಿಮ್ಮ ಬ್ರಿಟಿಷ್ ದೇಶದ ಪುರಾತನ ಕಾಡಿನ ಮನುಷ್ಯರಲ್ಲಿ ಇನ್ನೂ ವಿಕಾಸವಾಗದಿದ್ದ ಮಹದ್ಬೀಜಶಕ್ತಿಗಳನ್ನು ಯಾರು ತಾನೆ ತಿಳಿಯಲಾಗುತ್ತಿತ್ತು ? ಇಂಥಾ ನಿಮ್ಮ ಟ್ಯೂಟನ್ ಜನರ ಪೂರ್ವಜರನ್ನು ಕೀಳಿದಿದ್ದ ಯಾವ ಜನರೂ ಕೂಡ ಇವರು ಸಂಗೀತ ಮತ್ತು ತತ್ತ್ವ ಶಾಸ್ತ್ರಗಳಲ್ಲಿ ಮಾಡಿರುವ ದಿಗಂತ ವಿಖ್ಯಾತಗಳಾದ ಹೆಚ್ಚು ಸಿದ್ಧಿಗಳನ್ನು ಮಾಡುವರೆಂದು ಊಹಿಸಿ ತಿಳಿದುಕೊಳ್ಳುತ್ತಿರಲಿಲ್ಲ. ಮಾನವ ಸಾಧ್ಯಶಕ್ತಿಯು ಅಷ್ಟು ಹೆಚ್ಚಾಗಿಯೂ ಮತ್ತು ಮಾನವ ವರ್ಗದ (racial) ಮುಖ್ಯ ಭೇದಗಳು ಇಷ್ಟೇ ಎಂದು ಹೇಳಲಾಗದಷ್ಟು ನಮ್ಮ ಜ್ಞಾನವು ಕಡಿಮೆಯಾಗಿಯೂ ಇರುವುದರಿಂದ ಜನಸಂಗಡ (races) ಗಳನ್ನು ತುಳಿದು ನಾಶಮಾಡುವುದು ಜ್ಞಾನಿಗಳ ಕಾರ್ಯವು ಅಲ್ಲವೇ ಅಲ್ಲ. ಮನುಷ್ಯ ಪ್ರಕೃತಿ ಮತ್ತು ಚರಿತ್ರೆಗಳನ್ನು ಸ್ವಲ್ಪ ತಿಳಿದುಕೊಂಡಿದ್ದರೆ ಅನಾಗರೀಕರೂ, ಪುರಾತನರೂ (primitive), ಅಶಿಕ್ಷಿತರೂ (barbarous) ಮತ್ತು ಹಿಂದುಳಿದ ಎಲ್ಲಾ ಜನರನ್ನೂ ಪ್ರೀತಿಯಿಂದ ಕಂಡು ಇವರುಗಳೂ ಕೂಡ ತಮ್ಮ ತಮ್ಮ ಅಪೂರ್ಣ (= ಅಶಿಕ್ಷಿತ) ರೀತಿಯಲ್ಲಿ ಕಡಿದಾಗಿ ಚಿಕ್ಕದಾಗಿರುವ ಬೆಟ್ಟದ ದಾರಿಯ ತುದಿಯಲ್ಲಿ ವಿಶೇಷ ತೇಜೋರಾಶಿಯಿಂದ ಶೋಭಿಸುತ್ತಿರುವ ಶಾಶ್ವತ ನಗರವನ್ನು ಸೇರಲು ಪ್ರಯತ್ನಿಸುತ್ತಿರುವರೆಂದು ತಿಳಿಯುತ್ತೇವೆ. ಪ್ರತಿಯೊಂದು ಜನ ಸಂಗಡವೂ (people), ಪ್ರತಿಯೊಂದು ಸಮೂಹವೂ (tribe) ಜನರು ತಮ್ಮ ತಮ್ಮ ಅಭಿವೃದ್ಧಿ ಪಥದಲ್ಲಿ ಎಷ್ಟೇ ಹಿಂದುಳಿದಿದ್ದರೂ ಇನ್ನೂ ಒಂದೊಂದು ವಿಶೇಷ ಮಾನಸಿಕಮಾದರಿಯನ್ನು ಪ್ರದರ್ಶಿಸುತ್ತಲೇ ಇವೆ. ಮತ್ತು ಮಾನವಕೋಟಿಯ ಹಿತವು ಈ ಪ್ರತಿಯೊಂದು ಮಾದರಿಯ ಜನರೂ ಕೂಡ ತಮ್ಮ ತಮ್ಮ ವಿಕಾಸಾಭಿವೃದ್ಧಿಗಳಿಗೆ ಬೇಕಾದಷ್ಟು ಮಟ್ಟಿಗೆ ಸಹಾಯವನ್ನೂ ವಿದ್ಯಾಭ್ಯಾಸವನ್ನೂ ಹೊಂದಬೇಕೆಂದು ತೋರುತ್ತದೆ. ಏಕೆಂದರೆ ಯಾವ ಜನರೇ (race) ಆಗಲಿ ಕೇವಲ ಸ್ವಪ್ರಯೋಜನಕ್ಕಾಗಿಯೇ ಬಾಳುವುದೂ ಇಲ್ಲ, ಸಾಯುವುದೂ ಇಲ್ಲ. ಮತ್ತು ಯಾವ ಜನರು ಹಿಂದುಳಿದಿದ್ದರೂ ಕೂಡ ಇದಕ್ಕೆ ಕಾರಣವು ಅವರ ಸುತ್ತಮುತ್ತಲಿರುವ ದೇಶ, ಸಂಘ ಮತ್ತು ನಾಗರೀಕತೆ

ಗಳನ್ನು (ಬಹುಮಟ್ಟಿಗೆ) ಅನುಸರಿಸಿಯೇ ಇದೆ.* ಮತ್ತು ಪ್ರತಿಯೊಬ್ಬ ಜನರೂ ಹೊರಗಿನಿಂದ ಪ್ರಚೋದನೆ ಏನಾದರೂ ಬಂದಾಗ† ಹೆಚ್ಚುಶಕ್ತಿಯನ್ನು ವ್ಯಕ್ತಪಡಿಸುತ್ತಾರೆ.

೫. ವಶೀಕರಣ ಮಾರ್ಗವೂ ಒಳ್ಳೆಯದಲ್ಲ; ಏಕೆಂದರೆ ಇದೂ ಕೂಡ ನೀಚಸ್ವಾರ್ಥದಿಂದ ಇತರರನ್ನು ಹಿಂಸಿಸಿ ನಾಶಪಡಿಸುತ್ತದೆ

ಪೂರ್ಣನಾಶವು (extermination) ಅಸಾಧ್ಯವಾದಾಗ ಲೋಕದ ಪ್ರಬಲ ಜನರು ಇತರರನ್ನು ವಶೀಕರಣ ಮಾಡುವ ಎರಡನೇ ಮಾರ್ಗ (subordination) ವನ್ನು ಅನುಸರಿಸುತ್ತಾರೆ. ಅಂದರೆ ದಾಸ‡ರಾದವರನ್ನು ಉಳಿಸಿ, ದಂಗೆಕೋರರನ್ನು ಬಡಿದುಹಾಕೆಂಬ ನೀತಿಯಂತೆ ನಡೆಯುತ್ತಾರೆ. ಲೋಕದ ಮುಖ್ಯ ಜನರೆಂದು ಮೆರೆಯುತ್ತಿರುವ ಈಗಿನ ದೊಡ್ಡದೊಡ್ಡ ಜನಾಂಗದವರು ಇತರ ವರ್ಣದ ಜನರೊಡನೆ ಕಾಂಗೊ, ಬ್ರೆಸಿಲ್ ಮತ್ತು ಪೀಕಿಂಗಿನಲ್ಲಿ ಬಾಕ್ಸರ್ ರಾಜ್ಯವಿಪ್ಲವಕಾಲದಲ್ಲಿಯೂ ಮತ್ತು ಈಗ ಅಮೇರಿಕದಲ್ಲಿಯೂ ತಾವು ನಡೆಸುತ್ತಿರುವ ಕೆಲಸಗಳನ್ನು ಜ್ಞಾಪಕಕ್ಕೆ ತಂದುಕೊಂಡರೆ ಎಂದಿಗೂ ಶಾಂತಮನಸ್ಸನ್ನು § ಹೊಂದಲಾರರು. ಹೀಗೆಯೇ ಈಚೆಗೆ ನಿಮ್ಮ ಲಾರ್ಡ್ ಮಿಲ್ಲರವರು ಹೇಳಿದ ವಿಶ್ವಾಸನಿವೇದನವನ್ನು ** ಕೇಳಿದ್ದೇವೆ. ಅಂದರೆ ಈ ಮಹಾಶಯರಿಗೆ ಬ್ರಿಟಿಷ್ ಚಕ್ರಾಧಿಪತ್ಯವು ಕೇವಲ ಸಮಾನರಕ್ತ (like blood)††ಕ್ಕೆ ಸೇರಿದ ಬಂಧುವರ್ಗದವರ ಸೋದರತ್ವವೂ (brotherhood) ಮತ್ತು ತಮ್ಮ ಜನರಿಂದ ತುಂಬಿಲ್ಲದ ಆಶ್ರಿತದೇಶಗಳನ್ನೂ ಬ್ರಿಟಿಷ್ ಜನರೇ ಪೂರ್ಣವಾಗಿ ಕೈವಶಮಾಡಿಕೊಂಡು ದೊರೆತನ ಮಾಡುವುದೇ ಎಂದು

* ಭಾಷ್ಯವನ್ನು ನೋಡಿ † ಆಗ ತಕ್ಕಂತೆ ಬದಲಾಯಿಸಿಕೊಂಡು ತಮ್ಮನ್ನುಚೆನ್ನಾಗಿ ಕಾಪಾಡಿಕೊಳ್ಳುವುದಕ್ಕಾಗಿ ಬೇಕಾದಷ್ಟು- N.S.S.

‡ ಅಧೀನ, Slave § Clean Conscience

** Confession of faith †† ಜಾತಿ, ಸಂಗಡ, ಬಂಧುಬಳಗ

ಅರ್ಥ ಹೊಂದಿದೆ. ಆದರೆ ನಿಜವಾದ ನಾಗರೀಕತೆಯು ತಮ್ಮ ಅಭಿಷ್ಟ* ವೃದ್ಧಿ (culture)ಯನ್ನು ಹೊಂದಿರುವ ಅಥವಾ ತಮ್ಮಷ್ಟು ಶಕ್ತಿಯಿಲ್ಲದ ಜನರನ್ನು ಹೆಚ್ಚು ಅನುಕೂಲಗಳನ್ನುಳ್ಳ* ಜನರು ತುಳಿದುಹಾಕುವುದೆಂದು ಅರ್ಥಗೊಡುವುದಿಲ್ಲ. ಪರಮಾತ್ಮನು ಅಬಲರೂ ಮತ್ತು ಯೋಗ್ಯತೆ ಇಲ್ಲದ ಜನರನ್ನು ನಾಶಪಡಿಸುವುದಕ್ಕಾಗಲೀ, ದಾಸರನ್ನಾಗಿ ಮಾಡುವುದಕ್ಕಾಗಲೀ ನಮಗೆ ಯಾವ ಅಧಿಕಾರವನ್ನೂ ಕೊಡುವುದಿಲ್ಲ, ಒಂದೊಂದು ಜನಪಂಗಡವು (race) ಬೇರೆಯವರಷ್ಟು ಮಟ್ಟಿಗೆ ಬುದ್ಧಿಯಲ್ಲಾಗಲಿ, ಶಕ್ತಿಯಲ್ಲಾಗಲಿ ಸಮನಾಗದೆ ಇರಬಹುದು. ಆದರೂ ಶ್ರೇಷ್ಠವಾದ ವೇದಾಂತವು † ನಾವು ನಮ್ಮೊಡನೆ ಸಮಾನಸ್ಕಂಧರಲ್ಲದ ಜನರಿಗೂ ಕೂಡ ಸಮಾನವಾದ ಅವಕಾಶವನ್ನು ಕೊಡಬೇಕೆಂದೇ ವಿಧಿಸುತ್ತದೆ. ಇದರಿಂದ ಪ್ರತಿಯೊಂದು ಜನರ ಸ್ವಾತಂತ್ರ್ಯವನ್ನೂ ಗೌರವಿಸಿ, ಹಿಂದುಳಿದವರಿಗೆ ತಮ್ಮ ಸುತ್ತಮುತ್ತಲೂ ಇರುವ ಅವಕಾಶಗಳನ್ನು ಚೆನ್ನಾಗಿ ಉಪಯೋಗಿಸಿಕೊಂಡು ತಮ್ಮ ತಮ್ಮ ಪ್ರತ್ಯೇಕವಾದ ಸ್ವಭಾವಶಕ್ತಿಗಳನ್ನು ವೃದ್ಧಿಪಡಿಸಿಕೊಳ್ಳುವಂತೆ ದಾರಿ ತೋರಿಸಿಕೊಡಬೇಕು.

**೬. ಶೀಘ್ರ ಐಕ್ಯತೆ (= ಸಂಮಿಶ್ರತೆ) ಯು ಕ್ಷಿಪ್ರಫಲಕಾರಿಯಲ್ಲ.**

ಜನಸಂಮಿಶ್ರತೆಯನ್ನು ಸ್ವಲ್ಪಕಾಲದಲ್ಲಿಯೇ ಸಾರ್ವತ್ರಿಕವಾಗಿ ನೆರವೇರಿಸಬೇಕೆಂದರೆ ಕೇವಲ ಅಸಾಧ್ಯವೇ ಸರಿ; ಏಕೆಂದರೆ ಸಹಸ್ರಾರು ವರ್ಷಗಳ ಜನಸಂಪ್ರದಾಯ ಮತ್ತು ಪ್ರಕೃತಿರೀತಿಯಲ್ಲಿ ನಡೆಯುವ ಸ್ವಾಸ್ತಿಯು‡ ಕೇವಲ ಒಂದು ಪ್ರಯತ್ನದಿಂದ ನಾಶಮಾಡಲಾರದಷ್ಟು ಪ್ರತ್ಯೇಕ ಭಿನ್ನತೆಗಳನ್ನು ಜನರ ಗುಣಬುದ್ಧಿ ಶರೀರಗಳಲ್ಲಿ ದೃಢವಾಗಿ ನೆಲೆಯೂರುವಂತೆ ಮಾಡಿವೆ. ಮತ್ತು ಜನಪಂಗಡಗಳ ಹೋರಾಟ

* ಅಧಿಕಾರ, Standing † Idealism

‡ Natural inheritence

ವನ್ನು* ನಿಲ್ಲಿಸುವುದಕ್ಕಾಗಿ ಈ ಸಂಗಡಗಳ ವ್ಯಕ್ತಿವಿಶೇಷವನ್ನೂ ಭೇದವನ್ನೂ ಕಿತ್ತುಹಾಕಲು ಯಾವ ಅವಶ್ಯಕತೆಯೂ ಇಲ್ಲ. ಏಕೆಂದರೆ ಐಕ್ಯತೆಯೆಂದರೆ ಕೇವಲ ಏಕರೀತಿಯಿಂದ ಇರುವುದೆಂ†ದೇ ಅರ್ಥವಲ್ಲ.

### ೭. ಆದರೆ ಹಿಂದುಗಳು ಉತ್ತಮ ಸಹನಾ ಸಮರಸತೆಗಳಿಂದ ಎಲ್ಲ ಜನರನ್ನೂ ತಮ್ಮಲ್ಲಿ ಒಟ್ಟುಗೂಡಿಸಿದರು.

ಬೇರೆಬೇರೆ ಜನ ಸಂಗಡಗಳಿಂದ ಬರುವ ಹೋರಾಟವನ್ನು ನಿಲ್ಲಿಸುವಲ್ಲಿ ಹಿಂದೂಮತವು ಪ್ರಜಾಧಿಪತ್ಯವು ಸರಿ ಎಂದು ಅನುಸರಿಸಿದ ಶ್ರೇಷ್ಠ ಮಾರ್ಗವನ್ನು, ಅಂದರೆ ಪ್ರತಿಯೊಂದು ಜನಸಂಗಡದವರೂ ಇತರರ ಅಭಿಪ್ರಾಯವನ್ನು ತಡೆಗಟ್ಟದೆ ತಾವುತಾವು ಮುಂದುವರಿಯಲು ಅವಕಾಶ ಹೊಂದಬೇಕೆಂಬ ಮಾರ್ಗವನ್ನು ಅವಲಂಬಿಸಿತು. ಪ್ರತಿಯೊಂದು ಚಾರಿತ್ರಿಕ ಸಂಗಡವೂ ಕೂಡ ಪ್ರತ್ಯೇಕವಾಗಿಯೂ ವಿಶೇಷವಾಗಿಯೂ ತನ್ನದೊಂದು ಹೆಚ್ಚು ಗುಣವನ್ನೂ ಹೊಂದಿರುವುದು. ಮತ್ತು ಶ್ರೇಷ್ಠ ಧರ್ಮವು ನಾವು ಸರ್ವಸಂಗಡಗಳ ವ್ಯಕ್ತಿತ್ವವನ್ನು ಗೌರವಿಸಬೇಕೆಂದು ಕೋರುತ್ತದೆ. ಹೀಗೆ ಜಾತಿಯನ್ನು ಜನಸಂಗಡಗಳ ರೀತಿಯಿಂದ ನೋಡಿದರೆ ಮನುಷ್ಯಸಂಘಗಳ ಅನಂತಭಿನ್ನತೆಯನ್ನು ಇದು ದೃಢೀಕರಿಸುತ್ತದೆ. ವೇದಕಾಲದ ಆರ್ಯರು ಭಗವದ್ದೃಷ್ಟಿಯಲ್ಲಿ ಭರತಖಂಡದಲ್ಲೆಲ್ಲಾ ತಾವೇ ಅತ್ಯುತ್ತಮರೆಂಬ ಕಠಿಣವೂ ಸಣ್ಣದೂ ಆದ ಭಾವದಿಂದ ಪ್ರಾರಂಭಿಸಿದರೂ ಸ್ವಲ್ಪಕಾಲದಲ್ಲಿಯೇ ಉದಾರಮನಸ್ಸುಳ್ಳವರಾಗಿ ಸಕಲಲೋಕಕ್ಕೂ ಅನ್ವಯಿಸುವಷ್ಟು ವಿಶಾಲವೂ ಉತ್ತಮವೂ ಆದ ಧರ್ಮಮಾರ್ಗವನ್ನು ಅಂದರೆ ಮಾನವ ಧರ್ಮವನ್ನು ಕೈಗೊಂಡರು. ಹೀಗೆಯೇ ಈ ದೇಶದಲ್ಲಿ ವಿವಿಧ ಜನಸಂಗಡಗಳನ್ನು ಒಟ್ಟುಗೂಡಲೆತ್ನಿಸಿದ ಮಹಾಪುರುಷರು ಈಗಿನ ಹಿಂದೂಜನಾಂಗದ ನಿಜಕರ್ತೃಗಳೆಂದು ಪೂಜಿಸಲ್ಪಡುತ್ತಿದಾರೆ. ಶ್ರೀರಾಮರು ದಕ್ಷಿಣಾಪಥದಲ್ಲಿ ನಾಗರೀಕತೆಯನ್ನು ಹರಡಲೆತ್ನಿಸಿದಾಗ ಆಗಿದ್ದ ಪುರಾತನ

* Problem † Uniformity

ಜನರನ್ನು ತಮ್ಮ ಕೆಲಸದಲ್ಲಿ ಉಪಯೋಗಿಸಿಕೊಂಡರು, ಅಂದರೆ ಆರ್ಯರನ್ನೂ ಅನಾರ್ಯರಾದ ಇತರ ಜನರನ್ನೂ ಒಟ್ಟುಗೂಡಿಸಿದರು; ಮತ್ತು ಶ್ರೀ ಕೃಷ್ಣ ಬುದ್ಧರೂ ಕೂಡ ಹೀಗೆಯೇ ನಡೆಸಿದರು.

## ೮. ಇದರಿಂದ ಹಿಂದೂಗಳಲ್ಲಿಯೂ ಇವರಲ್ಲಿ ಸೇರಿದ ಇತರ ಜನರಲ್ಲಿಯೂ ಬದಲಾವಣೆಗಳುಂಟಾದವು

ಹೀಗೆ ಇಲ್ಲಿದ್ದ ಪೂರ್ವ ಜನರೂ ಇತರರೂ ಸಹ ಹಿಂದೂ ಮತಕ್ಕೆ ಸೇರಿಕೊಂಡಾಗ ಇವರು ತಮ್ಮ ತಮ್ಮ ವ್ಯಕ್ತಿತ್ವವನ್ನು ಬಿಟ್ಟುಬಿಡಲಿಲ್ಲ. ಮತ್ತೆ ಈ ತಮ್ಮ ವ್ಯಕ್ತಿತ್ವವನ್ನೂ ಮತ್ತು ತಾವು ಹೊಸದಾಗಿ ಸೇರಿಕೊಂಡ ಈ ಹಿಂದೂ ಮತವನ್ನೂ ಸ್ವಲ್ಪಮಟ್ಟಿಗೆ ಬದಲಾಯಿಸಿದರು. ಈ ಬದಲಾವಣೆಯು ಪೂರ್ವದಲ್ಲಿದ್ದ ಈ ಜನರ ಆದರ್ಶಗಳಲ್ಲಿ ಸೇರಿದಂತೆಯೇ ಹೊಸದಾಗಿ ಜೊತೆಗಟ್ಟಿದ ಸಂಗಡದ ರೂಪ (group form) ದಲ್ಲಿಯೂ ಕೂಡ ಹೆಚ್ಚಾಗಿ ಸೇರಿ ಕಾರ್ಯವಾಡಿತು. ಈ ಜನ ಸಂಗಡ (tribes) ಗಳು ಹಿಂದೂಮತದ ವಿಶಾಲತರವಾದ ಜೀವನದೊಡನೆ ಸೇರಿಸಲ್ಪಟ್ಟು ಈ ಜೀವನವು ತಮಗೆ ಕೊಟ್ಟ ಅವಕಾಶ ಮತ್ತು ಜವಾಬ್ದಾರಿಗಳನ್ನು, ಅಂದರೆ ಹಿಂದೂ ಜನರ ಜ್ಞಾನ ವಿಷಯದಲ್ಲಿಯೂ ಸಂಸ್ಕೃತಿಯಲ್ಲಿಯೂ ಭಾಗಿಗಳಾಗಲು ಅವಕಾಶವನ್ನೂ ಮತ್ತಿವರ ಜ್ಞಾನ ಭಾಂಡಾರಕ್ಕೆ ಸಹಾಯಮಾಡುವ ಜವಾಬ್ದಾರಿಯನ್ನೂ ಇವರ ಧಾರ್ಮಿಕ ಶ್ರೇಯೋಭಿವೃದ್ಧಿ ಮತ್ತು ಆಧ್ಯಾತ್ಮಿಕ ಬೆಲೆಯನ್ನೂ, ಅಂದರೆ, ಒಂದೇ ಮಾತಿನಲ್ಲಿ, ಜನಾಂಗದ ಜೀವನವನ್ನು ಸೃಷ್ಟಿ ಮಾಡುವ ಸಕಲ ವಿಷಯಗಳನ್ನೂ ಪಡೆದರು. ಇದರಿಂದ ಪ್ರತಿಯೊಂದು ಸಮೂಹ (group) ದವರೂ ಕೂಡ ತಮ್ಮ ತಮ್ಮ ಪ್ರತ್ಯೇಕ ರೀತಿಯಲ್ಲಿಯೇ ಈ ಹಿಂದೂ ಅಭಿಪ್ರಾಯಗಳನ್ನು ಗ್ರಹಿಸಿಕೊಳ್ಳುತ್ತಿದ್ದರು. ಮತ್ತು ನಾವು ಈ ವಿಧವಾದ ಪೂರ್ವಜನಗಳ ತಾಟಸ್ಥ್ಯಸ್ಥಿತಿಯನ್ನು ಅತಿಶಯವಾಗಿ ದೂಷಿಸಬೇಕಾಗಿಲ್ಲ. ಏಕೆಂದರೆ ಇವರೂಕೂಡ ಅನಾಗರೀಕತೆಯ ರಗಳೆಗಿಂತ* ಮೇಲಕ್ಕೆ ಎತ್ತ

* Welter

ಲ್ಪಟ್ಟು, ವಿನಯಭಾವದಿಂದ ಕೂಡಿದ್ದರು. ಒಂದೇ ದೇಶದಲ್ಲಿ ಬೆಳೆದು ಒಂದೇ ರೀತಿಯಲ್ಲಿ ಅಭಿಮತವಾದ ವಿಷಯಗಳಲ್ಲಿ ಒಟ್ಟುಗೂಡಿದವರಾಗಿ ಒಂದೇ ಸಮನಾದ ಮಾನಸಿಕ ಮತ್ತು ಧಾರ್ಮಿಕಸ್ಥಿತಿಗಳಲ್ಲಿ ಬೆಳೆಯುತ್ತ ಹೀಗೆ ಒಟ್ಟುಗೂಡಿದ ಆಯಾಯ ಜನರು ತಮ್ಮ ತಮ್ಮ ಸ್ಥಿತಿಯಲ್ಲಿ ಮುಂದೆ ಬಂದುದಲ್ಲದೆ ತಮ್ಮ ತಮ್ಮ ಮೂಲಗಳು ಭಿನ್ನವಾಗಿದ್ದರೂ ಕೂಡ ವಿವೇಕಸಹನೆಗಳಿಂದ ಪರಸ್ಪರವಾಗಿ ಹೊಂದುಕೊಂಡು ಹೋಗುತ್ತಿದ್ದರು. ಈ ವಿಷಯದಲ್ಲಿ ನಿಮ್ಮ ಶ್ರೀಮಾನ್ ವ್ಯಾಲೆಂಟೈನ್ ಶಿರಾಲರು ಹೀಗೆ ಹೇಳುತ್ತಾರೆ: "ಚಾರಿತ್ರಿಕ ಕಾಲಕ್ಕೆ ಹಿಂದೆಯೇ ಹಿಂದೂ ಮತದ ಮೃದುಸ್ವಭಾವಯುಕ್ತವೂ ಮತ್ತು ಸೂಕ್ಷ್ಮಗುಣವುಳ್ಳವೂ ಆದ ಶಕ್ತಿಗಳು ಬಹು ಭಿನ್ನರಾದ ಜನಪಂಗಡಗಳ ದುಃಸ್ವರದಂತೆ ಒಟ್ಟುಗೂಡದಿದ್ದ ನಂಬಿಕೆಗಳನ್ನೂ ಆಚಾರಗಳನ್ನೂ ಭರತಖಂಡದ ದೇಶೀಯ ಜನರಲ್ಲಿ ಹೆಚ್ಚು ಜನರನ್ನು ಸಂರಕ್ಷಿಸುವಷ್ಟು ವಿಶಾಲವಾಗಿಯೂ, ಆರ್ಯಹಿಂದೂ ಜನರ ಪ್ರಾಮುಖ್ಯತೆಯನ್ನು ಸಂಪಾದಿಸಿಕೊಳ್ಳುವಷ್ಟು ಗಟ್ಟಿಗುಣ* ವುಳ್ಳದ್ದಾಗಿಯೂ ಇರುವ ಹೆಚ್ಚು ವ್ಯಾಪ್ತಿಯನ್ನುಳ್ಳ ರಚನೆಯೊಂದರಲ್ಲಿ ಒಟ್ಟುಗೂಡಿಸಿದ್ದೆವು." †

## ೨. ಜನಸಂಮಿಶ್ರತೆ ಮತ್ತು ವಿವಾಹಧರ್ಮ

### ೯. ಆದರೆ ಅವಿವೇಕ ಸಂಬಂಧಗಳಿಂದಾದ ವಿವಾಹಗಳನ್ನು ಹಿಂದೂಜ್ಞಾನಿಗಳು ಸ್ವಲ್ಪವೂ ಒಪ್ಪಲಿಲ್ಲ.

ಆದರೆ ವಿವೇಕಶೂನ್ಯವಾದ ಜನಪಂಗಡಗಳ ಸಂಮಿಶ್ರತೆಗೆ ಹಿಂದೂ ಜ್ಞಾನಿಗಳು ಪ್ರಾಶಸ್ತ್ಯವನ್ನು ಕೊಡಲಿಲ್ಲ. ಹಿಂದೂಶಾಸ್ತ್ರಗಳು ಆಯಾಯಪಂಗಡದವರು ಭೋಜನವಿವಾಹ ವಿಷಯಗಳಲ್ಲಿ ಪೂರ್ವದಿಂದಲೂ ಆಚರಿಸುತ್ತಿದ್ದ ನಿಯಮಗಳನ್ನು ಒಪ್ಪಿಕೊಂಡವು. ಕೀಳುಜಾತಿಯವ

---

* Rigid † India, Old and New, ಭರತಖಂಡ, ಪುರಾತನ ಮತ್ತು ನವೀನ (= ಈಗಿನ) ಸ್ಥಿತಿ, ಪು. 42-3

ರೆಂದು ಹೇಳುವ ಪ್ರತಿಯೊಬ್ಬ ಜನರೂ ಕೂಡ ತಮಗಾಗಿ ಕಾಲಾನುಕಾಲದಲ್ಲಿ ವಿಶೇಷವಾದೊಂದು ಆಚಾರ, ವ್ಯವಹಾರ (ಧರ್ಮ, law) ನಂಬಿಕೆ, ನಿಷೇಧ (taboo) ಗಳನ್ನು ರಚಿಸಿಕೊಂಡರು. ಮತ್ತು ಇಂಥಾ ಸಂಗಡಗಳ ಪ್ರತಿಯೊಬ್ಬ ಜನರೂ ಕೂಡ ಪಿತ್ರಾರ್ಜಿತವಾದ ತಮ್ಮತಮ್ಮ ಸ್ವತ್ತುಗಳಿಗೆ ಪೂರ್ಣಹಕ್ಕುದಾರರಾಗುತ್ತಾರೆ, ಅಂದರೆ ಆಚಾರವ್ಯವಹಾರ (wont) ಗಳೇ ಸರ್ವಜನರನ್ನೂ ತಮ್ಮತಮ್ಮ ನೆರೆಹೊರೆಯ ಜನರಿಂದ ಬೇರೆಮಾಡುತ್ತವೆ. ಹೀಗೆ ಜಾತಿಯೆಂದರೆ ಕೇವಲ ಆಚಾರವೇ ಆಗಿದೆ.* ಇತರ ಜನಗಳ ಆಚಾರ ಮತ್ತು ನಂಬಿಕೆಗಳು ನಮಗೆ ಎಷ್ಟು ಅನಾಗರೀಕವಾಗಿಯೂ ತಪ್ಪಾಗಿಯೂ ಕಂಡುಬಂದರೂ (ಕೂಡ) ಇವುಗಳನ್ನನುಸರಿಸುತ್ತಿರುವ ಜನರಿಗೆ ತಮ್ಮ ಸಂಗಡದಲ್ಲಿ ಶಾಂತಿಯಿಂದಲೂ ಇತರರೊಡನೆ ಸಾಮರಸ್ಯದಿಂದಲೂ ಇರುವಂತೆ ಸಹಾಯ ಮಾಡುತ್ತವೆಯೆಂದು ನಾವು ಹೇಳದಿರಲಾಗುವುದಿಲ್ಲ. ಇದರಿಂದ ಈ ಸಂಗಡಗಳಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಜಾತಿಯಲ್ಲಿಯೇ ವಿವಾಹ ನಡೆಸುವುದು ಸಮಾಜಗೌರವಕ್ಕೆ ಸೇರಿದ ವಿಷಯವಾಗಿಯೇ ಇದೆ. ಮತ್ತು "ನೀಚ" ಕುಲಸ್ತ್ರೀಯರೂ ಕೂಡ ತಮ್ಮ ಜಾತಿಗೆ ಸೇರದ ಹೊರಗಿನವರು ಎಷ್ಟೇ 'ಉತ್ತಮ' ವರ್ಣಕ್ಕೆ ಸೇರಿದ್ದರೂ ಕೂಡ ಇವರನ್ನು ಮದುವೆಮಾಡಿಕೊಳ್ಳುವುದಕ್ಕೆ ಒಪ್ಪುವುದಿಲ್ಲ.

೧೦. ಇದು ಬಿಟ್ಟು ಸಂಮಿಶ್ರತೆಯಿಂದ ರೂಢಿಯಲ್ಲಿ ಬಂದವುಗಳನ್ನು ಒಪ್ಪಿಕೊಂಡರು; ಮತ್ತು "ಅಸ್ಪೃಶ್ಯರು" ಹೀಗೆಯೇ ಹುಟ್ಟಿದರಂತೆ

ಜಾತಿ ವಿಷಯದಲ್ಲಿ ಹಿಂದೂ ಧರ್ಮ (theory) ವು ಸ್ತ್ರೀ ಪುರುಷರು ಕಟ್ಟಿಲ್ಲದೆ ಕೂಡುವುದಕ್ಕೆ ಅವಕಾಶ ಕೊಡದಿದ್ದರೂ ಮಿಶ್ರಸಂತಾನವು ಬಹಳವಾಗಿ ಗೂಢರೀತಿಯಲ್ಲೇ† ರೂಢಿಯಲ್ಲಿ ಬಂದು ಸಂಗಡಗಳ

---

* ನ ಕುಲಂ ಕುಲಮಿತ್ಯಾಹುಃ ಆಚಾರಂ ಕುಲಮುಚ್ಯತೇ॥

† Unconsciously

ಮುಖ್ಯ ಮುಖ್ಯ ಪ್ರಭೇದಗಳು ಬದಲಾಯಿಸಲ್ಪಟ್ಟವು. ನಿಜವಾಗಿಯೂ ಮಾನವ ಶಾಸ್ತ್ರಕ್ಕೆ* ಇಂಥಿಂಥವೆಂದು ಸೇರಿದ ನಿರ್ಧೃತಪಂಗಡಗಳು ಕೇವಲ ಪೂರ್ವಿಕರಲ್ಲಿಯೂ ಮತ್ತು ಕಾಡುಜನಗಲ್ಲಿಯೂ ಸಿಗುವುವೇ ಹೊರತು ಮಾನವ ಕೋಟಿಯ ಪ್ರವೃದ್ಧ ಸ್ಥಿತಿಯಲ್ಲಿ ಕೆಲಸಮಾಡುತ್ತಿರುವ ಯಾವ ಸಂಘಗಳಲ್ಲಿಯೂ ಕಂಡುಬರುವುದಿಲ್ಲ. ಹಿಂದೂಜನ (race) ರಲ್ಲಿ ಸಾಧಾರಣವಾಗಿ ಎಲ್ಲೆಲ್ಲಿಯೂ ಹೊಸರಕ್ತವು ಮಿಶ್ರವಾಗಿ ಕಂಡುಬರುತ್ತಿದೆಯಲ್ಲದೆ, ಇವರಲ್ಲಿಯೇ ಬ್ರಾಹ್ಮಣಾದಿ ಚಂಡಾಲ ಪರ್ಯಂತ ಅಲ್ಲಲ್ಲಿಯೇ ಜನರಿಂದ ಜನರಿಗೆ ರಕ್ತಸಂಮಿಶ್ರತೆಯು ನಡೆಯುತ್ತಲೇ ಇದೆ. ಇದರಿಂದ ಹಿಡಿತವಿಲ್ಲದ ಸಂಬಂಧ†ಗಳು ಹೆಚ್ಚುವಂತೆ ಅವಕಾಶಕೊಡದಿದ್ದರೂ ಈಗ ಹೇಳಿದ ಪರಸ್ಪರ ರಕ್ತಸಂಮಿಶ್ರಣೆಯನ್ನು ಅನುಲೋಮ ಪ್ರತಿಲೋಮಗಳೆಂಬ ವಿವಾಹ ಸಂಪ್ರದಾಯಗಳಿಂದ ಬಹು ಬುದ್ಧಿತನದಿಂದ ಕಟ್ಟುಮಾಡಿರುವರು. ಧರ್ಮಶಾಸ್ತ್ರಕಾರನಾದ ಮನುವು ಒಂದೇ ಜಾತಿಗೆ ಸೇರಿದ (= ಸವರ್ಣ) ಜನರ ವಿವಾಹಗಳನ್ನು ಸರಿಯೆಂದು ಮೇಲ್ಪಙ್ತಿಯಾಗುವಂತೆ ಶ್ಲಾಘಿಸುತ್ತಿದ್ದರೂ "ಕೀಳುವರ್ಣ"ದ ಸ್ತ್ರೀಯರೊಡನೆ ನಡೆಸುವ ಅನುಲೋಮ ವಿವಾಹಗಳನ್ನೂ ಸರಿಯೆಂದು ಒಪ್ಪಿಕೊಳ್ಳುತ್ತಾನೆ. ಮತ್ತು ಹೀಗೆಯೇ ನಡೆಯುವ ಪ್ರತಿಲೋಮ ವಿವಾಹಗಳನ್ನು, ಅಂದರೆ "ಉತ್ತಮವರ್ಣ" ದ ಸ್ತ್ರೀಯರು "ಕೀಳು" ವರ್ಣದ ಪುರುಷರೊಡನೆ ಬೆಳೆಸುವ ಸಂಬಂಧವನ್ನು ಸರಿಯೆಂದು ಮನ್ನಿಸದಿದ್ದರೂ ಇಂಥಾ ವಿವಾಹಗಳಿಂದಾದ ಆಯಾ ಸಂತಾನಗಳನ್ನು ವಿಶದವಾಗಿ ವರ್ಣಿಸುತ್ತಾನೆ. ಅಂದರೆ ಇವುಗಳು ಸರಿಯೆಂದು ಜನರ ಸಮ್ಮತಿಯನ್ನು ಪಡೆಯದಿದ್ದರೂ ಇವುಗಳು ರೂಢಿಯಲ್ಲಿ ಇದ್ದವೆನ್ನುವುದಕ್ಕೆ ಯಾವ ಅನುಮಾನವೂ ಇಲ್ಲ. ಮೊದಮೊದಲು ನಿಷಿದ್ಧಿಸಲ್ಪಟ್ಟದ್ದು ಅಥವಾ ಆಚಾರ ವ್ಯವಹಾರ (law ಧರ್ಮ) ಗಳಿಂದ ಸಮ್ಮತಹೊಂದದೆ ಇದ್ದರೂ ಸ್ವಲ್ಪ ಕಾಲಾನಂತರ ಇರಬಹುದೆಂಬ ಸಹನೆಯನ್ನು ಪಡೆದ ವಿವಾಹ ಸಂಬಂಧಗಳಿಂದ ಮೊಟ್ಟಮೊದಲು ಹುಟ್ಟಿಬಂದ ಪಂಗಡಗಳ ಸ್ಥಿತಿಯನ್ನು

* Anthropology † Indiscriminate crossing

ಕಟ್ಟುಮಾಡಲು ಮಿಶ್ರರೂಪದ ಜಾತಿಗಳನ್ನು ರಚಿಸಿದರು. ಹೀಗೆಯೇ ಈಗ ಅಸ್ಪೃಶ್ಯರೆಂದು ಎಣಿಸಲ್ಪಡುವ ಕೆಲವು ಪಂಗಡಗಳು ಈ ರೀತಿಯಾದ (ಸ್ವಯಂಕೃತ) ಕಾಮಸಂಬಂಧ*ದಿಂದ ಹುಟ್ಟಿರುವುವೆಂದು ಪ್ರತೀತಿ ಇದೆ.

**೧೧ ಆದರೆ ಸರ್ವಸಂಮಿಶ್ರತೆಗಳೂ ಕೆಟ್ಟವಲ್ಲ; ಮತ್ತು ಯೂರೇಷಿಯನ್ ಜನರು ಈ ಮಾತಿಗೆ ಸೇರತಕ್ಕವರಲ್ಲ.**

ಈ ವಿಷಯವನ್ನು ಹೇಳುತ್ತಿರುವಾಗ ಹಿಂದೂಧರ್ಮವು ಇಂಥಾ ಸರ್ವಸಂಬಂಧಗಳನ್ನು ದುಷ್ಟವೆಂದು ದೂಷಿಸುತ್ತಿರಲಿಲ್ಲವೆಂದು ನಾವು ತಿಳಿಯಬೇಕು. ಏಕೆಂದರೆ ವಂಶಮೂಲಗಳು ಸಾಧಾರಣವಾಗಿ ಒಂದೇ ಅಂತಸ್ತಿಗೆ ಸೇರಿರುವಾಗ, ಇವುಗಳಲ್ಲಿ ಪರಸ್ಪರ ಸಂಮಿಶ್ರತೆಯು ಬಹಳ ಮಟ್ಟಿಗೆ ಉತ್ತಮಕಾರಿಯಾಗಿಯೇ ಇದೆ. ಈ ಸಂದರ್ಭದಲ್ಲಿ ಬಹಳವಾಗಿ ವಿಗರ್ಹರಾದ ಯೂರೇಷಿಯನ್ ಜನರನ್ನು ಉದಾಹರಿಸುತ್ತಾರೆ. ಆದರೆ ಇವರಲ್ಲಿ ಕೂಡಿರುವ ಎರಡು ವಂಶಗಳೂ ಬಹಳವಾಗಿ ಭಿನ್ನವಾಗಿವೆ ಮತ್ತು ಜನನಶಿಕ್ಷಣಕಾಲ†ಗಳಲ್ಲಿ ಇರುವ ಸಂದರ್ಭಗಳು ಎಷ್ಟೇ ಉತ್ತಮ ಜನರನ್ನೂ ಕೂಡ ಕೆಡಿಸಿಬಿಡುತ್ತವೆ. ನಮ್ಮ ದೇಶದ ಸ್ತ್ರೀಯರನ್ನು ವಕ್ರಮಾರ್ಗದಲ್ಲೆಳೆಯುವ ಬಿಳಿಯ ಮನುಷ್ಯರು ಸಾಧಾರಣವಾಗಿ ಆ ಸ್ತ್ರೀಯರು ಮಕ್ಕಳ ತಾಯಂದಿರಾಗುವಲ್ಲಿ ಅವರನ್ನು ಬಿಟ್ಟುಬಿಡುವರಲ್ಲದೆ ಇಂಥಾ ಕಾಮಕೂಪದ ಫಲವಾಗಿ ಲೋಕದಲ್ಲಿ ತಲೆಯೆತ್ತುವ ಮಕ್ಕಳು ತಕ್ಕ ಪೋಷಣೆ ಇಲ್ಲದೆಯೂ, ಬಹಳವಾಗಿ ದೂಷಿಸಲ್ಪಡುತ್ತಲೂ ಇದು ಸಾಮಾನ್ಯವಾಗಿ ಸ್ವಲ್ಪವೂ ಯೋಗ್ಯವಲ್ಲದ ಸ್ಥಿತಿಯಲ್ಲಿ ಬೆಳೆಯುತ್ತವೆ. ಇದರಿಂದ ಈ ವಿಷಯದಲ್ಲಿ ಕೇವಲ ಪಿತ್ರಾರ್ಜಿತ ವಸ್ತುಗಳಲ್ಲದೆ ನಮ್ಮ ಸುತ್ತುಮುತ್ತಲಿರುವ ಆವರಣಗಳೂ ಕೂಡ ಮುಖ್ಯವಾಗಿವೆ ಎಂಬುದನ್ನು ಯಾರೂ ಮರೆಯಲಾಗದು

* Indiscriminate crossing

† ವರ್ಧನ, training

## ೧೨. ಸವರ್ಣವಿವಾಹವು ಕೆಟ್ಟದ್ದಲ್ಲ, ಏಕೆಂದರೆ ವಂಶವು ಮುಖ್ಯವೇ ಹೊರತು ಆವರಣವಲ್ಲ. (N.= ಕಲ್ಲಿಕಾಕ್ ವಂಶಚರಿತ್ರೆ)

ಇಷ್ಟಾದರೂ, ಸವರ್ಣವಿವಾಹವೆಂಬ ಧರ್ಮವು ತಪ್ಪಲ್ಲ. ವಂಶ ಪರಂಪರೆಯು ಬಲವು ಸವರ್ಣವಿವಾಹಗಳು ಮಾತ್ರವೇ ಸರಿಯೆಂದು ಹೇಳುವಷ್ಟು ಹೆಚ್ಚಾಗಿದೆಯೆ ಎಂದು ನಿರ್ಧರಿಸುವುದು ಕಷ್ಟಸಾಧ್ಯವೇ ಸರಿ: ಏಕೆಂದರೆ ಹುಟ್ಟು (nature, ಸ್ವಭಾವ) ಹೆಚ್ಚೋ ಬೆಳವಣಿಗೆ (nurture, ಪ್ರವೃದ್ಧಿ) ಯು ಹೆಚ್ಚೋ ಎಂಬ ಪ್ರಶ್ನೆಯನ್ನು ಇನ್ನೂ ಹೆಚ್ಚಾಗಿ ವಾದಿಸುತ್ತಲೇ ಇದ್ದಾರೆ. ಪ್ರಜಾಧಿಪತ್ಯದವರು ಉತ್ತಮ ಸಂಗಡದವರ ಶ್ರೇಷ್ಠತೆಗೆ ಉತ್ತಮ ರಕ್ತ (= ವಂಶ) ವಾಗಲೀ ಪಿತ್ರಾರ್ಜಿತಗುಣವಾಗಲೀ ಕಾರಣವಲ್ಲವೆಂದು ದೃಢವಾಗಿದ್ದಾರೆ. ಆದರೆ ಹಿಂದೂಪಕ್ಷಕ್ಕೆ ಪೂರ್ವಕಾಲದ ಗ್ರೀಕರ ಜ್ಞಾನವೂ ಮತ್ತು ಆಧುನಿಕಶಾಸ್ತ್ರವೂ ಸಹಾಯ ಮಾಡುತ್ತವೆ. ಗ್ರೀಕರು ಪಿತ್ರಾರ್ಜಿತಗುಣವುಂಟೆಂದು ನಂಬಿ, ಇತರಂತೆ ಕೀಳು ಗುಣದವರನ್ನು ಕಿತ್ತುಹಾಕಿ ಉತ್ತಮಗುಣದವರನ್ನು ಹೆಚ್ಚಿಸುವಂಥ ಜನಾಭಿವೃದ್ಧಿಯ ಸಿದ್ಧಾಂತ*ವೊಂದನ್ನು ರಚಿಸಿದರು † ಕ್ರಿ. ಪೂ. ೬ನೇ ಶತಮಾನದಷ್ಟು ಹಿಂದೆಯೇ ಗ್ರೀಕ್ ಕವಿಯೊಬ್ಬನು (ಮೆಗರಾಪಟ್ಟಣದ ಥಿಯೊಗ್ನೀಸನು) ಹೀಗೆಂದು ಬರೆದಿರುವನು: “ ನಾವು ಉತ್ತಮ ಜಾತಿಗೆ ಸೇರಿದಕುರಿ, ಕತ್ತೆ ಕುದುರೆಗಳನ್ನು ನಿರೀಕ್ಷಿಸುತ್ತೇವೆ, ಮತ್ತು ಒಳ್ಳೆಯದ (= ಬೀಜ) ದಿಂದ ಒಳ್ಳೆಯದು (= ಫಲ) ಬರುವುದೆಂದು ನಂಬುತ್ತೇವೆ. ಆದರೂ ಅಲ್ಲಲ್ಲಿ ಕೆಲವು ಉತ್ತಮಜನರು ದುಷ್ಟಪಿತೃಗಳಿಂದ ಹುಟ್ಟಿದ ದುಷ್ಟಪುತ್ರಿಯರನ್ನು ಮದುವೆಯಾಗಲು ಹೆದರುವುದಿಲ್ಲ. ಆದುದರಿಂದ ನಮ್ಮ ಜನರು ಕೆಟ್ಟಿರುವರೆಂದು ಏಕೆ ಆಶ್ಚರ್ಯಪಡಬೇಕು ? ಏಕೆಂದರೆ ಒಳ್ಳೆಯದು. (= ಉತ್ತಮ) ಕೆಟ್ಟದ್ದರೊಡನೆ ಬೆರೆಯುತ್ತಿದೆ.” ಇದು ಬಿಟ್ಟರೆ ವಂಶಾಭಿವೃದ್ಧಿಗೆ ಜೀವ (Biological, ಶಾರೀರಕ) ಚುನಾವಣೆಯೇ ಉತ್ತಮ ಮಾರ್ಗವೆಂದು ಹೇಳಿದ ಪ್ಲೇಟೋಯವರ ಅಭಿಪ್ರಾಯಗಳು ಸಾಧಾರಣ

---

* Theory † Developed

ವಾಗಿ ಎಲ್ಲರಿಗೂ ತಿಳಿದೇ ಇವೆ. ಹೀಗೆಯೇ ಇವರ ಮುಖ್ಯಶಿಷ್ಯರಾದ ಅರಿಸ್ಟಾಟಲರೂ ಕೂಡ ಸರ್ಕಾರವು* ಉತ್ತಮ ಜನಪಂಗಡಗಳು (types) ಹೆಚ್ಚುವಂತೆ ಸಹಾಯಮಾಡಬೇಕೆಂದು ನಂಬಿದ್ದರು. ಆದರೆ ಈಚಿಗೆ ೧೮ನೇ ಶತಮಾನದಲ್ಲಿ ಜನರೆಲ್ಲರೂ ಸ್ವಾಭಾವಿಕವಾಗಿ ಸಮಾನಗುಣವುಳ್ಳವರೆಂಬ ಅಭಿಪ್ರಾಯವನ್ನು ಹೆಚ್ಚುಹೆಚ್ಚಾಗಿ ಪ್ರಾಮುಖ್ಯತೆಗೆ ತಂದರು. ನಿಮ್ಮ ಪ್ರಸಿದ್ಧ ಜ್ಞಾನಿಗಳಾದ ಲಾಕ್ ಮತ್ತು ರೂಸೋ, ಫ್ರಾನ್ಸ್ ಮತ್ತು ಅಮೇರಿಕಾದೇಶಗಳ ಸ್ವಾತಂತ್ರ್ಯ ಪ್ರಕಟನೆ (Declaration) ಯ ತತ್ವಜ್ಞಾನಿಗಳ ಅಭಿಪ್ರಾಯಗಳನ್ನು ತೆಗೆದುಕೊಂಡು ಜನರು ತಮ್ಮ ಆವರಣಗಳಿಂದ ಮಣ್ಣುಮುದ್ದೆಯಂತೆ ರೂಪಭೇದಗಳನ್ನು ಹೊಂದುತ್ತಾರೆಂದು ನಿಮ್ಮ ತತ್ತ್ವಜ್ಞಾನಿಗಳಾದ ಬಕಲ್ಲರು ಹೇಳುತ್ತಾರೆ. ಆದರೆ ಈಚಿನ ಆಧುನಿಕ ಶಾಸ್ತ್ರವು ಈ ಅಭಿಪ್ರಾಯವು ಆವರಣದ ಪ್ರಭಾವವನ್ನು ಅತಿಯಾಗಿ ಹೇಳುತ್ತದೆಯೆಂದು ಆಕ್ಷೇಪಿಸುತ್ತದೆ. ಏಕೆಂದರೆ ಅಭಿವೃದ್ಧಿಯು ಕೇವಲ ಆವರಣಗಳ ಬದಲಾವಣೆಯಿಂದ ಸಿದ್ಧವಾಗುವುದಿಲ್ಲ. ಪರಿಣಾಮವು † ವಂಶಪಾರಂಪರ್ಯವಾಗಿ ನಡೆಯುವುದೆಂಬ ನಿಮ್ಮ ಡಾರ್ವಿನ್ ಶಾಸ್ತ್ರಜ್ಞರ ಬೋಧೆಯು ಗಾಲ್ಟನ್ ಮತ್ತು ವೀಸ್ಮನ್ (Weismann) ಮತ್ತು ಡೀವ್ರೀಸ್ ಮೊದಲಾದ ನಿಮ್ಮ ಇತರ ಪ್ರಾಣಿಶಾಸ್ತ್ರಜ್ಞರಿಂದ ಅನುಸರಿಸಲ್ಪಟ್ಟು, ಜನಾಭಿವೃದ್ಧಿ ‡ ಶಾಸ್ತ್ರವು ಈಗ ಸ್ವಲ್ಪಮಟ್ಟಿಗೆ ದೃಢವಾದ ಗಟ್ಟಿಯಾದ ಆಧಾರಗಳ ಮೇಲೆ ನಿಂತಿದೆ. ಬೀಜಾಂಕುರಕ್ಕೆ§ ಎಷ್ಟು ಅದ್ಭುತಶಕ್ತಿಯು ಇದೆಯೆಂಬುದು ಅದನ್ನು ಬಾಹ್ಯವಸ್ತುಗಳ ಸ್ವಭಾವಕ್ಕೊಳಗಾಗದಂತೆ ಜಾಗರೂಕತೆಯಿಂದ ಪ್ರತ್ಯೇಕ ಮಾಡಿ ಸಂರಕ್ಷಿಸುವುದರಿಂದ ಗೊತ್ತಾಗುತ್ತದೆ. ಏಕೆಂದರೆ, ಆಗ ಇದು ತನ್ನ ಪೂರ್ವನಿಯಮಿತ ** ಮಾರ್ಗದಲ್ಲಿಯೇ ನಡೆಯುತ್ತದೆ, ಮತ್ತು ಇದನ್ನು ತಡೆದರೂ ಈ ಅಡಚಣೆಯನ್ನು ಗೆದ್ದು ತನ್ನ ಸಾಮಾನ್ಯಮಾರ್ಗದಲ್ಲಿ ನಡೆಯಲು ಪ್ರಯತ್ನಿಸುತ್ತದೆ. ನಮ್ಮ ಶರೀರದ ಪ್ರತಿಯೊಂದು

* State, ರಾಜ್ಯ † ವಿಕಾಸ, evolution ‡ Eugenics
§ Germ-plasm ** Predetermined

ಸೂಕ್ಷ್ಮರಕ್ತಕಣವೂ * ಸಾಧಾರಣವಾಗಿ ನಮ್ಮ ಎಲ್ಲ ಜೀವನವನ್ನೂ ಅಂದರೆ ಎತ್ತರ, ತೂಕ, ರೂಪ, ಬಣ್ಣ, ನಾಡಿರಚನೆ (= ನರ, ಧಮನಿ) ಮತ್ತು ಪ್ರಾಣಶಕ್ತಿ (vital energy). ಸ್ವಭಾವ (temperament), ಮತ್ತು ಬುದ್ಧಿಗಳನ್ನು ಬಹಳ ಮಟ್ಟಿಗೆ ನಿರ್ಧರಿಸುವಂತಹ ಅನೇಕ ಸೂಕ್ಷ್ಮ ವರ್ಣಾವಯವ (chrosmosomes)ಗಳನ್ನೂ ಹೊಂದಿವೆ. ಮತ್ತು ನಮ್ಮ ಶರೀರದ ಪ್ರತಿಯೊಂದು ಸೂಕ್ಷ್ಮರಕ್ತಕಣಕ್ಕೆ ಸೇರಿದ ಈ ಸೂಕ್ಷ್ಮವರ್ಣಾವಯವಗಳಲ್ಲಿ ಅರ್ಧಭಾಗವು ತಂದೆಯಿಂದಲೂ ಮಿಕ್ಕರ್ಧಭಾಗವು ತಾಯಿಯಿಂದಲೂ ಬಂದೂ, ನಮ್ಮ ತಂದೆತಾಯಿಗಳ ಗುಣಗಳನ್ನು ಅತ್ಯಂತ ನಿಷ್ಟೆಯಿಂದ ತಂದು ನಮಗೆ ತಲಪಿಸುತ್ತವೆ†. ಇದರಿಂದ ನಮ್ಮ ತಂದೆತಾಯಿಗಳಲ್ಲಿಯಾಗಲಿ, ತಾತಂದಿರಲ್ಲಿಯಾಗಲಿ ಮುತ್ತಾತಂದಿರಲ್ಲಾಗಲಿ ಯಾವುದಾದರೂ ಹೆಡ್ಡತನವಾಗಲೀ ಹುಚ್ಚಾಗಲೀ ಇದ್ದ ಪಕ್ಷದಲ್ಲಿ ಅದು ನಮ್ಮ ಮಕ್ಕಳಿಗೂ ಮೊಮ್ಮಕ್ಕಳಿಗೂ ಬಂದು ಸೇರಿಬಿಡುತ್ತದೆ. ಹಿಂದೂ ಜ್ಞಾನಿಗಳು ಬಹಶಃ ಸುದೈವದಿಂದೊದಗಿದ ಒಂದು ಪ್ರತಿಭೆಯಿಂದಾಗಲಿ ಇಲ್ಲವೆ ಕೇವಲ ಪ್ರಯೋಗಸಿದ್ಧಿ ‡ ಯಿಂದ ದೊರೆತ ಸಾಮಾನ್ಯಧರ್ಮದಿಂದಾಗಲಿ ಇಂತಹ ವಂಶ ಪಾರಂಪರ್ಯದ ಸತ್ಯವನ್ನು ಒಪ್ಪಿಕೊಂಡು§ ಸ್ವಲ್ಪ ಹೆಚ್ಚು ಕಡಿಮೆ ಸಮಾನ ಜಾತಿ (Type, ವರ್ಗ) ಗುಣಗಳಿಗೆ ಸೇರಿದ ಜನರಲ್ಲಿ ಪರಸ್ಪರ ವಿವಾಹಗಳಾಗಬಹುದೆಂದು ಪ್ರೋತ್ಸಾಹಿಸಿದರು. ಅಂದರೆ ಉತ್ತಮವರ್ಗದ ವಂಶಕ್ಕೆ ಸೇರಿದ ಪುರುಷನೊಬ್ಬನು ಅಲ್ಪನಾದ ವಂಶಪಾರಂಪರ್ಯವುಳ್ಳ ಕುಲಕ್ಕೆ ಸೇರಿದ ಸ್ತ್ರೀಯೊಬ್ಬಳನ್ನು ಮದುವೆಯಾದಲ್ಲಿ, ಇವರಲ್ಲಿ ಒಬ್ಬರಕಡೆಯಿಂದ ಬಂದಿದ್ದ ಉತ್ತಮ ಪಿತ್ರಾರ್ಜಿತ ಗುಣಗಳು ಇನ್ನೊಬ್ಬರ ದುಷ್ಟ ಪಿತ್ರಾರ್ಜಿತ ಗುಣಗಳೊಡನೆ ಸೇರಿ ಕೆಟ್ಟುಹೋಗಿ, ಮುಂದಿನ ಸಂತಾನವು ತನ್ನ ಜೀವಿಕೆಯನ್ನು ಕಷ್ಟತೊಡಕುಗಳಿಂದ ಪ್ರಾರಂಭಿಸಬೇಕಾಗುತ್ತದೆ. ತಂದೆತಾಯಿಗಳು ಹೆಚ್ಚುಕಡಿಮೆ ಒಂದೇ ಸಾಮಾನ್ಯವರ್ಗಕ್ಕೆ ಸೇರಿದವರಾಗಿ

---

* Cell, ಪ್ರತಿಯೊಂದು ಜೀವಶಕ್ತಿಯುಳ್ಳ ಸೂಕ್ಷ್ಮ ಅವಯವ

† Transmit ‡ Empirical § Assume

ದ್ದರೆ ಇವರ ಸಂತಾನವೂ ಕೂಡ ಸಾಧಾರಣವಾಗಿ ತನ್ನ ತಂದೆತಾಯಿಗಳಿಗೆ ಸಮನಾದುದಾಗಿಯೇ ಬೆಳೆಯುವುದು.* ಹೆಚ್ಚೇಕೆ? ಬೀಜದ ಗುಣವೆಲ್ಲಿ ಹೋದೀತು?† ಅಂದರೆ ಬಾಹ್ಯಾವರಣಗಳಿಂದ ಎಷ್ಟು ಸಲಹೆ ಗೊಟ್ಟರೂ ಸಾಮಾನ್ಯ ಜನರನ್ನು ಪ್ರತಿಭಾಶಾಲಿಗಳನ್ನಾಗಿ ಆಗಲೀ ಇಲ್ಲವೇ ಆಜನ್ಮ ದತ್ತರನ್ನು ಒಳ್ಳೇ ಶಕ್ತಿವಂತರನ್ನಾಗಿ ಆಗಲೀ ನಾವು ಎಂದಿಗೂ ಮಾಡಲಾರೆವು.

---

* ಕೆಲವು ದಿವಸಗಳ ಹಿಂದೆ "ಪಾಪುಲರ್ ಸೈನ್ಸ್ ಸಿಫ್ಟಿಂಗ್ಸ್" (ಸಾಮಾನ್ಯ ಶಾಸ್ತ್ರ ಶೋಧನೆ) ಎಂಬ ಪತ್ರಿಕೆಯಲ್ಲಿ ಮಾರ್ಟಿನ್ ಕಲ್ಲಕಾಕ್ ಎಂಬವನ ವಿಚಾರದಲ್ಲಿ ಒಂದು ವಿಶೇಷ ಲೇಖನವು ಬಂದಿತ್ತು:— "ರಾಜ್ಯೋತ್ಕ್ರಾಂತಿಯ ಯುದ್ಧದಲ್ಲಿ ಮಾರ್ಟಿನ್ ಕಲ್ಲಕಾಕ್ ಎಂಬೊಬ್ಬ ತರುಣ ಯೋಧನಿದ್ದನು. ಇವನು ಉತ್ತಮ ವಂಶಸ್ಥನಾಗಿದ್ದನು. ಆದರೆ ಆಗಿನ ಯುದ್ಧಕಾಲದ ಹೀನಸ್ಥಿತಿ (General laxity, ಧರ್ಮಗ್ಲಾನಿ) ಮತ್ತು ಅಸಾಧಾರಣವಾದ ಸಾಂಘಿಕ ಸ್ಥಿತಿಗಳಲ್ಲಿ ಈ ತನ್ನ ಉತ್ತಮ ವಂಶ ( = ರಕ್ತ) ವನ್ನು ಮರೆತುಬಿಟ್ಟನು. ಆಗಿವನು ಸುಂದರ ರೂಪುಳ್ಳವಳಾಗಿದ್ದರೂ ಗಟ್ಟಿಮನಸ್ಸಿಲ್ಲದ (Feeble-minded) ಕನ್ಯೆಯೊಬ್ಬಳನ್ನು ನೋಡಿದನು (met) ; ಮತ್ತಿವರ ಸಂಯೋಗದಿಂದ ದುರ್ಬಲ ಮನಸ್ಸುಳ್ಳ ಹುಡುಗನೊಬ್ಬನು ಹುಟ್ಟಿದನು. ಈ ಹುಡುಗನು ವಯಸ್ಕನಾದ ಮೇಲೆ ತನ್ನಂತೆಯೇ ಕೀಳುವಂಶಕ್ಕೆ ಸೇರಿದವಳಾದ ಹೆಂಗಸೊ (woman, ಯುವತಿ) ಬ್ಬಳನ್ನು ಮದುವೆಯಾದನು. ಇವರಿಂದ ಅನೇಕ ಮಕ್ಕಳು ಹುಟ್ಟಿದರು. ಈ ಹುಡುಗರು ತಮ್ಮ ಕಾಲದಲ್ಲಿ (in turn) ತಮ್ಮ ಹುಟ್ಟಿನಂಥವರನ್ನೇ ಮದುವೆ ಮಾಡಿಕೊಂಡರು ; ಮತ್ತೆ ಈ ವಂಶವು ಆರು ತಲೆಗಳಿಂದ ಹೀಗೆಯೇ ದಿನೇ ದಿನೇ ವೃದ್ಧಿಯಾಗುತ್ತಿದೆ. ಪೂರ್ವದಲ್ಲಿ ಅವಿಚಾರಿಗಳಾಗಿ ಏಕಾಂತವಾಗಿ ರಾತ್ರಿಯಲ್ಲಿ ಸೇರಿದಾಗಿನಿಂದ ಈ ಮಾರ್ಟಿನ್ ಕಲ್ಲಕಾಕ್ ಮತ್ತು ಆ ಹೆಸರಿಲ್ಲದ ಹುಡುಗಿಯಿಂದ ಹುಟ್ಟಿದವರೆನ್ನುವವರ ಸಂಖ್ಯೆಯು ೪೮೦ ಜನರವರೆಗೆ ಹೆಚ್ಚಿದೆ. ಇವರಲ್ಲಿ ೧೪೩ ಜನರು ನಿರ್ಬಲ ಮನಸ್ಸುಳ್ಳವರೂ, ೩೩ ಜನ

† Blood tells

೧೩ ಕುಲವಿದ್ಯಾಭ್ಯಾಸಗಳಂತೆ ಸಾಂಘಿಕಸ್ವಾಸ್ಥ್ಯವೂ ಮುಖ್ಯವಾಗಿದೆ

ಆದರೆ ಇದರಿಂದ ಪ್ರಕೃತಿಯೇ ಸರ್ವಪ್ರಾಧಾನ್ಯವೂ ಮತ್ತು ಪಾಲನ ವರ್ಧನವು * ಏತಕ್ಕೆ ಬಂದದ್ದೂ ಅಲ್ಲವೆಂದು ಅರ್ಥವಲ್ಲ, ಏಕೆಂದರೆ ಯಾವ ಪಾಲನವೇ ಆಗಲಿ ಆಯಾ ಜನಸಮೂಹ (group)ಮತ್ತು ವರ್ಗ (type) ಗಳನ್ನು ಅನುಸರಿಸುತ್ತದೆ. ನಮ್ಮಲ್ಲಿ ನಿಜವಾದ ವರ್ಣಾಶ್ರಮಧರ್ಮವು ಇದ್ದವರೆವಿಗೂ ನಮ್ಮಲ್ಲಿ ಪ್ರಕೃತಿ ಪಾಲನೆಗಳು ಒಟ್ಟುಗೂಡಿ ಕೆಲಸಮಾಡುತ್ತಿದ್ದವು ಹೀಗೆಯೇ ಸಂಘ ಪಾರಂಪರ್ಯ † ವೆಂಬ ವಸ್ತುವು ಒಂದುಂಟು, ಮತ್ತು ಪ್ರತಿಯೊಂದು ತಲಾಂತರದ ಜನಗಳೂ ತಾವು ತಾವು ಬುದ್ಧಿಪೂರ್ವಕವಾಗಿ ಮಾಡಿದ ಕಾರ್ಯಗಳಿಂದಲೇ ಆಯಾ

---

ನಡತೆ ಗೆಟ್ಟವರೂ (immoral), ೩೬ ಜನ ಮಿಶ್ರ ಸಂತಾನದವರೂ (illegitimate), ೩ ಜನ ಮೂರ್ಛಾರೋಗಿಗಳೂ (epileptics), ೩ ಜನ ತಪ್ಪಿತಸ್ಥರೂ ಮತ್ತು ೮ ಜನ ಸೂಳೆಗಾರಿಕೆ (brothel keepers) ಯವರೂ ಇದ್ದಾರೆ. ಆದರೆ ಇವರಿಗೆಲ್ಲ ಮೂಲಪುರುಷನಾದ ಮಾರ್ಟಿನ್ನನು ಇಷ್ಟು ಭಯಂಕರವಾದ ದುರಾಚಾರವನ್ನ ನಡೆಸಿದ ಮೇಲೆ ಕೊನೆಗೆ ಬಹು ಬುದ್ಧಿವಂತಳೂ ಉತ್ತಮ ವಂಶಸ್ಥಳೂ ಆದ "ಕ್ವೇಕರ್" ಜಾತಿಯ ಯುವತಿಯೊಬ್ಬಳನ್ನು ಮದುವೆಮಾಡಿಕೊಂಡನು. ಈಸಂಬಂಧದಿಂದ ಬಂದ ಏಕವಂಶಸ್ಥರು(direct descendants) ೪೯೬ ಜನರಿದ್ದಾರೆ. ಇವರಲ್ಲಿ ಅನೇಕರು ರಾಜ್ಯಾಧಿಪತಿಗಳೂ (Governors), ಸೈನಿಕರೂ, ಒಬ್ಬನು ದೊಡ್ಡದೊಂದು ವಿಶ್ವವಿದ್ಯಾನಿಲಯದ ಪ್ರತಿಷ್ಠಾಪಕನೂ, ನ್ಯಾಯಶಾಸ್ತ್ರಜ್ಞ (Lawyers)ರೂ, ನ್ಯಾಯಾಧಿಕಾರಿಗಳೂ (judges) ಉಪಾಧ್ಯಾಯರೂ (educators), ಜಮೀನ್‌ದಾರರೂ ಮತ್ತು ಯೋಗ್ಯರೂ ಮುಖ್ಯಸ್ಥರೂ ಆದ ಪ್ರಜೆಗಳೂ (useful citizens) ಮತ್ತು ಪ್ರತಿಯೊಂದು ಭಾಗದಲ್ಲಿಯೂ ಮುಖ್ಯಸ್ಥರಾದ ಉತ್ತಮ ಆದರ್ಶಪ್ರಾಯರಾದ ತಂದೆತಾಯಿಗಳೂ ಆಗಿ ಇರುವರು. ಈಗ ಇವರಲ್ಲಿ ಕೊನೆಯವನು ಬಹು ಧನಾಢ್ಯನೂ ಗಣ್ಯಪುರುಷನೂ ಆಗಿರುವನು.

* Nurture † Social heredity

ಪಂಗಡಕ್ಕೆ ಸೇರಿದ ಸಂಘಕ್ಕೆ ದೊರೆತಿರುವ ಗುಣಾವಳಿಗಳನ್ನೂ ಶಕ್ತಿ ಸಮೂಹವನ್ನೂ ತಮ್ಮ ಸ್ವತ್ತನ್ನಾಗಿ ಮಾಡಿಕೊಳ್ಳುತ್ತಾರೆ.

### ೧೪. ವಿವಾಹ ಸಂಬಂಧಗಳು ಹೆಚ್ಚು ಜನ (ಪಂಗಡ) ಗಳಲ್ಲಿ ನಡೆಯಬೇಕು

ಜನಕಟ್ಟಿನ * ಆತ್ಮಘಾತಕವಾಗದಂತೆ ನಿಲ್ಲಿಸಲು ನಾವು ಇಷ್ಟ ಪಟ್ಟಲ್ಲಿ ವಿವಾಹ ಸಂಬಂಧದದ ಕೆಲವು ನಿಯಮಗಳನ್ನು ಅನುಸರಿಸುವುದು ಆವಶ್ಯಕವಾಗಿದೆ. ವಿವಾಹವನ್ನು ಬೇರೆ ಯಾವ ಮಾರ್ಗವೂ ಇಲ್ಲದೆ ಕೇವಲ ತಮ್ಮ ತಮ್ಮ ಜಾತಿ ಕೂಟಗಳಿಗೆ † ಸೇರಿದವರಲ್ಲಿಯೇ ನಡೆಸಬೇಕೆಂಬ ಕಟ್ಟಿಲ್ಲದೆ ಸ್ವಲ್ಪ ಹೆಚ್ಚು ಕಡಿಮೆ ಸಮಾನ ನಾಗರೀಕತೆ ಮತ್ತು ಸಂಘಾಭಿವೃದ್ಧಿಗಳನ್ನುಳ್ಳ ಸ್ತ್ರೀಪುರುಷರಲ್ಲಿ ಬೆಳಸಬೇಕು. ‡ ಏಕೆಂದರೆ ಜಾತಿ ವರ್ಣಗಳೂ ಕೂಡ ಕೆಡುತ್ತವೆ. ಮಕ್ಕಳು ತಮ್ಮ ತಂದೆಯ ವೃದ್ಧಿಯನ್ನು ಅನುಸರಿಸಬೇಕೆಂದ ಮೇಲೆ ಯಾರೇ ಆಗಲಿ ತಮ್ಮ ತಮ್ಮ ಪಂಗಡಗಳಿಗಿಂತ ಹೆಚ್ಚು ಶಕ್ತಿಯುಳ್ಳವರಾಗಿ ಬೆಳೆಯಲಾಗುದಿಲ್ಲ, ಮತ್ತು ಜನರು ಎಷ್ಟೋ ನಿಕೃಷ್ಟರಾಗಿದ್ದರೂ ತಮತಮಗೆ ತಕ್ಕ ಕೀಳು ಸ್ಥಾನಗಳನ್ನು ಸೇರಿಕೊಳ್ಳುವಂತೆ ಕೆಳಗೆ ಬರುವುದಕ್ಕೂ ಅವಕಾಶವಿಲ್ಲ. ಇದರಿಂದ ಈಗಿರುವ ಜಾತಿ ಸ್ಥಿತಿಯಲ್ಲಿ ಉತ್ತಮಜಾತಿಯಲ್ಲಿ ಬೆಳೆದ ಶಕ್ತಿಹೀನರಿಗೂ ಕೀಳುಜಾತಿಯಲ್ಲಿ ಹುಟ್ಟಿದ್ದರೂ ಶಕ್ತಿವಂತರಾಗಿ ಇರುವವರಿಗೂ ಸಲ್ಲಬೇಕಾದ ತಕ್ಕ ಸ್ಥಳಗಳು ದೊರೆತಿಲ್ಲ. ಅಶಕ್ತರನ್ನೂ ಮತ್ತು ಕೀಳುಸ್ಥಿತಿಯಲ್ಲಿರುವ ಜನರನ್ನು ವಿದ್ಯಾಭ್ಯಾಸ ಮತ್ತು ಧಾರ್ಮಿಕ ಬೋಧೆಗಳಿಂದ ಶಕ್ತಿವಂತರನ್ನಾಗಿ ಮಾಡಲು ಸರ್ವ ಪ್ರಯತ್ನ ಮಾಡಬೇಕಾಗಿದ್ದರೂ, ವಿವಾಹವನ್ನು ನಿರ್ವಿವೇಕದಿಂದ ನಡೆಸುವುದೆಂದರೆ ಇದೇ ಬಹುಕಾಲದ ವರೆವಿಗೂ ಸಾಧುವಾದುದಾಗುವುದಿಲ್ಲ.

---

* Social order † one's own caste

‡ ಭಾಷ್ಯವನ್ನು ನೋಡಿ

## ೩ ಲೋಕಸ್ಥಿತಿ ಮತ್ತು ಜಾತಿಚರಿತ್ರೆ

### ೧೫ ಆದರೆ ಹಿಂದೆ ಇದ್ದ ಐಕ್ಯವು ಈಗ ನಮ್ಮಲ್ಲಿಲ್ಲ

ಜಾತಿ (Race, ವಂಶ) ತೊಡಕುಗಳನ್ನು ಹೆಚ್ಚಾಗಿ ತಂದುಕೊಳ್ಳದೆ ಹಿಂದೂಜನರ ಶಕ್ತಿಯು ಸ್ವಲ್ಪ ಸ್ವಲ್ಪವಾಗಿ ಜಾತಿ (Race) ಸಮರಸತೆಯನ್ನು ತಂದುಕೊಟ್ಟಿದೆ. ಜಾತಿಕಟ್ಟು (Synthesis of Caste) ಬೇರೆಬೇರೆ ಶಾಖೆಗಳಿಗೆ ಸೇರಿದ ಜನರನ್ನೂ (Ethnic types) ಒಟ್ಟುಗೂಡಿಸುವ ಸಂಘರಚನೆಯಂತೆ ಪ್ರಾರಂಭವಾಯಿತು. ನಿಜ, ಹಿಂದೂ ಮತಕ್ಕೆ ಸೇರದ ಪ್ರಕೃತಿ ಉಪಾಸಕರಾದ * ಎಷ್ಟೋ ಜನಗಳು ಇನ್ನೂ ಈ ದೇಶದಲ್ಲಿ ಇದಾರೆ. ಮತ್ತು ಹಿಂದೂ ಜನಗಳು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡಾಗ ಈ ಮತದ ಬೆಳವಣಿಗೆ ಮತ್ತು ಸುಧಾರಣೆಗಳು ಎರಡೂ ನಿಂತುಬಿಟ್ಟವು, ಮತ್ತು ಈ ವಿಷಯದಲ್ಲಿ ತಾವು ಮಾಡಬೇಕಾದ ಕಾರ್ಯವು ಇನ್ನೆಷ್ಟಿದೆ ಎಂದು ಈಗಿನ ಹಿಂದೂ ಜನರ ಮುಖಂಡರು ಸ್ವಲ್ಪ ಸ್ವಲ್ಪವಾಗಿ ತಿಳಿಯುತ್ತಿದಾರೆ.

### ೧೬. ಜಾತಿ (ವರ್ಣ) ಯು ಬಾಹ್ಯಜನರಿಂದ ಉಂಟಾದ ಕಷ್ಟಕ್ಕೆ ಹಿಂದುಗಳು ಕೊಟ್ಟ ಉತ್ತರವಾಗಿದೆ; ಮತ್ತಿದು ಸರ್ವರನ್ನೂ ಸಮರಸತೆಯಿಂದ ಒಟ್ಟುಗೂಡಿಸಿತು.

ಜಾತಿ ಪದ್ಧತಿ ಎಂದರೆ ಹಿಂದೂ ಮತವು ತನ್ನ ಮೇಲೆ ಶಕ್ತಿಯುತವಾಗಿ ಬಂದುಬೀಳುತ್ತಿದ್ದ ಬಾಹ್ಯವಿಷಯಗಳಿಗೆ ಕೊಟ್ಟ ಉತ್ತರವೆಂದೇ ಅರ್ಥ. ಜಾತಿ ಎಂದರೆ ಹಿಂದೂ ಮತವು ತನ್ನಲ್ಲಿ ಕೂಡಲು ಬಂದ ಬೇರೆ ಬೇರೆ ಜನರನ್ನು ನಾಗರೀಕರನ್ನಾಗಿ ಮಾಡಿದ ಉಪಕರಣವೇ ಸರಿ. ಇದರಿಂದ ಯಾವ ಜನರೇ ಆಗಲಿ ಯಾವುದೊಂದು ರೀತಿಯಲ್ಲಿ ಪ್ರತ್ಯೇಕವಾಗಿರುವಂತೆ ಕಂಡುಬಂದ ಕೂಡಲೇ ಅವರದೊಂದು ಜಾತಿಯಾಯಿತು. ಅಂದರೆ ಜನರೆಲ್ಲೆಲ್ಲಿ ಸೇರಿಕೊಂಡಾದರೂ ತಮ್ಮದೊಂದು ಮಾರ್ಗ (type)

* Animists

ವನ್ನು ಮಾಡಿಕೊಂಡ ಕೂಡಲೇ ಅಲ್ಲಲ್ಲಿ ಒಂದೊಂದು ಜಾತಿಯು ಏಳು ತ್ತಿತ್ತು. ಮೂಲಧರ್ಮಕ್ಕೆ ಸೇರಿದ ಜನರಲ್ಲಿ ಎಲ್ಲಾದರೂ ವಿರುದ್ಧ ಧರ್ಮವೊಂದು * ತಲೆದೋರಿ, ಅದು ಹರಡಿ ಹೊಸದೊಂದು ಪಂಥ (type) ವನ್ನು ಮಾಡಿಕೊಂಡರೆ ಕೂಡಲೇ ಹೊಸದೊಂದು ಜಾತಿಯು ಏಳುತ್ತಿತ್ತು. ಹೀಗಾಗಿ ಹಿಂದೂ ಜನಾಂಗವು ಬುದ್ಧಿಶಕ್ತಿಯಿಂದ ಬೇರೆ ಮಾಡಬಹುದಾದಷ್ಟು ವಿವಿಧ ಪಂಥ (types) ಗಳನ್ನು ಬೇರೆ ಮಾಡಿದೆ ಯಲ್ಲದೆ, ಇನ್ನೂ ಹೊಸ ಹೊಸ ಪಂಥಗಳು ಎದ್ದಲ್ಲಿ ಅವುಗಳನ್ನೂ ಕೂಡ ತನಗೆ ಸೇರಿದವೆಂದು ಸ್ವೀಕರಿಸಲು ಸಿದ್ಧವಾಗಿದೆ. ಏಕೆಂದರೆ ಜಗದ್ರಚ ನೆಗೆ ಮುಖ್ಯ ಸೂತ್ರವಾಗಿರುವ ಒಂದ ( = ಏಕತ್ವ) ರಲ್ಲಿರುವ ಅನೇಕ ತ್ವಕ್ಕೂ, † ಸಮರಸತೆಯನ್ನು ಪಡೆದ ಬಹುತ್ವಕ್ಕೂ ಕ್ರಮಕ್ಕೊಳಗಾದ ಮಿಶ್ರತ್ವಕ್ಕಾಗಿಯೂ ಹಿಂದೂಮತವು ಬದ್ಧಕಂಕಣವಾಗಿ ನಿಂತಿದೆ.

೧೭. ಈಗ ಲೋಕದಲ್ಲೆಲ್ಲಾ ಜಾತಿವೈಷಮ್ಯಗಳು ಉಂಟಾಗುತ್ತಿವೆ; ಆದರೂ ಸರ್ವಜನರೂ ತಮ್ಮತಮ್ಮ ಸ್ವಾತಂತ್ರ್ಯವನ್ನು ಅಭಿವೃದ್ಧಿಪಡಿಸಿಕೊಂಡು ಇತರರೊಡನೆ ಕೂಡಬೇಕು.

ಈ ಕಾಲದಲ್ಲಿ ಅನೇಕ ಪ್ರಸಿದ್ಧ ಲೇಖಕರು ಜಾತಿ ವೈಷಮ್ಯದ ಜಗದ್ಯುದ್ಧವೇ ಕ್ಷಿಪ್ರದಲ್ಲಿ ನಡೆಯುವುದೆಂದು ನಮಗಧೈರ್ಯವ ನ್ನುಂಟುಮಾಡುತ್ತಿದ್ದಾರೆ. ಆಯಾ ಜಾತಿಗೆ ಸೇರಿದ ಜನರಲ್ಲಿ ಈ ವಿಧ ವಾದ ಅಹಂಕಾರದ ದುರಭಿಮಾನವು ‡ ತಲೆದೋರಿರುವುದು ಈಕಾಲದ ವಿಶೇಷಸಂಗತಿ § ಯಾಗಿದೆ. ಬಣ್ಣವುಳ್ಳ ಜನರು ಲೋಕಾಧಿಕಾರದಲ್ಲಿ ತಮ್ಮದೂ ಒಂದು ಕೈ ಯಿರಬೇಕೆಂದು ಕೂಗಿ ಕೇಳುತ್ತಿದ್ದಾರೆ †† ರಾಜ ನೀತಿಪ್ರಕಾರ ಕೇವಲ ಪ್ರಜಾವರ್ಗದಲ್ಲಿ ಸೇರಿರುವ ಜನಗಳೂ ಕೂಡ ರಾಜ್ಯವು ತಮ್ಮದಾಗಬೇಕೆಂದೂ ತಮಗೆ ಸ್ವಾತಂತ್ರ್ಯವಿರಬೇಕೆಂದೂ ಹೊಡೆದಾಡುತ್ತಿದ್ದಾರೆ. ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಜನ

* Heresy † Many in one ‡ Self-consciousness
§ Phenomenon †† Clamouring

ಗಳು ಬಂದುಹೋಗುವುವರಲ್ಲಿ ಧರ್ಮ ನಿಯಮಗಳನ್ನು ನಿರ್ಧರಿಸುವ ವಿಷಯದಲ್ಲಿ ಲೋಕದಲ್ಲೆಲ್ಲಾ ದೊಡ್ಡ ಅವಾಂತರವೇ ಬಂದು ಬಿಟ್ಟಿದೆ.* ಅಶಕ್ತರೂ ಅಜ್ಞಾನಿಗಳೂ ಮತ್ತು ಸೋಮಾರಿಗಳೂ ಆದ ಜನಗಳನ್ನು ನಾಶಮಾಡಿ, ವಶವರ್ತಿಗಳನ್ನಾಗಿ ಮಾಡಿಕೊಂಡಾಗ ಈ ತಮ್ಮ ಕೆಲಸವು ಸರಿಯಾದದ್ದು ಮತ್ತು ಇಂಥಿಂಥಾ ಕಾರಣಗಳಿಗಾಗೆಂದು ಹೀಗೆ ವಾದಮಾಡಿದರು. ಅನಾಗರಿಕ ಜನರೂ (Races) ಮತ್ತು ಅಶಿಕ್ಷಿತ ಜನರೂ † ತಮ್ಮ ತಮ್ಮ ದೇಶಗಳಲ್ಲಿ ನಿರ್ಬಾಧಿತರಾಗಿ ಇರಬಹುದೆನ್ನುವುದಕ್ಕಾಗುತ್ತಿರಲಿಲ್ಲ. ಏಕೆಂದರೆ ಲೋಕವ್ಯವಹಾರದಲ್ಲಿ ಸಾಗುವಳಿ ಭೂಮಿಯನ್ನು ಪಾಳಾಗಿಯೂ ಖನಿಜಗಳನ್ನು ಅಗೆದುತೆಗೆದುಕೊಳ್ಳದಂತೆಯೂ ಬಿಡುವುದಕ್ಕಾಗುವುದಿಲ್ಲ. ಮತ್ತು ಸಾಧನಸಂಪತ್ತಿಯುಳ್ಳ ಪ್ರದೇಶಗಳನ್ನು ಅಕಸ್ಮಾತ್ತಾಗಿ ಸೇರಿ ವಾಸಿಸುತ್ತಿರುವ ಜನಗಳು ಅಲ್ಲಿಯ ಸಂಪತ್ತು ಸಾಮಗ್ರಿಯುಗಳನ್ನು ಅಭಿವೃದ್ಧಿಪಡಿಸಲು ಬಹು ಅಶಕ್ತರೂ, ಆಲಸ್ಯರೂ ಆಗಿದ್ದಲ್ಲಿ, ಅಂಥ ಪಾಳುಬಿಟ್ಟಿದ್ದ ಪ್ರದೇಶಗಳನ್ನು ಫಲವತ್ತಾಗಿ ಮಾಡಬಲ್ಲ ಜನರು ಬಂದು ಹಿಂದಿನವರನ್ನು ದೂರತಳ್ಳಿದರೆ ಹೀಗೆಮಾಡುವುದು ಸರಿಯಾದುದು ಮತ್ತು ಅವಶ್ಯಕವಾದ ಕಾರ್ಯವೇ ಸರಿ. ಯಾವುದೊಂದು ಜನರ (race) ಯದೃಚ್ಛಾಪರ್ಯಟನದಲ್ಲಿ ಯಾವುದೊಂದು ಪಂಗಡದವರು ಈ ಸ್ಥಳದಲ್ಲಿ ಇಂತಹವಸ್ತುವಿದೆ ಎಂದು ಊಹಿಸದೆಯೂ, ಇವರ ಉಪಯೋಗವು ಹೀಗೆಂದು ತಿಳಿಯದೆಯೂ ಬಂದು ವಜ್ರಭೂಮಿಯಲ್ಲಾಗಲೀ, ಎಣ್ಣೆಯ ಭಾವಿಯಿರುವ ಪ್ರದೇಶದಲ್ಲಾಗಲಿ ತಮ್ಮ ಡೇರೆಯನ್ನು ನೆಟ್ಟರೆಂಬುದೇ ಮುಖ್ಯವಾದ ವಿಷಯವಾದರೆ ಇಷ್ಟರಿಂದಲೇ ಆ ಪಂಗಡದವರಿಗೆ ತಮಗೆ ಸಿಕ್ಕಿರುವ ನಿಧಿಗಳಿಗೆ ಪ್ರತ್ಯೇಕವಾದ ಯಾವ ಪೂರ್ಣಹಕ್ಕೂ ಬರಲಾರದು: ಅಂದರೆ ಯಾವ ದೇಶವೂ ಕೇವಲ ತನ್ನ ಜನರಿಗಾಗಿಯೇ ಇರುವುದಿಲ್ಲ;‡ ಮತ್ತು ಲೋಕದ ಅವಶ್ಯಕತೆಗಳೇ ಮಿಕ್ಕ ಎಲ್ಲಾ ವಿಷಯಗಳಿಗಿಂತಲೂ ಹೆಚ್ಚಿನಮಾನ್ಯವನ್ನು ಪಡೆಯತಕ್ಕವುಗಳಾಗಿವೆ. ಆದರೆ ಈ ನ್ಯಾಯಕಾರಣವನ್ನು ಈಗಿನ ಸಂದರ್ಭಗಳಲ್ಲಿ ಉಪಯೋಗಿಸಿಲ್ಲ. ಜನಬಾಹುಳ್ಯದ ತಿಕ್ಕಾಟದಿಂದ

---

* Highly acute † Primitive people ‡ Belongs

ಅನೇಕ ಜನರು ತಮ್ಮ ತಮ್ಮ ದೇಶಗಳನ್ನು ಬಿಟ್ಟು ಕೆಲಸಕ್ಕಾಗಿ ಬೇರೆ ದೇಶಗಳಿಗೆ ಹೋಗುವುದವಶ್ಯಕವಾಗಿದ್ದರೂ, ಅಲ್ಪಸಂಖ್ಯಾಜನರಿಂದ ಕೂಡಿದ ವಿಸ್ತಾರಪ್ರದೇಶಗಳು ತಮ್ಮ ತಮ್ಮ ಸಂಪದಭಿವೃದ್ಧಿಗಾಗಿ ಕುಶಲಕರ್ಮಿಗಳನ್ನು ಬೇಕೆಂದು ಬೇಡುತ್ತಿದ್ದರೂ, ಇಂಥಾ ಅವಶ್ಯಕವಾದ ಏರ್ಪಾಡುಗಳು ನಡೆಯುವುದಕ್ಕೆ ಅಲ್ಲಿನ ಅಧಿಕಾರಗಳು ಇನ್ನೂ ಅವಕಾಶಕೊಟ್ಟಿಲ್ಲ. ಇದರಿಂದ ಅಮೇರಿಕಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಮುಂತಾದ ದೇಶಗಳು ಬಣ್ಣವುಳ್ಳ ಜನರಿಗೆ ಬಹಳವಾಗಿ ನಿಷೇಧಿಸಲ್ಪಟ್ಟ ದೇಶಗಳಾಗಿವೆ. ಲ್ಯಾಟಿನ್ ಅಮೇರಿಕವು ಬಹು ಸ್ವಲ್ಪಜನರಿಂದ ಕೂಡಿದೆಯಾಗಿ, ಇದು ಸುಲಭವಾಗಿ ಈಗಿರುವುದಕ್ಕಿಂತ ಹತ್ತರಷ್ಟು ಹೆಚ್ಚು ಜನಸಂಖ್ಯೆಯನ್ನು ಪೋಷಿಸಿ ತನ್ನ ಹುಟ್ಟುವಳಿಯನ್ನು ತಡೆಯಿಲ್ಲದಷ್ಟು ಮಟ್ಟಿಗೆ ಹೆಚ್ಚಿಸ ಬಹುದು. ಹೀಗೆಯೇ ಇನ್ನೂ ಹೆಚ್ಚು ಜನಸಂಖ್ಯೆಬೇಕೆಂದು ಎಷ್ಟೋ ದೇಶಗಳು ಕೈಯೊಡ್ಡಿ ಬೇಡುತ್ತಿವೆ. ಇಷ್ಟಾದರೂ ಜಾತಿಗರ್ವವೂ ಮತ್ತು ಶಕ್ತಿದರ್ಪಗಳ ಆಸೆಯೂ ಕೇವಲ ಶಾಸ್ತ್ರಸಮ್ಮತವಾದ ಧರ್ಮದ ಮತ್ತು ಆರ್ಥಿಕ ಅವಶ್ಯಕತೆಗಳ ಮಾತನ್ನೆಲ್ಲ ಬಿಟ್ಟು ಸ್ವೇಚ್ಛೆಯಾಗಿ ಮೆರೆಯುತ್ತಿವೆ.* ಹೀಗಿರುವಲ್ಲಿ ಇಂತಹ ಜನಸಂಮಿಶ್ರ†ಣವನ್ನು ಹೇಗೆ ಸುಲಭವಾಗಿ ಸಾಧಿಸಬೇಕೆನ್ನುವಲ್ಲಿ ಒದಗುವ ಕಷ್ಟತೊಡಕುಗಳನ್ನು ಹೇಗೆ ನಿವಾರಿಸಬೇಕೆಂದು ಹೇಳುವುದು ಈಗ ನನ್ನ ಕಾರ್ಯವಲ್ಲ. ಅವುಗಳೇನೋ ಕಠಿಣಪ್ರಸಂಗಗಳೇ ಸರಿ, ಆದರೆ ಪೃಥ್ವಿಯೆಲ್ಲಾ ಒಂದೇಮನತನಕ್ಕೆ ಸೇರಿದೆಯೆಂಬ ನಿಜವಾದ ಜ್ಞಾನದಿಂದಲೂ, ಮತ್ತೀ ತತ್ತ್ವವನ್ನು ನಮ್ಮ ಎಲ್ಲಾ ಸಂಬಂಧಗಳಲ್ಲಿಯೂ ಪ್ರಕಟಿಸುವುದಕ್ಕಾಗಿ ನಿಜವಾಗಿ ಯತ್ನಿಸುವುದರಿಂದಲೂ ಪೂರ್ಣವಾಗಿ ಉತ್ತರಗೊಳ್ಳುವವೇ ಹೊರತು ಬೇರೆ ದಾರಿಯಿಲ್ಲ, ಅಂದರೆ, ಲೋಕದಲ್ಲಿ ಎಲ್ಲ ಜನರೂ (races) ಒಟ್ಟಿಗೆ ಕೂಡಿ ಪ್ರತಿಯೊಬ್ಬರೂ ತಮ್ಮ ತಮ್ಮ ವಿಶೇಷಗುಣಗಳನ್ನು ಉಳಿಸಿಕೊಂಡು, ತಮ್ಮ ತಮ್ಮಲ್ಲಿರುವ ಉತ್ತಮಗುಣಗಳನ್ನು ಅಭಿವೃದ್ಧಿಪಡಿಸಿಕೊಳ್ಳುವಂತೆ ನಾವೆಲ್ಲರೂ ಪ್ರಯತ್ನಿಸಬೇಕು.

* Override all considerations † Racial problem

## ೧೮. ವರ್ಣ (= ಜಾತಿ) ವು ಸಂಘಭಾಗಗಳಿಂದ ಉಂಟಾಯಿತು. ಮತ್ತಿದರ ಳ ವರ್ಣಗಳೂ ಪ್ರತ್ಯೇಕವಾಗಿ ತಮ್ಮ ತಮ್ಮ ಕೆಲಸಗಳಲ್ಲಿ ನಿರತವಾಗಿವೆ

ಹಿಂದೂಮತದ ಚರಿತ್ರೆಯಲ್ಲಿ ಬಹುಪೂರ್ವದಲ್ಲಿಯೇ ಜಾತಿಪ್ರಭೇದಗಳು ಹಿಂದೂಜನರು ತಾವು ಬೇರಬೇರೆಯಾಗಿ ನೋಡಿಕೊಂಡಿರುವ ಆಯಾಯ ವಿಭಾಗವಿಷಯಗಳೆಂದು ಅರ್ಥ ಹೊಂದಿದವು. ಸಂಗಡ ಮತ್ತು ಔದ್ಯೋಗಿಕ ವಿಷಯಗಳಲ್ಲಿ ಈಗ ನೆಲೆಗೊಂಡಿರುವ ಅಕ್ರಮವೇ ಪ್ರತಿಯೊಂದು ಜಾತಿಪದ್ಧತಿ*ಯನ್ನೂ ಕ್ರಮಪಡಿಸುತ್ತ ಇನ್ನೂ† ಬಿಗಿಯಿಂದಿರುವ ಧರ್ಮಗಳಲ್ಲಿ ಕುಲಪದ್ಧತಿಗಳ ಪೂರ್ವಪ್ರಾಧಾನ್ಯವೇ ಈಗಲೂ ಪ್ರಾಧಾನ್ಯದಿಂದಿರುವುದಕ್ಕೆ ಕಾರಣವಾಗಿದೆ. ಸಂಘದೃಷ್ಟಿಯಿಂದ ನೋಡಿದರೆ ಜಾತಿಯು ಜನರ ವ್ಯೂಹಾಕೃತಿ‡ಯೇ ಹೊರತು ದೈವೀವ್ಯವಸ್ಥಾಪನೆಯಿಂದಾದ ಗುಪ್ತವಿಷಯವಲ್ಲ. ಅಂದರೆ ಇಂಥಾ ಜಾತಿವ್ಯವಸ್ಥೆಯು ಕಣ್ಣೆದುರಿಗಿರುವ ಭೇದಗಳು ಮತ್ತು ಆದರ್ಶದಲ್ಲಿರುವ ಐಕ್ಯತೆ ಇವೆರಡನ್ನೂ ಲಕ್ಷ್ಯದಲ್ಲಿಟ್ಟುಕೊಂಡು ಸಂಘವನ್ನು ಕ್ರಮಪಡಿಸುವ ಪ್ರಯತ್ನವಾಗಿದೆ. ಈ ವಿಷಯವನ್ನು ಮೊಟ್ಟಮೊದಲು ಪುರುಷಸೂಕ್ತವು ಸಂಘದ ಬೇರೆಬೇರೆ ಬಾಗಗಳು ವಿರಾಟ್‌ಪುರುಷನ ಅವಯವಗಳೆಂದು ಹೇಳುವಲ್ಲಿ ತಿಳಿಸುತ್ತದೆ. ಮಾನವ ಸಂಘವು ಸರ್ವಾವಯವಯುಕ್ತವಾದ ಪೂರ್ಣವಸ್ತುವಾಗಿ ಇದರ ಭಾಗಗಳು ಎಷ್ಟುಮಟ್ಟಿಗೆ ಸ್ವಭಾವರೀತ್ಯಾ ಪರಾಧೀನಗಳಾಗಿವೆ ಎಂದರೆ ಪ್ರತಿಯೊಂದು ಭಾಗವೂ ತನ್ನ ತನ್ನ ಪ್ರತ್ಯೇಕ ಕಾರ್ಯವನ್ನು ಮಾಡುವುದರಿಂದಲೇ ಇತರ ಭಾಗಗಳು ತಮ್ಮ ತಮ್ಮ ಕಾರ್ಯಗಳನ್ನು ನೇರವಾಗಿ ಮಾಡುವಂತೆ ಗೊತ್ತುಮಾಡುವುದು, ಮತ್ತು ಈ ಇತರ ಭಾಗಗಳು ತಮ್ಮ ತಮ್ಮ ಕಾರ್ಯಗಳನ್ನು ಮಾಡಿದಂತೆ ತಾನೂ ತನ್ನ ಕಾರ್ಯದಲ್ಲಿ ವ್ಯವಸ್ಥೆಯನ್ನು ಹೊಂದುತ್ತದೆ. ಈ ರೀತಿ

* Constitution † Still, ಈಗಲೂ

‡ Product of human organisation

ಯಿಂದ ನೋಡಿದಲ್ಲಿ ವಿಶ್ವವು (whole, ಅಖಂಡ) ತನ್ನ ಪ್ರತಿಯೊಂದು ಭಾಗದಲ್ಲಿಯೂ ಇದೆ, ಮತ್ತು ಈ ಭಾಗಗಳಲ್ಲಿ ಪ್ರತಿಯೊಂದೂ ವಿಶ್ವಕ್ಕೆ ಅತ್ಯವಶ್ಯಕವಾಗಿದೆ. ಪ್ರತಿಯೊಂದು ಸಂಘವೂ ತನಗೆ ಬೇಕಾದ ವಸ್ತುಗಳನ್ನು ಸಿದ್ಧಿಸಿಕೊಡುವ ಕಾರ್ಯದಲ್ಲಿ ನಿರತವಾಗಿರುವ ಪಂಗಡಗಗಳಿಂದ ಕೂಡಿದೆ. ಮತ್ತು ಹೀಗೆ ಆಯಾಯ ಪಂಗಡಗಳು ತಮ್ಮ ತಮ್ಮ ಕೆಲಸಗಳನ್ನು ಮಾಡುವಲ್ಲಿಯೇ ತಮ್ಮೆಲ್ಲರಿಗೂ ಸಾಮಾನ್ಯವಾದ ಧ್ಯೇಯ*ಕ್ಕಾಗಿ ಕೆಲಸಮಾಡುವಾಗ ಅವುಗಳೆಲ್ಲವೂ ಐಕ್ಯಭಾವದಿಂದಲೂ ಸಾಂಘಿಕಸೋದರತ್ವದಿಂದಲೂ ಕೂಡಿ ಒಟ್ಟಾಗಿ ಕಟ್ಟಲ್ಪಟ್ಟಿವೆ. ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಶಕ್ತಿಯುಳ್ಳವರೂ, ಯುದ್ಧಕಾರ್ಯಕ್ಕೂ ರಾಜಕಾರ್ಯಕ್ಕೂ ಸೇರಿದ ಜನರೂ, ಆರ್ಥಿಕ ಕೆಲಸಗಳಲ್ಲಿರುವ ಜನರೂ ಮತ್ತು ಹೆಚ್ಚು ಚಾತುರ್ಯ ಬೇಡದ ಸಣ್ಣ ಸಣ್ಣ ಕೆಲಸಗಳನ್ನು ಮಾಡುವ ಜನರೂ, ಎಲ್ಲರೂ ಸೇರಿ ಚಾತುರ್ವರ್ಣ್ಯಾತ್ಮಕವಾದ ಜಾತಿ (= ವರ್ಣ) ಸಂಸ್ಥೆ † ಯನ್ನುಂಟುಮಾಡುತ್ತಾರೆ. ‡ ಹೀಗೆಯೇ ಜನಜೀವನವ§ ಆಯಾಯ ಕೆಲಸಗಳನ್ನು ಸ್ಪಷ್ಟವಾಗಿ ಬೇರೆ ಮಾಡಿ, ಅವುಗಳಪ್ರತ್ಯೇಕವಾದ ಮತ್ತು ಪರಿಪೂರಿತ**ವಾದ ಗುಣಗಳನ್ನು ಇಷ್ಟಿಷ್ಟೇ ಎಂದು ತಿಳಿದುಕೊಂಡರು. ಇದರಿಂದ ಪ್ರತಿಯೊಂದು ಜಾತಿಗೂ ಅದರದರ ಸಾಂಘಿಕ ಉದ್ದೇಶವೂ ಮತ್ತು ಕೆಲಸವೂ ತಮ್ಮತಮ್ಮ ಪ್ರತ್ಯೇಕ ಧರ್ಮ†† ಸಂಪ್ರದಾಯಗಳೂ ಇರುತ್ತವೆ. ಪ್ರತಿಯೊಂದು ಜಾತಿಯೂ ತಮ್ಮ ತಮ್ಮ ಸಾಂಪ್ರದಾಯಕವೂ ಮತ್ತು ಸ್ವತಂತ್ರವೂ ಆದ ಸಂಘ (organisation, ಸಂಸ್ಥೆ) ಗಳಿಂದ ಕೂಡಿ ಆಹಾರ, ವಿವಾಹಗಳ ವಿಷಯಗಳಲ್ಲಿ ಕೆಲವು ವಿಶೇಷ ಪದ್ಧತಿಗಳನ್ನು ಆಚರಿಸುತ್ತಿರುವ ಒಂದು ಗೂಢ ‡‡ ಸಂಘ (corporation, ಮಂಡಲಿ) ವಾಗಿದೆ. ಪ್ರತಿಯೊಂದು ಸಂಘವೂ ಇತರರ ಅಡಚಣೆ ಇಲ್ಲದೆ ತನ್ನತನ್ನ ಸ್ವಂತ

* ಪುರುಷಾರ್ಥ, end † Organisation

‡ Constitute § Human life ** Complementary

†† Code. ಆಚಾರ ‡‡ Close, ದಟ್ಟ

ಉದ್ದೇಶಗಳನ್ನು ಸಾಧಿಸಿಕೊಳ್ಳಲು ಸ್ವತಂತ್ರವಾಗಿದೆ. ಆಯಾಯ ಜಾತಿಯವರ ಬೇರೆಬೇರೆ ಕೆಲಸಗಳು ತಮ್ಮೆಲ್ಲರ ಸುಖಸಾಧನ * ಕ್ಕೆ ಸಮಾನರೀತಿಯಿಂದ ಮುಖ್ಯವಾದವುಗಳೆಂದು ತಿಳಿಯುತ್ತಿದ್ದರು. ಗುರುವಿನ ಶಾಂತಿ † ಯೂ ಯೋಧನ ವೀರತ್ವವೂ, ವ್ಯಾಪಾರಿಯ ಸತ್ಯತೆಯೂ, ಕೆಲಸಗಾರನ ತಾಳ್ಮೆ ಮತ್ತು ಕ್ರಿಯಾಶಕ್ತಿ (energy) ಇವುಗಳೆಲ್ಲವೂ ಸಂಘದ ಅಭಿವೃದ್ಧಿಗೆ ಬಹಳ ಸಹಕಾರಿಗಳಾಗಿವೆ. ಏಕೆಂದರೆ ಇವುಗಳಲ್ಲಿ ಪ್ರತಿಯೊಂದಕ್ಕೂ ತಮತಮಗೆ ಸಂಬಂಧಪಟ್ಟ ವಿಶೇಷ ಪೂರ್ಣತೆಯೊಂದು ಇದ್ದೇ ಇರುವುದು.

## ೪. ಚಾತುರ್ವರ್ಣ್ಯ ಮತ್ತು ಜಾತಿವಿಮರ್ಶೆ

### ೧೯. ಬ್ರಾಹ್ಮಣರು ಸಂಘದ ಆಧ್ಯಾತ್ಮ ಧ್ಯೇಯಗಳನ್ನು ಬೋಧಿಸುತ್ತಿದ್ದರು

ಜಾತಿಧರ್ಮಗಳು ಸಂಘದ ಬೇರೆಬೇರೆ ಪಂಗಡಗಳಲ್ಲಿ ಇರಬೇಕಾದ ವ್ಯವಸ್ಥೆ* ಯನ್ನು ಉಂಟುಮಾಡುತ್ತವೆ. ಬ್ರಾಹ್ಮಣರಿಗೆ ಸ್ವಾತಂತ್ರ್ಯ ವಿರಾಮಗಳನ್ನು ಕೊಟ್ಟು ಅವರು ಆಧ್ಯಾತ್ಮಿಕ ಆದರ್ಶ (=ಧ್ಯೇಯ) ಗಳನ್ನು ಅಭಿವೃದ್ಧಿಪಡಿಸಿ, ಎಲ್ಲಾಕಡೆಯೂ ಹರಡಲು ಅವಕಾಶ ಕಲ್ಪಿಸಿ ಕೊಟ್ಟರು. ಹೇಗೆಂದರೆ ಇವರಿಗೆ ಇತರರು ದಾನಕೊಡುವುದು ಒಳ್ಳೆಯದೆಂದೂ ಅವಶ್ಯಕವೆಂದೂ ಹೇಳಿ ಸಹಾಯಮಾಡಿದುದರಿಂದ ಇವರಿಗೆ ಸಂಸಾರ (= ಜೀವನ) ತಾಪತ್ರಯಗಳು ಬಹಳಮಟ್ಟಿಗೆ ಕಡಿಮೆಯಾದವು. ಹೀಗೆಯೇ ಇವರು ತಮ್ಮ ಜಾತಿ (class ಪಂಗಡ) ಪ್ರಯೋಜನ ಮತ್ತು ದುರಭಿಮಾನಗಳನ್ನು ಬಿಟ್ಟು ವಿಶಾಲವೂ ಮತ್ತು ಸರ್ವಸಮಾನವೂ ಆದ ದೃಷ್ಟಿಯುಳ್ಳವರೆಂದು ಹೇಳುತ್ತಾರೆ. ಇದರಿಂದ ರಾಜರು ಇವರನ್ನು ತಮ್ಮ ಮಂತ್ರಾಲೋಚನೆಗಾಗಿ ಕರೆಸುತ್ತಿದ್ದರು ಇವರಾದರೋ ಯಾವರಾಜರಿಗೂ ಅಧೀನರಲ್ಲ. ಹೀಗೆಯೇ ರಾಜ್ಯ (State)ವು ಸಂಘದ

* ಯೋಗಕ್ಷೇಮ, wellbeing

† Serenity, ಪ್ರಸನ್ನತೆ, ಸೌಮ್ಯತ್ವ ‡ Adjustment

ಒಂದು ಪಂಗಡವಾಗಿ ಇತರ ವ್ಯವಸ್ಥಾಪನೆಯಲ್ಲಿ ಇದು ಮುಖ್ಯವಾಗಿ ಸೈನಿಕ ವೃತ್ತಿಯಲ್ಲಿ ಇದ್ದಿತು. ಮತ್ತಿದರ ವಿಶೇಷಕೆಲಸವು ಏನಾಗಿತ್ತೆಂದರೆ ದೇಶದಲ್ಲಿ ಶಾಂತಿಕ್ರಮ (Order. ಧರ್ಮ) ಗಳನ್ನೂ ಇರುವಂತೆ ಚೆನ್ನಾಗಿ ರಕ್ಷಿಸಿಕೊಂಡು ಆಯಾ ಪಂಗಡದವರು ಪ್ರೀತಿ * ಯಿಂದ ವರ್ತಿಸುತ್ತಿರುವಂತೆಯೂ ಮತ್ತು ಧರ್ಮವು ಕೆಡದಂತೆಯೂ ನೋಡಿಕೊಳ್ಳುವುದೇ ಆಗಿದ್ದಿತು. ರಾಜ್ಯಭಾರವು ಜನರ ಉತ್ತಮ ಏಳಿಗೆಗಾಗಿ ಸರ್ವದಾ ಕೆಲಸಮಾಡಬೇಕಾಗಿದ್ದ ಕಾರ್ಯನಿರ್ವಾಹಕ ಮಂಡಲಿಯಾಗಿದ್ದಿತು. ಮತ್ತು ಬ್ರಾಹ್ಮಣರು ಇಂತಹ ರಾಜ್ಯಭಾರದ ಉಪದೇಶಕ (Advisors. ಬೋಧಕ) ರಾಗಿ ಸಂಘದ ನಿಜವಾದ ಹಿತವನ್ನು ಸೂಚಿಸುತ್ತಾರೆ.

೨೦. ಕ್ಷತ್ರಿಯರು ರಾಜಕಾರ್ಯದಲ್ಲಿ ಪ್ರವೃತ್ತರಾಗಿದ್ದರು; ಮತ್ತು ರಾಜ್ಯವು ಕೇವಲ ಸೈನಿಕರ ಪಾಲಾಗಿರಲಿಲ್ಲ.

ಜನರು ಪ್ರತಿಯೊಂದು ಸಂಘ (community) ದ ರಾಜಕೀಯ ಮತ್ತು ಆರ್ಥಿಕ ಜೀವನವು ತನಗೆ ಬೇಕಾದ ಉತ್ತೇಜನವನ್ನು ತನ್ನ ಆಧ್ಯಾತ್ಮಿಕ ಜೀವನದಿಂದ ಹೊಂದುವುದೆಂದು ನಂಬುತ್ತಾರೆ. * ಈ ತತ್ತ್ವವು ರಾಜ್ಯವು ಕೇವಲ ಯೋಧರ ಕೈಯಲ್ಲಿ ಸಿಕ್ಕಿದ (military) ನಿರಂಕುಶ ಪ್ರಭುತ್ವವಾಗದಂತೆ ನಮ್ಮ ರಾಜ್ಯಗಳನ್ನು ಚೆನ್ನಾಗಿ ಕಾಪಾಡಿದೆ. ಏಕೆಂದರೆ ರಾಜ್ಯಶಕ್ತಿಯು ಪ್ರಭುತ್ವ ಮಾಡುವ ವರ್ಗಕ್ಕೆ ಸೇರಿದ ಕೇವಲ ಕೆಲವು ಜನರ ಹಿತಕ್ಕಾಗಿಯೇ ಇರುವುದೆಂದಾಗದೆ ನಿಜವಾಗಿಯೂ ರಾಜ್ಯದಲ್ಲಿರುವ ಎಲ್ಲಾ ಜನರ ಹಿತಕ್ಕಾಗಿ ನಿಂತಿದೆ. ಸರ್ವ ಜನರ ಹಿತವನ್ನೊದಗಿಸಿ † ಜನಜೀವನವು ನಡೆಯುವಂತೆ ಮಾಡುವ ಸಕಲ ವ್ಯವಸ್ಥಾ (insututution) ಸಮೂಹವನ್ನೂ ಧರ್ಮವು ತಿಳಿಸುತ್ತಿರಲು ಉತ್ತಮ ಜೀವನವನ್ನು ಹೆಚ್ಚಿಸಲು ಬೇಕಾದ ಅನುಕೂಲಗಳನ್ನು ಸರ್ವ

* Harmony † Expected, ನಿರೀಕ್ಷಿಸು

‡ Commonweal, ಲೋಕಹಿತ

ರಿಗೂ ದೊರಕಿಸಿಕೊಡುವ ರಾಜಕೀಯ ಸಂಸ್ಥೆಯನ್ನು ರಾಜ್ಯಭಾರವು ತಿಳಿಸುತ್ತದೆ. ತಮ್ಮ ತಮ್ಮ ಸಾಧಾರಣ ವಿಷಯಗಳನ್ನು ಸರಿಯಾಗಿ ನೋಡಿಕೊಳ್ಳಲು ಬೇಕಾದ ಸ್ವಾತಂತ್ರ್ಯವನ್ನು ಅವುಗಳಿಗೆ ಕೊಟ್ಟಿದ್ದ ವ್ಯಾಪಾರ ಮಂಡಲಿ, * ಗೃಹವಿಷಯ (life) ಮೊದಲಾದ ಇತರ ಸಂಸ್ಥೆಗಳನ್ನು ರಾಜ್ಯವು (state, ಸರ್ಕಾರ, ರಾಜನು,) ತನ್ನಲ್ಲಿ ಇಟ್ಟುಕೊಳ್ಳಲಿಲ್ಲ. ಮತಶಾಸ್ತ್ರ ಕಲೆಗಳಲ್ಲಿ ಯಾವುದನ್ನು ತಡೆಯುದಿದ್ದರೂ, ರಾಜ್ಯವೇನೋ ಇವುಗಳೆಲ್ಲಕ್ಕೂ ಅವಶ್ಯಕವಾದ ಬಾಹ್ಯಾನುಕೂಲಗಳಿಂದ ಶಾಂತಿ ಸ್ವಾತಂತ್ರ್ಯಗಳನ್ನು ದೊರಕಿಸಿಕೊಟ್ಟಿತು. ಇದರಿಂದ ಈಗಿನ ಕಾಲದಲ್ಲಿ ಸಾಧಾರಣ ದೃಷ್ಟಿಯಿಂದ ನೋಡಿದಲ್ಲಿ ರಾಜ್ಯದ ಕಾರ್ಯಗಳಿಗೆ ಯಾವ ತಡೆಯೂ ಇಲ್ಲ, ಮತ್ತವುಗಳು ಸಂಘ ಜೀವನವನ್ನೆಲ್ಲಾ † ಬಹು ಮಟ್ಟಿಗೆ ಆವರಿಸಿಕೊಂಡು ಬಿಟ್ಟಿವೆ.

೨೧. ಅಂದರೆ, ಅಹಿಂಸಾವ್ರತದಲ್ಲಿದ್ದರೂ, ಮನುಷ್ಯ ಸ್ವಭಾವವನ್ನರಿತು, ಹಿಂದುಗಳು ಈ ಶಕ್ತ್ಯುಪಾಸಕರನ್ನು ತಮ್ಮಲ್ಲಿ ಇಟ್ಟುಗೊಂಡರು.

ಹಿಂದೂ ಜನರು ಅಹಿಂಸಾ ತತ್ತ್ವವನ್ನು ಎಷ್ಟು ಹೆಚ್ಚಾಗಿ ಪ್ರೀತಿಸುತ್ತಿದ್ದರೂ ಶಕ್ತಿಪ್ರಯೋಗಕ್ಕಾಗಿ ಬದ್ಧಕಂಕಣರಾಗಿದ್ದ ಜನರಿಗೂ ಕೂಡ ತಮ್ಮಲ್ಲಿದ್ದುಕೊಳ್ಳುವಂತೆ ಅವಕಾಶ ಗೊಟ್ಟರು. ಮನುಷ್ಯ ಸ್ವಭಾವವು ಈಗಿರುವಂತೆಯೇ ಇದ್ದು ಸಂಘವು ಉನ್ನತ ಶಿಖರವನ್ನು ಸೇರದಿರುವ ವರೆಗೂ, ನಮಗೆ ಶಕ್ತಿಯ ಸಹಾಯವು ಬೇಕೇ ಬೇಕಾಗಿದೆ. ಸಕಲ ಸುಖ ‡ ಶಾಂತಿಗಳಿಗೂ ವಿರುದ್ಧರಾಗಿರುವ ಜನರು ಸಂಘದಲ್ಲಿ ಇರುವ ವರೆಗೂ ಇಂಥಾ ಸಂಘ ವಿರೋಧಿಗಳ ಹಾವಳಿಯನ್ನು ತಡೆಯಲು ತಕ್ಕ ನಿರೋಧನಗಳನ್ನು § ಸಂಘವು ಏರ್ಪಡಿಸಿಕೊಂಡು ಇದ್ದೇ ಇರಬೇಕು. ಯುದ್ಧ ಅಥವಾ ಅಂತಃಕಲಹಗಳಿಂದ ಸಮಾಜದ ಆಯುಕಟ್ಟು ** ಸಡಿಲ

* trade guilds † social life ‡ order, ಕ್ರಮ
§ controls ** ರಚನೆ, structure

ವಾಗುತ್ತಿರುವಾಗ ಈ ಸಂಘ ವಿನಾಶಕ ಶಕ್ತಿಗಳು ದಂಗೆಗಾಗಿ ಒಟ್ಟುಗೂಡು ತ್ತವೆ. ಈಗ ನಡೆದ ನಿಮ್ಮ ಒಂಬತ್ತು ದಿನದ ಕಾರ್ಯವಿರಾಮದಲ್ಲಿ * ತುಂಟಾಟ ಪಾತಕಗಳು ಬಹಳ ಮಟ್ಟಿಗೆ ಕಡಿಮೆಯಾಗಿದ್ದ ವೆಂಬುದರಿಂದ ನಿಮ್ಮ ಗ್ರೇಟ್ ಬ್ರಿಟನ್ನಿನ (ಬ್ರಿಟಿಷ್ ದ್ವೀಪಗಳ) ಸಮಾಜ ರಚನೆಯು ಪ್ರತಿಯೊಂದು ಭಾಗಪಲ್ಲಿಯೂ † ಸಾಮಾನ್ಯವಾಗಿ ದೃಢವಾಗಿರುವುದೆನ್ನು ವುದರಿಂದ ಬಹಳ ಸಂತೋಷವಾಗುತ್ತದೆ.

## ೨೨. ವೈಶ್ಯರು ದುರಾಶೆ ಬಿಟ್ಟು ಧರ್ಮದಿಂದ ವ್ಯಾಪಾರವನ್ನು ಮಾಡುತ್ತಿದ್ದರು.

ದುರಾಶೆಯನ್ನು ತಡೆದು ಧನದಿಂದೊದಗುವ ಧರ್ಮ ಕರ್ತವ್ಯಗಳನ್ನು ಸಿದ್ಧಪಡಿಸಿಕೊಳ್ಳಲು ಅರ್ಥ ಸೇವಕರಾದ ವೈಶ್ಯರಮಂಡಲಿ ಯೊಂದು ಬೇಕಾಯಿತು. ಏಕೆಂದರೆ ನಮ್ಮ ಈ ಪೂರ್ವಜರು ಧನ ‡ ವನ್ನು ಕೇವಲ ಸೇವಾಕರಣವಸ್ತುವೆಂದು ತುಚ್ಛವಾಗಿ ತಿಳಿಯುತ್ತಿದ್ದರು. ಹಿಂದೂ ಮತದ ಶ್ರೇಷ್ಠ ಕಾಲದಲ್ಲಿ ಧನಾಢ್ಯ §ರೆಲ್ಲರೂ ತಮ್ಮ ಸಕಲೈಶ್ವ ರ್ಯವನ್ನೂ ಕೇವಲ ಸಂಘಪರವಾದ ನಿಧಿ ** ಯೆಂದು ಕಾಣುತ್ತ ತಮ್ಮ ತಮ್ಮ ಸಮಾಜದ ವಿದ್ಯಾಭ್ಯಾಸ, ಔಷಧಿ ಸಹಾಯ, ನೀರಿನ ಅನುಕೂಲ ಮತ್ತು ಸಂತೋಷಕೂಟಗಳನ್ನು ಏರ್ಪಡಿಸಿಕೊಡುತ್ತಿದ್ದರು. ನಮ್ಮ ದುರ್ಭಾಗ್ಯದಿಂದ ಈಗಿನಕಾಲದಲ್ಲಿ ಲೋಕದಲ್ಲಿ ಸಾಧಾರಣವಾಗಿ ಎಲ್ಲೆಲ್ಲಿ ನೋಡಿದರೂ ಧನಾರ್ಜನೆಯ ಕಷ್ಟವನ್ನು ತಡೆಯಲಾರದೆ ಎಷ್ಟೋ ಜನರು ನಾಶವಾಗುತ್ತಿದಾರೆ. ಇಂಥಾ ದ್ರವ್ಯೇಷಣವು ಸಂಘ ಜೀವನ ವನ್ನು ನಾಶಮಾಡಿ, ಆಧ್ಯಾತ್ಮಿಕ ಗುಣಗಳನ್ನು ಬೆಳೆಯದಂತೆ ತಡೆಯು ತ್ತಿದೆ. ದುಡ್ಡೇ ಕೇವಲಸ್ವಾರ್ಥಭೋಗದ ಉಪಕರಣವಾಗಿ ಬಿಟ್ಟು, ಲೋಕಸಾಮಾನ್ಯವಾದ ದುರಾಶೆಯೇ ಲೋಕದಲ್ಲಿ ಎಲ್ಲೆಲ್ಲಿಯೂ ನಾವು

---

* strike † ಪದರ, strata ‡ ಆಸ್ತಿ, property

§ ಶ್ರೀಮಂತ, ಐಶ್ವರ್ಯವಂತ, Possessor of property.

** Social trust

ನೋಡುತ್ತಿರುವ ಹೆಚ್ಚು ಕ್ರೌರ್ಯ ನೀಚತನಗಳಿಗೆ ಕಾರಣವಾಗಿದೆ. ಹಿಂದೂ ಮತವಾದರೋ 'ಧರ್ಮ ವ್ಯಾಪಾರಗಳನ್ನು ಒಟ್ಟುಗೂಡಿಸುವುದಕ್ಕೆ ಪ್ರಯತ್ನಪಟ್ಟರೆ ಇವೆರಡೂ ಉತ್ತಮಸಾಮಾನುಗಳೂ ಒಟ್ಟಿಗೇ ಕೆಡುತ್ತವೆ' ಎಂಬ ಮಾತನ್ನು ಸ್ವಲ್ಪವೂ ಒಪ್ಪುವುದಿಲ್ಲ. ಏಕೆಂದರೆ ಶ್ರೇಷ್ಠ ಜೀವನದಿಂದ ಶಾಶ್ವತ * ತತ್ವಗಳನ್ನು ನಾವೆಂದಿಗೂ ಬೇರೆ ಮಾಡಬಾರದು.

## ೨೩. ಶೂದ್ರೋತ್ಪತ್ತಿ, ಮತ್ತು ಹೊರಗಿನಿಂದಬಂದ ಜನರನ್ನು ಹಿಂದೂಗಳು ತಮ್ಮಲ್ಲಿ ಹೇಗೆ ಸೇರಿಸಿಕೊಂಡರು.

ಹೀಗೆಯೇ ಕುಶಲವಿದ್ಯೆಯನ್ನರಿಯದ ಕೆಲಸಗಾರರೂ ಮತ್ತು ಕೃಷಿಗಾರರೂ ಸೇರಿ ಕಿರುಕುಲದವರಾ † ಗುತ್ತಾರೆ. ಈ ಜಾತಿಗಳು ತಮ್ಮ ತಮ್ಮ ವಿಚಾರಗಳಲ್ಲೇ ಮಗ್ನವಾಗಿಯೂ ಪರಸ್ಪರವಾಗಿ ಇತರ ಸಂಘಗಳೊಡನೆ ಪ್ರೀತಿಯಿಂದಿ ‡ ರುತ್ತಲೂ ಇರುವ ಸಂಘಶರೀರದ ನಿಜ ಜೀವಯುಕ್ತವಾದ ಅಂಗಗಳಾಗಿ ಇವೆ. ಹಿಂದೂ ಮತಕ್ಕೆ ಯಾವುದೊಂದು ಹೊಸಸಂಗಡವನ್ನು ಸೇರಿಸಿಕೊಂಡರೂ, ಅದು ಮುಖ್ಯವಾದ ಚಾತುರ್ವರ್ಣ್ಯದ ಯಾವುದಾದರೊಂದು ಭಾಗದಲ್ಲಿ ಸೇರಿಹೋಗುತ್ತದೆ.§ ಎಷ್ಟೋ ಜನ (races) ಹೊರಗಿನಿಂದ ಬಂದವರನ್ನು ಕ್ಷತ್ರಿಯರನ್ನಾಗಿ ಸ್ವೀಕರಿಸಿದ್ದಾರೆ. ಮಿಸ್ಟರ್ ಜ್ಯಾಕ್ಸನ್ನರು ಹೀಗೆ ಬರೆಯುತ್ತಾರೆ:— 'ಕಾಡು ಜನರಾಗಿದ್ದ ತುರ್ಕೀ ಜನರನ್ನು ತಮ್ಮ ರಜಪೂತ್ ಅರಸರ ವಂಶಕ್ಕೆ ಸೇರಿದ ಎಷ್ಟೋ ಜನ ಪ್ರಸಿದ್ಧ ವೀರಪುರುಷರನ್ನಾಗಿ ಮಾಡಿರುವಷ್ಟುಮಟ್ಟಿಗೆ ಭರತಖಂಡವು ಮಧ್ಯ ಏಷಿಯಾ ದೇಶದ ಪಶುಪಾಲಕ ** ರನ್ನು ಸಾಧುಮಾರ್ಗಕ್ಕೆ ತಂದು ನಾಗರೀಕರನ್ನಾಗಿ ಮಾಡಿರುವುದೆಂಬು

* ನಿತ್ಯವಸ್ತು, Eternal values

† Poletariat ‡ In co-operation § Affiliated

** Nomads, ಒಂದೇಕಡೆಯಲ್ಲಿ ಬಹುಕಾಲ ನಿಲ್ಲದೆ ದೇಶದೇಶಗಳನ್ನು ಸಂಚರಿಸುತ್ತಿರುವ ಜನಗಳು.

ದನ್ನು ತಿಳಿಯದಿರುವ ಭಾರತೀಯರು ತಮ್ಮ ದೇಶದ ಘನತೆ * ಯು ಎಷ್ಟು ದೊಡ್ಡದಾಗಿದ್ದಿತೆಂದು ಸ್ವಲ್ಪವೂ ಚೆನ್ನಾಗಿ ತಿಳಿದುಕೊಂಡಿಲ್ಲ.†

## ೨೪. ವರ್ಣಧರ್ಮವು ಜನರನ್ನು ಸ್ವಾರ್ಥತೆಯಿಂದ ಕಾಪಾಡಿದೆ, ಮತ್ತು ಜನರ ಗುಣಕರ್ಮಗಳನ್ನಾಶ್ರಯಿಸಿ ನಿಂತಿದೆ.

ವರ್ಣಾಶ್ರಮ (= ಜಾತಿ) ಧರ್ಮ (system) ವು ಜನಜೀವನದಲ್ಲಿ ಧರ್ಮವು (Law) ದಯಾದಾಕ್ಷಿಣ್ಯವಿಲ್ಲದ (Cold) ಕೇವಲ ಹೋರಾಟವಾಗಿರದೆ ಪ್ರೀತಿವಾತ್ಸಲ್ಯಗಳಿಂದ‡ ಕೂಡಿರಬೇಕೆಂದು ಒತ್ತಿ ಹೇಳುತ್ತದೆ. ಏಕೆಂದರೆ ಸಮಾಜವು ಜನರ ಪರಸ್ಪರ ಹೋರಾಟಕ್ಕಾಗಿ ಏರ್ಪಟ್ಟಿರುವ ರಂಗಸ್ಥಳವಲ್ಲ, ಮತ್ತು ಇಂಥ ಸಮಾಜದಲ್ಲಿ ಯಾವ ವರ್ಣದವರೂ ಕೂಡ ಇತರ ವರ್ಣದವರೊಡನೆ ಹೋರಾಡಲು ಅವಕಾಶವೇ ಇಲ್ಲ. ಜನರು ಯಾವ ಪಂಗಡದಲ್ಲಿ ಹುಟ್ಟಿದರೂ ಕೂಡ ಆಯಾ ಪಂಗಡಕ್ಕೆ ತಕ್ಕ ರೀತಿಯಲ್ಲಿ ಶಿಕ್ಷಣ ಹೊಂದುವರೇ ಹೊರತು ಬೇರೆ ಯಾವುದೊಂದು ಹೊಸ ದಾರಿಯಲ್ಲಿ ನಡೆಯಬೇಕೆಂದರೆ ಇವರು ಬಹಳ ಕಷ್ಟಪಡಬೇಕಾಗುತ್ತದೆ. ಹೀಗೆ ಪ್ರತಿಯೊಬ್ಬ ಮನುಷ್ಯನಿಗೂ ಅವನದೆಂದೇ ವಿಶೇಷವಾಗಿರುವ ಸ್ವಭಾವವೊಂದಿರುವುದು, ಮತ್ತೆ ಇದಕ್ಕೆ ತಕ್ಕ ಸ್ವಧರ್ಮವನ್ನೇ ಅವರವರು ಯೋಗ್ಯರೀತಿಯಲ್ಲಿ ಚೆನ್ನಾಗಿ ಆಚರಿಸಬಲ್ಲರಾದುದರಿಂದ ಧರ್ಮ ಕರ್ಮಗಳನ್ನು ಬದಲಾಯಿಸಲು ಸಾಮಾನ್ಯವಾಗಿ ಯಾರಿಗೂ ಅವಕಾಶ ಕೊಟ್ಟಿಲ್ಲ. ಏಕೆಂದರೆ ನಮ್ಮ ಸ್ವಭಾವವು ಇನ್ನೂ ಪರಿಪಕ್ವವಾಗಿಲ್ಲವಿದ್ದಾಗ ಹಠಾತ್ತಾಗಿ ನಮ್ಮ ಕ್ಲುಪ್ತಕರ್ಮವನ್ನು ಬಿಟ್ಟುಬೇರೆ ಒಂದು ಕರ್ಮವನ್ನು ಕೈಗೊಂಡೆವೆಂದರೆ ಈ ಹೊಸ ಕರ್ಮವು ತನ್ನ ನಿರ್ದಿಷ್ಟ ಸಿದ್ಧಿಯನ್ನು ಕೊಡದಿರುವುದಲ್ಲದೆ ಒಂದೊಂದು ಸಲ ಇಂಥಾ

* ಮಾಹಾತ್ಮ್ಯೆ, ಶ್ರೇಷ್ಠತೆ, Greatness.

† Indian Antiquary (ಭಾರತೀಯ ಇತಿಹಾಸ ಶೋಧನ ಪತ್ರಿಕೆ) ಜನವರಿ ೧೯೧೧.—ಭಾಷ್ಯವನ್ನು ನೋಡಿ N.S.S.

‡ ಸೋದರಭಾವ, ಸೌಹಾರ್ದ್ರ, Brotherhood

ಕರ್ತೃವಿನ ವ್ಯಕ್ತಿತ್ತ್ವವನ್ನೇ ಸಂಪೂರ್ಣವಾಗಿ ನಾಶಮಾಡಿ ಬಿಡಬಹುದು. ನಾವುಗಳೇನೋ ನಮ್ಮ ಜೀವಿಕೆಯ ವಿಶೇಷಮಾರ್ಗವನ್ನು ಬದಲಾಯಿಸುವುದಕ್ಕಾಗಲೀ ಮಾರ್ಪಡಿಸುವುದಕ್ಕಾಗಲೀ ಇಷ್ಟಪಡಬಹುದು., ಆದರೆ ಹೀಗೆ ನಡೆಸಲು ನಮಗೆಂದಿಗೂ ತಕ್ಕ ಶಕ್ತ್ಯನುಕೂಲಗಳು ಇಲ್ಲ. ಏಕೆಂದರೆ ಪ್ರಕೃತಿಯನ್ನು ಕೇವಲ ನಮ್ಮ ಇಚ್ಛೆಯಂತೆ ಜಾಗ್ರತೆಯಿಂದ ಮುಂದುವರಿಯುವಂತೆ ಮಾಡಲಾಗುವುದಿಲ್ಲ. ಈ ನಾಲ್ಕು ವರ್ಣಗಳೂ ಜ್ಞಾನಕರ್ಮ ರಾಗ(feeling)ಗಳನ್ನು ಹೆಚ್ಚಾಗಿ ಹೊಂದಿರುವ ಮತ್ತಿವುಗಳಲ್ಲಿ ಯಾವುದೊಂದನ್ನೂ ಹೆಚ್ಚಾಗಿ ಹೊಂದದಿರುವ ಜನರನ್ನೂ ಸೂಚಿಸುತ್ತವೆ * ನಿಜ, ಇವುಗಳೇನೋ ಕೇವಲ ಪ್ರಧಾನವಾಗಿವೆಯೇ ಹೊರತು ವಿಶೇಷ † ಗುಣಗಳಲ್ಲ, ಮತ್ತು ವರ್ಣಸಂಕರ ಮತ್ತು ಮಿಶ್ರಜಾತಿಗಳನ್ನುಂಟುಮಾಡುವ ಇವುಗಳ ಪರಿವರ್ತನ (Permutation) ಸಂಸರ್ಗ (Comb nation) ಗಳು ಎಷ್ಟೋ ವಿಧವಾಗಿವೆ. ಭಗವದ್ಗೀತಾಕಾರರು ಈ ವರ್ಣ ವಿಭಾಗಗಳು ಪ್ರತಿಯೊಬ್ಬ ಮನುಷ್ಯನ ಗುಣಕರ್ಮ‡ (aptitude) ಗಳನ್ನನುಸರಿಸಿ ಇರುವುವೆಂದು ನಂಬುತ್ತಾರೆ § ಕರ್ಮವು ಗುಣಾನುಯಾಯಿಯಾಗಿದೆ,ಮತ್ತೆ ಪ್ರಕೃತಿಜನ್ಯವಾದ ಈ ಗುಣಗಳನ್ನು** ಸಾವಧಾನವಾಗಿ ಮಾತ್ರ ಬದಲಾಯಿಸಬಹುದು. ಪ್ರತಿಯೊಬ್ಬ ಮನುಷ್ಯನ ವಿಷಯದಲ್ಲಿಯೂ ಇವನಿವನು ಇಂಥಿಂಥಾಕ್ರಿಯಾಶಕ್ತಿ (Aptitude) ಗಳುಳ್ಳವನೆಂದು ನಾವು ನಿರ್ಧರಿಸುವುದಕ್ಕಾಗುವುದಿಲ್ಲವಾದುದರಿಂದ ಜನರ ಜೀವನವೃತ್ತಿಯನ್ನು ಗೊತ್ತುಮಾಡುವಾಗ ಅವರವರ

---

* ಹೀಗೆಯೇ ಇದನ್ನೂ ಕೇಳಿನೋಡಿ;—ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಸತ್ವರಜಸ್ತಮೋಗುಣಪ್ರಧಾನರು, ಮತ್ತು ಶೂದ್ರರೋ ಈ ಗುಣಗಳಲ್ಲಿ ಯಾವುದನ್ನೂ ವಿಶೇಷವಾಗಿ ಹೊಂದದೆ, ಗುಣಸಾಮ್ಯದಿಂದ ಕೂಡಿರುವರು. "ಸದ್ಗುಣೋ ಬ್ರಾಹ್ಮಣೋವರ್ಣಃ ಕ್ಷತ್ರಿಯಸ್ತು ರಜೋಗುಣಃ । ತಮೋಗುಣ ಸ್ತಥಾವೈಶ್ಯೋ ಗುಣಸಾಮ್ಯಾತ್ತು ಶೂದ್ರತಾ॥" † Exclusive ‡ Aptitudes § III. 21; XVII, 13; 41, 45—6 ** Qualities in nature

ಕುಲಗೋತ್ರ (ಮನೆಮಠ) ಗಳನ್ನು * ವಿಚಾರಿಸುವರು ಆಯಾಜನರ ವೃತ್ತಿ (functions, ಕರ್ಮ) ಗಳು ವಂಶಪಾರಂಪರ್ಯವಾದವುಗಳೆಂದು ಹೇಳುತ್ತಿದ್ದರೂಕೂಡ, ಇವುಗಳಿಗೆ ಎಷ್ಟೋ ಪ್ರತಿಷೇಧಗಳನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದರು. ಏಕೆಂದರೆ ಬಹುತ್ಯಾಜ್ಯರೆಂದು ತೋರಬಹುದಾದ ಸ್ತ್ರೀಶೂದ್ರಾದಿ ಜನರಿಂದಲೂ ಕೂಡ ನಾವೆಲ್ಲರೂ ಕೆಲವು ವಿಷಯಗಳನ್ನು ಕಲಿಯಬಹುದು. ಏಕೆಂದರೆ ಒಬ್ಬೊಬ್ಬರಲ್ಲಿ ಹೆಚ್ಚು ಕಡಿಮೆಯಿಂದಿದ್ದರೂ ಪ್ರತಿಯೊಬ್ಬರಲ್ಲಿಯೂ ಎಲ್ಲಾಗುಣಗಳೂ ಕೂಡಿರುವುವು. ಬ್ರಾಹ್ಮಣರಲ್ಲಿಯೂ ಕ್ಷತ್ರಿಯ ಶಕ್ತಿಗಳು ಸ್ವಲ್ಪಮಟ್ಟಿಗಾದರೂ ಇರುವುವು. ಇದರಿಂದಲೇ ಪೂರ್ವಕಾಲದ ಋಷಿಗಳು ಕೃಷಿಕರ್ಮಿಗಳಾಗಿಯೂ ಆಗಾಗ್ಗೆ ಕ್ಷತ್ರಿಯ ಕರ್ಮಿಗಳಾಗಿಯೂ ಇರುತ್ತಿದ್ದರು.

### ೨೫. ವೃತ್ತಿಯು ಕೇವಲ ಆರ್ಥಿಕವಲ್ಲ, ಮತ್ತು ಶ್ರೇಷ್ಠವಾದ ಆಧ್ಯಾತ್ಮಿಕ ಮತ್ತು ಲೋಕಸೇವೆಯೇ ಆಗಿದೆ.

ಸಂಪ್ರದಾಯ ಮತ್ತು ಆಧ್ಯಾತ್ಮಿಕ ಧ್ಯೇಯಗಳಿಂದೊಡಗೂಡಿದ ಆಯಾ ಜನರ ವೃತ್ತಿ (Vocation) ಗಳೇ ಅವರವರ ಶ್ರೇಷ್ಠಸೇವೆಯು ಎನ್ನುವ ವರ್ಣಧರ್ಮವು (Caste idea) ಕೆಲಸವೆಂದರೆ ಕೇವಲ ಅರ್ಥಪ್ರಯೋಜನಕ್ಕಾಗಿ ನಿರ್ಬಂಧದಿಂದ† ಮಾಡಬೇಕಾದ ಅಪಮಾನಕರವಾದ ದಾಸವೃತ್ತಿಯೆಂಬ ಭಾವಕ್ಕೆ ಎಂದಿಗೂ ಪ್ರೋತ್ಸಾಹಗೊಡಲಿಲ್ಲ. ಪ್ರತಿಯೊಂದು ವೃತ್ತಿವರ್ಗದವರೂ (Vocational group) ತಮ್ಮತಮ್ಮ ವಿಶೇಷವೃತ್ತಿಗಳನ್ನೂ ಸಂಪೂರ್ಣತೆಗೆ ತರುವುದೇ ತಮ್ಮತಮ್ಮ ಆಧ್ಯಾತ್ಮಿಕ ಧ್ಯೇಯವೆಂದು ಸಂತೋಷೋತ್ಸಾಹಗಳಿಂದ ಗೊತ್ತುಮಾಡಿಕೊಂಡರು. ಇದರಿಂದ ಪ್ರತಿಯೊಬ್ಬ ಮನುಷ್ಯನೂ ತನ್ನತನ್ನ ಜೀವನ ಸಾಫಲ್ಯವನ್ನು‡ ತನ್ನತನ್ನ ಕಾರ್ಯಕರ್ಮಗಳಲ್ಲಿಯೇ (in and through his work) ಹೊಂದಿರುವನು. ಭಗವದ್ಗೀತಾವಚನದಂತೆ ಪ್ರತಿಯೊ

* (Heredity and training)

† Grudgingly ‡ Fulfilment of his being

ಬ್ಬನೂ ತನ್ನ ತನ್ನ ಧರ್ಮವನ್ನು (= ಸ್ವಧರ್ಮ) ತಕ್ಕ ನಿಷ್ಕಾಮ ಬುದ್ಧಿಯಿಂದ ಮಾಡಿದಲ್ಲಿ ತನ್ನ ಸಂಪೂರ್ಣತೆ (ಯಾದ ಬ್ರಹ್ಮಪದವಿ) ಯನ್ನು ಪಡೆದು (ಶಾಶ್ವತಸುಖವೆಂಬ ಆನಂದಸಾಗರದಲ್ಲಿ ಮುಳುಗಿ) ಕೃತಾರ್ಥನಾಗುವನು. ಆದರೆ ನಿಮ್ಮ ದೇಶದ ಜನರೆಲ್ಲರಿಗೂ ನಿತ್ಯಭೋಜನಕ್ಕೆ ಬೇಕಾದಷ್ಟು ಮೀನುಗಳು ಸಿಕ್ಕಲೆಂದು ತಮ್ಮ ಪ್ರಾಣಾಪಾಯವನ್ನೂ ಕೂಡ ನೋಡದೆ ಪ್ರತಿನಿತ್ಯವೂ ಗಾಢವಾದ ಸಮುದ್ರಕ್ಕೆ ಹೋಗಿ ಕಷ್ಟಪಡುವ ಬೆಸ್ತರಿಗೆ ಸಹಾಯಮಾಡಬೇಕೆಂದು ಹೇಳುವ ಸಾಮಾನ್ಯ ಬೋಧಕರು ಆಯಾ ಕಾರ್ಯದಿಂದ ಆಯಾ ಕರ್ತೃಗಳಿಗೆ ಏನೇನು ಪ್ರಯೋಜನಗಳಾಗುತ್ತವೆ ಎಂದು ನೋಡದಿರುವರು. ಏಕೆಂದರೆ ಈ ಕಷ್ಟಸಹಿಷ್ಣುಗಳಾದ ಬೆಸ್ತರು ಮೇಲೆ ಹೇಳಿದಂತೆ ನಿಷ್ಕಾಮಕರ್ಮದಿಂದ ಹೋಗಿ ಕೆಲಸ ಮಾಡದೆ ಕೇವಲ ತಮ್ಮ ಆತ್ಮ (being) ತೃಪ್ತಿಗಾಗಿ ಹೋಗುವರೇ ಹೊರತು ಲೋಕಹಿತಕ್ಕಾಗಿಯೂ ಮತ್ತು ಮಿಕ್ಕ ಜನರ ಭೋಜನ ಸೌಕರ್ಯಕ್ಕಾಗಿಯೂ ಎಂಬ ಮುಖ್ಯೋದ್ದೇಶದಿಂದ ಕೆಲಸಮಾಡುವುದಿಲ್ಲ. ಇದರಿಂದ ನಮ್ಮ ಸೌಕರ್ಯ ಉಂಟಾಯಿತೆಂದರೆ ಅದು ಇವರ ಕೇವಲ ಯದೃಚ್ಛಾಫಲವೇಸರಿ.* ಏಕೆಂದರೆ ಲೋಕದಲ್ಲಿ ಪ್ರತಿಯೊಬ್ಬರ ಶ್ರೇಯಸ್ಸೂ ಮತ್ತೊಬ್ಬರ ಶ್ರೇಯಸ್ಸಿಗೆ ಸಾಧನಭೂತವಾಗುವಂತೆ ರಚಿಸಿರುವ ಕ್ರಮವು ಕೇವಲ ನಮ್ಮ ಸುದೈವವೇ ಆಗಿದೆ, (ಮತ್ತಿದು ನಮಗೆ ಸೇರಿದ ಯಾವ ಶಕ್ತಿಯ ಪ್ರಭಾವವೂ ಅಲ್ಲ). ಇದರಂತೆಯೇ ಲೋಕದಲ್ಲಿ ಈಗೀಗ ಹೆಚ್ಚುತ್ತಿರುವ ಕಲಾಶಕ್ತಿಯ ನಾಶವು ನಮ್ಮ ಕುಶಲವೃತ್ತಿಗಳಲ್ಲಿರುವ† ಜನರಲ್ಲಿ ಬಹಳವಾಗಿ ಹರಡಿದೆ. ಪೂರ್ವಕಾಲದ ಗೃಹರಚನಾಕರ್ಮಿಗಳು‡ ನಮ್ಮ ಕಾಲದವರಿಗಿಂತ ಬಹು ಕಡಿಮೆಯಾದ ರಾಜನೈತಿಕ ಹಕ್ಕುಗಳನ್ನೂ § ವೇತನಾನುಕೂಲಗಳನ್ನೂ ಹೊಂದಿದ್ದರು. ಆದರೂ ಇವರು ತಮ್ಮ ಕೆಲಸದಲ್ಲಿ ಸಂತೋಷಪಡುತ್ತಿದ್ದುದರಿಂದ ನಮಗಿಂತಲೂ ಎಷ್ಟೋ ಹೆಚ್ಚಾಗಿ ಸುಖಿಗಳಾಗಿದ್ದರು. ಈಗಿನ ಕಾಲದಲ್ಲಿ ಓಟುಗ

---

* Accident † Industrial ‡ Building Craftsman
§ Political rights

ಕೆಂಬ ಚುನಾವಣೆಯ ಹಕ್ಕನ್ನು ಅನುಭವಿಸುತ್ತಿರುವ ನಮ್ಮ ಕೂಲಿಕಾರರು ಈ ಪೂರ್ವಕಾಲದ ಕರ್ಮಿಗಳು ತಮ್ಮಂತೆ ಚುನಾವಣೆಯ ಮುಂದಿರಕ್ಕೆ ಹೋಗುತ್ತಿರಲಿಲ್ಲವೆಂಬ ಕೇವಲ ಅಹಂಭಾವದಿಂದ ಇವರೇನು ಹೆಚ್ಚು? ಇವರು ಕೇವಲ ದಾಸವೃತ್ತಿಯಲ್ಲಿ ಇದ್ದರೆಂದು ಅಲೆಗಳೆಯುವರು. ಆದರೆ ಈ ಪೂರ್ವಜರ ಕೆಲಸವೇ ಅವರ ಜೀವನದ ಸರ್ವಪ್ರಕಾಶವಾಗಿತ್ತು. * ಈ ಕರ್ಮಿಗಳು ಕಲ್ಲುಕುಟುಕರಾಗಲಿ ಮನೆಕಟ್ಟುವವರಾಗಲಿ, ಕಮ್ಮಾರರಾಗಲಿ ಮರಗೆಲಸದವರಾಗಲಿ, ಯಾರೇ ಇರಲಿ ಇವರೆಲ್ಲರೂ ಕೂಡ ಚಿಕ್ಕಚಿಕ್ಕ ವಯಸ್ಸಿನಲ್ಲಿಯೇ ತಮ್ಮತಮ್ಮ ಕೆಲಸಗಳ ರಹಸ್ಯಗಳನ್ನು ಗುರುಮುಖದಿಂದ ತಿಳಿಯುತ್ತಿದಂಥ (Initiated) ದೊಡ್ಡದೊಂದು ಸಹಾಯಕ ಸಂಘಕ್ಕೆ ಸೇರಿರುತ್ತಿದ್ದರು. ಇದರಿಂದ ಇವರೆಲ್ಲರೂ ಸೌಂದರ್ಯರಚನೆಯ ಕಾರ್ಯದಲ್ಲಿ ಪ್ರವೃತ್ತರಾಗಬೇಕೆಂಬ ಉತ್ಸಾಹದಿಂದಲೂ ಕೂಡಿರುತ್ತಿದ್ದರು. (ಆದರೆ ಈಗಲಾದರೋ ಕುಶಲಕರ್ಮಿಗಳು ತಮ್ಮತಮ್ಮ ಕೆಲಸಗಳಲ್ಲಿ ಇಷ್ಟೊಂದು ಶ್ರದ್ಧಾಭಕ್ತಿ ಸಂತೋಷೋತ್ಸಾಹಗಳಿಂದ (Pride in craft) ಕೂಡಿರಬೇಕೆಂದರೆ ಸಾಧ್ಯವಿಲ್ಲ). ಎಲ್ಲಿ ನೋಡಿದರೂ ವಿಶೇಷ ಶಕ್ತಿಗಳು † ಹೆಚ್ಚಿರುವುವೇ ಹೊರತು ಈ ಪೂರ್ವದ ಅನುಕೂಲತೆಗಳೆಲ್ಲ ನಾಶವಾಗಿ ಹೋಗಿವೆ ಇದರಿಂದ ಕೆಲಸವೆಂದರೆ ಕೇವಲ ಆರ್ಥಿಕವೃತ್ತಿ (business ಜೀವನೋಪಾಯ) ಯಾಗಿಬಿಟ್ಟು, ಪ್ರತಿಯೊಬ್ಬ ಕೆಲಸಗಾರನೂ ತನ್ನತನ್ನ ಕೆಲಸದಿಂದ ತಪ್ಪಿಸಿಕೊಂಡು ಹೋಗಿ ಚಿತ್ರಶಾಲೆ (= ಸಿನಿಮಾ) ಗಳಲ್ಲಿಯೂ ಸಂಗೀತಶಾಲೆಗಳಲ್ಲಿಯೂ ಸುಖಿಯಾಗಿರಲು ಯತ್ನಿಸುತ್ತಾನೆ. ಆದರೆ ಹೀಗೆ ಕೆಲಸಗಾರರು ಹೆಚ್ಚು ಸಂತೋಷಕ್ಕಾಗಿ‡ ಪ್ರಯತ್ನಪಡುವ ಸಂಘಬುದ್ಧಿಯು § ಎಷ್ಟೇ ಸರಿಯಾಗಿದ್ದರೂ ಕೂಡ ದುರ್ದೈವದಿಂದ ಸಾಧಾರಣವಾಗಿ ಜನರೆಲ್ಲರೂ ಲೋಕಹಿತವನ್ನು ಕೇವಲ ಆರ್ಥಿಕ ರೀತಿಯಲ್ಲಿಯೇ ಅನ್ವಯಿಸುತ್ತಿದಾರೆ. ಅಂದರೆ ಈಗಿನ ಜನರ ದೃಷ್ಟಿಯಲ್ಲಿ ಲೋಕಹಿತದಲ್ಲಿ

---

* Expression † Specialization ‡ Fuller life

§ Social aspiration

ಯೂ * ಕೂಡ ಪ್ರಕೃತಿವಾದವೇ † ಹೆಚ್ಚುಹೆಚ್ಚಾಗಿದೆ. ಆದರೆ ಪ್ರತಿಯೊಬ್ಬ ಕೆಲಸಗಾರನಿಗೂ ಅವನವನ ಯೋಗ್ಯತೆಗೆ ತಕ್ಕಷ್ಟು ಅನುಕೂಲಗಳನ್ನು ಕಲ್ಪಿಸಿ ಕೊಡಬೇಕಾಗಿದ್ದರೂ ಕೂಡ ಮಾನವಪ್ರಕೃತಿಯ ಶ್ರೇಯೋಭಿವೃದ್ಧಿಯೇ ಸಕಲ ಕೆಲಸದ ಮುಖ್ಯಧ್ಯೇಯವಾಗಿದೆ.

೨೬. ಹಣದಾಸೆಯಿಂದ ಈಗ ಜಾತಿಯುದ್ಧಗಳು ಹೆಚ್ಚಿವೆ. ಇದು ತಪ್ಪು, ಮತ್ತೆ ಎಲ್ಲರನ್ನೂ ನಾವು ಪ್ರೀತಿಯಿಂದ ಕಾಣಬೇಕು.

ಹೀಗಿರುವಲ್ಲಿ ನಾವೀಗ ಎಲ್ಲೆಲ್ಲಿಯೂ ಸಂಘವೈಷಮ್ಯ (Class-conflicts) ಗಳನ್ನು ನೋಡಬೇಕಾಗಿದೆ. ದ್ವೇಷಾಸೂಯೆ, ಮಾತ್ಸರ್ಯಾಪನಂಬಿಕೆಗಳಿಂದ ಕೂಡಿದ ಜಾತಿಬುದ್ಧಿ † ಯು ಬಹಳವಾಗಿ ಹರಡಿದೆ. ನಮ್ಮಲ್ಲಿ ಈಗ ಯಾರೂಕೂಡ ತಮ್ಮ ತಮ್ಮ ಮಕ್ಕಳಿಗೆ ಪೂರ್ವದಲ್ಲಿದ್ದಂತೆ ಕುಲಪದ್ಧತಿಯಂತೆ ಶಿಕ್ಷಣಕೊಡಲು ಇಷ್ಟಪಡದೆ, ನಾವು ಪ್ರತಿಯೊಬ್ಬರೂ ಬುದ್ಧಿವಂತರಿಗೆ ಸರ್ವಸ್ಥಳಗಳೂ ಸಿಗಬೇಕೆಂದು ಬಹಳವಾಗಿ ಯತ್ನಿಸುತ್ತಿದ್ದೇವೆ. ಏಕೆಂದರೆ ಕೆಲವು ವೃತ್ತಿಗಳಲ್ಲಿ ಹೆಚ್ಚು ದ್ರವ್ಯೋತ್ಪತ್ತಿ ಇರುವುದರಿಂದ ಎಲ್ಲರೂ ಇವುಗಳೇ ತಮಗೂ ಬೇಕೆಂದು ಹೆಚ್ಚು ಪ್ರಯತ್ನಪಡುತ್ತಿದಾರೆ. ಮತ್ತಿದರಿಂದ ಎಲ್ಲರಿಗೂ ಬಹು ಕಷ್ಟವುಂಟಾಗಿದೆ. ಪ್ರಜಾಪ್ರಭುತ್ವವೆಂದರೆ ದ್ರವ್ಯವನ್ನು ಸರ್ವಜನರಿಗೂ ಸಮನಾಗಿ ಹಂಚಬೇಕೆಂಬ ಯೋಗ್ಯ ಉದ್ದೇಶವೆಂದು ತಿಳಿದುಕೊಳ್ಳದೆ ಸರ್ವಬುದ್ಧಿ ಶಕ್ತಿಗಳನ್ನೂ ಒಂದೇಸಮನಾಗಿ ಕಾಣಬೇಕೆಂಬ ಹುಚ್ಚುಮಾರ್ಗದಲ್ಲಿ ಅರ್ಥಮಾಡುತ್ತಿದ್ದಾರೆ. ಆದರೆ ಇದಕ್ಕೆ ಅವಕಾಶವಿಲ್ಲ. ಏಕೆಂದರೆ ಸಮಾಜವೆಂದಮೇಲೆ ಸರ್ವಕಾಲದಲ್ಲಿಯೂ ಕೂಡ ಒಂದುಕಡೆ ಮುಂದೆ ಹೋಗಿ ದಾರಿತೋರಿಸಿ ಬುದ್ಧಿಹೇಳುವ ಸತ್ವಶಾಲಿಗಳಾದ ನಾಯಕರೂ, ಮತ್ತೊಂದುಕಡೆ ಇವರ ಮಾತಿನಂತೆ ನಡೆಯುವ ಅನುಯಾಯಿಗಳೂ

---

* Sociai betterment † Materialism, ಲೋಕಾಯತ (ಚಾರ್ವಾಕ) ಮತ † Class consciousness

ಎಂಬ ಎರಡು ರೀತಿಯ ಜನಗಳು ಇದ್ದೇ ಇರುವರು. ಇದರಿಂದ ಬುದ್ಧಿ ಶಕ್ತಿ ಗುಣಾನ್ವಿತರಾದ ಜನರು ಮುಂದೆ ಬಂದು ಸರ್ವಪ್ರಜಾಧಿಪತ್ಯದ ಲ್ಲಿಯೂ ಕೂಡ ನಾಯಕಕಾರ್ಯವನ್ನೊಳಗೊಂಡ ಕುಲೀನ ವರ್ಗ * ವೊಂದು ಎದ್ದೇ ಏಳುವುದು. ಏಕೆಂದರೆ ಪ್ರತಿಯೊಬ್ಬರೂ ಇತರರಂತೆ ಎಲ್ಲಾ ವಿಷಯಗಳಲ್ಲಿಯೂ ಸಮಾನಶಕ್ತಿ ಹೊಂದಿಲ್ಲ, ಮತ್ತು ಪ್ರತಿಯೊ ಬ್ಬರೂ ರಾಜ್ಯವಾಳುವುದಕ್ಕಾಗಲೀ, ಇಲ್ಲವೆ ಭೂಮಿಯನ್ನುಳುವುದಕ್ಕಾ ಗಲೀ ಬೇಕಾದಶಕ್ತಿಯನ್ನು ಸರ್ವಸಾಮಾನ್ಯವಾಗಿ ಹೊಂದಿರುವರೆಂಬ ಮಾತು ಶುದ್ಧ ತಪ್ಪು. ಹೇಗೆಂದರೆ ಆಯಾ ಕೆಲಸಗಾರರಿಗೆ ಬೇಕಾದ ವಿಶೇಷ ಗುಣಗಳನ್ನು † ಇವು ಅಷ್ಟು ಮುಖ್ಯ ಗುಣಗಳಲ್ಲವೆಂದು ಪೂರ್ಣ ವಾಗಿ ತಿರಸ್ಕರಿಸುವುದಕ್ಕಾಗುವುದಿಲ್ಲ. ‡ ಅಭಿವೃದ್ಧಿಯ ಪ್ರತಿಯೊಂದು ಮಾರ್ಗವೂ ಕೂಡ ಪ್ರತ್ಯೇಕ (ಅದ್ವಿತೀಯ) ವಾಗಿಯೂ ಮತ್ತು ತನ್ನದೇ ಆದ ವಿಶೇಷ ಗುಣವುಳ್ಳದ್ದೂ ಆಗಿದೆ. ಮತ್ತಿವುಗಳಲ್ಲಿ ಯಾವುದಾದ ರೊಂದು ದಾರಿಯನ್ನು ಅನುಸರಿಸಬೇಕೆಂದರೆ ಇತರ ಎಲ್ಲಾ ಮಾರ್ಗಗಳಿಂ ದಲೂ ನಮ್ಮ ಮನಸ್ಸನ್ನು § ಬೇರೆ ಮಾಡಬೇಕು. ಆದರೆ ಇಷ್ಟರಿಂ ದಲೇ ನಾವು ಸುಮ್ಮನೇ ಕಳಿತುಕೊಳ್ಳದೆ ಜನರಿಗೆ ಬಾಧಕವಾಗಿರುವ ನಿರ್ಬಂಧಗಳನ್ನು ತೆಗೆದುಹಾಕಿ, ಅವರ ಅಜ್ಞಾನವನ್ನೂ ಪರಿಹರಿಸಿ ಆತ್ಮ ಗೌರವವನ್ನು ಹೆಚ್ಚಿಸಿ, ಇವರು ಮುಂದೆಮುಂದೆ ಹೋಗುವಂತೆ ಇವರ ಉತ್ತಮ ಜೀವನಕ್ಕೆ ಬೇಕಾದ ಅವಕಾಶಗಳನ್ನು ಪ್ರೀತಿಯಿಂದ ತೋರಿಸಿ ಕೊಟ್ಟು ಉತ್ತೇಜನ ಕೊಡುತ್ತಿರಬೇಕು. ಆದರೂ ಕೂಡ ಪಂಡಿತಪಾಮ ರರಿಗೂ, ಪ್ರತಿಭಾಶಾಲಿಗಳಿಗೂ, ದಡ್ಡರಿಗೂ, ಶಕ್ತರಾದ ಕಾರ್ಯದರ್ಶಿ ಗಳಿಗೂ** ಕೇವಲ ಕೆಲಸಗಾರರಿಗೂ ಇರುವ ಭೇದಗಳನ್ನು ತೆಗೆದುಹಾಕಿ ಬಿಡುವೆವೆಂದು ನಾವೆಂದಿಗೂ ತಪ್ಪುತಿಳಿದುಕೊಳ್ಳಬಾರದು. ಈಗಿನ ಕಾ ಲದ ಪ್ರಜಾಧಿಪತ್ಯಗಳು ನಮ್ಮೆಲ್ಲರನ್ನೂ ಕೇವಲ "ಮಾನವಜೀವಿ"ಗಳ

---

* Aristocracy † Functional diversities

‡ Suppressed § Attention ** Organiser

ನ್ನಾಗಿ ಮಾಡಲೆತ್ನಿಸುತ್ತವೆ, ಆದರೆ ಇಂಥಾ ಪ್ರಾಣಿಗಳು ಎಲ್ಲಿಯೂ ಸಿಗುವುದಿಲ್ಲ.

### ೨೭ ಶೀಘ್ರದಲ್ಲಿಯೇ ನಮ್ಮ ದೇಶದಲ್ಲಿಯೂ ಕೈಗಾರಿಕೆಯವರ ಯುದ್ಧವು ಪ್ರಾರಂಭವಾಗುತ್ತದೆ.

ನಮ್ಮ ದೇಶದಲ್ಲಿ ಸ್ವಲ್ಪಕಾಲದಲ್ಲಿಯೇ ಕೆಲಸಗಾರರ ಗೊಂದಲ* ವೊಂದು ಏಳುವಂತಿದೆ. ಕಾರ್ಖಾನೆಯ ಕೆಲಸದಲ್ಲಿ ಜನರು ಯಂತ್ರೀಕೃತರಾಗಿ (mechanised) ಪೂರ್ಣಸಿದ್ಧಿಯನ್ನು ಪಡೆದಿರುವ ವಸ್ತುವಿನ ರಚನೆಯಲ್ಲಿ ತಾವು ಯಾವ ಕಾರ್ಯಭಾಗವನ್ನೂ ಹೊಂದದೆ ಅದರ ಸಿದ್ಧಿಯಲ್ಲಿ ಯಾವ ಸಂತೋಷವನ್ನೂ ಕಾಣದಂತಾಗಿರುವುದರಿಂದ ಇಲ್ಲಿ ಕೆಲಸವೆಲ್ಲಾ ಕೇವಲ ಕೂಲಿಗಾಗಿ ಮಾಡಿದ ಕಾರ್ಯವಾಗಿ ಮನಶ್ಶಾಂತಿ (= ಆತ್ಮತೃಪ್ತಿ) ಯನ್ನು ಕೊಡುವುದಿಲ್ಲ. ಇಂಥಾ ಯಂತ್ರಕೆಲಸವನ್ನು ಯಂತ್ರಗಳೇ ಮಾಡುವುದಕ್ಕಾಗದಿದ್ದು, ಜನರೇ ಅದನ್ನು ಮಾಡಬೇಕಾಗಿದ್ದರೆ ಇಂಥಾ ಕೆಲಸವು ಕಡಿಮೆಯಾದಷ್ಟೂ ಇವರಿಗೆ ಉತ್ತಮವೇ ಸರಿ. ಏಕೆಂದರೆ ಹೀಗೆ ಕೆಲಸವು ಯಂತ್ರೀಕೃತವೂ ಏಕಸ್ವರವುಳ್ಳದ್ದೂ† ಆಗುತ್ತ ಬಂದಹಾಗೆಲ್ಲ ಇದನ್ನು ಹೆಚ್ಚು ಬುದ್ಧಿವಂತಿಕೆಯಿಂದ ಮಾಡುವುದಕ್ಕೆ ಬೇಕಾದ ಉತ್ತಮ ಸಲಕರಣೆಗಳನ್ನೂ, ಹೆಚ್ಚು ವಿರಾಮ ಕಾಲವನ್ನೂ ಕೆಲಸಗಾರರಿಗೆ ದೊರಕಿಸಿಕೊಡಬೇಕು. ಅಂದರೆ ಇಂಥಾ ಕೆಲಸವನ್ನು ಕೇವಲ ಕೂಲಿಯಿಂದಲ್ಲದೆ ಸೌಖ್ಯ‡ದಿಂದಲೂ ಕೂಡ ಹೆಚ್ಚಿನ ಯೋಗ್ಯತೆಗೆ§ ತರಬೇಕು. ಇದರಿಂದ ಯಂತ್ರಕೆಲಸದಲ್ಲಿ ಕಲಾ ಅಥವ ರಾಜಕೀಯ ಕೆಲಸಕ್ಕಿಂತ ಹೆಚ್ಚಾಗಿ ಆರ್ಥಿಕ ಪ್ರಯೋಜನವಿರಬೇಕು ಏಕೆಂದರೆ ಬೇರೆ ಕೆಲಸಗಳಲ್ಲಿ ಕಾರ್ಯವೇ ಒಂದು ಫಲವಾಗಿದೆ. ಇದರಿಂದಲೇ ಹಿಂದೂ ದೇಶದಲ್ಲಿ ಪೂರ್ವಕಾಲದಲ್ಲಿ ಬಹು ಶ್ರೇಷ್ಠ ಕೆಲಸವಾದ ಆಧ್ಯಾತ್ಮಿಕ ಜ್ಞಾನಕೋಶದ ರಕ್ಷಣೆಗೆ ಬಹುಸ್ವಲ್ಪ ಆರ್ಥಿಕ ಬೆಲೆ

* Perils of Industrialism † Monotonous

‡ Welfare § Standard

ಯಿತ್ತು, ಮತ್ತು ಇಂಥಾ ಶ್ರೇಷ್ಠಕರ್ಮಿಗಳಾದ ಬ್ರಾಹ್ಮಣರಿಗೆ ಯಾವ ರಾಜಕೀಯ ಅಧಿಕಾರವಾಗಲೀ ಲೌಕಿಕ ದ್ರವ್ಯವಾಗಲೀ ಇರಲಿಲ್ಲ. ಅಂದರೆ ಈ ರೀತಿಯಾದ ವ್ಯವಸ್ಥೆಯಲ್ಲಿ ಸ್ವಲ್ಪ ಗುಣವಿತ್ತೆಂದು* ನನಗೆ ತೋರುತ್ತದೆ ಏಕೆಂದರೆ ಆತ್ಮಹಾನಿಕರವಾದ ಕೆಲಸವನ್ನು ಮಾಡುವ ಜನರಲ್ಲಿ ಇದು ಹೆಚ್ಚು ಅನುಕಂಪವನ್ನು ತೋರಿಸುತ್ತದೆ. ಮತ್ತಿದರಂತೆಯೇ ಮನುಷ್ಯಜೀವನದಲ್ಲಿ ಅರ್ಥವೇ ಬಹು ಮುಖ್ಯವಾದ ಅಂಶವಲ್ಲವೆಂಬುದನ್ನು ನಾವೆಂದಿಗೂ ಮರೆಯಬಾರದು. ಅಂದರೆ ನಾವು ಜನರ ಯೋಗ್ಯತೆಯನ್ನು ಕೇವಲ ಅವರವರ ದ್ರವ್ಯೋತ್ಪತ್ತಿಯನ್ನು ನೋಡಿ ಇಷ್ಟೇ ಸರಿಯೆಂದು ನಿರ್ಧರಿಸಬಾರದು. ಏಕೆಂದರೆ ಜೂಜಾಟದಲ್ಲೇ ಕುಳಿತಿರುವ ಶ್ರೀಮಂತರು ಯೋಗ್ಯರಾದ ಕೆಲಸಗಾರರಿಗಿಂತ ಸ್ವಲ್ಪವೂ ಹೆಚ್ಚಿನವರಾಗಿಲ್ಲ. ಮತ್ತು ಕೇವಲ ದ್ರವ್ಯವನ್ನೇ ಹೆಚ್ಚಾಗಿ ಶ್ಲಾಘಿಸುತ್ತ ಹೋದರೆ ಸ್ವಲ್ಪಸ್ವಲ್ಪವಾಗಿ ಜನರ ಶೀಲವೆಲ್ಲವೂ ಕೆಟ್ಟುಹೋಗುತ್ತದೆ. ಮತ್ತಿನ್ನೊಂದು ವಿಷಯವನ್ನು ನಾವು ಮರೆಯಬಾರದು. ಏನೆಂದರೆ ಜನಾಂಗಕ್ಕೆ ಸೇರಿರುವ ಜನರೆಲ್ಲರೂ ರಾಜನೈತಿಕವಾಗಿ ಮುಖಂಡರಾಗುವ, ಇಲ್ಲವೆ ಕ್ಷತ್ರಿಯರಂತೆ ಸೈನ್ಯಾಧಿಕಾರವನ್ನುಳ್ಳ ಒಂದೇ ಒಂದು ವೃತ್ತಿಯನ್ನು ಅನುಸರಿಸಲಾರರು, ಮತ್ತು ಬೇರೆಬೇರೆ ಕೆಲಸಗಳಲ್ಲಿ ಪ್ರವೃತ್ತರಾಗುವರು. ಇದರಿಂದ ಆಯಾ ಕೆಲಸಗಳು ತಮ್ಮ ಸಾಧಕರಲ್ಲಿ ಬೇರೆ ಬೇರೆ ಗುಣಾಭಿಮಾನ†ಗಳನ್ನು ಅಭಿವೃದ್ಧಿಪಡಿಸುವುವು. ಮತ್ತು ಒಂದು ಕೆಲಸದಿಂದ ಇನ್ನೊಂದು ಕೆಲಸಕ್ಕೆ ಜನರು ಆಗಾಗ್ಗೆ ಹೋಗುತ್ತಿದ್ದರೂ ಇಂಥವರ ಸಂಖ್ಯೆಯು ಎಂದಿಗೂ ಹೆಚ್ಚಾಗಿರುವುದಿಲ್ಲ.

### ೨೮. ಸ್ವಪ್ರಯೋಜನವನ್ನು ಬಿಟ್ಟು, ಸಂಘಕ್ಕಾಗಿ ಸರ್ವರೂ ಧರ್ಮಬುದ್ಧಿಯಿಂದ ಕೆಲಸಮಾಡಬೇಕು.

ನೂರು ವರ್ಷಗಳ ಹಿಂದೆ ಇದ್ದಷ್ಟುಮಟ್ಟಿಗೆ ನಾವು ಈಗ ಸಮಾಜಧರ್ಮ (theory) ದಲ್ಲಿ ವ್ಯಕ್ತಿಕದೃಷ್ಟಿಯೇ‡ ಕೊನೆಯ ಮಾತೆಂದು

---

* Justice † Habits and sympathies

‡ Individualistic conception of society

ಧ್ಯೆರ್ಯವಾಗಿ ಹೇಳಲಾರೆವು. ಸಮಾಜವು ಅವಯವ ರೀತಿಯಿಂದ ಪೂರ್ಣವಾಗಿರುವ ವಸ್ತು ಒಂದೆಂಬ ಆಧ್ಯಾತ್ಮ ಭಾವದಲ್ಲಿರುವ ಧಾರ್ಮಿಕ ಪ್ರಯೋಜನಗಳ ಕಡೆ ಜನರ ದೃಷ್ಟಿಯು ಈಗೀಗ ಹೆಚ್ಚುಹೆಚ್ಚಾಗಿ ಓಡುತ್ತಿದೆ. ಜೀವಕಳೆಯಿಂದೊಡಗೂಡಿರುವ ಸಮಾಜವು ಹೆಚ್ಚು ಕೂಲಿಗಾಗಿಯೂ, ಉತ್ತಮಸ್ಥಿತಿಗಾಗಿಯೂ ಪ್ರತಿಯೊಬ್ಬರೂ ಮಿಕ್ಕ ಇತರ ಜನರೆಲ್ಲರ ಮೇಲೆಯೂ ಸ್ಪರ್ಧೆ ಮಾಡುತ್ತಿರುವ ವರ್ತಕರು ಮತ್ತು ಉಪಾಧ್ಯಾಯರು, ಸಾಹುಕಾರರು (Bankers) ಮತ್ತು ನ್ಯಾಯವಾದಿಗಳು (lawyers), ವ್ಯವಸಾಯಗಾರರು ಮತ್ತು ನೆಯ್ಗೆಯವರೇ ಮುಂತಾದ ಸ್ವಾರ್ಥಯುಕ್ತರಾದ ಜನರ (groups) ಸಾಧಾರಣಸಂಘ* ವಲ್ಲ. ಆಯಾ ಸಂಗಡಗಳ ಜನರು ತಮ್ಮ ತಮ್ಮಲ್ಲಿರುವ ಅಂತಶ್ಶಕ್ತಿಗಳನ್ನು ಹಸ್ತಗತವಾಗಿ ಮಾಡಿಕೊಳ್ಳ ಬೇಕಾದರೆ ಇವರೆಲ್ಲರೂ ತಾವು ಒಂದು ಸಂಗಡಕ್ಕೆ ಸೇರಿರುವೆವೆಂದು ಪರಸ್ಪರವಾಗಿ ಸಮಾನಭ್ರಾತೃಭಾವ† ದಿಂದ ಕಷ್ಟ ಸುಖಗಳಲ್ಲಿ ತಾವೆಲ್ಲರೂ ಸಮಭಾಗಿಗಳೆಂದು ಒಟ್ಟಿಗೆ ಕೂಡಿ ಕೆಲಸಮಾಡುತ್ತಿರಬೇಕು ಈ ದೃಷ್ಟಿಯಿಂದ ನೋಡಿದರೆ ಐಶ್ವರ್ಯ ಲಾಭ ಮತ್ತು ಸೌಕರ್ಯಗಳನ್ನೇ ಮುಖ್ಯವಾಗಿಟ್ಟುಕೊಳ್ಳದೆ ಕೇವಲ ಆಯಾ ಜನರ ಅಶಾಭಿರುಚಿ (interest) ಗಳಿಗಿಂತ ಹೆಚ್ಚಾದ ಶ್ರೇಷ್ಠ ಜೀವನಮಾರ್ಗವೊಂದನ್ನೇ ಪ್ರಾಮುಖ್ಯವಾಗಿ ಮಾಡುವ ಸಮಾಜವನ್ನು ಅವಯವ ರೀತಿಯಿಂದ ನೋಡುವ ವರ್ಣಾಶ್ರಮಧರ್ಮದಲ್ಲಿ ಎಷ್ಟೋ ಗುಣಗಳಿವೆಯೆಂದು ಬಹಳವಾಗಿ ಹೇಳತಕ್ಕದ್ದಿದೆ. ಏಕೆಂದರೆ ಪರೋಪಕಾರ ಅಥವಾ ಭ್ರಾತೃಸೇವೆಯು ಮತಧರ್ಮ (obligation) ವೇ ಸರಿ. ಮತ್ತಿದನ್ನು ಅಲಗಳಿಯುವುದು ಮಹಾಪಾತಕವೇ ಸರಿ.

## ೭೯. ಪ್ರಜಾಧಿಪತ್ಯದಲ್ಲಿಯೂ ಕೂಡ ಎಲ್ಲರನ್ನೂ ಒಂದೇ ಸಮನಾಗಿ ಕಾಣುವುದಕ್ಕಾಗುವುದಿಲ್ಲ

ಏಕೆಂದರೆ ಯಾವ ಪ್ರಜಾಧಿಪತ್ಯವೂ ಕೂಡ ಆಯಾಯ ಜನರಲ್ಲಿ

* Loose federation † Community of feeling

ರುವ ವಿಶೇಷ ಗುಣಗಳನ್ನೆಲ್ಲಾ ತೆಗೆದುಹಾಕಿಬಿಟ್ಟು ಅವರೆಲ್ಲರನ್ನೂ ಒಂದೇ ಸಮವಾಗಿ ಮಾಡುವಂಥಾ* ಕೇವಲ ಯಾಂತ್ರಿಕ ಮಾರ್ಗವಲ್ಲ. ಮತ್ತು ಯಾರೂ ಕೂಡ ನಮ್ಮ ಅಂತರಾತ್ಮನನ್ನು ಸಮಾನವಸ್ತ್ರದಂಥಾ† ನಿಯಮಿತ ರೂಪದಲ್ಲಿಟ್ಟು ಬಂಧಿಸುವುದಕ್ಕಾಗುವುದಿಲ್ಲ. ಇಲ್ಲದಿದ್ದರೆ ಇದೂ ಕೇವಲ ಅನಿಯಂತ್ರಿತ ‡ ಏಕಾಧಿಪತ್ಯವೇ § ಆಗಿಹೋಗುತ್ತದೆ. ಪ್ರಜಾಧಿಪತ್ಯವೆಂದ ಮೇಲೆ ಪ್ರತಿಯೊಬ್ಬರಿಗೂ ತಮ್ಮಲ್ಲಿ ಸಹಜವಾಗಿ ಬಂದಿರುವ ಸದ್ಬುದ್ಧಿಯನ್ನು ಹೆಚ್ಚಿಸಿಕೊಳ್ಳಲು ಬೇಕಾದ ಅನುಕೂಲಗಳು (right) ಇದ್ದೇ ಇರಬೇಕು. ನಾವು ಪ್ರತಿಯೊಂದು ಜಾತಿ (type) ಯೂ ಒಂದೊಂದು ವಿಶೇಷಶಕ್ತಿಯನ್ನು ಸೂಚಿಸುವುದಕ್ಕಾಗಿ ಬಂದಿರುವ ಸ್ವಯಂಸಿದ್ಧವಾದ ಅವತಾರವಿಶೇಷವೆಂದು ನಂಬಿದ ಪಕ್ಷದಲ್ಲಿ ಇಂಥಾ ಯಾವುದೊಂದು ಜಾತಿಯನ್ನು ನಾಶ ಮಾಡಿದರೂ ಲೋಕವ್ಯವಸ್ಥೆಯಲ್ಲಿ ಹೊಸದೊಂದು ಪಾಳನ್ನುಂಟುಮಾಡಿದಹಾಗೆಯೇ ಆಗುತ್ತದೆ. ಇದು ಬಿಟ್ಟು ಪ್ರಜಾಧಿಪತ್ಯವು ಮಾನವ ಪ್ರಕೃತಿಯಿಂದ (mind) ಹುಟ್ಟಿದ ಪ್ರತಿಯೊಂದು ಉತ್ತಮಗುಣವನ್ನೂ** ಅದು ಅಭಿವೃದ್ಧಿಗೆ ಬರುವಂತೆ ಪ್ರೀತಿಯಿಂದ ಕಾಣಬೇಕು. ಏಕೆಂದರೆ ಪ್ರತಿಯೊಂದು ವಿಧವಾದ ಸೇವೆಯೂ ಪೂರ್ಣ ಜನಾಂಗಕ್ಕೆ ಸರ್ವಸಾಮಾನ್ಯವಾಗಿ ಮುಖ್ಯವಾಗಿದೆ. ಇದರಿಂದ ಸಮಾಜವು ಕರ್ಮದೃಷ್ಟಿಯಿಂದ ಬಹು ಮುಖವಾಗಿದ್ದರೂ ಕೂಡ ಮೂಲೋದ್ದೇಶಗಳಲ್ಲಿ ಒಂದೇ ಒಂದಾಗಿರುವುದರಿಂದ ಇದೊಂದು ಜೀವಕಳೆಯಿಂದ ತುಂಬಿದ ಅವಯವವಿಶೇಷವೇ ಆಗಿದೆ. ಆದುದರಿಂದ ಇಂಥಾ ಸಮಾಜದಲ್ಲಿ ಯಾವುದೊಂದು ಭಾಗದ ಜನರು ದುಃಖಬಂಧನಗಳಿಗೀಡಾಗಿರುವರೋ ಅಲ್ಲಿಯವರೆವಿಗೂ ಆ ಸಮಾಜದಲ್ಲಿ ಯಾವ ಪಂಗಡದವರಿಗೇ ಆಗಲಿ, ಯಾವ ಶಾಖೆಯವರಿಗೇ ಆಗಲಿ ನಿಜವಾದ ಸ್ವಾತಂತ್ರ್ಯವು ಎಂದಿಗೂ ಸಿಗುವುದಿಲ್ಲ. "ಸರ್ವಜನರೂ ಲೋಕದಲ್ಲಿರುವ ಎಲ್ಲಾ ಕಷ್ಟ ದುಃಖಗಳಿಂದಲೂ ಪಾರಾಗಲಿ, ಸುಖವನ್ನು ಸರ್ವರೂ ಕಾಣಲಿ, ಇದಕ್ಕೆ

---

* Standardising † Unjform ‡ ಕಟ್ಟಿಲ್ಲದ
§ Dictatorshjp ** Values

ಬೇಕಾದಂಥ ಸದ್ಬುದ್ಧಿಯನ್ನು ಸರ್ವರೂ ಪಡೆಯಲಿ, ಮತ್ತು ಸರ್ವಸ್ಥಳಗಳಲ್ಲಿಯೂ ಲೋಕದ ಜನರೆಲ್ಲರೂ ಆನಂದದಿಂದಿರಲಿ" * ಎಂಬ ದಿವ್ಯ ಭಾಷೆಯಲ್ಲಿ ಹೇಳಿರುವ ಆದರ್ಶವು ಎಷ್ಟು ಶ್ರೇಷ್ಠತರವಾದ ಪ್ರಜಾಧಿಪತ್ಯವನ್ನು ಸೂಚಿಸುತ್ತದೆ ಎಂದು ನೋಡಿದಿರಾ ? ಅಂದರೆ, ವರ್ಣಧರ್ಮವು (System) ಕೇವಲ ಅರ್ಥ ಕಾಮಗಳನ್ನೇ ಗುರಿಯಾಗಿಟ್ಟುಕೊಂಡಿರುವ ಪ್ರಜಾಧಿಪತ್ಯವಲ್ಲದಿದ್ದರೂ ಇದರಿಂದಾಗುವ ಆಧ್ಯಾತ್ಮಿಕ ಪ್ರಯೋಜನಗಳನ್ನು ನೋಡಿದರೆ, ಇದೂ ಕೂಡ ಒಂದು ಬಗೆಯಾದ ಪ್ರಜಾಧಿಪತ್ಯವೇ ಸರಿ. ಏಕೆಂದರೆ ಪ್ರತಿಯೊಬ್ಬ ಜೀವನಲ್ಲಿಯೂ ಲೋಕಾತೀತವೂ ಸರ್ವ ವಿಭಾಗಾತೀತವೂ ಆದ ಆಧ್ಯಾತ್ಮಿಕ ಶಕ್ತಿಯು ಇರುವುದೆಂದು ತಿಳಿದು, ಸಕಲ ಜೀವಿಗಳನ್ನೂ ಅವರವರ ಅಂತಸ್ತು ಮರ್ಯಾದೆಗಳ ಭೇದಗಳನ್ನು ಪ್ರಾಮುಖ್ಯವಾಗಿಟ್ಟುಕೊಳ್ಳದೆ ಸರ್ವಸಾಮಾನ್ಯವಾದ ಸ್ಥಿತಿಯೊಂದರಲ್ಲಿ ಇಟ್ಟಿದೆ, ಮತ್ತು ಪ್ರತಿಯೊಬ್ಬ ವ್ಯಕ್ತಿಗೂ ಅವನವನ ವಿಶೇಷಗುಣವನ್ನು ಪ್ರಕಾಶಗೊಳಿಸಲು ಬೇಕಾದ ಅನುಕೂಲಗಳನ್ನು ಕೊಟ್ಟೇಕೊಡಬೇಕೆಂದು ಒತ್ತಿಹೇಳುತ್ತದೆ. ಆರ್ಥಿಕ ದೃಷ್ಟಿಯಿಂದ ನಾವು ಒಂದು ಸಹಕಾರ ಮಂಡಲಿ (concern) ಅಥವಾ ಭ್ರಾತೃವರ್ಗದವರಾಗಿದ್ದುಕೊಂಡು ನಮ್ಮ ಶಕ್ತಿಗೆ ತಕ್ಕಷ್ಟುಮಟ್ಟಿಗೆ ಕೊಡುತ್ತಲೂ, ನಮಗೆ ಬೇಕಾದಷ್ಟು ತೆಗೆದುಕೊಳ್ಳುತ್ತಲೂ ಇರುವೆವು. ರಾಜಕೀಯ ದೃಷ್ಟಿಯಿಂದ ವ್ಯವಹಾರ ಧರ್ಮದಲ್ಲಿ ನಮಗೆ ಸರ್ವಸಾಮಾನ್ಯವಾದ ಹಕ್ಕುಗಳಿವೆ. ಮತ್ತು ಇವೆರಡರಿಂದ ನಾವು ನಮ್ಮ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಪಡೆಯುವಂತೆ ಅನುಕೂಲ ಉಂಟಾಗಿದೆ. ಹೀಗಿರುವುದರಿಂದ ಸಮಾಜದ ಧಾರ್ಮಿಕ ವ್ಯವಸ್ಥೆಯು ಆಧ್ಯಾತ್ಮಿಕ ಸ್ವಾತಂತ್ರ್ಯ, ರಾಜಕೀಯ ಸಾಮಾನ್ಯತೆ ಮತ್ತು ಆರ್ಥಿಕ ಸೋದರತ್ವಗಳ ಮೇಲೆ ಆಧಾರಹೊಂದಿ ನಿಂತಿದೆ.

೩೦. ಬ್ರಾಹ್ಮಣರು ಸಂಘದಲ್ಲೆಲ್ಲಾ ಅತಿ ಮುಖ್ಯರು; ಏಕೆಂದರೆ ಇವರು ಯುದ್ಧವನ್ನು ಬಿಟ್ಟು ಶಾಂತಿಯಿಂದಿರುವರು

* ಸರ್ವಸ್ತ್ತರತು ದುರ್ಗಾಣಿ, ಸರ್ವೋಭದ್ರಾಣಿ ಪಶ್ಯತು ।
ಸರ್ವಸ್ತದ್ಬುದ್ಧಿಮಾಪ್ನೋತು, ಸರ್ವಸ್ಸರ್ವತ್ರನಂದತು ॥

ಸಮಾಜ ವ್ಯವಸ್ಥೆ (order = ಕ್ರಮ, ಕಟ್ಟು) ಯಲ್ಲಿ ಯಾವುದಾದರೊಂದು ಪ್ರಬಲವಾದ ಸಂಗತವು ಅಪ್ರತಿಹತವಾಗಿ ಇತರ ಸಂಗಡಗಳನ್ನು ತನ್ನ ಕೈವಶಮಾಡಿಕೊಳ್ಳುತ್ತದೆ. ಸಮಾಜದ ಸಾಮಂತ ವ್ಯವಸ್ಥೆಯಲ್ಲಿ * ಕ್ಷತ್ರಿಯ ಧರ್ಮವು† ಬಹಳ ಗೌರವವನ್ನು ಪಡೆದಿತ್ತು. ಆಧುನಿಕ ಧನಾಢ್ಯರ ಸಂಸ್ಥೆ‡ಗಳಲ್ಲಿ ಐಶ್ವರ್ಯವೇ ಪ್ರಧಾನವಾಗಿದೆ. ಆದರೆ ನಮ್ಮ ಹಿಂದೂ ಸಮಾಜದಲ್ಲಿ § ವಿದ್ಯಾ ಸಂಸ್ಕೃತಿಗಳೇ (Cultural) ಮುಖ್ಯವಾಗಿ ಪ್ರವ್ಯವೇ ಕೇನೆಯುದಾಗಿವೆ, ಏಕೆಂದರೆ ಸಂಸ್ಕೃತಿ ಮತ್ತು ಅಧ್ಯಾತ್ಮಿಕ ವಿಷಯಗಳು ಸ್ವತಃ ಪ್ರಯೋಜನವುಳ್ಳವುಗಳಾಗಿವೆಯೇ ಹೊರತು ಇವುಗಳನ್ನು ಬಿಕ್ಕ ಯಾವ ಪ್ರಯೋಜನಕ್ಕಾಗಿಯೂ ನಾವು ಅನುಸರಿಸುತ್ತಿಲ್ಲ. ಸಮಾಜದ ದರ್ಮಾಧಿಪತ್ಯದಲ್ಲಿ ** ನಿಜವಾದ ಬ್ರಾಹ್ಮಣರೇ ಅತ್ಯಂತ ಶ್ರೇಷ್ಠರು ಮತ್ತು ನಾವು ಇವರಲ್ಲಿ ಉಚ್ಚತರದ ನಿಜ ಸ್ವಾತಂತ್ರ್ಯವೇ ತಾನಾಗಿರುವ ಆತ್ಮಯಜ್ಞವನ್ನೂ ಅತ್ಯಧಿಕ (= Perfect, ಸಂಪೂರ್ಣ) ನೇಮವಾದ ಪೂರ್ಣ ಆತ್ಮನಿಗ್ರಹವನ್ನೂ, ಲೋಕಹಿತಕ್ಕಾಗಿ ಅತ್ಯಂತ ಭಕ್ತಿಯಿಂದಿದ್ದರೂ ಸ್ವಪ್ರಯೋಜನವನ್ನು ಸಂಪೂರ್ಣವಾಗಿ ಬಿಟ್ಟಿರುವ ತ್ಯಾಗಬುದ್ಧಿಯನ್ನೂ, ಇಂಥಾ ಬಹುಕಷ್ಟಸಾಧ್ಯವಾದ ದ್ವಂದ್ವಗಳ ಶ್ರೇಷ್ಠ ಐಕ್ಯತೆಯನ್ನೂ, ನಿಜವಾದ ಶ್ರೇಷ್ಠ ಬ್ರಾಹ್ಮಣರಲ್ಲಿ ಕಾಣುವೆವು. ಮತ್ತೆ ಇದು ಬಿಟ್ಟು ಬಹು ಶೂರ ಯೋಧರಾದ ಯಾವ ಕ್ಷತ್ರಿಯ ವೀರರೂ ಕೂಡ ಭಾರತೀಯರಿಗೆ ಮುಖ್ಯ ಆದರ್ಶ ಪುರುಷರಲ್ಲ ಏಕೆಂದರೆ ಇವರಲ್ಲಿ ವಿಶ್ವದೃಷ್ಟಿಯಿಲ್ಲ. ಇವರು ತತ್ತ್ವವಿಚಾರದಲ್ಲಿ ಕೇವಲ ಏಕದೇಶೀಯರಾಗಿರುವರೇ ಹೊರತು ಸರ್ವತೋಮುಖಿಗಳಾಗಿಲ್ಲ, ಮತ್ತಿವರು ಯಾವಾಗಲೂ ಇನ್ನೂ ಗೆಲ್ಲಬೇಕೆಂದಿರುವ ಬೇರೊಂದು ವಸ್ತುವನ್ನು ತಮ್ಮೆದುರಿಗೆ ಇಟ್ಟುಕೊಂಡಿರುವರು. ಅಂದರೆ ಇದಕ್ಕೆ ತಕ್ಕಷ್ಟು ಮಟ್ಟಿಗೆ ಇವರು ಇನ್ನೂ ಬಂಧಿತರು ಅಥವಾ ಅನ್ಯಾಶ್ರಯಿಗಳೂ ಆಗಿರುವರು. ಇದು ಬಿಟ್ಟು ಸರ್ವಜೀವಕೋಟಿಯನ್ನೂ ನೋ

* Feudal Constitution † Military function, ಕ್ಷಾತ್ರಧರ್ಮ ‡ Capitalist Organisations § Scheme, ಧರ್ಮ
** Social hierarchy

ಡುತ್ತಿರುವ ಬ್ರಾಹ್ಮಣ ಜ್ಞಾನಿಗಳು ಸರ್ವ ಸಂಗಡಗಳಿಗೂ ದ್ವಂದ್ವಗಳಿಗೂ ಅತೀತರಾಗಿ, ಸರ್ವರೂಪರಾಶಿಗಳನ್ನೂ ನೋಡುತ್ತ ನಿಶ್ಚಂಚಲರಾಗಿ ಇವುಗಳೆಲ್ಲದರ ಮಧ್ಯದಲ್ಲಿ ಇದ್ದರೂ ಕೂಡ ನಿತ್ಯ ಶುದ್ಧ ಆನಂದಾತಿಶಯದಲ್ಲಿ ಶಾಂತಿಯಿಂದಿರುವರು. ಹೀಗಲ್ಲದೆ ಯಾವುದೊಂದು ವಸ್ತುವಿನಲ್ಲಿ ಮಮತೆಯಿಟ್ಟು ಬೇರೊಂದು ವಸ್ತುವನ್ನು ಸ್ವಲ್ಪ ಬಿಟ್ಟರೂ ಕೂಡ ಇವರು ತಮ್ಮ ನಿಜಸ್ವಭಾವಕ್ಕೇ ವಿರೋಧಿಗಳಾಗುವರು. ಆದರೆ ಇವರು ಏತಕ್ಕಾಗಿ ಯುದ್ಧಮಾಡುವುದಿಲ್ಲವೆಂದರೆ ಸಕಲ ವಿಧವಾದ ಯುದ್ಧವೂ ನಿಷ್ಪ್ರಯೋಜಕವೆಂಬ ಭಾವದಿಂದಲ್ಲ. ಮತ್ತೆ ಇಂಥಾ ಯುದ್ಧಗಳೆಲ್ಲವನ್ನೂ ಇವರು ಈಗಾಗಲೇ ನಡೆಸಿ ಪೂರೈಸಿರುವುದರಿಂದ ಈಗ ಇನ್ನು ಯಾವ ಯುದ್ಧಕ್ಕೂ ಕೈ ಹಾಕುವುದಿಲ್ಲ*. ಅಂದರೆ ತಮಗೂ ಲೋಕವಸ್ತುಗಳಿಗೂ ಇದ್ದ ಸರ್ವ ಭೇದಗಳನ್ನೂ ಗೆದ್ದು ಈಗ ಪೂರ್ಣವಾದ ಶಾಂತಿ ಸೌಖ್ಯದಲ್ಲಿ ಇರುವರು. ಕ್ರೈಸ್ತಬುದ್ಧರಿಬ್ಬರೂ ಕೂಡ ತಾವು ಶಾಶ್ವತ ಮುಕ್ತಿ ಸಾಮ್ರಾಜ್ಯವನ್ನು ಗೆಲ್ಲುವುದಕ್ಕೆ ಮೊದಲು ದುಷ್ಟ ಸೈತಾನ್ ಅಥವಾ ಮಾರಾ ಎಂಬ ಆಸುರೀ ಪ್ರಕೃತಿಯಿಂದ ಬಹು ಲೋಭಗಳನ್ನು ಅನುಭವಿಸಿ ಈ ತಮ್ಮ ದೀರ್ಘ ಶತ್ರುವನ್ನು ನಾಶಮಾಡಲೇ ಬೇಕಾಗಿತ್ತು. ಮೈತ್ರಿ, ಪ್ರೀತಿ, ಅಥವಾ ಸೌಹಾರ್ದ್ರಭಾವವೆಂಬ ಸರ್ವ ಭೂತದಯೆಯೇ ಬ್ರಾಹ್ಮಣನ ಮುಖ್ಯಗುಣವು,† ಮತ್ತು ಸಾವಧಾನ ಮಾರ್ಗದಿಂದಲ್ಲದೆ ನಮ್ಮಲ್ಲಿ ಯಾರೂ ಈ ಉತ್ತಮ ಗುಣವನ್ನು ಕೂಡಲೇ ಕಾಣಲಾರವು. ಅಂದರೆ ಶ್ರೇಷ್ಠ ಜ್ಞಾನವನ್ನುಳ್ಳ ಋಷಿಗಳಾಗುವುದಕ್ಕಿಂತ ಮೊದಲು ನಾವೆಲ್ಲರೂ ಉತ್ತಮ ಯೋಧರೂ ಆಗಿರಬೇಕು. ಏಕೆಂದರ ಕ್ಷತ್ರಿಯರಂತೆ ವೀರತನದಿಂದ ಯುದ್ಧ ಮಾಡಿದಲ್ಲಿ ಇಂಥಾ ರಣರಂಗದಲ್ಲಿ ವಸ್ತುಗಳ ನಿಜತತ್ವವನ್ನು ಸ್ವಾನುಭವದಿಂದ ಕಂಡುಕೊಂಡು‡ ಜ್ಞಾನಲಾಭದಿಂದಾಗುವ ದೈವೀ ಶಾಂತಿಯನ್ನು ಉಪಭೋಗಿಸಲು ಪೂರ್ಣಪಕ್ವಾಂ

---

* ಶಾಂತಿಯ ನಿಜಾರ್ಥವೆಂಬ ಭಾಷ್ಯವನ್ನು ನೋಡಿ,— N. S. S.

† ಮೈತ್ರೀಕರ್ಮಸಮಸ್ತೇಷು ಬ್ರಾಹ್ಮಣಸ್ಯೋತ್ತಮಂಧನಮ್ ||

‡ Practical insight

ತೀಕ್ಷ್ಣಕರಣವುಳ್ಳವರಾಗುವರು. ಯುದ್ಧರಂಗದಲ್ಲಿ ಘಾಯಗಳನ್ನು ಶತ್ರುಗಳಲ್ಲುಂಟುಮಾಡಿ, ತಮಗುಂಟಾಗುವ ಘಾಯಗಳನ್ನು ತಡೆದುಕೊಳ್ಳುವುದರಲ್ಲಿಯೂ, ಇತರರಿಗೆ ಮರಣವನ್ನುಂಟುಮಾಡಿ ತಮಗೆ ಮರಣ ಬಂದಾಗ ಸಮಾಧಾನದಿಂದೊಪ್ಪಿಕೊಂಡು ಸಾಯುವಾಧವರಲ್ಲಿರುವ ಧೈರ್ಯವನ್ನು ತತ್ತ್ವಜ್ಞಾನಿಗಳಾದ ಅರಿಸ್ಟಾಟಲ್ಲರೂ ಮತ್ತು ಎಷ್ಟೋ ಜನ ಯುದ್ಧೋತ್ಸಾಹಿಗಳೂ-(militarists) ಬಹಳವಾಗಿ ಪ್ರಶಂಸಿಸಿದಾರೆ. ಹೇಗೆಯೋ ಅವಶ್ಯಕವಿದ್ದಾಗ ಕೂಡಲೇ ತಮ್ಮ ಪ್ರಾಣವನ್ನು ಸಂತೋಷದಿಂದ ಅರ್ಪಿಸುವಂಥಾ ತ್ಯಾಗಬುದ್ಧಿಯು ಉತ್ತಮ ಪುರುಷರಲ್ಲಿ ಒಂದು ಮುಖ್ಯ ಗುಣವಾಗಿದೆ. ಇಂಥಾ ಧೈರ್ಯವು ಕ್ಷತ್ರಿಯರ ಮುಖ್ಯ ಗುಣವಾಗಿದೆ. ಆದರೂ ಈ ಮುಖ್ಯಗುಣವನ್ನುಳ್ಳ ಜನರೇ ಅತಿಮುಖ್ಯರಲ್ಲ. ಏಕೆಂದರೆ ಕ್ಷಾತ್ರತೇಜಸ್ಸು ಎಷ್ಟು ಮಟ್ಟಿಗೆ ಉತ್ತಮ ಸ್ಥಿತಿಗೆ ಬಂದರೂ (sublimated) ಕೂಡ ಇದು ನಮ್ಮ ಪ್ರಕೃತಿ (= ಸ್ವಭಾವ) ಯಲ್ಲಿರುವ ಪ್ರಾಕೃತ(primitive)ಗುಣದ ರೂಪಾಂತರ (expression) ವೇ ಸರಿ. ನಮ್ಮನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಇರುವ ಪಶುಸ್ವಭಾವವು ಪೂರ್ಣವಾಗಿ ಸಾಧುವಾಗುವವರೆವಿಗೂ ಲೋಕದಲ್ಲಿ ಇನ್ನೂ ಯುದ್ಧಗಳೂ, ಯುದ್ಧಮಾಡುವ ಕ್ಷತ್ರಿಯರೂ ಇದ್ದೇ ಇರುವರು. ಏಕೆಂದರೆ ನಾಗರೀಕರೆಂಬಿರುವ ಎಷ್ಟು ಜನ ಒಂದೊಂದು ವೇಳೆ ಕೇವಲ ಪಶುವೃತ್ತಿಯಿಂದ ನಡೆಯುವುದಿಲ್ಲ? ಇದರಲ್ಲ ಗುಟ್ಟೇನೆಂದರೆ ಇವರು ತಮ್ಮಲ್ಲಿರುವ ಹಿಂಸಾಸ್ವಭಾವ (tendency) ವನ್ನು ನಿಗ್ರಹಿಸಿ (repressed) ಕಾಲಕೆಳಗೆ ತುಳಿದಿಟ್ಟಿರುವರೇ ಹೊರತು ಈ ಗುಣವನ್ನು ಸಂಪೂರ್ಣವಾಗಿ ದಾಟಿ ಮುಂದೆ ಹೋಗಿಲ್ಲ.*

### ೩೧. ಇದರಿಂದ ಯುದ್ಧಕಾಮಿಗಳಾದ ಕ್ಷತ್ರಿಯರು ಇವರಿಗೆಂದಿಗೂ ಸಮಾನರಲ್ಲ.

ನಮ್ಮ ನಮ್ಮ ಜೀವನ ಕ್ರಮದಲ್ಲಿ ಬಹು ಕಷ್ಟ ಬಂದು ಎದೆಯೊಡೆದು ಒಂದು ಕಡೆ ಮಹಾಪರಾಧವೊಂದು ಮತ್ತೊಂದು ಕಡೆ ಕೋಪತಾಪಗಳಿಂ

* ನಿರ್ಗುಣಬ್ರಹ್ಮ ಮೀಮಾಂಸೆ ಎಂಬ ಭಾಷ್ಯವನ್ನು ನೋಡಿ.

ದಕೂಡಿ ಮನವೆಲ್ಲಾ ಸೀಳಿಹೋಗುವಂತಿರುವಾಗ "ನೀನೀಗ ಹಾಗೆ ಮಾಡಬೇಡ, ಇಲ್ಲಿದಿದ್ದರೆ ನಾನು ನಿನ್ನನ್ನು ಕೊಂದುಬಿಡುವೆನೆ"ಂದು ಕ್ಷತ್ರಿಯನು ಹೇಳುವಾಗ, "ಹಾಗೆಮಾಡಬೇಡಪ್ಪ, ಇಲ್ಲವಾದರೆ ನಾನು ಪ್ರಾಣವನ್ನಾದರೂ ಬಿಟ್ಟು ಬಿಡುತ್ತೇನೆಂ"ದು ಬ್ರಾಹ್ಮಣನು ಹೇಳುತ್ತಾನೆ. ಅಂದರೆ ಜನರು ಹೆಚ್ಚುಹೆಚ್ಚಾಗಿ ಮುಂದೆ ಹೋದಹಾಗೆಲ್ಲ ಅವರ ಹಕ್ಕುಗಳು ಕಡಿಮೆಯಾಗಿ, ಅವರ ಕರ್ತವ್ಯಗಳು ಹೆಚ್ಚುಹೆಚ್ಚಾಗುತ್ತವೆ,

## ೫. ಜಾತಿ ಮತ್ತು ಅಭಿವೃದ್ಧಿ ಮಾರ್ಗ

### ೩೨. ಅಭಿವೃದ್ಧಿಕಾಮಿಗಳು ಸಹನಾ ಪ್ರೀತಿ ವಿವೇಕಗಳಿಂದ ಕೂಡಿ ಸಾವಧಾನದಿಂದ ಕೆಲಸಮಾಡಬೇಕು.

ಕನಸುಗಾರ (dreamer) ರಂಥಾ ಇಚ್ಛಾವಾದಿಗಳು ತಮ್ಮತಮ್ಮ ಆದರ್ಶಗಳು ಕೂಡಲೇ ಸಂಪೂರ್ಣರೀತಿಯಲ್ಲಿ ಕರತಲಾಮಲಕವಾಗಬೇಕೆಂದು ತವಕಪಡುತ್ತಿರುವಲ್ಲಿ ಹಿಂದೂಧರ್ಮವು ಇವುಗಳು ಕಾಲಕ್ರಮೇಣ ಸಿದ್ಧವಾಗಬೇಕೆಂದು ಒತ್ತಿಹೇಳುತ್ತದೆ. ಏಕೆಂದರೆ ಈ ಧರ್ಮವು ತತ್ತ್ವ (reality) ದ ನಿಯಮಾವಸ್ಥೆಗಳನ್ನು ಚೆನ್ನಾಗಿ ಪರಿಶೀಲಿಸಿ ತಿಳಿದುಕೊಂಡಿದೆ. ತಪ್ಪುಭಾವನೆಯುಳ್ಳ ಆದರ್ಶವಾದಿಗಳು * ಜನರ ನ್ಯೂನತೆಗಳನ್ನು ನೋಡಿ ಬೆಚ್ಚುಬಿದ್ದು, ಜನರು ನಿಧಾನದಿಂದ ಪಡೆಯುವ ಅಲ್ಪಾಭಿವೃದ್ಧಿಯನ್ನು ನೋಡಿ ಎದೆಗೆಟ್ಟು, † ತಮಗಿರುವಷ್ಟು ಆದರ್ಶೋತ್ಸಾಹವೇ ಇತರರಲ್ಲಿ ಪ್ರತಿಯೊಬ್ಬರಿಗೂ ಇರುವುದೆಂದು ತಪ್ಪು ತಿಳಿದುಕೊಂಡು, ‡ ಸಹಸ್ರಾರು ವರುಷ ಶಾಶ್ವತವಾಗಿರುವ ರಾಮರಾಜ್ಯವನ್ನು ಸ್ಥಾಪಿಸಲು ಸಮೀಪ ದಾರಿಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತ, ದಂಗೆಗೋರರ ಗುಂಪಿನಲ್ಲಿ ಸೇರುತ್ತಾರೆ, ಮತ್ತು ಇಂಥವರನ್ನು ರಾಜ್ಯಾಧಿಕಾರಿಗಳು ಸಂಘಬಾಧಕರೆಂದು ತಿಳಿಯುತ್ತಾರೆ.

---

* Idealists † Exasperated, ಕೋಪಗೊಂಡು

‡ Attributes, ಅನ್ವಯಿಸಿಕೊಳ್ಳು

ಸಂಘರಕ್ಷಣೆಗಾಗಿರುವ ಅಂಕೆ ಅಡಚಣಗಳನ್ನು ಇವು ತಪ್ಪು, ಇವು ಬೇಡವೆಂದು ವಿರೋಧಿಸುವುದರಿಂದ ಸಮಾಜವನ್ನು ಅನಾಯಕತ್ವದ ದಾಳಿಗಳಿಗೆ ಅನಾಯಾಸವಾಗಿ ಬಿಟ್ಟುಕೊಡುತ್ತಾರೆ ಆದರೆ ಉತ್ತಮ ಮಾರ್ಗವೆಂದರೆ ದೃಢವಾಗಿರುವ ಭೂಮಿಯಮೇಲೆ ಗಟ್ಟಿಯಾಗಿ ಕಾಲಿಟ್ಟುಕೊಂಡು ಆಕಾಶದಲ್ಲಿರುವ ನಕ್ಷತ್ರಗಳನ್ನು ಏಕದೃಷ್ಟಿಯಿಂದ ನೋಡುತ್ತಾ ಮುಂದೆ ಹೋಗುವುದೇ ಆಗಿದೆ. ಏಕೆಂದರೆ ಆದರ್ಶಗಳೆಂದಮೇಲೆ ಅವು ಎಷ್ಟು ಯೋಗ್ಯವಾಗಿದ್ದರೂ ಕೂಡ ದೊಡ್ಡವರು ಚಿಕ್ಕವರು ಬುದ್ಧಿವಂತರು ದಡ್ಡರು ಎಂಬ ಯಾವ ಬೇಧವೂ ಇಲ್ಲದೆ ಸರ್ವಸಾಮಾನ್ಯವಾಗಿರುವ ಮಾನವ ಪ್ರಕೃತಿ ಎಂಬ ಮಣ್ಣಿನ ಮೂಲಕವೇ ಇವನ್ನು ಸಾಧಿಸಬೇಕು. ಇದುಬಿಟ್ಟು ಜನರೆಲ್ಲರೂ ಬುದ್ಧಿವಂತರಾಗಿದ್ದಲ್ಲಿ ಸಂಸಾರವೆಲ್ಲ ಬಹು ಸುಲಭವಾಗುತ್ತಿತ್ತು. ಆದರೆ ಸರ್ವಜನರೂ ಜ್ಞಾನಿಗಳಾಗಬೇಕೆಂದು ಎಷ್ಟು ಪ್ರಯತ್ನಪಟ್ಟರೂ ಇವರಲ್ಲಿರುವ ವ್ಯಕ್ತಿಭೇದದಿಂದ ಕೆಲವರಿಗೆ ಬುದ್ಧಿಲಾಭವು ಹೆಚ್ಚಾಗಿಯೂ ಇನ್ನೂ ಕೆಲವರಿಗೆ ಕಡಿಮೆಯಾಗಿಯೂ ಸಿಕ್ಕುವುದರಿಂದ ಮಾನವ ಜೀವಿಕೆಯ ಕಠಿನಪ್ರಸಂಗಗಳಲ್ಲಿರುವ ಸಹಜಗುಣಗಳು ಯಾವಾಗಲೂ ಇದ್ದೇ ಇರುವುವು. ಇದರಿಂದ ಹಿಂದೂತತ್ತ್ವಜ್ಞರು ಜನರನ್ನು ಸುಸಂಸ್ಕೃತರೂ ಅಸಂಸ್ಕೃತರೂ ಎಂದು ಎರಡು ವರ್ಗವಾಗಿ ಭೇದಮಾಡಿ, ಒಂದು ಕಡೆ ತಮ್ಮಲ್ಲಿ ಆತ್ಮಪರೀಕ್ಷೆ, ಆತ್ಮೋಪದೇಶ (ಬೋಧೆ) ಗಳನ್ನು ಇನ್ನೂ ಚೆನ್ನಾಗಿ ಪಡೆದಿಲ್ಲದಿರುವವರನ್ನೂ, ಇನ್ನೊಂದುಕಡೆ ಇವರಿಗಿಂತ ಹೆಚ್ಚು ಬುದ್ಧಿಶಕ್ತಿಗಳುಳ್ಳ ದ್ವಿಜರನ್ನೂ ಅಂದರೆ ಬ್ರಹ್ಮಕ್ಷತ್ರಿಯ ವೈಶ್ಯರೆಂಬ ತ್ರಿವರ್ಗಗಳಲ್ಲಿರುವವರು ಎಂದು ವಿವೇಚಿಸಿ ವ್ಯವಸ್ಥೆಮಾಡಿದಾರೆ. ಅಂದರೆ ಆಯಾ ಜಾತಿವರ್ಣ (caste) ಗಳು ಆತ್ಮಸಾಕ್ಷಾತ್ಕಾರದ ಅಂದರೆ ಮೋಕ್ಷಮಾರ್ಗದ ಬೇರೆಬೇರೆ ಅಂತಸ್ತುಗಳಲ್ಲಿ ಬಂದುಸೇರಿರುವ ಜನರನ್ನು ಸೂಚಿಸುತ್ತವೆ. ಇದರಿಂದ ಜನರು ಎಷ್ಟು ಕೀಳುಸ್ಥಿತಿಯಲ್ಲಿ ಕೂಡ ದೃಢಪ್ರಯತ್ನಪಟ್ಟು ಆತ್ಮೋನ್ನತಿಗಾಗಿ ಶ್ರಮಪಟ್ಟರೆ ಒಂದಲ್ಲ ಒಂದು ದಿವಸ ಸರ್ವಸಾಮಾನ್ಯವಾದ (Normal) ಅಭಿವೃದ್ಧಿಮಾರ್ಗದಿಂದ ಪರಮಪದವನ್ನು ಸೇರಿ ಕಾಲಚಕ್ರದ ವಿಪರ್ಯಯಗಳಿಂದ ಶಾಶ್ವತಮೋಕ್ಷವನ್ನು ಪಡೆದು ಪೂರ್ಣಸುಖದಿಂದ ಇರಬಹುದು. ಹೀಗೆ

ಯೇ ನಮ್ಮಲ್ಲಿ ಪ್ರತಿಯೊಬ್ಬರಿಗೂ ತಮ್ಮ ತಮ್ಮ ಸಹಜವಾದ ಸ್ಥಿತಿಯನ್ನು ಕಂಡುಕೊಳ್ಳಲು ಬೇಕಾದಷ್ಟು ಅವಕಾಶವನ್ನೂ ಕಾಲವನ್ನೂ ಕೊಟ್ಟಿರುವುದಲ್ಲದೆ ಮೇಲಕ್ಕೆ ಬರಬೇಕೆಂದು ಪ್ರಯತ್ನಿಸುವ ಪ್ರತಿಯೊಬ್ಬರೂ ತಮತಮಗೆ ತಕ್ಕ ಶ್ರೇಷ್ಠ ಶಕ್ತಿಗಳನ್ನು ಪಡೆಯುವರು.

೩೩. ಸಂಘದಲ್ಲಿ ಹೆಚ್ಚು ತಾರತಮ್ಯಗಳುಂಟಾದಾಗ, ಇದನ್ನು ನಿಲ್ಲಿಸಿ, ಜನರ ಗುಣಕರ್ಮಗಳನ್ನು ಮುಖ್ಯವನ್ನಾಗಿ ಮಾಡಿದರು; ಮತ್ತು ಋಷಿಕುಲ

ಆದರೆ ಸ್ವಲ್ಪಕಾಲದಲ್ಲಿಯೇ ಆಯಾ ಜೀವನ ವೃತ್ತಿಗಳಲ್ಲಿ ಭೇದಗಳುಂಟಾಗಿ ಅಧಿಕಾರಾನಧಿಕಾರಗಳ ಮತ್ತು ಕಟ್ಟು ನಿಯಮಗಳ ಶಿಕ್ಕಾಟದಲ್ಲಿ ಕೆಲವು ಪಂಗಡಗಳು ಕೆಳಕ್ಕೆ ಬಿದ್ದವು. ಇದರಿಂದ ಮತಾಧಿಪತ್ಯದ ಧರ್ಮ * ಗಳು ಆಯಾ ಪಂಗಡದವರಲ್ಲಿ ಆದುವರೆವಿಗೂ ಗೊತ್ತು ಮಾಡಿದ್ದ ಆಧ್ಯಾತ್ಮಿಕ ಗೌರವ ಮತ್ತು ಸಾಮಾನ್ಯತೆಗಳಿಗೆ ಬಾಧೆ ತಂದಿಟ್ಟಾಗ ಆಯಾ ಜನರು ಇವುಗಳನ್ನು ವಿರೋಧಿಸುತ್ತಿದ್ದರು, † ಮತ್ತು ನ್ಯಾಯ ಸಮ್ಮತವಲ್ಲದ ಒಣಹೆಮ್ಮೆಗಳನ್ನೆಲ್ಲಾ ಖಂಡಿಸುತ್ತಿದ್ದರು. ಏಕೆಂದರೆ ಸಾಧಾರಣವಾಗಿ ಸರ್ವಕುಶಲಕರ್ಮಿಗಳೂ ಕೂಡ ಯೋಧಪುರುಷರು ಅಥವಾ ಕ್ಷತ್ರಿಯರಷ್ಟೇ ನಾಗರೀಕರಾಗಿರುವರು. ಹೀಗೆಯೇ ನೋಡುತ್ತ ಹೋದರೆ ಮಾನವ ವರ್ಗದ ಪ್ರಾರಂಭಗಾಲದಲ್ಲಿ ಪರಾತ್ಪರವಸ್ತುವಾದ ಪರಮೇಶ್ವರನಿಂದಲೇ ಸಕಲ ಲೋಕವೂ ಹುಟ್ಟಿದುದರಿಂದ ಜನರಲ್ಲಿ ಯಾರಲ್ಲಿಯೂ ಯಾವ ವರ್ಣ (class) ಭೇದಗಳೂ ಇರಲಿಲ್ಲ ‡. 'ಬ್ರಹ್ಮದಾಸಾ ಬ್ರಹ್ಮದಾಸಾ ಬ್ರಹ್ಮೈವೇಮೆಕಿತವಾಃ' ಎಂಬ ಶ್ರುತಿವಾಕ್ಯದಂತೆ

---

* Hierarchical Conceptions, ಭಾವ

† ಸ್ವಾಮಿ ದಯಾನಂದರ ಸತ್ಯಾರ್ಥ ಪ್ರಕಾಶದ ೪ ನೇ ಅಧ್ಯಾಯವನ್ನು ನೋಡಿ—N. S. S.

‡ ಸರ್ವಂ ಬ್ರಾಹ್ಮಮಿದಂ ಜಗತ್, (ಮಹಾ ಭಾರತ, ಶಾಂತಿ ಪರ್ವ, ೧೮೬)

ಒಂದು ರೀತಿಯಿಂದ ನೋಡಿದರೆ ಬೆಸ್ತ, ದಾಸ (Slaves), ಜೂಜು ಗಾರರೇ ಮೊದಲಾದ ಸರ್ವಜನರೂ ಕೂಡ ಬ್ರಹ್ಮೀ ಭೂತರೇ ಸರಿ. ಹೀಗೆಯೇ ಭಾಗವತವು ಪರಮಾತ್ಮನೊಬ್ಬನಿರುವಂತೆ ಲೋಕವೆಲ್ಲವೂ ಏಕವರ್ಣಾತ್ಮಿಕವಾದುದೆಂದು ಉದ್ಘೋಷಿಸುತ್ತದೆ. ಮನುವೂ ಕೂಡ "ಜನ್ಮನಾ ಜಾಯತೇ ಶೂದ್ರಃ"ಎಂದರೆ ಪಾರ್ಥಿವಜನ್ಮ·ಅಥವಾ ಪ್ರಥಮ ಜನ್ಮದಿಂದ ಸರ್ವಜನರೂ ಅಸಂಸ್ಕೃತರಾದ ( unegenerate) ಶೂದ್ರ ರಾಗಿ ಹುಟ್ಟುವರೆಂದೂ, "ಕರ್ಮಣಾ ಜಾಯತೇ ದ್ವಿಜಃ" ಎಂದರೆ ಅವ ರವರಿಗೆ ತಕ್ಕಂಥ ಸುಸಂಸ್ಕಾರವಾದ ಪಾರಮಾರ್ಥಿಕ ಅಥವಾ ಎರಡನೇ ಜನ್ಮದಿಂದ (= ಉಪನಯನ) ಸುಸಂಸ್ಕೃತರಾದ ದ್ವಿಜರಾಗುವರೆಂದೂ ಹೇಳುತ್ತಾನೆ. ಹೀಗೆಂದಮೇಲೆ ಜಾತಿ ಅಥವಾ ವರ್ಣವು ಕೇವಲ ಶೀಲ ಅಥವಾ ಗುಣಕರ್ಮವೇ ಆಗುತ್ತದೆ. "ಎಲ್ಲರೂಕೂಡ ತಮ್ಮ ತಮ್ಮ ಕರ್ಮದಿಂದಲೇ ಹೊರತು ಯಾರೂಕೂಡ ಕೇವಲ ಜಾತಿವಂಶಗಳಿಂದಲೇ ಎಂದಿಗೂ ನಿಜವಾದ ಬ್ರಾಹ್ಮಣರಾಗುವುದಿಲ್ಲ. ಹೇಗೆಂದರೆ ಶುದ್ಧವಾದ ಗುಣವೊಂದು ಮಾತ್ರವಿದ್ದರೆ (ಜನ್ಮ) ಚಂಡಾಲನೂ ಕೂಡ (ಕರ್ಮ) ಬ್ರಾಹ್ಮಣನೇ ಆಗುವನು." * (೯, ೧೪, ೪೮) ಈಗ ಮಹರ್ಷಿಗಳೆಂದು ಬ್ರಾಹ್ಮಣರಿಂದಲೂ ಕೂಡ ಪೂಜಿಸಲ್ಪಡುತ್ತಿರುವ ಮಹಾತ್ಮರುಗಳಲ್ಲಿ ಕೆಲವರು ಜಾತಿದೃಷ್ಟ್ಯಾ ಮಿಶ್ರ ವರ್ಣಿಗಳೂ ಮತ್ತು ಸಂಕರಜನ್ಮಿ ಗಳೂ ಆಗಿ ಇದ್ದರು. ಹೇಗೆಂದರೆ "ಗಣಿಕಾ ಗರ್ಭಸಂಭೃತೋ ವಸಿ ಷ್ಠಶ್ಚ ಮಹಾಮುನಿಃ । ತಪಸಾ ಬ್ರಾಹ್ಮಣೋಜಾತಃ ಸಂಸ್ಕಾರಸ್ತತ್ರ ಕಾರಣಂ ॥ ಜಾತೌ ವ್ಯಾಸಸ್ತು ಕೈವರ್ತ್ಯಾಃ ಶ್ವಪಾಕ್ಯಾಸ್ತು ಪರಾಶರಃ । ಬಹವೋಽನ್ಯೇಪಿವಿಪ್ರತ್ವಂ ಪ್ರಾಪ್ತಾಯೇ ಪೂರ್ವಂ ಅದ್ವಿಜಾಃ॥" ಅಂದರೆ ಅಷ್ಟೊಂದು ದೊಡ್ಡವರೆಂದು ಹೇಳಿಸಿಕೊಂಡು, ವಿಶ್ವಾಮಿತ್ರರನ್ನು ಬ್ರಹ್ಮ ರ್ಷಿಗಳೆನ್ನದೆ ಅಷ್ಟೊಂದು ಕಷ್ಟಗೊಟ್ಟ, ಕುಲಪತಿಗಳಾದ ಪೂಜ್ಯವಸಿ ಷ್ಠರೇ ಜಾತಿಯಲ್ಲಿ ಕೇವಲ ದಾಸೀ ಪುತ್ರರು, ಚತುರ್ವೇದ ಮತ್ತು ಅಷ್ಟಾದಶಪುರಾಣ ಮತ್ತು ಮಹಾಭಾರತ ಕರ್ತರಾದ ವ್ಯಾಸಮಹರ್ಷಿ ಗಳೂ ಕೂಡ ಬೆಸ್ತಜಾತಿಯಲ್ಲಿಯೇ ಹುಟ್ಟಿದವರು, ಮತ್ತು ಸರ್ವಶ್ರೇಷ್ಠ ನಾದ ಮಹಾವಿಷ್ಣುವಿನ ಅವತಾರವಾದ ಶ್ರೀ ಕೃಷ್ಣದ್ವೈಪಾಯನ ವ್ಯಾಸ

ಋಷಿಗಳ ಜನಕರೂ ಮತ್ತು ಸ್ಮೃತಿಕಾರರೂ ಆದ ಪರಾಶರರೂ ಕೂಡ ಚಂಡಾಲ ಕುಲದಲ್ಲಿ ಹುಟ್ಟಿದವರೇ ಸರಿ. ಅಂದರೆ ನಡತೆಯೇ ಮುಖ್ಯವೇ ಹೊರತು ಕೇವಲ ಜನ್ಮವು ಮುಖ್ಯವಲ್ಲವೆಂಬ ಮಾತು ಸಿದ್ಧವಾಯಿತಷ್ಟೆ? ಇದರಿಂದ ಸಂಪೂರ್ಣತೆಯನ್ನು ಪಡೆಯಬೇಕೆಂದರೆ ಸಕಲ 'ಕೀಳು' ಜಾತಿಯವರೂ ಕೂಡ 'ಉತ್ತಮ' ಜಾತಿಯವರಷ್ಟು ಮಟ್ಟಿಗೆ ಶ್ರೇಷ್ಠ ಸಿದ್ಧಿಯನ್ನು ಪಡೆಯಬಹುದು. ಇದನ್ನೇ ಶ್ರೀ ಕೃಷ್ಣಪರಮಾತ್ಮನು ತನ್ನ ಭಗವದ್ಗೀತೆಯಲ್ಲಿ ಹೀಗೆಂದು ಹೇಳುತ್ತಾನೆ, 'ನನ್ನಲ್ಲಿ ಶರಣು ಬಂದದ್ದೇ ಆದರೆ ಸರ್ವ ಜನರೂಕೂಡ ಅವರವರು ಯಾವ ಕುಲದವರೇ ಆಗಲಿ ನೀಚಕುಲದವರಿರಲಿ ಸ್ತ್ರೀಶೂದ್ರರಿರಲಿ, ಯಾರೇ ಇರಲಿ ಎಲ್ಲರೂ ಕೂಡ ನನ್ನ ಪರಮ ಪದವನ್ನು ಪಡೆಯುತ್ತಾರೆ' (೯, ೩೨). ಮತ್ತು 'ಅಜ್ಞಾನಿಗಳಾದ ಅಂತ್ಯಜರೂ (ಜಾತಿಬಾಹ್ಯರು, ಬಹಿಷ್ಕೃತರು) ಕೂಡ ಪರಮಾತ್ಮನಲ್ಲಿ ಪೂರ್ಣಭಕ್ತಿಯಿಂದಿದ್ದರೆ ಅವನ ದಿವ್ಯನಾಮೋಚ್ಚಾರಣೆಯಿಂದ ತಾರಕಜ್ಞಾನ (ಉಪದೇಶ) ವನ್ನು ಪಡೆಯಲು ಅರ್ಹರಾಗುತ್ತಾರೆ. ಹೀಗೆಯೇ ಸ್ತ್ರೀಶೂದ್ರ ದ್ವಿಜಬಂಧುಗಳಾದ ಪತಿತ ಬ್ರಾಹ್ಮಣರೂಕೂಡ ತಂತ್ರೋಪದೇಶದಿಂದ ಇಂಥಾ ತಾರಕ ಜ್ಞಾನವನ್ನು ಪಡೆಯಲು ಅಧಿಕಾರಿಗಳಾಗುತ್ತಾರೆ † ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ಪಡೆಯಬೇಕೆಂಬ ಆಶೆಯು ಶ್ರೀಮಂತ ಬಡಬಗ್ಗರಲ್ಲಿಯೂ ಶಕ್ತಾಶಕ್ತರಲ್ಲಿಯೂ ಕೂಡ, ಅಂದರೆ ಸರ್ವಜನರಲ್ಲಿಯೂ ಕೂಡ ಒಂದೇ ಸಮನಾಗಿ ಪ್ರಕಾಶಿಸುತ್ತದೆ. ಏಕೆಂದರೆ ಆಶಾ ಪ್ರೀತಿಗಳು ಕೇವಲ ಯಾವುದೊಂದುಜಾತಿ (Class) ಯವರ ಸ್ವತ್ತಲ್ಲ. ಮತ್ತು ಪ್ರತಿಭಾ ಜ್ಞಾನಗಳಿಂದ ಕೂಡಿದ ಭಕ್ತಿಶ್ರದ್ಧೆಗಳು ‡ ಅಂಗಡಿ ಬೀದಿಯಲ್ಲಿ ಕೊಂಡುಕೊಳ್ಳತಕ್ಕ ಸಾಮಾನ್ಯವಸ್ತುಗಳಲ್ಲ. ಹೀಗೆಯೇ ಆಯಾ ಜನರಲ್ಲಿರುವ ಇಂಥಾಶಕ್ತಿಗಳನ್ನು ನೋಡಿದರೆ ಯಾವ ಸಾಮಾಜಿಕ ಭೇಧಗಳೂ ಕೂಡ ಅಷ್ಟು ಮುಖ್ಯವಾಗಿ ಕಾಣುವುದಿಲ್ಲ.

† ಅಂತ್ಯಜಾಪಿ ಯೇಭಕ್ತಾನಾಂ ಅಜ್ಞಾನಾಧಿಕಾರಿಣಃ ।
ಸ್ತ್ರೀ ಶೂದ್ರ ಬ್ರಹ್ಮಬಂಧೂನಾಂ ತಂತ್ರಜ್ಞಾನಾಧಿಕಾರಿತಾ ॥

‡ Imaginative piety

## ೩೪. ಸಂಪ್ರದಾಯ ಪ್ರಶಂಸೆ; ಮತ್ತು ಶೂದ್ರಾದಿಗಳು ವೇದ ಸಹಾಯವಿಲ್ಲದಿದ್ದರೂ ಮೋಕ್ಷವನ್ನು ಪಡೆಯಬಹುದು

ನಮಗೆಲ್ಲರಿಗೂ ಸಂಪೂರ್ಣತೆಯನ್ನು ಪಡೆಯಲು ಬೇಕಾದ ಅಧಿಕಾರವಿದ್ದರೂ ಕೂಡ ಬೇರೆ ಬೇರೆ ಜನರು ತಮ್ಮ ತಮ್ಮ ಜಾತಿ ಪದ್ಧತಿ (group forms) ಗಳಲ್ಲಿ ರೂಢಿಯಾಗಿ ಬಂದಿರುವ ಮಾರ್ಗಗಳನ್ನು ಪ ಯೋಗಿಸಲು ಅವಕಾಶವು ಇನ್ನೂ ಇದ್ದೇ ಇದೆ. ಕೊನೆಯ ನಾಲ್ಕನೆಯ ವರ್ಣವೊಂದನ್ನು ಬಿಟ್ಟು ಉಳಿದ ಮೇಲಿನ ತ್ರಿವರ್ಗದವರೆಲ್ಲರೂ ವೇದಯಜ್ಞಾನುಷ್ಠಾನದಿಂದ ಸಂಪೂರ್ಣತೆ*ಯನ್ನು ಪಡೆಯಲು ಅಧಿಕಾರಿಗಳಾಗಿದಾರೆ. ಅಂದರೆ ಈ ತ್ರಿವರ್ಗದವರಿಗಲ್ಲದೆ ನಾಲ್ಕನೇ ವರ್ಣದವರಿಗೆ ಉಪನಯನ ಅಥವಾ ವೇದದೀಕ್ಷಾ (initiation) ಸಂಸ್ಕಾರವನ್ನೂ ಮತ್ತು ವೇದಾಧ್ಯಯನವನ್ನೂ ನಿಷೇಧಿಸಿದರು. ಏಕೆಂದರೆ ಪ್ರಾಯಶಃ ಆಗಿನ ಸಮಾಜವು ತನ್ನ ಹೆಚ್ಚು ಸೇವೆಗೆ ಬೇಕಾದ ಜನರು ಈ ವಿಷಯಗಳಲ್ಲಿ ತಮ್ಮ ಕಾಲವನ್ನೆಲ್ಲಾ ಕಳೆಯದೆ ಚೆನ್ನಾಗಿ ರಕ್ಷಿಸಲ್ಪಡಬೇಕೆಂಬ ಸದುದ್ದೇಶದಿಂದಲೇ ಹೀಗೆ ಮಾಡಿರಬಹುದು. ಏಕೆಂದರೆ ಜನರಿಗೆ ಬೇಕಾದ ತಾರಕಜ್ಞಾನವನ್ನು ವೇದಾಧ್ಯಯನ ಮತ್ತು ವೇದಾಧಿಕಾರಗಳೇ ಇರಬೇಕೆಂಬ ಕಟ್ಟಿಲ್ಲದೆ ಬೇರೆ ರೀತಿಯಲ್ಲಿಯೂ ಪಡೆಯಬಹುದು. ಶ್ರೀಶಂಕರಾಚಾರ್ಯರು ಸೂತ ವಿದುರರಂಥಾ ಶೂದ್ರರು ತಮ್ಮ ಪೂರ್ವಜನ್ಮ ಸುಕೃತ † ದಿಂದ ಪಾರಮಾರ್ಥಿಕವಾದ ಶ್ರೇಷ್ಠಜ್ಞಾನವನ್ನು ಪಡೆದರೆಂದು ಒಪ್ಪುತ್ತಾರೆ. ಇತಿಹಾಸಪುರಾಣಾಧ್ಯಯನದಿಂದಲೂ ಜಪೋಪವಾಸಪೂಜೆಗಳಿಂದಲೂ ಕೂಡ ಜನರು ಪರಮಾತ್ಮನನ್ನು ಕಾಣಬಹುದು. "ಪುರುಷಮಾತ್ರ ಸಂಬಂಧಿಭಿಃ'' ಅಂದರೆ ಪ್ರತಿಯೊಬ್ಬ ಮನುಷ್ಯನೂ ಕೂಡ ತಾನು ಮನುಷ್ಯನೆಂಬ ಮಾತ್ರದಿಂದಲೇ ಸಂಪೂರ್ಣಸಿದ್ಧಿಯನ್ನು ಪಡೆಯಲು ಶಕ್ತನಾಗಿದಾನೆ ‡

---

* Perfection, ಪುರುಷಾರ್ಥಸಿದ್ಧಿ † ವಾಸನಾ, By virtue of

‡ ಬ್ರಹ್ಮಸೂತ್ರ, ಶಂಕರಭಾಷ್ಯ. ೩, 4, ೩೮ ;

## ೩೫. ಜಾತಿಯಲ್ಲಿ ಸಮಾನಸ್ಕಂಧತೆಗಾಗಿ ಯುದ್ಧಗಳು; ವಸಿಷ್ಠ ವಿಶ್ವಾಮಿತ್ರರ ಜಗಳ.

ಹಿಂದೂದೇಶದ ಚರಿತ್ರೆಯನ್ನು ನೋಡಿದರೆ ಪ್ರಾರಂಭ (= ಪುರಾತನಕಾಲ)ದಿಂದಲೂ ಕೂಡ ಸರ್ವಸಾಮಾನ್ಯತೆಗಾಗಿ ನಮ್ಮಲ್ಲಿ ಎಷ್ಟೋ ಯುದ್ಧಗಳು ನಡೆದಿವೆ. ವಸಿಷ್ಠವಿಶ್ವಾಮಿತ್ರರುಗಳಿಗೆ, ಅಂದರೆ ವೈದಿಕ ಸಂಪ್ರದಾಯಕ್ಕೆ ಆಧಾರ ಸ್ತಂಭರೂ, ಸರ್ವಮತಾಂತರ ಪ್ರವರ್ತನೆಗೂ ಬದ್ಧವೈರಿಗಳಾದ ವಸಿಷ್ಠರಿಗೂ, ಅಭಿವೃದ್ಧಿಮಾರ್ಗಗಳ ನಾಯಕರೂ ಸ್ವಾತಂತ್ರ್ಯಾಧಿಕಾರ (Liberty, ಮುಕ್ತಿ)ಗಳ ಸೇನಾನಿ (champion, ವೀರ, ರಕ್ಷಕ)ಗಳೂ ಆದ ವಿಶ್ವಾಮಿತ್ರರಿಗೂ ಪರಸ್ಪರವಾಗಿ ನಡೆದ ಘೋರಯುದ್ಧವೇ ಒಂದು ಉತ್ತಮ ದೃಷ್ಟಾಂತವಾಗಿದೆ. ಪ್ರಾಚೀನಮಾರ್ಗಾನುಸಾರಿಗಳಾದ ವಸಿಷ್ಠರು ವೈದಿಕ ಧರ್ಮವು ಆರ್ಯರಲ್ಲಿ ಮಾತ್ರ ಇರಬೇಕೆಂದು ಹೇಳುತ್ತಿರಲು. ವಿಶ್ವಾಮಿತ್ರರಾದರೋ ಇದನ್ನು ಲೋಕಕ್ಕೆಲ್ಲಾ ಹರಡಬೇಕೆಂದು ಪ್ರಯತ್ನಿಸಿದರು. * ಚೆನ್ನಾಗಿ ನೋಡಿದಲ್ಲಿ ಉಪನಿಷತ್ಕಾರರ ಧ್ಯೇಯವೇ ಸರ್ವಜನರ ಹಿತಕ್ಕಾಗಿ ನೆಲಸಿತ್ತು. † ಹೀಗೆಯೇ ಸರ್ವವಿದಿತವಾಗಿರುವಂತೆ, ಬೌದ್ಧಮತವು ಸಕಲ ಧರ್ಮಾಧಿಪತ್ಯ (hierarchical) ದ ಭಾವನೆಗಳನ್ನೆಲ್ಲಾ ಮೂಲೋತ್ಪಾಟನೆಮಾಡುತ್ತದೆ. ಹೀಗೆಯೇ ಶ್ರೀ ಶಂಕರರ ವೇದಾಂತವೂ ಕೂಡ ಮುಖ್ಯವಾಗಿ ಲೋಕಾರಾಧನೆ (democratic) ಗಾಗಿಯೇ ನಿಂತಿತ್ತು, ಮತ್ತಿದರಂತೆಯೇ ಶ್ರೀ ರಾಮಾನುಜಾಚಾರ್ಯರೂ ಕೂಡ ಶೂದ್ರಪಂಚಮ ವರ್ಣಗಳಿಗೆ ಸೇರಿದ ಜನರನ್ನೂ ಕೂಡ ತಮ್ಮ ಆಳ್ವಾರ್ (= ಆಚಾರ್ಯ) ರೆಂದು ಗೌರವಿಸಿದರು.

## ೩೬ ಈಗಿನ ದ್ವೇಷಾಸೂಯೆಗಳನ್ನು ನಿಲ್ಲಿಸಲು ಎಲ್ಲರಿಗೂ ವೇದಾಧ್ಯಯನಕ್ಕೆ ಅವಕಾಶ ಕೊಡಬೇಕು

* ಭಾಷ್ಯವನ್ನು ನೋಡಿ

† Was democratic in spirit

ವೈದಿಕ ಧರ್ಮವು ವೇದವಚನಾನುಸಾರವಾಗಿ ವಿಶೇಷಾನುಭವಗಳನ್ನು ಪಡೆದಿದ್ದ ಜನರಿಗೆ ಮಾತ್ರ ಅನ್ವಯಿಸುತ್ತಿತ್ತು. ಇದರ ರೂಪಗಳೆಲ್ಲವೂ ವಿಶೇಷಗುಣವೊಂದನ್ನು ಪಡೆದಿದ್ದುದರಿಂದ ಇವುಗಳನ್ನು ಹೀಗಲ್ಲದಿದ್ದ ಅನ್ಯಧರ್ಮಗಳ ರೂಪಗಳೆಂದು ಬೇರೆಮಾಡಲು ಉತ್ತಮ ಅವಕಾಶ ದೊರೆಯಿತು. ಇದರಿಂದ ತಮ್ಮ ತಮ್ಮ ಧ್ಯೇಯಗಳನ್ನು ಭ್ರಮೆಗೊಳಿಸಿ ಇಲ್ಲವೇ ನಾಶಮಾಡುವಂತಿದ್ದ ಅನ್ಯಭಾವಗಳಿಂದ ಯಾವ ಬಂಧನವನ್ನೂ ಹೊಂದದಂತೆ ಪ್ರತಿಯೊಂದು ಪಂಗಡದವರೂ ಕೂಡ ತಮ್ಮ ತಮ್ಮ ಜೀವನದ ಪುರುಷಾರ್ಥವನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವಕಾಶಹೊಂದಿದರು. ಆದರೆ ಸ್ವಲ್ಪಕಾಲದಲ್ಲಿಯೇ ಜನರು ಈ ವಿಶೇಷಧರ್ಮಗಳು (forms, ಆಚಾರ ವ್ಯವಹಾರಗಳು) ಕೇವಲ ತಮ್ಮ ತಮ್ಮ ಆಧ್ಯಾತ್ಮಿಕ ವಿಚಾರ (monopoly) ಗಳೆಂದೂ, ಅವುಗಳಲ್ಲಿ ಇತರರಿಗೆ ಯಾವ ಹಕ್ಕೂ ಇಲ್ಲವೆಂದೂ ಹೇಳುತ್ತಿದ್ದರಲ್ಲದೆ, ಅಲ್ಲಲ್ಲಿ ಇವರಿವರು ದೊಡ್ಡವರು ಚಿಕ್ಕವರೆಂಬ ಭಾವಗಳೂ ಬೆಳೆಯುತ್ತ ಬಂದವು. ಇವರಿಂದ "ಲೋಕಾನಾಂತು ವಿವೃದ್ಧ್ಯರ್ಥಂ" (ಮನು 1, 32) ಅಂದರೆ ಲೋಕಹಿತಕ್ಕಾಗಿ ಜಾತಿಧರ್ಮವು * ಪ್ರಾರಂಭವಾಯಿತು. ಆದರೂ ಈಗಿನ ಲೋಕಸ್ಥಿತಿಯಲ್ಲಿ ಹಿತಕಾರ್ಯವೇನೆಂದು ನೋಡಿದರೆ ಜನರಲ್ಲಿರುವ ಆರ್ಥಿಕ ಸಂದೇಹ ಮತ್ತು ಮಾತ್ಸರ್ಯಗಳನ್ನು † ಕೈಲಾದಷ್ಟು ಮಟ್ಟಿಗೆ ಜಾಗ್ರತೆಯಾಗಿಯೂ ದಕ್ಷತೆಯಿಂದಲೂ ನಿರ್ಮೂಲಮಾಡಬೇಕು. ಮತ್ತು ಜನರೆಲ್ಲರನ್ನೂ ಒಂದು ಸಾಮಾನ್ಯವರ್ಗದಲ್ಲಿ ತಂದು ಸೇರಿಸುವುದರಿಂದ ಎಲ್ಲೆಲ್ಲಿಯೂ ಧ್ಯೇಯಗಳು ಹೆಚ್ಚುಹೆಚ್ಚಾಗಿ ಲೋಕಾಭಿರಾಮಗಳಾಗುತ್ತವೆ.‡ ಹೇಗೆಂದರೆ ಪ್ರಥಮದಲ್ಲಿ ಅಂದರೆ ಕೃತಯುಗದಲ್ಲಿ (golden age) ಬ್ರಾಹ್ಮಣರುಮಾತ್ರ ತಪಸ್ಸನ್ನಾಚರಿಸುತ್ತಿದ್ದರು, ಎರಡನೇ ತ್ರೇತಾಯುಯುಗದಲ್ಲಿ ಬ್ರಹ್ಮಕ್ಷತ್ರಿಯರು ತಪವನ್ನಾಚರಿಸಿದರು. ಮೂರನೇ ದ್ವಾಪರದಲ್ಲಿ ಉತ್ತಮವರ್ಗಕ್ಕೆ ಸೇರಿದ ದ್ವಿಜಾತಿಯವರಾದ ಬ್ರಹ್ಮಕ್ಷತ್ರಿಯ

---

* Institutions, ವ್ಯವಸ್ಥೆ, ಕಟ್ಟು, ನಿಯಮ

† Suspicion of monopoly ‡ Democratisation

ೈಶ್ಯರಾದ ತ್ರಿವರ್ಣದವರೂ, ಮತ್ತು ಕೊನೆಯದಾದ, ಅಂದರೆ ನಾಲ್ಕ ಯ ಕಲಿಯುಗದಲ್ಲಿ ಶೂದ್ರರೂ ಸೇರಿದ ಚಾತುರ್ವರ್ಣ್ಯದವರೂ ತಪ್ಪೋ ಷ್ಟರಾದರು. ಅಂದರೆ ಈ ಕಾಲದಲ್ಲಿ ಜಾತಿಲಿಂಗಗಳೆಂಬ ಭೇದಗಳನ್ನು ೋಡದೆ ಸರ್ವಜನರಿಗೂ ದೊರೆಯುವಂತೆ ಹಿಂದೂಮತಗ್ರಂಥಗಳನ್ನು ಉದಾರಬುದ್ಧಿಯಿಂದ ಸುಲಭಸಾಧ್ಯವಾಗಿ ಮಾಡಿಕೊಡಬೇಕು.*

## ೬. ಉಪಸಂಹಾರ ಮತ್ತು ಸಿಂಹಾವಲೋಕನ

### ೭ ಹಿಂದುಗಳು ಏಕನೇತನಾದ ಪರಮಾತ್ಮನನ್ನು ಏಕಧ್ಯೇಯಗಳಾದ ಜಾತಿವಿವಾಹಗಳನ್ನೂ ಹೊಂದಿರುವರು

ಇನ್ನು ನಮ್ಮ ಉಪನ್ಯಾಸವನ್ನು ನಿಲ್ಲಿಸಬೇಕು. ಇರಲಿ. ಈಗೇನು ೋಡುವೆವೆಂದರೆ, ಪರಮಾತ್ಮನಿಗೆ ಬೇರೆಬೇರೆ ಹೆಸರುಗಳನ್ನು ಕೊಟ್ಟರೂ, ಭಾರತೀಯರು ಈ ಪರಾತ್ಪರವಸ್ತುವನ್ನು ಚೆನ್ನಾಗಿ ಮನಗೊಂಡಿವರು. ಇವರ ಸಮಾಜವ್ಯವಸ್ಥೆಯಲ್ಲಿ ಅನೇಕಜಾತಿಗಳಿದ್ದರೂ, ತತ್ವ ೃಷ್ಟಿಯಿಂದ ಇವೆಲ್ಲವೂ ಒಂದೇ ಸಮಾಜಕ್ಕೆ ಸೇರಿವೆ. ಇಲ್ಲಿನ ಜನತೆ† ುಲ್ಲಿ ಅನೇಕ ಜಾತಿ (races) ಪಂಗಡ (tribes) ಗಳಿವೆ, ಆದರೂಕೂಡ ವರೆಲ್ಲರೂ ಒಂದೇ ಸಮಾನ ಧರ್ಮದಿಂದ ‡ ಐಕ್ಯಹೊಂದಿ ಒಗ್ಗಟ್ಟಿನಿಂದಾರೆ. ಹೀಗೆಯೇ ಅನೇಕವಿಧವಾದ ವಿವಾಹಪದ್ಧತಿಗಳು ರೂಢಿಯಲ್ಲಿ ರೂ ಕೂಡ ಇಲ್ಲಿಯ ಜನರ ಧ್ಯೇಯವೆಲ್ಲಾ ಒಂದೇ ತೆರನಾಗಿದೆ, ಮತ್ತು ದರ ಶಾಖೋಪಶಾಖೆಗಳು ಅನಂತವಾಗಿದ್ದರೂ ಕೂಡ ಇವುಗಳೆಲ್ಲವನ್ನೂ ಧಾರಭೂತವಾಗಿರುವ ಪರಮಪುರುಷಾರ್ಥ § ವೊಂದು ಒಟ್ಟುಗೂಡಿಸುದೆ. ಇದರಿಂದ ಇಂಥಾ ಹಿಂದೂಮತದ ಮುಖ್ಯ ತತ್ತ್ವಗಳೇನೆಂದೂ ತ್ತ್ವಗಳು ಸಾಮಾಜಿಕ ಧಾರ್ಮಿಕ ವಿಷಯಗಳಲ್ಲಿ ಎಷ್ಟು ಪ್ರಯೋಜನ

---

* ಭಾಷ್ಯವನ್ನು ನೋಡಿ † Population, ಪ್ರಜೆ, ಜನಪದ

‡ One common spirit § Underlying purpose

(application) ಕಾರಿಗಳಾಗಿರುವುವೆಂದೂ ಸೂತ್ರರೂಪದಿಂದ ಪುನರಾಲೋಚಿಸಿ ಈ ಉಪನ್ಯಾಸಗಳನ್ನು ಮುಗಿಸುವುದು ಉತ್ತಮವೆಂದು ಕಾಣುತ್ತದೆ.

**೩೮ ದೃಶ್ಯಪ್ರಪಂಚದಿಂದ ಹೊರಟು ನಿರ್ಗುಣಬ್ರಹ್ಮನನ್ನು ಕಂಡು ಅವನಿಷ್ಟದಂತೆ ನಡೆಯುವುದೇ ಹಿಂದೂಧರ್ಮದ ಸಾರಸರ್ವಸ್ವವಾಗಿದೆ.**

ಸತತ ಪ್ರವಾಹಿಯಾದ ಈ ಲೋಕವು ಇಂದ್ರಿಯಗೋಚರವಸ್ತುಮಾತ್ರವೇ ಅಲ್ಲ ಮತ್ತಿದು ಧರ್ಮಬದ್ಧವಾಗಿದ್ದುಕೊಂಡು, ಸಂಪೂರ್ಣತೆಯ ಸಿದ್ಧಿಗಾಗಿ ಮಾಡುತ್ತಿರುವ ಪ್ರಯತ್ನ (tendency) ದಿಂದ ಕೂಡಿರುವುದರಿಂದ ಇದು ಯಾವುದೊಂದು ವಸ್ತು ಅಥವಾ ವಸ್ತುಜಾಲ ವಿಶೇಷದಿಂದ ಮುಗಿಯುದಿರುವ ಆಧ್ಯಾತ್ಮಿಕತತ್ತ್ವ (reality) ದ ಮೇಲೆ ಆಧಾರಹೊಂದಿ ನಿಂತದೆ ಎಂದು ಗೊತ್ತಾಗುತ್ತದೆ. ಅಂದರೆ ಈಶ್ವರನು ಲೋಕದಂತೆ ಇಲ್ಲದಿದ್ದರೂ, ಲೋಕದಲ್ಲಿ ಇರುವನು, ಮತ್ತವನ ಸೃಷ್ಟಿಲೀಲೆಯು ಜಗತ್ಪರಿಣಾಮದ ಮುಖ್ಯಮುಖ್ಯ ಸ್ಥಾನಗಳಲ್ಲಿಯೇ ಮೇರೆಹೊಂದಿಲ್ಲ. ಏಕೆಂದರೆ ಇವನು ಕೇವಲ ಜೀವಚೇತನಗಳ ಸೃಷ್ಟಿಗಾಗಿ ಕೈನೀಡುತ್ತಲ್ಲದೆ, ಸತತವೂ ಕಾರ್ಯವಮಾಡುತ್ತಿರುತ್ತಾನೆ. ಇದರಿಂದ ಪ್ರಾಕೃತವೈಕೃತ*ಗಳೆಂಬ ದ್ವಂದ್ವವಿಲ್ಲವೇ ಇಲ್ಲ; ಏಕೆಂದರೆ ಆಧ್ಯಾತ್ಮಿಕ ವಸ್ತುವಾದ ಪುರುಷನು ತನ್ನ ಆಧಾರವಾದ ಪ್ರಕೃತಿಯ ಪರಿಣಾಮ (emergent) ವೇ ಸರಿ. ಹೀಗೆ ಭಾರತಧರ್ಮವು ದೃಶ್ಯಾಲಾತ್ಮಕವಾದ ವಿವಿಧರೂಪಾತಿಶಯಗಳಿಂದ ಕೂಡಿ ವಿಶೇಷ ತೇಜೋರಾಶಿಯಿಂದ ಶೋಭಿಸುತ್ತಿರುವ ಈ ಸಕಲ ಪ್ರಪಂಚವೂ ಅವ್ಯಕ್ತಾನಂತಮೂರ್ತಿಯೂ, ಅಚಿಂತ್ಯರೂಪನೂ ಆದ ಪರಮಾತ್ಮನಿಂದ ಉದ್ಭೃತವಾಗಿ ಸಂರಕ್ಷಿಸಲ್ಪಡುತ್ತಿರುವುದೆಂದು ನೋಡುವ ಜೀವನ ವಿಷಯವಾದ ದೃಷ್ಟಿ ವಿಶೇಷವೇ ಸರಿ.

---

* Supernatural, ಅಪ್ರಾಕೃತ

## ೩೯. ಕೆಡಕು, ತಪ್ಪು ಮತ್ತು ಕುರೂಪಗಳ ಅರ್ಥನಿರ್ಣಯ

**ಕೆಡಕು,** ತಪ್ಪು ಮತ್ತು ಕುರೂಪುಗಳೆಂಬ ಭಾವಗಳು ತತ್ತ್ವತಃ ಕೊನೆಯ ಮಾತಲ್ಲ. ಕೆಡಕೆಂಬುದು ಸಜ್ಜನರು ಯೋಗ್ಯರಾಗಿರಲು ಎಷ್ಟು ಕಷ್ಟಪಡಬೇಕೆಂಬುದನ್ನು ಸೂಚಿಸುತ್ತದೆ. ಕುರೂಪವೆಂಬುದು ಸೌಂದರ್ಯಕ್ಕೆ ಅರ್ಥದಾರಿಯೇ ಸರಿ. ಹೀಗೆಯೇ ತಪ್ಪೆಂಬುದೂ ಕೂಡ ನಿಜ (=ಸತ್ಯ) ವನ್ನು ಸೇರುವ ಮೊದಮೊದಲು ಸಿಗುವ ಅದರ ರೂಪಾಂತರವೇ ಸರಿ. ಮತ್ತೆ ಇವುಗಳೆಲ್ಲವನ್ನೂ ಸರ್ವಸಾಧಾರಕರೂ ದಾಟಿ ಮುಂದೆ ಮುಂದೆ ಹೋಗಬೇಕು. ಹೇಗೆಂದರೆ ಯಾವ ಅಭಿಪ್ರಾಯವೇ ಆಗಲೀ ಅಷ್ಟೊಂದುಮಟ್ಟಿಗೆ ಅತ್ಯಂತ ತಪ್ಪಾಗಿಲ್ಲ, ಮತ್ತು ಯಾವ ಮನುಷ್ಯನೇ ಆಗಲಿ, ಅವನನ್ನು ದಂಡಿಸಿ ಸಂಪೂರ್ಣವಾಗಿ ನಿರ್ವೀರ್ಯನನ್ನಾಗಿ ಮಾಡಬೇಕೆನ್ನುವಷ್ಟು ಮಟ್ಟಿಗೆ ಎಂದಿಗೂ ತಪ್ಪು ಮಾಡಿರುವುದಿಲ್ಲ. ಏಕೆಂದರೆ ಕೇವಲ ಒಬ್ಬ ಮನುಷ್ಯನಾದರೂ ತನ್ನ ಸಹಜವಾದ ದೈವೀ ಸ್ಥಿತಿಯನ್ನು ಪಡೆಯಲಾರದೆ ಕೆಟ್ಟನೆಂದರೆ ಇಷ್ಟು ಮಟ್ಟಿಗಾದರೂ ಈ ಲೋಕವೆಲ್ಲವೂ ದೋಷಯುಕ್ತವಾದುದೇ ಸರಿ. ಏಕೆಂದರೆ ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನೂ ಬೇರೆ ಎಲ್ಲಾ ಜನರಿಗಿಂತಲೂ ಭಿನ್ನನಾಗಿರುವುದರಿಂದ, ಅತ್ಯಂತ ದುಷ್ಟನಾದ ಪುರುಷನನ್ನು ನಾಶಮಾಡಿದರೂ ಕೂಡ ಪರಮಾತ್ಮನ ಸೃಷ್ಟಿ ವೈಚಿತ್ರ್ಯದಲ್ಲಿ * ಇದೊಂದು ಶೂನ್ಯವನ್ನೇ † ಉಂಟು ಮಾಡುತ್ತದೆ. ಹೀಗಿರುವುದರಿಂದ ನರಕವೆಂಬುವೊಂದು ಪ್ರತ್ಯೇಕ ಸ್ಥಾನವೇ ಇಲ್ಲ. ಏಕೆಂದರೆ ಹೀಗೆಂದ ಮೇಲೆ ಪರಮಾತ್ಮನಿಲ್ಲದಿರುವ ಸ್ಥಳವೊಂದುಂಟೆಂದೂ, ಮತ್ತವನು ಕ್ಷಮಿಸದಂಥಾ ಕೆಲವು ಘೋರ ಪಾಪಗಳಿರುವುವು ಎಂದು ಅರ್ಥವಾಗುತ್ತದೆ. ಇದು ಬಿಟ್ಟು ಪರಮಾತ್ಮನು ಪರಮ ಕರುಣಾನಿಧಿ ಎಂಬ ಮಾತು ಸುಳ್ಳಾಗಿರದಿದ್ದರೆ ಸರ್ವ ಜನರಿಗೂ ಮೋಕ್ಷ ಉಂಟೆಂಬ ಮಾತು ದೃಢವಾಗುತ್ತದೆ. ಆದರೂ ಇಂಥಾ ಲೋಕೋದ್ಧಾರವು ಸಂಪೂರ್ಣವಾಗಿ ದೊರೆಯುವವರೆಗೂ ನಮ್ಮಲ್ಲಿ

* Scheme, ವ್ಯವಸ್ಥೆ † Void, ಪಾಳು

ತಪ್ಪುಗಳೂ ದೋಷಗಳೂ ಇನ್ನೂ ಇದ್ದೇ ಇರುವುವು. ಅಂದರೆ ಲೋಕವು ಸತತ ಪರಿಣಾಮ ಉಳ್ಳದ್ದೆಂದ ಮೇಲೆ ಕೆಡಕುಗಳೂ ಮತ್ತು ತಪ್ಪುಗಳೂ ಕಾಲಕ್ರಮದಲ್ಲಿ ಎಷ್ಟೆಷ್ಟು ಕಡಿಮೆಯಾಗುತ್ತಿದ್ದರೂ ಕೂಡ ಇವುಗಳು ಯಾವಾಗಲೂ ನಿರ್ಬಾಧಿತವಾಗಿ ಇನ್ನೂ ಇದ್ದೇ ಇರುವುವು.

**೪೦. ಮತಾನುಭವದ ವರ್ಣನೆಗಳು ವಿವಿಧವಾಗಿವೆ ; ಮತ್ತಿವುಗಳನ್ನು ನಾವು ಸಹನೆಯಿಂದ ಕಾಣಬೇಕು.**

ಮತ ವಿಷಯದಲ್ಲಿ ಭಾರತೀಯರು ಆಧ್ಯಾತ್ಮ ಜೀವನವನ್ನು ಮುಂದಿಟ್ಟುಕೊಂಡು, ಮತಾನುಭವದ ಶಾಸ್ತ್ರ ಸಮರ್ಥನೆ* ಗಳು ಭಿನ್ನತೆ ಇಂದ ಕೂಡಿರಬೇಕೆಂದು ಸಾಧಿಸುತ್ತಾರೆ. ಏಕೆಂದರೆ ಮತಶಾಸ್ತ್ರ (Theology) ದ ಚರಿತ್ರೆಯನ್ನು ನೋಡಿದರೆ ಮನುಷ್ಯಜೀವನದಲ್ಲಿಯೂ ಲೋಕದಲ್ಲಿಯೂ ಪರಮಾತ್ಮನೇ ಸಾರ್ವತ್ರಿಕವಾದ ಮುಖ್ಯತತ್ತ್ವವೆಂದು ಚೆನ್ನಾಗಿ ಮನನವಾಗುವವರೆವಿಗೂ ಈತನ ವರ್ಣನಾ ವಿಚಾರದಲ್ಲಿ ಒಂದಾದಮೇಲೊಂದು ನಿದರ್ಶನ† ವಿಶೇಷಗಳು ಬಂದು ಹೋಗುತ್ತವೆ. ಇದರಿಂದ ಹಿಂದೂಮತವು ಎಷ್ಟು ಕಷ್ಟವಾದರೂ ನಾವು ಕಿತ್ತುಹಾಕಬೇಕಾಗಿರುವ ನಮ್ಮ ನೆರೆಹೊರೆಯವರ ತೋಟಗಳಲ್ಲಿರುವ ಕಳೆಗಳನ್ನು ಪಿಶಾಚಿ ನೆಟ್ಟಿತೆಂದೂ, ಮತ್ತು ನಮ್ಮ ನಮ್ಮ ತೋಟಗಳಲ್ಲಿರುವ ಗಿಡಗಳನ್ನು ಮಾತ್ರ ಈಶ್ವರನು ನೆಟ್ಟನೆಂದೂ ಹೇಳುವ ದ್ವೈತಭಾವದಿಂದುಂಟಾಗುವ ನಂಬಿಕೆಯನ್ನು ದುಷ್ಟವೆಂದು ದೂರೀಕರಿಸುತ್ತದೆ. ಹೀಗೆಯೇ ಉತ್ತಮ ವಸ್ತುವು ಒಳ್ಳೆಯ ವಸ್ತುವಿಗೆ ವಿರೋಧವಾದದ್ದಲ್ಲವೆಂಬ ಧರ್ಮದಮೇಲೆ ಹಿಂದೂ ಮತವು ಸಕಲ ವಿಧವಾದ ನಂಬಿಕೆಗಳನ್ನೂ ಸರಿ ಎಂದು ಒಪ್ಪಿಕೊಂಡು, ಅವುಗಳೆಲ್ಲವನ್ನೂ ಶುದ್ಧೀಕರಿಸಿ ಉತ್ತಮಸ್ಥಿತಿಗೆ ತರುತ್ತದೆ. ಏಕೆಂದರೆ ತಪ್ಪನ್ನು ತಿದ್ದಬೇಕಾದರೆ ನಿಶ್ಶಬ್ದವಾದ ತತ್ತ್ವಪ್ರಕಾಶವೊಂದರಿಂದಲ್ಲದೆ ಮತ್ತೆ ಯಾವ ಕೊಡಲಿಯಿಂದಾಗಲಿ ಶಕ್ತಿತಾಪ (Persecution) ಗಳಿಂದಾಗಲಿ ಸಾಧ್ಯವಿಲ್ಲ.

---

* Theological expressions, ವರ್ಣನೆ, ವ್ಯಾಖ್ಯಾನ
† Metaphor, ರೂಪಕ

## ೪೧. ಹೀಗೆಯೇ ಕರ್ಮಕಾಂಡದಲ್ಲಿಯೂ ಭಿನ್ನ ಮಾರ್ಗಗಳಿವೆ; ಮತ್ತು ಸರ್ವಾಶ್ರಮಗಳೂ ಮುಖ್ಯವಾಗಿವೆ.

ಮತದಲ್ಲಿ ವ್ಯವಹಾರಧರ್ಮವೇನೆಂದರೆ, ಹಿಂದೂ ಮತವು ಪರಮಾತ್ಮನನ್ನು ಕೆಲವರು ಸಾಲೋಕ್ಯದಿಂದ ನೋಡಬೇಕೆಂದಿರುವರೆಂದೂ, ಇನ್ನು ಕೆಲವರು ಇದರಗುಟ್ಟೆಲ್ಲ ಏನೆಂದು ತಿಳಿದುಕೊಳ್ಳಬೇಕೆಂದು ಕೇವಲ ಜ್ಞಾನ ಮಾರ್ಗದಲ್ಲಿಯೇ ಮಗ್ನ ಮಾನಸರಾಗಿರುವರೆಂದೂ ಒಪ್ಪಿಕೊಳ್ಳುತ್ತದೆ. ಇವರು ಕೇವಲ ಕರ್ಮದಿಂದ ಶಾಂತಿಸೌಖ್ಯವನ್ನು ಪಡೆದರೆ ಇನ್ನು ಕೆಲಕೆಲರು ಕೇವಲ ಮೌನ (non-action, ಅಕರ್ಮ) ದಿಂದಲೇ ತೃಪ್ತರಾಗುವರು. ಅಂದರೆ ಸರ್ವಜನರೂ ಒಬ್ಬ ದೇವಿಯನ್ನೇ ತಮ್ಮ ತಮ್ಮ ವಿವಿಧ ತರವಾದ ವಸ್ತ್ರಾದ್ಯಲಂಕಾರ ವಸ್ತುಗಳಿಂದ ಆರಾಧಿಸುವಂತೆ, ಸರ್ವವ್ಯಾಪಿಯಾದ ಶ್ರೇಷ್ಠಮತ (Religion) ವೊಂದು ಈ ಸಕಲ ಪಂಥಗಳು ತಮ್ಮ ತಮ್ಮ ದಾರಿಯಲ್ಲಿಯೇ ಪ್ರತ್ಯೇಕವಾಗಿ ಹೋಗುತ್ತಿದ್ದರೂ ಕೂಡ, ಕೊನೆಯಲ್ಲಿ ಇವುಗಳೆಲ್ಲವೂ ಸರ್ವಸಾಮಾನ್ಯವಾದ ಉತ್ತಮ ಧ್ಯೇಯವೊಂದನ್ನು ಸೇರುವಂತೆ ಇವುಗಳನ್ನು ನಡೆಸಿಕೊಂಡು ಬಂದು ಕಾಪಾಡುತ್ತದೆ. ನಾವು ನಮ್ಮ ನಮ್ಮ ವಿಶೇಷಗುಣಗಳಿಗೆ ಬಹು ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬಾರದು. ಏಕೆಂದರೆ ಸಂಪೂರ್ಣತೆಯ ಶಿಖರವಾದ ಮೋಕ್ಷಸಾಮ್ರಾಜ್ಯವನ್ನು ಇಂಥವರಿಗೇ ಎಂಬ ಯಾವ ನಿರ್ಬಂಧವೂ ಇಲ್ಲದೆ ಸನ್ಯಾಸ, ವಾನಪ್ರಸ್ಥ ಗೃಹಸ್ಥಾಶ್ರಮಿಗಳೆಲ್ಲರೂ ಪಡೆಯಬಹುದು. ಮತ್ತು ಇಷ್ಟೇ ಎಂದು ಕ್ಲುಪ್ತವಾದ ಸಾಮಾನ್ಯ ಲೋಕದೃಷ್ಟಿಯಿಂದಿರುವುದು ಅಷ್ಟೇನು ಶ್ಲಾಘ್ಯವಲ್ಲ. ಧರ್ಮನಿಷ್ಠನಾದ ಯತಿವರ್ಯನಲ್ಲಿ ದ್ವೈವೀಭಾವವಿರಬೇಕೆಂದರೆ ಇದರಿಂದ ಪತಿಪರಾಯಣಳಾದ ಕುಲಸ್ತ್ರೀಯ ದೃಢಭಕ್ತಿಗಾಗಲೀ ಏನೂ ತಿಳಿಯದ ಬಾಲಕರ ನಿರ್ಮಲಾಂತಃಕರಣದ ಲೀಲಾಗುಣಕ್ಕಾಗಲೀ ಯಾವ ಕುಂದು ಕೊರತೆಯೂ ಉಂಟಾಗುವುದಿಲ್ಲ. ಏಕೆಂದರೆ ಪ್ರತಿಯೊಂದುವಸ್ತುವಿನ ಸಂಪೂರ್ಣ ಶಕ್ತಿಯೂ ಈಶ್ವರೀಮಯವಾಗಿಯೇ ಇದೆ, ಅಂದರೆ ಭಗವದ್ಗೀತೆಯು ಹೇಳುವಂತೆ "ಲೋಕದಲ್ಲಿ ಯಾವ ಯಾವ ವಸ್ತುವು ತೇಜೋಯು

ಕ್ತವಾದುದಾಗಲೀ, ಒಳ್ಳೆಯದಾದುದಾಗಲೀ ಅಂದವಾದುದಾಗಲೀ, ಶಕ್ತಿಯುತವಾದುದಾಗಲೀ ಯಾವುದಿದ್ದರೂ ಕೂಡ ಇವುಗಳೆಲ್ಲವೂ ನನ್ನ ಶಕ್ತಿಯ ಅಂಶಮಾತ್ರದಿಂದ ಹುಟ್ಟಿ ಶೋಭಿಸುತ್ತಿರುವುವೆಂದು ತಿಳಿ” (10, 41)

**೪೨. ಕರ್ಮ ತತ್ತ್ವದಂತೆ ಜೀವಿಗಳು ಸಂಸಾರ ಪಾಶದಲ್ಲಿ ಸಿಕ್ಕಿದ್ದರೂ ವಿವೇಕ ವೈರಾಗ್ಯಾದಿಗಳಿಂದ ಮೋಕ್ಷವನ್ನು ಪಡೆಯಬಹುದು**

ಕರ್ಮ ತತ್ತ್ವ (Law) ವೂ ಯಾವುದೊಂದು (Individual) ಜೀವವೂ ಕೂಡ ಸಾಂತವಸ್ತು (Term) ವಲ್ಲ ಮತ್ತು ಪರಂಪರಾ (Series) ಯುಕ್ತವಾದುದೆಂದು ನಮಗೆ ತಿಳಿಸುತ್ತದೆ. ಹೀಗಿರುವುದರಿಂದ ನಮ್ಮಲ್ಲಿ ಪ್ರತಿಯೊಬ್ಬರಿಗೂ ನಾವು ನಮ್ಮ ನಮ್ಮ ದಾರಿಯ ಕೊನೆಯನ್ನು ಸೇರುವವರೆವಿಗೂ ನಮಗೆ ಆಗಿಂದಾಗ್ಗೆ ಬೇಕಾಗುವ ಅವಕಾಶಗಳು ಹೊಸಹೊಸದಾಗಿ ಸಿಕ್ಕುತ್ತಲೇ ಇರುವುವು. ಮತ್ತು ಆಯಾಕಾಲದಲ್ಲಿ ನಾವು ಧರಿಸುವ ರೂಪವಿಶೇಷಗಳು ನಮ್ಮ ನಮ್ಮ ಪೂರ್ವ ಕರ್ಮಗಳನ್ನು ಅನುಸರಿಸಿ ಬಂದಿರುತ್ತವೆ. ಹೀಗೆಯೇ ಸ್ವರ್ಗ ನರಕಗಳೂಕೂಡ ನಮ್ಮ ನಮ್ಮ ಸಂಸಾರ ಯಾತ್ರೆಯಲ್ಲಿ ನಾವು ನಾವು ಕಲ್ಪಿಸಿಕೊಳ್ಳುವ ಉಚ್ಚ ನೀಚಸ್ಥಾನ ಭೇದಗಳೇ ಸರಿ. ಮತ್ತಿವುಗಳು ತಮ್ಮನ್ನನುಭವಿಸುವ ಆಯಾಜೀವಿಗಳ ಮನಸ್ಥಿತಿಗಳನ್ನು ಬಿಟ್ಟು ಬಾಹ್ಯವಾಗಿಲ್ಲ. ಆದುದರಿಂದ ಶುದ್ಧಿಯಾಗಬೇಕಾದರೂ ಕೂಡ ಯಾತನಾನುಭವವು ಅವಶ್ಯಕವಾಗಿಯೇ ಇದೆ. ಏಕೆಂದರೆ ಸರ್ವಯಾತನೆಯೂ ಕೂಡ ಕೇವಲ ಪಾಪಕರ್ಮದ ಫಲವೇ ತಾನೆ? ಮತ್ತು ನಾವು ಯಾರೂ ಪಾಪವು ಅನಾದಿಯಾದುದೆಂದೂ, ಪುಣ್ಯ (Virtue, ಶೀಲ) ವು ಬೇರೆಯವರು ಮಾಡಿದ ಕರ್ಮದ ಫಲವೆಂದೂ ನಂಬಬೇಕಾಗಿಲ್ಲ. ಇದರಿಂದ ನಾವು ಯಾವ ಯಾವ ಸ್ಥಿತಿಯಲ್ಲಿದ್ದರೂ ಕೂಡ ಅದಕ್ಕೆ ತಕ್ಕಂತೆ ನಮ್ಮ ನಮ್ಮ ವಿಶೇಷ ಧರ್ಮಗಳನ್ನು ಸರಿಮಾಡಿಕೊಂಡರೆ ಅಷ್ಟೇ ಸಾಕು. ಏಕೆಂದರೆ ನಮ್ಮಲ್ಲಿ ಎಷ್ಟೋ ಜನರಿಗೆ ನಮ್ಮ ನಮ್ಮ ಜೀವನ ವೃತ್ತಿಗಳನ್ನು ಒಪ್ಪಿ ಆರಿಸಿ

ತೆಗೆದುಕೊಳ್ಳಲು ಅವಕಾಶವೇ ಇಲ್ಲ. ಆದರೂ ಕೂಡ ನಿಜವಾದ ಸ್ವಾತಂತ್ರ್ಯವೆಂದರೆ ನಮನಮಗೆ ದೊರೆಕಿರುವ ವಂಶ *, ದೇಹಶಕ್ತಿ, ಬುದ್ಧಿಶಕ್ತಿ (Gifts) ಗಳನ್ನು ಕೈಲಾದಷ್ಟು ಮಟ್ಟಿಗೆ ಚೆನ್ನಾಗಿ ಉಪಯೋಗಿಸಿಕೊಳ್ಳುವುದೇ ಆಗಿದೆ. ಮತ್ತು ಪ್ರತಿಯೊಂದು ವಿಧವಾದ ಶಕ್ತಿಯೂ, ಪ್ರತಿಯೊಂದು ತರಹದ ಜೀವನವೃತ್ತಿಯೂ ಕೂಡ ಇವುಗಳನ್ನು ನಾವು ನಾವು ಸರಿಯಾಗಿ ಉಪಯೋಗಿಸಿಕೊಂಡದ್ದೇ ಆದರೆ ಇವುಗಳು ನಮ್ಮೆಲ್ಲರನ್ನೂ ತಮ್ಮ ಕೇಂದ್ರಸ್ಥಾನನಾದ ಮೋಕ್ಷಪ್ರದನಾದ ಶ್ರೀ ಪರಬ್ರಹ್ಮನಲ್ಲಿ ಕರೆದುಕೊಂಡುಹೋಗಿ ಸುಖವಾಗಿ ಸೇರಿಸುವುವು.

೪೩. ವಿವಾಹದಲ್ಲಿ ಏಕಪತ್ನೀವ್ರತವೇ ಮುಖ್ಯವಾಗಿದೆ; ಆದರೂ ಇತರ ವಿಧವಾದ ವಿವಾಹಗಳನ್ನೂ ಒಪ್ಪಿಕೊಂಡಿದಾರೆ.

ಹೀಗೆಯೇ ದಂಪತಿಗಳಲ್ಲಿ ಪರಸ್ಪರವಾಗಿ ಪೂರ್ಣಪ್ರೇಮವು, ಅಂದರೆ ಶಾರೀರಕ, ಮಾನಸಿಕ, ಆಧ್ಯಾತ್ಮಿಕರೀತಿಯಿಂದ ಹೇಗೆ ನೋಡಿದರೂ ಪ್ರೇಮಭಂಗವಾಗದಂತಿರುವುದಕ್ಕಾಗಿ ಏಕಪತ್ನೀ ವಿವಾಹವನ್ನೇ ಆದರ್ಶವಾಗಿಟ್ಟಿದ್ದರೂ ಕೂಡ, ಆಯಾ ಜನರಲ್ಲಿ ಬೇರೆಬೇರೆ ಆದರ್ಶಾಭಿಮಾನ (Interests) ಗಳೂ, ಇಚ್ಛಾಪದ್ಧತಿಗಳೂ ಇರುವುದನ್ನು ನೋಡಿ, ವಿವಾಹದಲ್ಲಿಯೂ ಕೂಡ ಅವರವರ ಅನುಕೂಲಕ್ಕಾಗಿ ಇನ್ನೂ ಕೆಲವು ರೂಪಾಂತರಗಳನ್ನೂ ಸರಿಯೆಂದು ಭಾರತೀಯರು ತಮ್ಮ ಧರ್ಮದಲ್ಲಿ ಸೇರಿಸಿಕೊಂಡರು. ಇದರಿಂದ ಉತ್ತಮ ದಾಂಪತ್ಯವುಂಟಾಗಬೇಕೆಂದರೆ, ಬಹು ನಿಧಾನವಾಗಿ ಪರೀಕ್ಷಿಸಿ, ಕಷ್ಟಪಟ್ಟು ವಿವಾಹಮಾಡಬೇಕೇ ಹೊರತು ಸುಮ್ಮನೆ ಕಣ್ಣುಮುಚ್ಚಿ ಕೂಡಲೇ ಮಾಡುವಹಾಗಿಲ್ಲ. ಏಕೆಂದರೆ ದಾಂಪತ್ಯಾನುಕೂಲಕ್ಕೆ ಬೇಕಾದ ಸೈರಣೆಯು ಆಯಾ ದಂಪತಿಗಳಲ್ಲಿರುವುದೇ ವಿವಾಹಚ್ಛೇದಮಾಡುವುದಕ್ಕೆ ಸಾಕಾದರೆ, ನಮ್ಮಲ್ಲಿ ಎಷ್ಟೋ ಮಂದಿಗೆ ಹೀಗಾಗಲೇಬೇಕಾಗುತ್ತದೆ, ಮತ್ತು ಸ್ತ್ರೀಪುರುಷರ ಕೆಲಸಗಳಲ್ಲಿ ಭೇದವಿಟ್ಟಿದ್ದರೂ ಕೂಡ, ಸ್ತ್ರೀಯರ ಕೆಲಸವು ಕೀಳುತರದ್ದೆಂದು ಎಲ್ಲಿಯೂ ಅಪಾರ್ಥಮಾಡಿಲ್ಲ.

* Parentage, ಕುಲ, ತಂದೆ ತಾಯಿಗಳು

## ೪೪. ಜಾತಿಯ ಮುಖ್ಯತತ್ತ್ವಗಳು, ಮತ್ತು ಜಾತಿಯ ಅವಶ್ಯಕತೆ

ಹೀಗೆಯೇ ಚಾತುರ್ವರ್ಣಮಯವಾದ ಜಾತಿ (caste) ಯಿಂದ ಎಷ್ಟೋ ಕಷ್ಟನಷ್ಟಗಳುಂಟಾಗಿದ್ದರೂ ಕೂಡ, ಈ ವರ್ಣಭೇದಕ್ಕೆ ಕೆಲವು ಶ್ಲಾಘ್ಯ ತತ್ತ್ವಗಳುಮೂಲಭೂತವಾಗಿವೆ. ಅನಾಗರಿಕ (primitive) ರೆಂಬ ಜನರನ್ನು ನೋಡಿದರೆ, ನಾವು ಅವರಲ್ಲಿ ಬಹಳ ಅನುಕಂಪದಿಂದಿರಬೇಕು. ಏಕೆಂದರೆ ಹಿಂದುಳಿದಿರುವ ಜನಗಳ (communities) ಜೀವಶಕ್ತಿ*ಗಳನ್ನು ನಾಶಮಾಡದೆ ಅವುಗಳನ್ನು ಅಭಿವೃದ್ಧಿಪಡಿಸುವುದೇ ನಾಗರೀಕರಾದ ಜನರ ಕರ್ತವ್ಯವಾಗಿದೆ. ಏಕೆಂದರೆ ಸಮಾಜವು ಅನೇಕ ಹಂತಗಳಲ್ಲಿರುವ ಜನರಿಂದ ಕೂಡಿದ ಅವಯವ ವಿಶೇಷವಾಗಿರುವುದಲ್ಲದೆ ಜನರ ಕೆಲಸಗಳಲ್ಲಿ ಎಷ್ಟೆಷ್ಟೋ ಭೇದಭಾವಗಳಿವೆ.† ಅವರೂ ಇವೆಲ್ಲವೂ ಕೂಡ ತಮ್ಮೆಲ್ಲರ ಸಮಾನಧ್ಯೇಯವೊಂದನ್ನು ಸೇವಿಸುತ್ತಿರುವವರೆಗೂ ಪ್ರಯೋಜನಕಾರಿಗಳಾಗಿವೆ. ಹೀಗೆಯೇ ಪ್ರತಿಯೊಂದು ಕೆಲಸದಲ್ಲಿಯೂ ಒಂದೊಂದು ವಿಶೇಷಗುಣ‡ವಿರುವುದರಿಂದ ಈ ವಿಶೇಷಗುಣವನ್ನು ನಾವು ಅಭಿವೃದ್ಧಿಪಡಿಸಲೇಬೇಕು. ಮತ್ತು ಯಾರೂ ಕೂಡ ಏಕಕಾಲದಲ್ಲಿ ಪರಿಪೂರ್ಣರಾದ ಭಕ್ತರೂ, ಜ್ಞಾನಿಗಳೂ ಮತ್ತು ಕವಿಗಳೂ ಆಗಿ ಇರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಪ್ರತ್ಯೇಕವಾದ ಪ್ರತಿಯೊಂದು ಜಾತಿಯೂ ಕೂಡ ತನ್ನ ಸ್ವಭಾವ ಮತ್ತು ಸ್ಥಿತಿಗತಿಗಳಿಗೆ ತಕ್ಕಂತೆ ಸಾಧ್ಯವಾದ ಅವಕಾಶಾನುಕೂಲಗಳನ್ನು ಬಿಟ್ಟು ಬೇರೆ ಯಾವ ಅವಕಾಶಾನುಕೂಲಗಳನ್ನೂ ಹೊಂದಲಾರದಂತೆ ಎಲ್ಲೆಗಳಿಂದ ಕೂಡಿದೆ. ಇದರಿಂದ ಪ್ರತಿಯೊಬ್ಬರೂ ತಮ್ಮ ತಮ್ಮ ಕೆಲಸಗಳನ್ನು ಚೆನ್ನಾಗಿ ಮಾಡುವುದರಿಂದಲೇ ತಮ್ಮತಮ್ಮಲ್ಲಿರುವ ಅವ್ಯಕ್ತಶಕ್ತಿಗಳನ್ನು (potentialities) ಹಸ್ತಗತಮಾಡಿಕೊಂಡು ಆಯಾ ಕಾರ್ಯಗಳನ್ನು ಲೋಕಸೇವಾ

---

* Live impulses, ಆಶೆಯ

† In kind and significance

‡ Nature, ಸ್ವಭಾವ

ಬುದ್ಧಿಯಿಂದ* ಮಾಡುತ್ತಿರಬೇಕು. ಏಕೆಂದರೆ ಕೆಲಸವೇ ( = ಕಾರ್ಯದಕ್ಷತೆ, work) ನಿಜವಾದ ಕುಶಲವಿದ್ಯೆಯೂ ಮತ್ತು ಲೋಕಸೇವೆಯೂ ಆಗಿದೆ. ಇದು ಬಿಟ್ಟು ಈಗ ಲೋಕದಲ್ಲೆಲ್ಲಿಯೂ ವರ್ಣಸಂಕರ ಮತ್ತು ಜಾತಿವೈಷಮ್ಯಗಳು (class conflicts) ಹೆಚ್ಚಾಗಿವೆ ಎಂದರೆ ಈ ಎಲ್ಲಾ ಪಂಗಡಗಳನ್ನೂ ಶ್ರೇಷ್ಠಪ್ರೇಮ ಮೈತ್ರಿಯಿಂದೊಡಗೂಡಿದ ಐಕ್ಯತೆಯು ಒಟ್ಟುಗೂಡಿಸಿಲ್ಲವೆಂಬುದೇ ಮುಖ್ಯಕಾರಣವಾಗಿದೆ.

## ೪೫. ಈಗಿನ ನಮ್ಮ ಸ್ಥಿತಿ; ಪೂರ್ವದ ಅಭಿವೃದ್ಧಿ ಮಾರ್ಗ; ಮತ್ತು ನಮ್ಮ ಶ್ರೇಷ್ಠ ಭವಿಷ್ಯತ್ತು.

ಇವುಗಳೇ ಹಿಂದೂಧರ್ಮ (faith, ಮತ)ದ ಕೆಲವು ಮುಖ್ಯ ತತ್ವಗಳು. ಮತ್ತೆ ಈಗಲೂ ಕೂಡ ಹಿಂದೂ ಮತವು ಬದುಕಿದೆ ಎಂದರೆ ಈ ತತ್ವಗಳಿಂದಲೇ ಈ ಮತವು ಇನ್ನೂ ಇಷ್ಟು ಮಟ್ಟಿಗೆ ನಿಂತಿದೆ, ಆದರೆ ಈಗ ಈ ಮತದಲ್ಲಿ ಹೆಚ್ಚು ಜೀವಕಳೆಯಿಲ್ಲ. ಏಕೆಂದರೆ ಪೂರ್ವದಲ್ಲಿ ಈ ಜೀವಕಳೆಯು ಎಲ್ಲಿಎಲ್ಲಿ ಉಕ್ಕಿಉಕ್ಕಿ ಹರಿಯುತ್ತಿತ್ತೋ ಅಲ್ಲೆಲ್ಲಾ ಈಗ ಚಿತ್ತಕ್ಷೋಭೆ ( = ಅಶಾಂತಿ) ಮತ್ತು ನಿರುತ್ಸಾಹ† ಗಳೇ ಬಹಳವಾಗಿ ತುಂಬಿಹೋಗಿವೆ. ಇದರಿಂದ ನಾವಾದರೋ ಎಲ್ಲಿನೋಡಿದರೂ ಕೂಡ ಮುಂದೇನಾಗುತ್ತದೆಯೋ ಎಂದು ಕೇವಲ ನಿರೀಕ್ಷಣೆಯಿಂದಿರುವೆವೇ ಹೊರತು ಸ್ವಲ್ಪವೂ ಮುಂದೆ ಹೋಗುತ್ತಿಲ್ಲ, ಮತ್ತೆ ಎಲ್ಲೆಲ್ಲಿಯೋ ಅಲೆದಾಡುತ್ತಿದೇವೆ. ಅಂದರೆ ಆಧ್ಯಾತ್ಮ ಶಕ್ತಿಯೆಲ್ಲಾ ಕಳೆಗುಂದಿ, ನಮ್ಮಲ್ಲಿ ಜೀವಶಕ್ತಿಯೇ ಬಹಳ ಕಡಿಮೆಯಾಗಿ ಹೋಗಿದೆ ನಮ್ಮ ರಾಜಕೀಯ ದುಸ್ಥಿತಿ (vicissitudes) ಗಳಿಂದ ಧರ್ಮದಲ್ಲಿ ಅಭಿವೃದ್ಧಿಮಾರ್ಗವೊಂ‡ ಒಂದಿರವುದೆಂಬುದನ್ನು ದೂರೀಕರಿಸಿ ಮರೆತುಬಿಟ್ಟೆವು. ಹೇಗೆಂದರೆ ನಮ್ಮ ಭಾರತ ಧರ್ಮ§ವು ಜೀವಕಳೆಯಿಂದ ತುಂಬಿ ಶೋಭಿಸುತ್ತಿದ್ದ ಪೂರ್ವಕಾಲದ ಶ್ರೇಷ್ಠ ದಿನಗಳಲ್ಲಿ ನಮ್ಮ ಪೂರ್ವಜರು ಸಮುದ್ರ ದಾಟಿ

* Spirit of service to the common weal

† Listlessness ‡ Law of growth § Civilisation

ದೂರದೂರ ದೇಶಗಳಲ್ಲಿ ಸಾಮಂತರಾಜ್ಯ*ಗಳನ್ನು ಕಟ್ಟುತ್ತ ಲೋಕಕ್ಕೆಲ್ಲಾ ಬುದ್ಧಿ ಹೇಳುತ್ತಲೂ, ಅವಶ್ಯಕ ಬಿದ್ದಾಗ ಇತರರಿಂದ ತಾವು ಕಲಿಯುತ್ತಲೂ, ಬಹು ತೇಜೋಯುಕ್ತರಾಗಿ ಶೋಭಿಸುತ್ತಿದ್ದರು. ಇದರಿಂದ ಸರ್ವಕಲಾ (arts) ಶಾಸ್ತ್ರಗಳಲ್ಲಿಯೂ, ಸರ್ವ ವ್ಯಾಪಾರ ವಾಣಿಜ್ಯ (commerce) ಗಳಲ್ಲಿಯೂ, ಈಗ್ಗೆ ಸುಮಾರು ೨೫ ಶತಮಾನಗಳವರೆವಿಗೂ ಲೋಕದಲ್ಲಿ ಅತಿ ಪ್ರಖ್ಯಾತರೆಂದಿದ್ದ ಯಾವಜನಾಂಗದವರಿಗಿಂತಲೂ ಇವರು ಹಿಂದುಳಿದಿರಲಿಲ್ಲ. ಆದರೆ ಈಗಲೋ ಎಲ್ಲಿ ನೋಡಿದರೂ ನಮ್ಮ ನಮ್ಮಲ್ಲಿಯೇ ನಾವು ಹೆದರಿಕೊಂಡಿರುವುದಲ್ಲದೆ ಆತ್ಮ ರಕ್ಷಣೆಗಾಗಿ ನಮ್ಮ ನಮ್ಮ ಮತಗಳ ಬಾಹ್ಯಾಚರಣೆಗಳನ್ನು ಬಹು ಬಲವಾಗಿ ಹಿಡಿದುಕೊಂಡು ನಿಂತುಬಿಟ್ಟಿರುವೆವು. ಮತ್ತು ನಮ್ಮ ಜೀವಶಕ್ತಿಗಳನ್ನು ಕಾಪಾಡಬೇಕೆಂದಿರುವ ಈ ಆವರಣಗಳೇ ಈಗ ಆ ಜೀವಶಕ್ತಿಗಳ ಅಭಿವೃದ್ಧಿಗೆ ಬಂಧನಗಳಾಗಿವೆ. ಇವು ಬಿಟ್ಟು ಒಳಗಿರುವ ಮರವನ್ನು ಕಾಪಾಡಬೇಕೆಂದಿರುವ ಚಕ್ಕೆಯು ತನ್ನೊಳಗಿರುವ ಮರವನ್ನು ಮಟ್ಟಿಗೆಯೇ ಜೀವಶಕ್ತಿಯಿಂದ ಕೂಡಿರಬೇಕು. ಮತ್ತು ಆ ಮರದ ಬೆಳವಣಿಗೆಯನ್ನು ತಡೆಯದೆ ತನ್ನೊಳಗೆ ಉಂಟಾಗುತ್ತಿರುವ ಅಭಿವೃದ್ಧಿ ಧರ್ಮಕ್ಕೆ† ತಕ್ಕಂತೆ ತಾನೂ ಕೂಡ ಬೆಳೆಯುತ್ತಿರಬೇಕು ಯಾವುದೊಂದು ಧರ್ಮ(ವ್ಯವಸ್ಥೆ, institution) ವು ಜನರ ಬೆಳವಣಿಗೆಯಲ್ಲಿ ಯಾವುದೊಂದು ಅಂತಸ್ಥಿತಿಗೆ ತಕ್ಕದಾಗಿ ಸಹಜವಾಗಿದ್ದರೂ ಕೂಡ ಈ ಅಂತಸ್ಥನ್ನು ಬಿಟ್ಟು ಮುಂದೆ ಮುಂದೆ ಹೋದ ಹಾಗೆಲ್ಲಾ ಇದು ಹೆಚ್ಚು ಬಾಧಕವಾದದೂ ನಿರ್ಬಂಧಕವಾದುದೂ‡ ಆಗುತ್ತದೆ. ಅಂದರೆ ಇದು ಸನಾತನವಾದುದೂ, ಶಾಶ್ವತವಾದುದೂ ಎಂಬ ಸಾಂಪ್ರದಾಯಕರ ಗೊಂದಲವು ನಮ್ಮ ಹಿಂದೂ ಪೂರ್ವಜರು ಬಹಳ ಚೆನ್ನಾಗಿ ತಿಳಿದುಕೊಂಡು ಆಚರಣೆಯಲ್ಲಿ ತಂದಿದ್ದು, ರಾಷ್ಟ್ರ ಸಮಾಜಗಳಲ್ಲಿಯೂ ಧರ್ಮಾಭಿರುಚಿಗಳಲ್ಲಿಯೂ ಜ್ಞಾನಕರ್ಮಗಳಲ್ಲಿಯೂ ಒಂದೇಸಮನಾಗಿ ಕಂಡು ಬರುತ್ತಿದ್ದ ಅನ್ಯೋನ್ಯಾಶ್ರಯ ಧರ್ಮದ§ಮೂಲ ತತ್ತ್ವಗಳನ್ನು

* Colonies † ನಿಯಮ, ಬಂಧನ, ಕಟ್ಟು, compulsion
‡ Inadequate, ಚಿಕ್ಕದು § Theory of Relativity

ಈಗ ದೂರೀಕರ●ವಾರೆತು ಬಿಟ್ಟಿದೆ. ಆದುದರಿಂದ ಈ ನಮ್ಮ ಭರತಖಂಡ
ದಲ್ಲಿ ಸಹಸ್ರಾರು ವರ್ಷಗಳಿಂದಲೂ ಕಾಲಚಕ್ರವು ತಟಸ್ಥವಾಗಿ ಸುಮ್ಮನೆ
ನಿಂತಿರುವುದೆಂತಲೂ, ಮತ್ತು ಬಹು ಪುರಾತನ ಕಾಲದಲ್ಲಿ ಸಮುದ್ರವೆಲ್ಲ
ವೂ ಒಣಗಿಹೋಗಿದ್ದ ಲಾಗಾಯಿತು ಈಗಿನವರೆವಿಗೂ ಯಾವ ಯಾವ
ಧರ್ಮವೂ ಈಷದಪಿ ಬದಲಾಯಿಸಿಲ್ಲವೆಂಬ ಮಾತು ಶುದ್ಧ ತಪ್ಪು.
ಏಕೆಂದರೆ ಹಿಂದಿನವರೊಡನೆ ನಮಗೆ ಎಷ್ಟೆಷ್ಟು ಸಂಬಂಧ (continuity)
ವಿದ್ದರೂ ಕೂಡ ನಾವು ಯಾವಾಗಲೂ ಮುಂದೆ ಮುಂದೆ ಹೊರಟಿದ್ದೇವೆ.
ಹೇಗೆಂದರೆ ಕೇವಲ ಜ್ಞಾನಮಯವಾದ ಉಪನಿಷತ್ತುಗಳು ಎಲ್ಲಿ ನೋಡಿ
ದರೂ ವಿಶೇಷವಾಗಿ ಕರ್ಮಮಯವಾಗಿ ಹೋಗಿದ್ದ ವೇದಮಂತ್ರಗಳನ್ನು
ಬಿಟ್ಟು ಮುಂದೆ ಮುಂದೆ ಹೊರಟಿದ್ದ ಜನರ ಹೆಚ್ಚು ಆಧ್ಯಾತ್ಮಿಕ ತಪ
ಶ್ಶಕ್ತಿಯ ಶ್ರೇಷ್ಠ ಪರಿಣಾಮವೇ ಸರಿ. ಆವರೆ ಇಂಥಾ ಸುಧಾರಕ ಉಪ
ನಿಷತ್ತುಗಳೂ ಕೂಡ ಕೇವಲ ಶುಷ್ಕವೇದಾಂತದಲ್ಲಿ ಅಂದರೆ ನೀರಸವಾಗ್ವಾ
ದದಲ್ಲಿ ಸಿಕ್ಕಿ ಮತಧರ್ಮ(religion)ದ ಅಂತಶ್ಶಕ್ತಿಯು * ವಾದವಿವಾದ
ಗಳ ಗೊಂದಲದಲ್ಲಿ ಬಿದ್ದು ಹಾಳಾದ ಕೂಡಲೆ ಬೌದ್ಧಧರ್ಮವು ಮುಂದೆ
ಬಂದು ನಿಜವಾದ ಸುಲಭ ಸತ್ಯಕ್ಕೂ, ಧಾರ್ಮಿಕ ನಿಯಮದ ಮಾಹಾ
ತ್ಮ್ಯಗೂ ಹೆಚ್ಚು ಮನಗೊಟ್ಟು ಅವುಗಳನ್ನೇ ಶ್ರದ್ಧಾ ಭಕ್ತಿಯಿಂದ ಅನು
ಸರಿಸುವಂತೆ ಮಾಡಿತು. ಇದೇ ಸಮಯದಲ್ಲಿ, ಅಂದರೆ ಕೇವಲ ಅಂಧ
ಶ್ರದ್ಧೆಯಿಂದಾಚರಿಸುವ ಪ್ರಮಾಣ ಗ್ರಂಥಾನುಸರಣ † ಮತ್ತು ಅಪ್ರ
ಯೋಜಕ ವಿದ್ಯೆಯೇ ಎಲ್ಲೆಲ್ಲಿಯೂ ಹೆಚ್ಚಿ, ಮತವೆಲ್ಲಾ ಬಹುವಾಗಿ
ಯಥಾರ್ಥದೃಷ್ಟಿ ಯಿಲ್ಲದಿರುವ ಕೇವಲ ಮೂಢ ಸಂಪ್ರದಾಯ ‡ ದಿಂದ
ಕೂಡಿ ಇಂಥಾ ಕಷ್ಟಸಾಧ್ಯವಾದ ವಿದ್ಯೆಯಿಂದಲೇ ಪರಿಪೂರ್ಣವಾಗಿ
ತುಂಬಿಹೋಗಿದ್ದ ಜನರಲ್ಲಿ ಅತಿ ಹೇಯವಾದ ದರ್ಪಾಹಂಕಾರಗಳು ತಲೆ
ಯೆತ್ತಿ ಮೆರೆಯಲುಪಕ್ರಮಿಸಿದ ಕೂಡಲೇ ಭಗವದ್ಗೀತೆಯು ಮುಂದೆ
ಬಂದು ನಿಜವಾದ (ತ್ರಿಕರಣ) ಅಂತಶ್ಶುದ್ಧಿಯುಳ್ಳ ಜನರೆಲ್ಲರಿಗೂ ಮೋ
ಕ್ಷ ಮಾರ್ಗವನ್ನು ತೆರೆದಿಟ್ಟಿತು. ಹೀಗೆಯೇ ಕೇವಲ ಕರ್ಮಠರು ಕಟ್ಟು

* Free spirit, ಆತ್ಮ ಸ್ವಾತಂತ್ರ್ಯ ;

† Canonical culture ‡ Inhuman scholasticism

ಹಾಕಿದ್ದ ಕ್ಲುಪ್ತ ಸಿದ್ಧಾಂತಗಳಲ್ಲಿಯೇ ಜೀವಕಳೆಯಿಂದ ಶೋಭಿಸುತ್ತಿದ್ದ ಮತ ತತ್ತ್ವಕ್ಕೆ ಸೇರಿದ ನಂಬಿಕೆಗಳನ್ನು, ಅಂದರೆ ನಿಜ ಶ್ರದ್ಧೆಯನ್ನು (Living faith) ಬಂಧಿಸುತ್ತಿರಲು, ಕೂಡಲೇ ನಿಜವಾದ ಪರಮಾತ್ಮ ಭಕ್ತ*ರಾದ ಶೈವ ಮತ್ತು ವೈಷ್ಣವಾಚಾರ್ಯರೂ (Saints, ಭಕ್ತರು) ಮತ್ತು ಶಂಕರ ರಾಮಾನುಜರಂಥ ಮತಶಾಸ್ತ್ರ ಪ್ರವರ್ತಕರೂ (theo- logians) ಕೂಡ ಸರ್ವಚೈತನ್ಯಸ್ವರೂಪನೂ, ಸಕಲ ಲೋಕೈಕಕರ್ತನೂ, ಪರಾತ್ಪರ ವಸ್ತುವೂ ಆದ ಪರಮಾತ್ಮನ ಪಾದಾರವಿಂದವಲ್ಲಿ ಮರೆಹೊಕ್ಕು ಸಂಸಾರ ಬಂಧನದಿಂದ ಪಾರುಮಾಡೆಂದು ಅವನನ್ನು ಪೂಜಿಸಿರೆಂದು ಜನರೆಲ್ಲರಿಗೂ ಬೋಧಿಸಿದರು. ಇದರಂತೆಯೇ ಶ್ರೀಮಥ್ಪ್ರಚೈತನ್ಯರೂ, ಬಸವ ರಾಮಾನಂದರೂ, ಕಬೀರ ನಾನಕ್ಕರೂ ದೇಶವುತೋದ್ಧಾರಕ್ಕಾಗಿ ಬಹಳ ಶ್ರೇಷ್ಠಸೇವೆಯನ್ನು ಮಾಡಿದಾರೆ. ಹೀಗೆಂದ ಮೇಲೆ ಯಾವ ಶ್ರದ್ಧಾ (belief, ನಂಬಿಕೆ) ಚಾರಗಳನ್ನು ನೋಡಿದರೂ ಕೂಡ ಹಿಂದೂಮತದಲ್ಲಿ ಎಲ್ಲಿಯೂ ಕೇವಲ ಸ್ತಿಮಿತಸ್ಥಿತಿಯನ್ನನುಸರಿಸಿ ಯಾವ ಬದಲಾದಣೆಯನ್ನೂ ಹೊಂದದ ಧರ್ಮವು ಒಂದೂ ಇಲ್ಲ.† ಅಂದರೆ, ಹಿಂದೂಮತ ಅಥವಾ ಆರ್ಯಧರ್ಮವು (Hinduism) ಯಾವುದೊಂದು ವಿಶಿಷ್ಟಸ್ಥಿತಿ (position) ಯೂ ಅಲ್ಲ, ಮತ್ತೆ ಒಂದು ಪ್ರವಾಹವೇ ಸರಿ; ಯಾವುದೊಂದು ಕ್ಲುಪ್ತವಾದ ಫಲಪರಿಣಾಮವೂ ಅಲ್ಲ, ಮತ್ತು ಕೇವಲ ಸಾಧನಮಾರ್ಗವೇ (process) ಸರಿ; ಮತ್ತು ಇಷ್ಟೇ ಎಂದು ನಿರ್ಧರಿತವಾದ ಯಾವುದೊಂದು ಪ್ರಮಾಣಗ್ರಂಥವೂ ಅಲ್ಲ. ಮತ್ತೆ ಶಾಶ್ವತಾಭಿವೃದ್ಧಿಯುಕ್ತವಾದ ಸಂಪ್ರದಾಯವೇ ಸರಿ. ಇದರಿಂದ ಇದರ ಪೂರ್ವಚರಿತ್ರೆಯನ್ನು ಆಮೂಲಾಗ್ರವಾಗಿ ಪರಿಶೀಲಿಸಿದರೆ ಮುಂದೆ ಜ್ಞಾನಕರ್ಮಗಳಲ್ಲಿ ಯಾವುದರಲ್ಲಿಯೇ ಆಗಲಿ ಎಷ್ಟುಕಷ್ಟಪ್ರಸಂಗಗಳು ಬಂದರೂ ಕೂಡ ಅವೆಲ್ಲವನ್ನೂ ಈ ಜನರು ಗೆದ್ದು, ಯಾವ ಅಡಚಣೆಯೂ ಇಲ್ಲದೆ ಮುಂದೆ ಬರುವರೆಂದು ನಂಬಲು ಪೂರ್ಣಪ್ರೋತ್ಸಾಹವುಂಟಾಗುತ್ತದೆ.

* True prophets of the spirit † ಭಾಷ್ಯವನ್ನು ನೋಡಿ

## ೪೬. ಇದಕ್ಕಾಗಿ ಹೆಚ್ಚು ತವಕಪಡದೆ ವಿವೇಕ ಧೈರ್ಯೋತ್ಸಾಹಗ ಳಿಂದ ಕೂಡಿ ಎಲ್ಲರೂ ಕೆಲಸ ಮಾಡುತ್ತಿರಬೇಕು

ಹೀಗಾಗಿ ಕೆಲವು ಶತಮಾನಗಳಿಂದ ಉಂಟಾಗಿದ್ದ ಛಳಿಗಾಲವು ಮುಗಿ ದು ನಮ್ಮ ಹಿಂದೂ ಮತವು (ಆರ್ಯಧರ್ಮ) ಈಗ ಹೊಸದಾಗಿ ಮ ತ್ತೊಂದು ಅಭಿವೃದ್ಧಿ (= ಆರಂಭ, creative) ಗಾಲವನ್ನು ಕಾಣು ತ್ತಿದೆ; ಮತ್ತು ನಾವು ನಮ್ಮ ಸನಾತನ ಧರ್ಮವನ್ನು ಹೆಚ್ಚು ಶ್ರದ್ಧೋ ತ್ಸಾಹ*ಗಳಿಂದ ಸೇವಿಸುತ್ತಿದೇವೆ. ನಮ್ಮ ಸಮಾಜವು ಶಾಂತಿಸಮಾ ಧಾನಗಳಿಲ್ಲದ ಹೆಚ್ಚು ಕಷ್ಟದಲ್ಲಿ ಸಿಕ್ಕಿ ಬಳಲುತ್ತಿದೆಯೆಂದು ಈಗೀಗ ನಾವು ಬಹು ಸಂತಪ್ತರಾಗುತ್ತಿದೇವೆ. ಈ ಕಷ್ಟ ಸ್ಥಿತಿಯಲ್ಲಿ ಸತ್ತುಕೆಟ್ಟಿ ರುವ ನಿಷ್ಪ್ರಯೋಜಕವೂ, ಬಹುಬಾಧಕವೂ ಆದ ಎಷ್ಟೋ ಮೂಢಾಚಾರ ಗಳನ್ನು† ನಾವು ನಿರ್ಭಯವಾದ, ನಿಜವಾದ ಪೂಜ್ಯಧರ್ಮಜಾಗ್ರತಿಯಿಂದ ಕಿತ್ತೊಗೆಯಬೇಕು. ಏಕೆಂದರೆ ಈಗಿನ ಹಿಂದೂ ಸಮಾಜದ ಮುಖಂ ಡರು ಕರ್ಮಜ್ಞಾನಗಳಿಂದ ಕೂಡಿದ ನಮ್ಮ ನಮ್ಮ ಧರ್ಮದಲ್ಲಿ ಕಾಲಾ ನು ಕ್ರಮಕ್ಕೆ ತಕ್ಕಂತೆ ಯಾವ ಸುಧಾರಣೆಯನ್ನು ಮಾಡಬೇಕೆಂದರೆ ಇವರಲ್ಲಿ ಯಾವ ಮುಖ್ಯ ತತ್ತ್ವವನ್ನೂ ಬಿಡಬೇಕಾಗಿಲ್ಲ, ಮತ್ತಿದೇ ತತ್ತ್ವಗಳನ್ನೇ ಹೆಚ್ಚು ಶಾಖೋಪಶಾಖೆಗಳಿಂದ ಕೂಡಿ ಅನೇಕ ಪರಿಣಾ ಮಗಳಿಗೆಡೆಯಾಗಿರುವ ಸಮಾಜಸ್ಥಿತಿಗೆ ತಕ್ಕಂತೆ ಸರಿಯಾಗಿ ಸುಲಭ ಗ್ರಾಹ್ಯವಾಗಿಯೂ, ಆಚರಣೆಯಲ್ಲಿ ತರುವುದಕ್ಕನುಕೂಲವಾಗುವಂತೆ ಯೂ ಹೊಸಹೊಸರೀತಿಯಲ್ಲಿ ಪ್ರತಿಪಾದನೆ‡ ಮಾಡಿದರೆ ಸಾಕೆಂಬ ದೃಢ ಪ್ರಜ್ಞೆಯನ್ನು ಹೊಂದಿರುವರು. ಮತ್ತಿಂಥಾ ಕೆಲಸ (= ಪ್ರಯತ್ನ) ವು ಹೊಸದೇನೂ ಆಗಿರದೆ ನಮ್ಮ ಚರಿತ್ರೆಯಲ್ಲಿ ಎಷ್ಟೋ ಸಲ ಆಗಿಹೋ ಗಿರುವ ಧರ್ಮಸಂಸ್ಥಾಪನೆಯು ಪುನರಾಚರಣೆ§ಯೇ ಆಗಿದೆ. ಈ ಸುಧಾ ರಣಾ ಕೆಲಸವು ಈಗಾಗಲೇ ಬಹಳವಾಗಿ ಆಚರಣೆಯಲ್ಲಿ ಬಂದುಬಿಟ್ಟಿದೆ, ಆದರೂ ಇಂಥಾ ಸುಧಾರಣಾಕಾರ್ಯವು ಚೆನ್ನಾಗಿ ಬೇರೂರಬೇಕಾಗಿದ್ದರೆ

---

*Fresh eyes, ಹೊಸ ದೃಷ್ಟಿ †Much wood that is dead and diseased ‡Restatement §Repetition. ಪುನರಾವರ್ತನೆ

ಇದರ ಅಭಿವೃದ್ಧಿಯೇನೂ ಕ್ಷಿಪ್ರವಲ್ಲಿ ದೊರೆಯದು, ಮತ್ತು ಬಹುಕಾಲ ಹಿಡಿಯುತ್ತದೆ.* ಆದರೂ ಕೂಡ ಇಂಥಾ ಕಷ್ಟಕಾಲದಲ್ಲಿ ನಿಸ್ಸ್ವಾರ್ಥತೆಯಿಂದ ನಿಜವಾದ ಧರ್ಮಶ್ರದ್ಧೆಯಿಂದ ದೈವೀಪ್ರೇರಣೆಯಂತೆ ಕೈಲಾದಷ್ಟು ಮಟ್ಟಿಗೆ ಉತ್ತಮರೀತಿಯಲ್ಲಿ ಸಂಘಸೇವೆ ಮಾಡುವುದೆಂದರೆ ಕತ್ತಲೆಯಲ್ಲಿ ಈಷದಪಿ ಸಣ್ಣದೀಪವೊಂದನ್ನು ಹಚ್ಚಿ ಹಿಡಿದರೂ ಕೂಡ ಅದರಿಂದ ಸುತ್ತಮುತ್ತಲಿರುವ ಜಾಗದಲ್ಲೆಲ್ಲಾ (the whole sky) ದಿವ್ಯಪ್ರಭೆಯೊಂದನ್ನುಂಟುಮಾಡಿದಷ್ಟು ಫಲಕಾರಿಯಾದ ಶ್ರೇಷ್ಠಕೆಲಸವೇ ಆಗುತ್ತದೆ.

ಅಂಥಾ ಪರಮಾತ್ಮನ ಕೃಪಾ ವಾತ್ಸಲ್ಯವು ಅನುದಿನವೂ ಲೋಕದಲ್ಲೆಲ್ಲಾ ಹೆಚ್ಚುಹೆಚ್ಚಾಗಿ ಹರಡಿ ಸರ್ವಜನರಿಗೂ ಅವರವರಿಗೆ ತಕ್ಕಂತೆ ಯೋಗ್ಯಫಲವನ್ನೀಯಲೆಂದು ಪರಮೇಶ್ವರನನ್ನು ಪ್ರಾರ್ಥಿಸಿ ಈ ಉಪನ್ಯಾಸಗಳನ್ನು ಮುಗಿಸುತ್ತೇನೆ.

ಲೋಕಾಸ್ಸಮಸ್ತಾಸ್ಸುಖಿನೋಭವಂತು, ಸನ್ಮಂಗಳಾನಿಭವಂತು,
ಭವಂತು.

ಇತಿ ಚತುರ್ಥೋಪನ್ಯಾಸಃ

ಸಂಪೂರ್ಣಂ.

† Growth is slow

ಸೂಚನೆ:—ಮುಖ್ಯ ತಿದ್ದುಪಾಟುಗಳು

| ಪುಟ | ಪಙ್ಕ್ತಿ | ತಪ್ಪು | ಸರಿ |
|---|---|---|---|
| ೧೩ | ೭ | ಕರೆ | ಕಲೆ |
| ,, | ೧೧ | ಬಹುದು | ಬಹುದು* |
| ,, | ೨೨ | ನಮ್ಮನ್ನು | ನಮ್ಮನ್ನು† |
| ೨೧ | ೨ | ವಧದ | ವಿವಿಧ |
| ೪೦ | ೧೬ | ದೇಶೀಯ | ದೇಶೀಯ |
| ೪೯ | ೧೪ | ಸಂಘಗಳೂ* | *Social Institutions |
| ೧೪೨ | ೧ | ತಮ್ಮ ಅಭಿಷ್ಟ | ತಮ್ಮಷ್ಟು ಅಭಿ |
| ,, | ೨ | ಹೊಂದಿರುವ | ಹೊಂದದಿರುವ |

# ಅ ನು ಕ್ರ ಮ ಣಿ ಕೆ

## ೧—"ಭಾರತಧರ್ಮ"ದ ಅನುವಾದ


ಅಗಸ್ಟೈನ್ (೩೫೪-೪೩೦) ೩೮, ೯೧
ಅಗ್ನಿಪುರಾಣ ೧೨೯
ಅಂಗುತ್ತರನಿಕಾಯ ೭೧
ಅಥರ್ವವೇದ ೯೧
ಅರಿಸ್ಟಾಟಲ್ (ಕ್ರಿ.ಪೂ.೩೮೪-೩೨೨) ೮೪, ೧೧೮, ೧೫೦, ೧೮೦.
ಅಶೋಕ ೭೧
ಆಕ್ಸ್‌ಫರ್ಡ್ History of India (ಭಾರತೀಯ ಚರಿತ್ರೆ), ೬
ಆಗಮಗಳು ೪೭
ಆತ್ಮ ಚರಿತ್ರೆ, ದೇವೇಂದ್ರನಾಥ ಠಾಕೂರರ, ೩೭
ಆನಂದಗಿರಿ ೮೯
ಆಫ್ರೋಡೈಟ್ ೬೭
ಆರ್ಯಸಮಾಜ ೧೮, ೪೩
ಆಶ್ವಲಾಯನ ೧೨೫
ಆಸ್ಟೋರೆತ್ ೬೭
ಇಂಡಿಯನ್ ಆಂಟಿಕ್ವೆರಿ ೧೬೬
ಇಂಡಿಯಾ, old and new ೧೪೫
ಇತಿಹಾಸಗಳು ೧೫, ೪೪, ೪೬, ೧೮೬
ಇಂಜ್, ಡೀನ್ (ಜನನ, ೧೮೬೦) ೭೭
ಇಂದ್ರ ೪೬
ಇಸೈಯ ೫೨
ಇಸ್ರೇಲ್ ೭೦
ಇಸ್ಲಾಮ್ (Islam, ಮಹಮ್ಮದೀಯ ಮತ) ೭೦
ಉಪನಿಷತ್ತುಗಳು ೧೮, ೨೧, ೨೪-೨೭, ೪೦, ೭೯, ೧೧೧, ೧೯೦ ೧೯೯
ಋಗ್ವೇದ ೪, ೧೫, ೨೯, ೪೪, ೧೦೮ ೧೨೫, ೧೨೮
ಎಸೆನ್ಷಿಯಲ್ಸ್ of Mysticism (ಯೋಗಸೂತ್ರಗಳು) ೩೮
ಎಕ್‌ಹಾರ್ಟ್ (೧೨೬೦-೧೩೨೯) ೩೭
ಏಸುವು ೧೩, ೫೨, ೬೩, ೯೯, ೧೭೯
ಐನ್‌ಸ್ಟೈನ್ (ಜನನ, ೧೮೭೯) ೮೨
ಐಸಿಸ್ ೬೭
ಕಬೀರ್ ೧೮, ೨೦೦
ಕಬೀರ ಪಂಥಿಗಳು ೪೩
ಕಮ್ಯೂನಿಯನ್ of theChristian with God (ಜೀವಬ್ರಹ್ಮಾತ್ಮ ಐಕ್ಯ) ೩೮
ಕಾತ್ಯಾಯನ ೪೩
ಕಾಳಿ, ೫೩, ೫೬
ಕಾಳೀಯ ೪೫
ಕೂರ್ಮ ಪುರಾಣ ೫
ಕೃಷ್ಣ ೩೪, ೪೩, ೪೫, ೪೬, ೫೪, ೫೬, ೧೪೪, ೧೮೫

ಕೇನಉಪನಿಷತ್ ೨೪

ಕ್ಯಾಥಾಲಿಕ್ ಜನಗಳು(Catholics, ಸಾಂಪ್ರದಾಯಕರು) ೨೮

ಕ್ರೈಸ್ತನು ೪೬

ಕ್ರೈಸ್ತಮತವು ೧೩, ೩೧, ೩೭, ೫೮, ೬೪, ೭೦, ೭೨, ೧೩೩

ಕ್ರೋಚೆಯವರು (ಜನನ, ೧೮೬೫) ೧೭, ೯೧

ಕ್ಷುದ್ರಕಮಲಾಕರ ೫೩

ಗಾಂಧಿ (ಜನನ, ೧೮೬೯) ೪೦,

ಗಾಲ್ಟನ್ (೧೮೨೨-೧೯೧೧) ೧೫೦

ಗೋವರ್,೫೭

ಗೋಳ್ಡನ್ ಬೋ, The, (ಸುವರ್ಣಶಾಖಾ) ೬೭

ಗೌಡವಾಹೋ ೫೩

ಗೌತಮ ೧೧೩

ಗ್ರೀಕರು ೧೪೯.

ಚೈತನ್ಯರು, ಶ್ರೀ ೧೮, ೪೩, ೨೦೦

ಜಯತೀರ್ಥರು ೧೧

ಜಾನ್, ಭಕ್ತ (Saint) ೩೭

ಜೈನಮತವು ೧೭

ಜೈನರು ೫೬

ಜ್ಯಾಕ್ಸನ್ನರು, ಶ್ರೀಯುತ ೧೬೫

ಜ್ಯಾಕ್ಸ್ ಮುಖ್ಯೋಪಾಧ್ಯಾಯರು (ಆಚಾರ್ಯರು) ೧

ಠಾಕೂರರು, ರವೀಂದ್ರನಾಥ(ಜನನ, ೧೮೬೧) ೪೦

ಡಯೋನಿಸಿಯುಸ್ಸರು ೨೫

ಡಾರ್ವಿನ್ನರು (೧೮೦೯-೧೮೮೨) ೧೫೦

ಡೀವ್ರೀಸರು ೧೫೦

ಡೋನಾಳ್ಡ್ ಸನ್ನರು ೧೬೮

ತಂತ್ರಗಳು ೧೮೫

ತಾಂಡ್ಯಬ್ರಾಹ್ಮಣ ೬೩

ತಾರಾ ೬೭

ತುಕಾರಾಮರು ೩೦-೩೧

ತೈತ್ತಿರೀಯಅರಣ್ಯಕ ೧೦

ತೈತ್ತಿರೀಯಉಪನಿಷತ್ತು ೧೧೪

ತ್ರಿಮೂರ್ತಿಗಳು. (ಕ್ರೈಸ್ತ) ೨೦, ೩೪

ಥಿಯಾಗ್ನೀಸರು ೧೪೯

ನಾನಕ್ಕರು ೧೮, ೨೦೦

ನೀಪ್ ಹ್ಯಾವಲು ೫೯

ನೈಯಾಯಕರು ೫೬

ನ್ಯಾಯಸುಧಾ, ೧೧

ಪಂಚವಿಂಶಬ್ರಾಹ್ಮಣ ೪೩

ಪರಾಶರಸಂಹಿತೆ ೧೧೮

ಪಾಪ್ಯುಲರ್ ಸೈನ್ಸ್ Siftings, (ಸಾಮಾನ್ಯ ಶಾಸ್ತ್ರಶೋಧನೆಗಳು) ೧೫೨

ಪಾರ್ಸೀ ಜನಗಳು ೭೨

ಪಾಲರು, ಭಕ್ತ (St.) ೩೭

ಪಾಶುಪತ ೧೫

ಪೀಪಲ್ of India, The (ಭಾರತೀಯ ನಿವಾಸಿಗಳು) ೬೭

ಪುರುಷಸೂಕ್ತವು ೧೫೯

ಪ್ರೊಟೆಸ್ಟೆಂಟರು (ಕ್ರೈಸ್ತವಾದಿಗಳು) ೨೮
ಪ್ರಾಗ್ಮ್ಯಾಟಿಸ್ಟರು ( = ಅರ್ಥ ಪರಾಯಣರು) ೨೨
ಪ್ಲೇಟೋನಿಕ್ Tradition in English Thoughts (ಆಂಗ್ಲೇಯರಲ್ಲಿ ಪ್ಲೇಟೋಯುವರ ಪಾರಂಪರ್ಯ) ೭೭
ಪ್ಲೇಟೋಯುವರು (ಕ್ರಿ.ಪೂ. 427 347) ೩೯, ೯೦, ೧೪೯
ಪ್ಲೋಟೈನಸ್ಸರು (೨೦೩-೨೬೨) ೩೮
ಫ್ಲೋಕ್ ಸಾಂಗ್ಸ್ of South India (ದಕ್ಷಿಣ ಇಂಡಿಯಾದ ಜನಸಾಂಗತ್ಯಗಳು) ೫೭
ಫ್ರಾನ್ಸಿಸ್, ಭಕ್ತರು (St.) (1182-1226) ೨೮
ಫ್ರಾಯ್ಡ್ರು (ಜನನ, 1856) ೧೧೯
ಫ್ರೇಸರ್ರರು, ಸರ್ ಜೇಮ್ಸ್ (ಜನನ, ೧೮೫೪) ೬೬
ಬಕಲ್ಲರು (೧೮೨೧-೬೨) ೧೫೦
ಬರ್ಗ್‌ಸನ್ನರು (ಜನನ, 1859) ೯೧
ಬರ್ನ್ಸರು, ಶ್ರೀಯುತ ೬೮
ಬರ್ನ್ಸರು, ರಾಬರ್ಟ್ (1759-1796) ೫೦
ಬರ್ನಾರ್ಡರು, ೨೪
ಬಸವ, ಶ್ರೀ, ೨೦೦,
ಬುದ್ಧರು (ಕ್ರಿ ಪೂ. 567-487) ೨೭
ಬೃಹದಾರಣ್ಯಕ ಉಪನಿಷತ್ತು, ೩೦ ೮೭, ೯೮, ೧೧೮
ಬೃಹಸ್ಪತಿ, ೧೧೩
ಬೋಹ್ಮರು (1575-1624) ೨೫, ೪೦
ಬೌದ್ಧಮತವು ೧೭, ೭೧, ೧೩೪, ೧೮೭, ೧೯೯
ಬ್ರಹ್ಮನು, ೨೬, ೭೬
ಬ್ರಹ್ಮನು (ಪರ) ೩೭
ಬ್ರಹ್ಮಸಮಾಜವು (ಸ್ಥಾಪಿತ, 1830) ೧೨, ೪೩
ಬ್ರಹ್ಮಸೂತ್ರಗಳು ೧೮, ೮೬ (ಭಾಷ್ಯ), ೮೯, ೧೩೬
ಬ್ರಾಡ್ಲೆಯವರು (1846-1923) ೮೪, ೯೦
ಬ್ರೌನ್ ಪ್ರೊಫೆಸರ್ ( = ಪಂಡಿತ) ೪೦
ಭಗವದ್ಗೀತೆಯು, ೧೮. ೪೩, ೫೩ ೯೮, ೧೦೨, ೧೦೭, ೧೬೭-೮, ೧೮೫, ೧೯೪, ೧೯೯
ಭಾಗವತ ೧೩೪, ೧೮೪,
ಭಾಮತೀ ೧೩, ೮೭,
ಮಜ್ಝಿಮನಿಕಾಯವು ೭೧
ಮಧ್ವರು, ಶ್ರೀ ೨೭೦
ಮನು (ಸ್ಮೃತಿ - ಕ್ರಿ.ಶ. ೨ನೇ ಶತಮಾನ) ೧೧೪, ೧೨೩-೩೫, ೧೪೭, ೧೮೪

ಮಹಮ್ಮದರು (571-632) ೨೮
ಮಹುಮ್ಮದೀಯರು, ೩೭
ಮಹಾಭಾರತವು ೧೯, ೨೯, ೫೬, ೧೧೮,
ಮಹಿಮ್ನಸ್ತವವು. ೧೬
ಮಾಯಾ, ೨೭, ೭೭-೯೫
ಮಿಲ್ಲರು, ಜೆ.ಎಸ್.,(1806-1873) ೯೧
ಮೇಧಾತಿಥಿ, ೧೩೪
ಮೇರಿಯಮ್ಮನ ಪೂಜೆ, ೬೭
ಮ್ಯಾಂಚೆಸ್ಟರ್, ಕಲಾಶಾಲೆ ೧
ಯಾಜ್ಞವಲ್ಕ್ಯರು, ೨೪, ೨೯, ೮೦, [೧೨೮
ಯಾಹ್ವೆ, ೫೨
ಯು ಆನ್ ಛ್ವಾಂಗರು, ೭೨
ಯೋಗ, ೧೫
ರಸಲ್, ಶ್ರೀಮತಿ ಬರ್ಟ್ರಾಂಡ್, ೧೨೮
ರಾಮ, ೩೪, ೪೫, ೧೪೩
ರಾಮಕೃಷ್ಣರು, ಶ್ರೀ, ೨೮
ರಾಮಾನಂದರು, ೨೦೦
ರಾಮಾನುಜರು, ಶ್ರೀ, ೧೮೭, ೨೦೦,
ರಾಮಾಯಣ, ೧೧೮, ೧೨೪
ರಿಸ್ಲೆ, ಸರ್ ಹರ್ಬರ್ಟ್, ೬೯
ರೂಯಿಸ್ ಬ್ರಾಕರು(1294-1381) ೨೪,
ರೂಸೋಯುವರು (1712-78) ೧೫೦
ಲಾಕರು (1632-1704), ೧೫೧
ಲಾಟ್ಯಾಯನರು, ೪೩
ಲೈಬ್ನಿಡ್ಸರು (1646-1716), ೯೧
ವಿಜಯರಾಜದೇವ, ೭೨
ವಿಜ್ಞಾನವಾದ, ೮೫
ವಿಷ್ಣು, ೨೬, ೪೨, ೫೬
ವೀಸ್‌ಮನ್ನರು, ೧೫೦
ವೆಬ್ಬರು, ಪ್ರೊಫೆಸರ್ ಕ್ಲೆಮೆಂಟ್, ೫೭
ವೆಸ್ಲಿಯುವರು (1703-1791), ೮
ವೇದಗಳು, ೮, ೧೬, ೧೯, ೪೫-೮, ೭೭, ೧೨೦, ೧೮೬, ೧೯೯
ವೇದಾನ್ತ, ೧೮-೨೦, ೧೯೯
ವೈಷ್ಣವಾಚಾರ್ಯರು, ೨೦೦
ವ್ರಾತ್ಯಸ್ತೋಮ, ೪೩
ಶಕ್ತಿಗೀತೆಯು, ೬೧
ಶಂಕರರು, ಶ್ರೀ, ೩೮, ೫೭, ೮೦-೯೫, ೧೮೬, ೨೦೦
ಶಿರಾಲ್, ಸರ್ ವ್ಯಾಲಂಟೈನ್, ೧೪೫
ಶಿವ (ಈಶ್ವರ) ೨೬, ೪೨, ೪೫ ೬, ೫೬ ೭೨, ೧೧೯
ಶೈವ ಆಚಾರ್ಯರು, ೨೦೦
ಶ್ವೇತಾಶ್ವತರ ಉಪನಿಷತ್ತು ೮೦, ೯೯
ಸತೀ, ೪೬,
ಸಿಕ್ಕರು, ೪೩
ಸಾಯಣರು, ೧೧೮, ೧೨೯
ಸ್ಟೈನ್ಸ್, Religion and Reality, ೫೯
ಸ್ಥಾಣೂರವಿ, ೭೨
ಸ್ಪಿನೋಸಾಯುವರು(1632-77) ೬೩

ಸ್ಪೆನ್ಸರ್, ಹರ್ಬರ್ಟ್ (1820-1903), ೭೩
ಸ್ಮಿತ್ತರು, ಜಾನ್ (1617-52) ೨೭
ಸ್ಮಿತ್ತರು, ವಿನ್ಸೆಂಟ್, ೧೬
ಸ್ವಿಫ್ಟರು (1667-1745), ೭೮
ಹನುಮಂತನು, ೪೫
ಹರಿಸ್ತುತಿ, ೫೭
ಹರ್ಮನ್ನರು, ೩೮
ಹರ್ಷ, ೭೨
ಹಾರೀತಸ್ಮೃತಿ, ೧೧೮
ಹೀಬ್ರೂ ಜನಗಳು, ೨೭, ೭೨
ಹೆರಕ್ಲೈಟಸ್ಸರು (ಕ್ರಿ.ಪೂ. 535-475), ೭೫
ಹೇಗೆಲ್ಲರು (1770 1831) ೯೧
ಹೋಸಿಯಾ, ೫೨

## ೬. ಅನುವಾದಕರ ಮುಖ್ಯ ಭಾಷ್ಯಗಳು (ಸೂಚೀಪತ್ರ)

೧ ಶ್ರೀಯುತ ಬೆನೆಡೆಟ್ಟೋ ಕ್ರೋಚೆಯವರೂ ಮತ್ತು ಇವರ ಶ್ರೇಷ್ಠವೇದಾಂತವೂ . ... .... ೨೦೩
೨ ಜಾತಿಪ್ರತಿಷ್ಠೆ .... ... .... ೨೦೫
೩ ಕಷ್ಟ ಸುಖಗಳೂ [(ದ್ವಂದ್ವಯುಕ್ತವಾದ) ಅನುಭವವು] ಮತ್ತು ಇತರರೂ .. ... .... ೨೦೬
೪ ವಿವಾಹ ಸುಧಾರಣೆಯ ನಿಜಾರ್ಥವು .. .... ೨೦೬
೫ ಕ್ಷತ್ರಿಯೋ(= ರಾಜಪುತ್ರರ)ತ್ಪತ್ತಿ, ಮತ್ತು ಚಾರಿತ್ರಿಕ ಸಮಾಧಾನಗಳು . .. .... ೨೦೮
೬ ಶಾಂತಿಯ ನಿಜಾರ್ಥವು .... .... .. ೨೦೯
೭ ನಿರ್ಗುಣಬ್ರಹ್ಮ ಮೀಮಾಂಸೆ ... .... ೨೧೩
೮ ಜಾತಿ ಮೀಮಾಂಸೆ .... .. .... ೨೧೩
೯ ಚರಿತ್ರೆಯ ಗುಟ್ಟು ಮತ್ತು ನಿಜ ತಾತ್ವಿಕವೃಷ್ಟಿ .... ೨೧೪
೧೦ ವಶಿಷ್ಠ ವಿಶ್ವಾಮಿತ್ರರ ವಿವಾದ ಮೀಮಾಂಸೆ .... ೨೧೪
೧೧ ವೇದಾಧ್ಯಯನವೂ ನಮ್ಮ ಮುಂದಿನ ಕರ್ತವ್ಯವೂ .... ೨೧೬
೧೨ ಸನಾತನ ಧರ್ಮ ಮತ್ತು ಇದರ ನಿಜಸಾರಸರ್ವಸ್ವವು .... ೨೧೭
(ಶ್ರೀಯುತ ಎಂ. ಯಾಮುನಾಚಾರ್ಯರೊಡನೆ ಕೂಡಿ ಬರೆದುದು ೧೩, ೧೫)
೧೩ ಶ್ರೀಯುತ ಐನ್‌ಸ್ಟೈನರೂ ಮತ್ತು ಅನ್ಯೋನ್ಯಾಶ್ರಯಧರ್ಮವೂ ೨೧೮
೧೪ ಶ್ರೀಯುತ ಫ್ರಾಯ್ಡರೂ ಮತ್ತು ಇವರ ಮನಶ್ಶಾಸ್ತ್ರವೂ.... ೨೨೦
೧೫ ಶ್ರೀಯುತ ಬರ್ಗ್‌ಸನ್ನರೂ ಮತ್ತು ಇವರ ತತ್ತ್ವಶಾಸ್ತ್ರವೂ ೨೨೪

# ಭಕ್ತಬಂಧು

ಅಥವಾ "ಪರಮಾತ್ಮಸೇವೆ" ಎಂಬ ಡೆಮಿ ಅಷ್ಟಪತ್ರದ ೨೪ ಪುಟಗಳುಳ್ಳ ಕನ್ನಡ ಮಾಸಪತ್ರಿಕೆಯನ್ನು ೧೯೨೯ನೇ ಜುಲೈ ೧ನೇ ತಾರೀಖಿನಿಂದ ಪ್ರಕಟಿಸುತ್ತದೆ.

ಇದರಲ್ಲಿ ಶಾಂತ್ಯಾಶ್ರಮದ ಮುಖ್ಯಕಾರ್ಯನಿರ್ವಾಹಕರು, ಸಹಾಯಕರು ಮತ್ತು ಪೋಷಕರ ಶ್ರೇಷ್ಠ ಗ್ರಂಥಗಳನ್ನು ಪ್ರಕಟಿಸುತ್ತದೆ.

ವಾರ್ಷಿಕ ಚಂದಾ ರೂ. ೧-೮-೦ ಮಾತ್ರ (ಹಾಸಲು ಸೇರಿ); ಆದರೆ ಭಾರತ ಧರ್ಮವನ್ನು ಕೊಂಡುಕೊಂಡವರಿಗೆ ೧-೪-೦ ಗೆ ಕೊಡುತ್ತದೆ.

ಚಂದಾದಾರರಾಗುವವರು ೧೯೨೯ ನೇ ಏಪ್ರಿಲ್ ೩೦ ನೇ ತಾರೀಖಿನೊಳಗೆ ಪೂರ್ಣ ಚಂದಾ ಮೊಬಲಗನ್ನು ಕೊಟ್ಟು ಆರ್ಡರನ್ನು ರಿಜಿಸ್ಟರ್ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಚಂದಾ ಮೊಬಲಗು ಹೆಚ್ಚಿಸಲ್ಪಡುತ್ತದೆ.

ಈ ವಿಳಾಸಕ್ಕೆ ಬರೆಯಿರಿ:—ಎನ್. ಶೇಷಾದ್ರಿಶರ್ಮಾ ಬಿ.ಎ.,
ಚಂದ್ರವಿಲಾಸ. ವಿಶ್ವೇಶ್ವರಪುರ, ಬೆಂಗಳೂರು ಸಿಟಿ.

---

# CULTURE

or the 'Service of the Great Ones.' A monthly magazine of 24 pages (demy octavo) and the English Organ of *Shantyashrama* will be published from the 1st July 1929.

It will bring out the works of the leading Organisers, Friends and Supporters of Shantyashrama. Annual Subscription to be paid (in advance) Rs. 2-8 only (including postage).

To purchasers of "Bharata Dharma" the Subscription will be only Rs. 2/-

Orders with full Subscription paid should be registered before the 30th April 1929.

Write to:-N. S. SHARMA, B.A., Chandra Vilas
Visveswarapuram, BANGALORE.

# Mr. N. S. SHARMA'S WORKS:

## ಎನ್. ಶೇಷಾದ್ರಿಶರ್ಮರವರ ಗ್ರಂಥಗಳು:

| | |
|---|---|
| Our Real Culture and Progress | 0—4—0 |
| Two Poems on India | 0—2—0 |
| The Youth Movement in Karnataka | 0—2—0 |
| ರಾಧಾಕೃಷ್ಣರವರ ಭಾರತಧರ್ಮ (2 ಭಾಗಗಳೂ ಸೇರಿ ಸಾಧಾರಣ ಪ್ರತಿ) | 2—0—0 |
| „ ( „ ಉತ್ತಮಪ್ರತಿ) | 2—8—0 |
| ನಂದಚರಿತ್ರೆ ಅಥವಾ ನಟರಾಜಭಕ್ತ ನಂದ | 0—4—0 |
| ರವೀಂದ್ರನಾಥ ಠಾಕೂರರ "ಪೋಸ್ಟಾಫೀಸು" ಅಥವಾ ಅಂಚೆಯ ಮನೆ (ಮುದ್ರಣದಲ್ಲಿದೆ) | 0—6—0 |
| ವರರುಚಿ ಮಹಾಮಂತ್ರಿ „ | 0—4—0 |

What is History? Or The Philosophy
of Benedetto Croce (Ready for Publication)

An Introduction to Manu:
His Place in Law and History „

An Introduction to Udayana:
His Place in Literature and History „

Akbar's Religion „

The Psychology of Moral Life „

Dr. S. Radhakrishnan:
The Man and his Work (in preparation)

ಪರಮಾತ್ಮ ಸೇವೆ, ಅಥವಾ ಪರಮ ಪುರುಷಾರ್ಥಸಿದ್ಧಿ (ಮುದ್ರಣಕ್ಕೆ ಸಿದ್ಧವಾಗಿದೆ)

"ಜ್ಞಾನಾನಂದ"ರ ದಿವ್ಯಚರಿತ್ರೆಯೂ ಮತ್ತು ಕನ್ನಡಿಗರ ಸದ್ಯಃಸ್ಥಿತಿಗತಿಗಳೂ (ಸಿದ್ಧವಾಗುತ್ತಿದೆ)

ಕನ್ನಡ ಶಬ್ದಾವಲೋಕನ, ಅಥವಾ ನಮ್ಮ ಮಾತಿನ ನೆಲೆಗಟ್ಟು „

ಶ್ರೀ ರಾಧಾಕೃಷ್ಣರವರೂ ಮತ್ತವರ ಲೋಕಸೇವೆಯೂ „

ಶ್ರೀ ಗಳಗನಾಥರೂ ಮತ್ತವರ ಶ್ರೇಷ್ಠಮಾಹಾತ್ಮ್ಯೆಯೂ „

ಮತ್ತು ಇತರ ಗ್ರಂಥಗಳೂ ಸಿದ್ಧವಾಗುತ್ತಿವೆ.

ಪಾಶ್ಚಿಮಾತ್ಯತತ್ವಜ್ಞರೂ ಮತ್ತು ಇವರತತ್ವಶಾಸ್ತ್ರವೂ(ಸಿದ್ಧವಾಗುತ್ತಿದೆ)
ಚರಿತ್ರೆಯ ನಿಜಾರ್ಥ ಅಥವಾ ಕ್ರೋಚೆಯವರ ವೇದಾಂತವು ,,
ಮನ್ವರ್ಥಚಂದ್ರಿಕೆ ,,
ಉದಯನ ವತ್ಸರಾಜರೂ ಮತ್ತು ಇವರ ಕಥೆಯ ಪೂರ್ಣಾವಲೋಕನವೂ ,,
ಅಕ್ಬರನ ಮತಧರ್ಮವು ,,
ಕನ್ನಡ ಕಥಾ ಕೋಶ ಅಥವಾ ದೊಡ್ಡವರು ಹೇಳಿದ ಕಥೆಗಳು ,,
ಶ್ರೇಷ್ಠಪುರುಷರ ಜೀವನ ಚರಿತ್ರೆ (Lives of Great Men) ,
Stories from Great Ones ,,

ಇವುಗಳನ್ನೆಲ್ಲಾ ಶಾಂತ್ಯಾಶ್ರಮದ ಗ್ರಂಥಮಾಲಾ ರೂಪದಲ್ಲಿಯೂ 'ಭಕ್ತಬಂಧು' ಅಥವಾ 'ಪರಮಾತ್ಮಸೇವೆ' ಎಂಬ ಪತ್ರಿಕೆಯಲ್ಲಿಯೂ ಪ್ರಕಟಿಸುತ್ತದೆ.

Write to :—
N. S. Sharma, B.A.,
"Chandra Vilas,"
Visveshwarapuram,
BANGALORE.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ :—
ಎನ್. ಶೇಷಾದ್ರಿಶರ್ಮಾ, ಬಿ.ಎ.,
ಚಂದ್ರವಿಲಾಸ,
ವಿಶ್ವೇಶ್ವರಪುರ,
ಬೆಂಗಳೂರು.

## OPINIONS—ಅಭಿಪ್ರಾಯಗಳು

ಮ॥ರಾ॥ರಾ॥ ಎನ್. ಶೇಷಾದ್ರಿಶರ್ಮಾ, ಬಿ, ಎ., ಬೆಂಗಳೂರು— ಇವರೊಬ್ಬರು ಅತ್ಯಂತ ಚಿಕಿತ್ಸಕ ಬುದ್ಧಿಯ ಉತ್ಸಾಹಶಾಲಿಗಳಾದ ಗುಣಗ್ರಾಹಿ ತರುಣರು. ಇವರ ಸಂಗಡ ಸಲಿಗೆಯಿಂದ ಮಾಡಿದಷ್ಟು ಚರ್ಚೆಯನ್ನು ನಾನು ಯಾರ ಸಂಗಡಲೂ ಮಾಡಿರುವದಿಲ್ಲ; ಈ ಸರಳಭಾವದ ತರುಣರೊಡನೆ ಈಗಲೂ ನನ್ನ ಚರ್ಚೆಗಳು ನಡೆದೇ ಇರುವವು. ಇವರು ಒಳ್ಳೆಯ ಲೇಖಕರು, ಗ್ರಂಥಾವಲೋಕನಶೀಲರು. ಇವರ ಸಹವಾಸದಿಂದನನಗೆ ಹಲವು ಹೊಸವಿಚಾರಗಳ ಪರಿಚಯವಾಯಿತು. ಇವರು ದೋಷಗಳನ್ನು ದುರ್ಲಕ್ಷಿಸಿ ಗುಣಗಳನ್ನೇ ಮುಂದೆ ಮಾಡುವರು. ಇವರೊಡನೆ ಮಾಡುವ ಸಂಭಾಷಣದಿಂದಾಗುವ ಲಾಭಕ್ಕಾಗಿ ನಾನು ಅತ್ಯಂತ ಕೃತಜ್ಞನಾಗಿರುವೆನು. ಹಲವು ಬಗೆಗಳಿಂದ ಇವರ ಸಹಾಯವು ನನಗೆ ಆಗುತ್ತಿರುವದು. (ಶ್ರೀ ಗಳಗನಾಥರ "ಸದ್ಗುರು ಪ್ರಭಾವ," ಪುಟ ೨೮)